ಸಂಪುಟ ೧೦
ಸಂಚಿಕೆ ೪

ಕರ್ನಾಟಕ ಭಾರತಿ

ಅಕ್ಷಯ ತೃತಿಯ ಸಂಚಿಕೆ

೧೯೭೮

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ,

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.
ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ವ್ಯಾಸಂಗವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ　　೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ　　೪. ಅಕ್ಷಯತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ : ರೂ. ೨-೫೦

(ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪-೦೦ ಮಾತ್ರ)

ರಜತಮಹೋತ್ಸವ ಸಂಚಿಕೆಯ ಬೆಲೆ: ರೂ.೫-೦೦(ಅಂಚೆವೆಚ್ಚ ಪ್ರತ್ಯೇಕ)

ಹಣವನ್ನು ಡಿಮಾಂಡ್‌ಡ್ರಾಫ್ಟ್ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ **ಫಾಯನಾನ್ಸ್ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಕಳುಹಿಸಿಕೊಡಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೧೦ ಸಂಚಿಕೆ : ೪

ಪ್ರಧಾನ ಸಂಪಾದಕರು
ಡಾ. ಎಂ. ಎಸ್. ಸುಂಕಾಪುರ

ಸಹಾಯಕ ಸಂಪಾದಕರು
ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೧೦ ಸಂಚಿಕೆ : ೪


ಮೇ ೧೯೭೮

ಅಕ್ಷಯತೃತೀಯಾ ಸಂಚಿಕೆ

ಪ್ರಕಾಶಕರು :
ಶ್ರೀ ಸಿ. ಎಸ್. ಕಣವಿ
ನಿರ್ದೇಶಕರು,
ವ್ಯಾಸಂಗ ವಿಸ್ತರಣ-ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಮುದ್ರಕರು :
ಜಿ. ಬಿ. ಮನ್ನಾಚಾರ,
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ, ಧಾರವಾಡ.

ನಮ್ಮ ನೂತನ ಕುಲಪತಿಗಳು



ಮಾನ್ಯ ಶ್ರೀ ಎಸ್. ಎಸ್. ಒಡೆಯರ

ಪರಿವಿಡಿ

ವಿದ್ರೋಹ

● ಸುಕನ್ಯಾ ಮಾರುತಿ

ಜರಡಿ ಹಿಡಿದಾಗ ಹೊರಡುವ
ಸೀರುಗಾಳಲ್ಲ ನಾನು,
ಆದರೂ
ಮುಳ್ಳುನಾಲಗೆಗೆ ಸಿಲುಕಿ
ನರಳುವ ಗತಿ.

ಇಡೀ ರೂಮಿಗೆ ಬೆಳಕು ಹರಡುವ
ನೂರು ಕ್ಯಾಂಡಲ್ ಬಲ್ಬನ್ನು
ಚಾದರದೊಳಗೆಳೆದುಕೊಂಡು
ಮಲಗಿದ ಪರಿಸ್ಥಿತಿ.

ಸಾಗರದ ಗರ್ಭಕ್ಕಿಳಿದು
ಅಷ್ಟೈಶ್ವರ್ಯ
ದೋಚಿತರುವ ಛಾತಿ,
ಕಣ್ಕಟ್ಟಿ ಕಾಡಿಗಟ್ಟಿದ ಸ್ಥಿತಿ.

ಚಕೋರಪಕ್ಷಿಗೆ
ಬಿಸಿನೀರ ದಾಸೋಹ
ಗಂಡಭೇರುಂಡದ ಗುಂಡಿಗೆಗೆ
ಡೈನಮೈಟ್ ಇಡುವ ಸನ್ನಾಹ.

ಬೆಟ್ಟದ ತುದಿಯಲ್ಲಿ
ಬಂಡೆಗಲ್ಲನು ಸೀಳಿ
ಚೆಂಡಿನಂದದಿ ಪುಟಿವ
ಚಿಲುಮೆಯ ಬಾಯಿಗೆ
ಗುಂಡುಕಲ್ಲಾನಿಸುವ
ಭಯಂಕರ ವಿದ್ರೋಹ.

● ●

ಕರ್ನಾಟಕ ಶಬ್ದಾನುಶಾಸನದ ಕರ್ತೃ

● ಪಿ.ರಾಮಭಟ್

ಸಂಸ್ಕೃತ ಭಾಷೆಯಲ್ಲಿರುವ ಕನ್ನಡ ವ್ಯಾಕರಣವಾದ ಕರ್ನಾಟಕ ಶಬ್ದಾನುಶಾಸನದ ಸೂತ್ರ, ವೃತ್ತಿ ಮತ್ತು ವ್ಯಾಖ್ಯಾನಗಳ ಕರ್ತೃ ಭಟ್ಟಾಕಳಂಕನೇ ಎಂದು ಇಲ್ಲಿಯವರೆಗೆ ಸಿದ್ಧವಾಗಿದೆ. ಈ ಗ್ರಂಥವನ್ನು ಸಂಪಾದಿಸಿ ವಿಸ್ತೃತ ಮುನ್ನುಡಿಯೊಡನೆ ಪ್ರಕಟಿಸಿದ ಆರ್. ನರಸಿಂಹಾಚಾರ್ಯರು (ಪ್ರಕಟನೆ ೧೯೨೩) 'ಭಟ್ಟಾಕಳಂಕದೇವ ಕೃತ' ಎಂದೇ ಹೆಸರಿಸಿದ್ದಾರೆ. ನಲ್ನುಡಿಗನ್ನಡಿ ವ್ಯಾಖ್ಯಾನವನ್ನು ಕನ್ನಡದಲ್ಲಿ ಬರೆದು ಪ್ರಕಟಿಸಿದ (೧೯೬೮) ಭುವನಹಳ್ಳಿ ಡಿ. ಪದ್ಮನಾಭಶರ್ಮರೂ "ಭಟ್ಟಾಕಲಂಕ ದೇವಕೃತ"ವೆಂದೇ ಸಮಗ್ರಗ್ರಂಥವನ್ನು ಹೆಸರಿಸಿದ್ದಾರೆ[೧]. ಆರ್. ನರಸಿಂಹಾಚಾರ್ ಅವರು ತಮ್ಮ ವಿಸ್ತೃತ ಮುನ್ನುಡಿ(Introduction)ಯಲ್ಲಿ[೨] ಸೂತ್ರ, ವೃತ್ತಿ, ವ್ಯಾಖ್ಯಾನಗಳ ಬಗ್ಗೆ ಹೀಗೆ ಹೇಳಿದ್ದಾರೆ. ಮೈಸೂರು ಮಹಾರಾಜ ಕಾಲೇಜಿನ ಪಂಡಿತ ಕೆ. ವರದಾಚಾರ್ ಅವರು "ಈ ವ್ಯಾಕರಣದ ಸೂತ್ರಕಾರ ವೃತ್ತಿ ಮತ್ತು ವಾಖ್ಯಾನ ಕಾರನಾದ ಭಟ್ಟಾಕಲಂಕನಿಗಿಂತ ಭಿನ್ನ" ಎಂದಿದ್ದಾರೆ. ಆದರೆ ಅವರು ನೀಡುವ ಕಾರಣಗಳು ಸಮರ್ಥವಾಗಿಲ್ಲ. ಉದಾಹರಣೆಗಳು ಮತ್ತು ಕೆಲವು ಹೇಳಿಕೆಗಳು ಪ್ರತಿಕಾರರಿಂದ ಸಂಶಯಾಸ್ಪದವಾಗುವಂತೆ ಸೇರಿರಬಹುದು. ಸರಿಯಾದ ಹಸ್ತಪ್ರತಿ ದೊರೆಯದೆ ಇದನ್ನು ಪ್ರಮಾಣೀಕರಿಸುವುದು ಅಸಾಧ್ಯ. "ನಮ್ಮ ಕೃತಿಗಾರ ವೃತ್ತಿ ವ್ಯಾಖ್ಯಾನಗಳನ್ನು ಮಾತ್ರ ಬರೆದವನಾಗಿದ್ದು ಸೂತ್ರವನ್ನು ತಾನೇ ಬರೆದೆನೆಂದು ಸುಳ್ಳು ಹೇಳಿದನೆಂದು ಊಹಿಸುವುದು ಕಷ್ಟ" ಎಂದು ಸೂತ್ರ, ವೃತಿ ವ್ಯಾಖ್ಯಾನಗಳ ಭಿನ್ನ ಕರ್ತೃತ್ವದ ಸೂಚನೆಯನ್ನು ಖಂಡಿಸಿ ತಳ್ಳಿಹಾಕಿದ್ದಾರೆ. ಗ್ರಂಥವನ್ನು ಆಮೂಲಾಗ್ರವಾಗಿ ಅಧ್ಯಯನಮಾಡಿದಾಗ ಪಂಡಿತ ವರದಾಚಾರ್ ಅವರ ಮಾತಿನಲ್ಲಿ ಸತ್ಯಾಂಶವಿದೆಯೋ ಎಂಬ ಸಂದೇಹ ಮೂಡದಿರದು ಸೂತ್ರ ವೃತ್ತಿಗಳು ಒಬ್ಬನದಾಗಿದ್ದು ವ್ಯಾಖ್ಯಾನಕಾರ ಭಟ್ಟಾಕಳಂಕನಾಗಿರಬಹುದೇ ಎಂದು ನಮಗನಿಸುತ್ತದೆ. ಪಂಡಿತ ಕೆ. ವರದಾಚಾರ್ ಅವರು ತಮ್ಮ ವಿಸ್ತೃತವಾದ ಲೇಖನ "ಕರ್ನಾಟಕ ಶಬ್ದಾನುಶಾಸನ ತತ್ವಾಲೋಕಂ" (ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ ೧,

---

೧ ಪ್ರಾಗ್ವಿಷಯ ದಿಗ್ದರ್ಶನ— ಕರ್ನಾಟಕ ಶಬ್ದಾನುಶಾಸನ– ಪುಟ ೧೨–ಡಿ. ಭುವನಹಳ್ಳಿ ಪದ್ಮನಾಭ ಶರ್ಮ.

೨ Introduction— Karnatak Sabdanusasana ಪುಟ. 17

ಸಂಚಿಕೆ ೩ ಅಕ್ಟೋಬರ ೧೯೧೬) ಎಂಬುದರಲ್ಲಿ ಈ ಗ್ರಂಥದ ಕರ್ತೃತ್ವದ ಬಗ್ಗೆ ಸೋದಾಹರಣವಾಗಿ ವಿವೇಚಿಸುತ್ತಾ "ಶಬ್ದಾನುಶಾಸನವೆಂಬ ಸೂತ್ರಮಾಲೆಗೆ ತಾನೇ ಕರ್ತೃವೆಂಬುದಾಗಿ ಭಟ್ಟಾಕಳಂಕದೇವನು ಒಂದು ಕಡೆಯಲ್ಲಲ್ಲದೆ ಹಲವು ಕಡೆಯಲ್ಲಿ ಹೇಳಿಕೊಂಡಿದ್ದರೂ ಇವನು ಬರೆದಿರುವ ವೃತ್ತಿಯನ್ನೂ ವ್ಯಾಖ್ಯಾನವನ್ನೂ ಲಕ್ಷ್ಯಗಳನ್ನು ಪರಾಮರ್ಶಿಸಿ ನೋಡಿದಲ್ಲಿ ಇವನು ಸೂತ್ರಕಾರನಲ್ಲವೆಂಬ ನಿಶ್ಚಯವು ಹುಟ್ಟದಿರಲಾರದು... ಈ ವೃತ್ತಿ ವ್ಯಾಖ್ಯಾನಕಾರನೆಂದಿಗೂ ಸೂತ್ರಕಾರನಲ್ಲವೆಂಬಂಶವನ್ನು ವ್ಯಕ್ತಪಡಿಸುವುದು" ಎಂದು ಅಭಿಪ್ರಾಯಿಸಿದ್ದಾರೆ. ಸೂತ್ರವು ಒಬ್ಬನದಾಗಿದ್ದು ವೃತ್ತಿ ವ್ಯಾಖ್ಯಾನಗಳು ಇನ್ನೊಬ್ಬನವಿರಬೇಕೆಂಬುದು ಇವರ ಅಭಿಪ್ರಾಯ.

ಟಿ. ವೆಂಕಟರಾಮಯ್ಯನವರು ತಮ್ಮ ಎರಡು ಲೇಖನಗಳಲ್ಲಿ ಶಬ್ದಾನುಶಾಸನದ ಕರ್ತೃತ್ವದ ಬಗ್ಗೆ ಸಂದೇಹವೆತ್ತಿದ್ದಾರೆ. ಅವರು ತಮ್ಮ "ಭಟ್ಟಾಕಳಂಕದೇವ" (ಜಯಕರ್ನಾಟಕ, ಸಂಪುಟ ೩೮, ಸಂಚಿಕೆ ೭, ಜುಲೈ ೧೯೬೦) ಎಂಬ ಲೇಖನದಲ್ಲಿ "ವೃತ್ತಿ ವ್ಯಾಖ್ಯಾನಗಳ ಬಗ್ಗೆ ಭಟ್ಟಾಕಳಂಕನ ಹೆಸರೇ ನಿಬಂಧಿತವಾದರೂ ಬೇರೆಯವರ ಕೈವಾಡವೂ ವೃತ್ತಿ ವ್ಯಾಖಾನಗಳ ರಚನೆಯ ಬಗ್ಗೆ ಸೇರಿದೆಯೆಂಬ ಊಹೆಯೂ ಬರಲು ಅಲ್ಲಲ್ಲಿ ಕಾರಣಗಳು ಮೂಡಿಬರುತ್ತಿವೆ....ಸೂತ್ರವೃತ್ತಿಗಳ ನಿರ್ಮಾಣ ಕರ್ತೃ ಮಾತ್ರ ಭಟ್ಟಾಕಳಂಕದೇವನೆಂದೂ ವ್ಯಾಖ್ಯಾನಕಾರನು ಕೃತಿಕಾರ ಅಥವಾ ಸೂತ್ರಕಾರನಿಂದ ಭಿನ್ನನೆಂದೂ ತಿಳಿದುಬರುತ್ತದೆ" (ಪುಟ ೧೩) ಎಂದಿದ್ದಾರೆ. ಶ್ರೀ ವರದಾಚಾರ್ಯರು ಸೂತ್ರಕಾರನು ಭಟಾಕಳಂಕನಲ್ಲವೆಂದಿದ್ದರೆ ಇವರು ಸೂತ್ರ ವೃತ್ತಿಗಳ ಕರ್ತೃ ಭಟ್ಟಾಕಳಂಕನಿದ್ದು ವ್ಯಾಖ್ಯಾನಕಾರ ಬೇರೊಬ್ಬನಿರಬೇಕೆಂದು ಭಾವಿಸಿದ್ದಾರೆ. ಶ್ರೀ ಟಿ. ವೆಂಕಟರಾಮಯ್ಯನವರು ತಮ್ಮ ಇನ್ನೊಂದು "ಭಟ್ಟಾಕಳಂಕದೇವ" (ಜಯಕರ್ನಾಟಕ ಸಂಪುಟ ೩೮, ಸಂಚಿಕೆ ೧೧ ನವ್ಹಂಬರ ೧೯೬೦) ಎಂಬ ಲೇಖನದಲ್ಲಿ ವಿವೇಚಿಸುತ್ತ "...ಸೂತ್ರಕಾರನೇ ಬೇರೆ ವ್ಯಾಖ್ಯಾನಕಾರನೇ ಬೇರೆಯೆಂಬ ಭ್ರಮೆ ಯಥಾವತ್ತಾಗಿ ಕಂಡುಬರುತ್ತದೆ... ಪೂರ್ಣ ಪರಿಶೀಲನೆಯಲ್ಲಿ ಸೂತ್ರ ವೃತ್ತಿ ಮತ್ತು ವ್ಯಾಖ್ಯಾನಗಳಿಗೆ ಅಲ್ಲಲ್ಲೇ ಶೀರ್ಮಾನದ ಸ್ಪರ್ಧೆಯೂ ತೋರಿಬರುತ್ತದೆ....ಎನೇ ಇರಲಿ ಶಾಸನ ನಿರ್ಮಾಣದ ಬಗ್ಗೆ ಪೂರ್ಣ ಸ್ವಾಮ್ಯತ್ವವು ಭಟ್ಟಾಕಳಂಕದೇವನಿಗೆ ಸಂದಿದೆ. ಬಹುಶ ಈ ವಿಧದ ಭಿನ್ನತೆಯನ್ನು ತಾನೇ ಹುಟ್ಟಿಸಿ ಪಕ್ಷ ಪ್ರತಿಪಕ್ಷಗಳನ್ನು ಕಲ್ಪಿಸಿಕೊಂಡು ಸಮಾಧಾನ ತೋರಿಸಿರಬಹುದು. ಹಾಗಿದ್ದರೆ ಇದು ಇವನ ಅಗಾಧ ಪಾಂಡಿತ್ಯ ತರ್ಕಶಕ್ತಿಯ ನಿಲುವುಗಳನ್ನು ಸೂಚಿಸುತ್ತದೆ ಎಂದರೆ ತಪ್ಪಾಗದು" ಪುಟ (ಪುಟ ೧೭) ಎಂದು ಈ ಕೃತಿಯ ಭಿನ್ನಕರ್ತೃತ್ವದ ಸಂದೇಹದ ಅವಕಾಶಗಳನ್ನು ಹಲವೆಡೆಯಲ್ಲಿ ಎತ್ತಿತೋರಿಸಿದರೂ ಕೊನೆಯಲ್ಲಿ ಏಕಕರ್ತೃಕತೆಯ ಕಡೆಗೆ ಒಲ್ಲದ ಮನಸ್ಸಿ

ನಿಂದ ಮಣಿದಂತಿದೆ. ಈ ಮಹನೀಯರಿಬ್ಬರ ಲೇಖನಗಳನ್ನು ಪರಾಂಬರಿಸಿದವರೆ ವ್ಯಾಖ್ಯಾನಕಾರನು ಸೂತ್ರ ವೃತ್ತಿಕಾರನಿಗಿಂತ ಭಿನ್ನನೆಂಬ ಸಮಾನ ಅಂಶ ಪ್ರಕಟ ವಾಗುತ್ತದೆ.

ಕೇಶಿರಾಜನು ಸೂತ್ರ ವೃತ್ತಿಗಳನ್ನು ಬರೆದ, ವ್ಯಾಖ್ಯಾನವನ್ನು ಬರೆದಿರಲಿಲ್ಲ. ನಿಷ್ಠೂರ ನಂಜಯ್ಯ, ಲಿಂಗಣಾರಾಧ್ಯ ಮತ್ತೆ ಈಚಿನವರು ಅದಕ್ಕೆ ವ್ಯಾಖ್ಯಾನ ಬರೆದರು. ಶಬ್ದಮಣಿದರ್ಪಣದಲ್ಲಿ ಹಾಗಾಗಿದೆಯೆಂದು ಇದರಲ್ಲೂ ಹಾಗಾಗ ಬೇಕೆಂದಿಲ್ಲ. ಒಬ್ಬನೇ ಸೂತ್ರ, ವೃತ್ತಿ, ವ್ಯಾಖ್ಯಾನಗಳನ್ನು ಬರೆಯಬಾರದೆಂದೂ ಇಲ್ಲ ಕರ್ಣಾಟಕ ಶಬ್ದಾನುಶಾಸನದ ಈ ಮೂರನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿ ದರೆ ಸಂದೇಹಕ್ಕೆ ಕಾರಣಗಳು ಎದ್ದುತೋರುತ್ತವೆ. ಕೇವಲ ಒಂದೆರಡು ಕಡೆ ಸೂತ್ರಕಾರ ಬೇರೆ, ವೃತ್ತಿಕಾರ ಬೇರೆ, ವ್ಯಾಖ್ಯಾನಕಾರ ಬೇರೆ ಎಂದು ಭಾವಿಸಲೂ ಅವಕಾಶವಿದೆ. ಆದರೆ ಅದು ನಗಣ್ಯ. ಸೂತ್ರ ವೃತ್ತಿಕಾರ ಒಬ್ಬನಿದ್ದು ವ್ಯಾಖ್ಯಾನ ಕಾರ ಇನ್ನೊಬ್ಬನಿರಬಹುದೆಂಬುದಕ್ಕೆ ಹೆಚ್ಚಿನ ಅವಕಾಶವಿದೆ.

ಭಟ್ಟಾಕಲಂಕನೇ ಸಮಗ್ರಕೃತಿಯ ಕರ್ತೃವೆನ್ನಲು ಕಾರಣಗಳು :

ಭಟ್ಟಾಕಲಂಕದೇವಕೃತವೆಂದು ಮೇಲೆ ಹೆಸರಿಸಲಾಗಿದೆಯಲ್ಲದೆ ವ್ಯಾಖ್ಯಾನದ ಮೊದಲಲ್ಲಿ "ಅಥಾತಃ ಶ್ರೀ ಮದನವದ್ಯಸ್ಯಾದ್ವಾದ ವಿದ್ಯಾಪ್ರಭಾವ ಪ್ರಘಟ್ಟ ವಿಘಟ್ಟಿತ ಸಕಲ ಸರ್ವಥೈಕಾಂತವಾದ ಪ್ರಘಟ್ಟೋ ಭಟ್ಟಾಕಲಂಕದೇವ.........."[೩] ಎಂದು ಅವನನ್ನು ಹೆಸರಿಸಲಾಗಿದೆ. ಈ ಹೆಸರಿನ ವ್ಯಕ್ತಿ ಒಬ್ಬನೇ ಇದ್ದು ಸಮಗ್ರ ಗ್ರಂಥವನ್ನು ಅವನೇ ಬರೆದನೆಂದು ತಿಳಿಯಲಾಯಿತು.

ಪ್ರತಿ ಪಾದದ ಕೊನೆಯಲ್ಲಿ ಸೂತ್ರ ವೃತ್ತಿಗಳ ಅಂತ್ಯದಲ್ಲಿ "ಇತಿ ಶ್ರೀ ಭಟ್ಟಾ ಕಲಂಕದೇವ ವಿರಚಿತಾಯಾಂ ಭಾಷಾಮಂಜರೀ ಸಮಾಖ್ಯಾಯಾಂ ಶಬ್ದಾನುಶಾಸನ ವೃತ್ತೌ......" ಎಂದಿದೆ. "ಶಬ್ದಾನುಶಾಸನ ವೃತ್ತೌ" ಎಂದಿರುವುದರಿಂದ ವೃತ್ತಿ ಯನ್ನು ಮಾತ್ರಾ ಹೇಳಿದನೇ? ಎಂಬ ಸಂದೇಹ ಬರಬಹುದೇನೋ. ಆದರೆ ಶಬ್ದಾನು ಶಾಸನ ಮತ್ತದರ ವೃತ್ತಿ ಎಂದು ದ್ವಂದ್ವಸಮಾಸಪೂರ್ವಕವಾಗಿ ಅರ್ಥ ಮಾಡಿದರೆ ಎರಡನ್ನೂ ಉದ್ದೇಶಿಸಿದಂತೆ ಸಮಾಧಾನಪಡಬಹುದು.

'ಭಾಷಾಮಂಜರಿ' ಎಂಬ ವೃತ್ತಿ, 'ಮಂಜರೀ ಮಕರಂದ' ವೆಂಬ ವ್ಯಾಖ್ಯಾನ. ಪ್ರತಿ ಪಾದದ ಕೊನೆಯಲ್ಲಿ ವ್ಯಾಖ್ಯಾನದ ಅವಸಾನದಲ್ಲಿ ಮತ್ತೆ ಪುನಃ ಸಮಾಪ್ತಿ ವಾಕ್ಯ ಹೀಗೆ ಬರುತ್ತದೆ- "ಇತಿ ಶ್ರೀ ಭಟ್ಟಾಕಲಂಕದೇವ ವಿರಚಿತಾಯಾಂ

---

೩. ಅನುಶಾಸನ ಪುಟ ೧. ವ್ಯಾಖ್ಯಾನ.

ಸ್ವೋಪಜ್ಞ– ಶಬ್ದಾನುಶಾಸನವೃತ್ತೇಃಭಾಷಾಮಂಜರ್ಯಾಃ ವ್ಯಾಖ್ಯಾಯಾಂ ಮಂಜರೀ ಮಕರಂದ ಸಮಾಖ್ಯಾಯಾಂ... ಪಾದ.". ಇಲ್ಲಿ ಭಟ್ಟಾಕಲಂಕದೇವನೆಂಬ ಹೆಸರು ಅದೇ ಆಗಿ ತೋರುತ್ತದೆ. ಸ್ವೋಪಜ್ಞ ಶಬ್ದಾನುಶಾಸನದ ವೃತ್ತಿ ಭಾಷಾಮಂಜರಿ, ಅದರ ಟೀಕೆಯಾಗಿರುವುದು 'ಮಂಜರೀಮಕರಂದ'. ಇದು "ಭಟ್ಟಾಕಲಂಕದೇವ ವಿರಚಿತ" ಈ ಪ್ರತ್ಯೇಕವಾದ ಹೇಳಿಕೆಯ ಅವಶ್ಯವೇನು? ಸೂತ್ರ, ವೃತ್ತಿ, ವ್ಯಾಖ್ಯಾನ ಒಬ್ಬನದೇ ಆದರೆ ಎಲ್ಲಕ್ಕೂ ಒಟ್ಟಾಗಿ ಒಂದೇ ಸಮಾಪ್ತಿವಾಕ್ಯ ಸಾಲದೇ? ಬೇರೆ ಬೇರೆ ಬೇಕಿದ್ದರೆ ಸೂತ್ರಕ್ಕೂ ಒಂದು ಸಮಾಪ್ತಿವಾಕ್ಯ ಬೇಡವೇ? ಸೂತ್ರ, ವೃತ್ತಿ ಒಬ್ಬನದೇ. ಆದುದರಿಂದ ಅವಕ್ಕೊಟ್ಟಾಗಿ ಒಂದೇ ಸಮಾಪ್ತಿವಾಕ್ಯ, ವ್ಯಾಖ್ಯಾನ ಬೇರೊಬ್ಬನದಾಗಿದ್ದರಿಂದ ಅದಕ್ಕೆ ಬೇರೆ ಸಮಾಪ್ತಿವಾಕ್ಯ ಬಂದಿರಬೇಕೆಂದು ಊಹಿಸಲೆಡೆಯಿಲ್ಲವೇ? ಇಬ್ಬರದೂ ಹೆಸರೊಂದೇ ಆದ ಮಾತ್ರಕ್ಕೆ ಇಬ್ಬರೂ ಒಂದೇ ಎಂದು ಅರ್ಥವೇ? ಇಂತಹ ತಪ್ಪು ಗ್ರಹಿಕೆ ನಮ್ಮಲ್ಲಿ ಆಗಿಲ್ಲವೇ? ಇದಕ್ಕೆ ಯೋಗ್ಯ ಉದಾಹರಣೆ ನಾಗವರ್ಮ. ಈ ಹೆಸರಿನವ ಒಬ್ಬನೇ, ಇಬ್ಬರೇ, ಮೂವರೇ, ನಾಲ್ವರೇ ಎಂಬ ವಾದ ಇನ್ನೂ ಕೊನೆಗೊಂಡಿಲ್ಲ. ಮೂವರು ಖಂಡಿತ ಇದ್ದಿರಬೇಕು. ನಾಲ್ಕನೆಯವನೂ ಇದ್ದಿರಬೇಕೆಂಬುದನ್ನು ಈ ಹಿಂದೆ ನಾವು ಸ್ವಲ್ಪಮಟ್ಟಿಗೆ ಚರ್ಚಿಸಿದ್ದೇವೆ. ಲೂಯಿ ರೈಸ್‌ರು ಆಗಿನ ಸಂಶೋಧನೆಯ ನೆಲೆಯಲ್ಲಿ ನಾಗವರ್ಮನೊಬ್ಬನೆಂದರೆ,[೪] ಆರ್. ನರಸಿಂಹಾಚಾರ್ಯರು ಇಬ್ಬರೆಂದಿದ್ದಾರೆ.[೫] ಚಂದ್ರಚೂಡಾಮಣಿಶತಕವನ್ನು ಬರೆದ ನಾಗವರ್ಮಾಚಾರ್ಯ ಸೇರಿದರೆ ಮೂವರು, ಭಾಷಾಭೂಷಣದ ಕರ್ತೃವು ಬೇರೊಬ್ಬನಾದರೆ[೬] ನಾಲ್ವರು. ನಯಸೇನರಲ್ಲೂ ಹೀಗೆ, ಧರ್ಮಾಮೃತಕಾರನೊಬ್ಬನಾದರೆ ಮುಳಗುಂದ ಶಾಸನೋಕ್ತ ವೈಯಾಕರಣ ನಯಸೇನ ಬೇರೊಬ್ಬ. ಇಂತಹ ಉದಾಹರಣೆಗಳನ್ನು ಇನ್ನೂ ಪಟ್ಟಿ ಮಾಡಬಹುದು. ಮೊದಲು ಇವರೆಲ್ಲ ಒಬ್ಬೊಬ್ಬರೇ ಎಂದು ಭಾವಿಸಲಾಗಿದ್ದು ಸಂಶೋಧನೆ ಮುಂದುವರಿದಂತೆ ಸತ್ಯಾಂಶಕ್ಕೆ ಹೆಚ್ಚು ಬೆಳಕುಬಿದ್ದಿದೆ.

ಪ್ರಸ್ತುತದಲ್ಲೂ ಇಂತಹದೇ ಗ್ರಹಿಕೆ ಬಂದಿರಬೇಕೆನ್ನಿಸುತ್ತದೆ. ಭಟ್ಟಾಕಲಂಕನೊಬ್ಬನೇ ಸಮಗ್ರವನ್ನು ಬರೆದನೆನ್ನುವುದಕ್ಕೆ ಇನ್ನೊಂದು ಹೇಳಿಕೆ ಹೀಗಿದೆ :

---

೪. Introduction- Karnataka Bhashabhushana Page iii

೫. Introduction- Kavyavalokana Page xvi

೬. ನಮ್ಮ ಪ್ರಬಂಧ.

ಯಃ ಕರ್ನಾಟಕ ಶಬ್ದ ಶಾಸನಮಿದಂ ನಿರ್ಮಾಯ ಶರ್ಮಾವಹಂ
ವೃತ್ತಿಂ ಚಾರಚಯಚ್ಚ ತಸ್ಯವಿದುಷಾಂ ಪ್ರೌಢಂ ಪ್ರರೂಢಶ್ರೀಯಂ
ತೇನೇದಂ ವ್ಯರಚಿ ಪ್ರಗಲ್ಭವಚಸಾ ಭಟ್ಟಾಕಲಂಕೇತ
ದ್ವೃತ್ತೇಃ ಸಾಧು ನಿಬಂಧನಂ ಚ ಮಕರಂದಾಖ್ಯಾಂ ಸಮಾಖ್ಯಾಸ್ಪದಂ೭

ಈ ಶ್ಲೋಕದಲ್ಲಿ ಶಬ್ದಶಾಸನ ಆದರ ವೃತ್ತಿ ವ್ಯಾಖ್ಯಾನಗಳನ್ನು ಭಟ್ಟಾಕಲಂಕನು ಬರೆದಂತೆ ಹೇಳಿದೆ. ಸೂತ್ರ ವೃತ್ತಿಕಾರ ಮತ್ತು ವ್ಯಾಖ್ಯಾನಕಾರ ಇಬ್ಬರ ಹೆಸರೂ ಒಂದೇ ಆಗಿದ್ದರೆ ಮೊದಲಿನವನ ಮೇಲಿನ ಭಕ್ತಿಯಿಂದ ಎರಡನೆಯವನು ಇಬ್ಬರಿಗೂ ಸಮನ್ವಯವಾಗುವಂತೆ ಹೇಳಿರಬಹುದೇ ?

ಇನ್ನು ಏಕಕರ್ತೃಕವೆನ್ನುವುದಕ್ಕೆ ಮತ್ತೊಂದು ಆಧಾರ ಗ್ರಂಥಾಂತ್ಯದ ಕನ್ನಡ ಅವತರಣಿಕೆ: "...ಭಟ್ಟಾಕಲಂಕದೇವಂ ಕರ್ಣಾಟ ಶಬ್ದಾನುಶಾಸನಮಂ ಸೂತ್ರಿಸಿ... ಭಾಷಾಮಂಜರಿಯೆಂಬ ವೃತ್ತಿಯಂ ನಿರ್ವರ್ತಿಸಿ........ರಚಿಸಿದ ಮಂಜರೀಮಕರಂದ ಮೆಂಬ ನಿಬಂಧ........ಪರಿಸಮಾಪ್ತಮಾದುದು"೮. ಇದನ್ನು ಯಾರೋ ಕೃತಿಕಾರನ ಶಿಷ್ಯ ಅಥವಾ ಪ್ರತಿಗಾರ ಶ್ಲೋಕಾರ್ಥವನ್ನೇ ಕನ್ನಡಕ್ಕೆ ಭಾಷಾಂತರಿಸಿ ಬರೆದಿರ ಬೇಕೆಂದು ಊಹಿಸಬಹುದು. ಏಕೆಂದರೆ ಕೃತಿಕಾರ ಎಲ್ಲೂ ಕನ್ನಡದಲ್ಲಿ ಸ್ವವಿಷಯ ಹೇಳಿಲ್ಲ. ಹೇಳುವ ಉದ್ದೇಶವಿಲ್ಲ, ಸಂಸ್ಕೃತ ಪಂಡಿತರಿಗಾಗಿ ಬರೆದದ್ದರಿಂಥ, ಗ್ರಂಥ ಸಂಪಾದಕರಾದ ಆರ್. ನರಸಿಂಹಾಚಾರ್ಯರು ಹಾಗೇ ಅಭಿಪ್ರಾಯಿಸಿದ್ದಾರೆ.

ಭಟ್ಟಾಕಲಂಕದೇವನೆಂಬ ಒಂದೇ ಹೆಸರು ಎಲ್ಲೆಡೆ ಕಂಡುಬಂದುದರಿಂದ ಒಬ್ಬನೇ ಕರ್ತೃವೆಂದು ಭಾವಿಸಲು ಕಾರಣವಾಯಿತೆಂದು ಮೇಲಿನ ಹೇಳಿಕೆಗಳಿಂದ ವಿವರಣೆಯಿಂದ ಸ್ಪಷ್ಟ. ಒಬ್ಬನೇ ಕರ್ತೃವಾಗಿರಬಹುದೆಂಬುದಕ್ಕೆ ಆಧಾರವಿದ್ದರೂ ಸಂಶಯಕ್ಕೆ ಆಸ್ಪದವಿದೆಯೆಂಬುದು ನಮ್ಮ ಪ್ರತಿಪಾದನೆಯ ಉದ್ದೇಶ. ಒಬ್ಬನದನ್ನು ಇನ್ನೊಬ್ಬನಿಗೆ ಕಟ್ಟಬೇಕೆಂಬ ದುರುದ್ದೇಶವಿಲ್ಲ.

ಪವಿತ್ರ ವೃತ್ತಿಗಳ ಕರ್ತೃವಿಗಿಂತ ವ್ಯಾಖ್ಯಾನದ ಕರ್ತೃ ಭಿನ್ನನೆನ್ನಲು ಕಾರಣ:

ಭಟ್ಟಾಕಳಂಕನ ಗುರುಪರಂಪರೆಯನ್ನು ಹೇಳುವಲ್ಲಿ ಅಕಲಂಕದೇವನು ಇವನ ಗುರುವೆಂದೂ ಇವನಿಗೂ ಅಕಲಂಕಭಟ್ಟ, ಭಟ್ಟಾಕಲಂಕನೆಂಬ ಹೆಸರು ಇದ್ದಿರ ಬೇಕೆಂದು ನಾವು ನೋಡಿದ್ದೇವೆ.೯ ಈ ಗುರುವೂ ಸಾರತ್ರಿತಯ ಅಲಂಕಾರತ್ರಯಾದಿ ಗಳನ್ನು ಕಲಿತ ವಿದ್ವಾಂಸನಾಗಿದ್ದ. ಭಟ್ಟಾಕಲಂಕನಂತಹ ಶಿಷ್ಯನಿರಬೇಕಾದರೆ ಅವನ

---

೭. ಅನುಶಾಸನ ಪುಟ ೪೭೦.

೮. ಅನುಶಾಸನ ಪುಟ ೪೭೧.

೯. ಕರ್ನಾಟಕ ಕವಿಚರಿತೆ, ದ್ವಿತೀಯ ಸಂಪುಟ, ಪುಟ ೩೬.

ಗುರು ಹೇಗಿರಬೇಕೆಂದೂಹಿಸಬಹುದು. ಈ ಗುರುವೇ ಸೂತ್ರ ವೃತ್ತಿಗಳನ್ನು ಬರೆದಿದ್ದು ಅವನ ಶಿಷ್ಯ ಭಟ್ಟಾಕಳಂಕ ವ್ಯಾಖ್ಯಾನವನ್ನು ಬರೆದಿರಬಹುದೇ ? ಇಬ್ಬರಿಗೂ 'ಅಕಲಂಕ' ಎಂಬ ಹೆಸರು ಒಂದೇ ಆದ್ದರಿಂದ 'ಏಕತ್ವ' ಸ್ಥಾಪಿತವಾಗಿರಬಹುದೇ ? ಇದನ್ನು ಸ್ಥಾಪಿಸಲು ಇನ್ನೂ ಆಧಾರಗಳು ಬೇಕು.

ಇತ್ತೀಚೆಗೆ ತಾ. ೭-೧೧-೧೯೭೭ ರಂದು ಅಪರಾಹ್ನ ಸೋದೆಯ ಜೈನಮಠಕ್ಕೆ ನಾನು ಭೇಟಿಯಿತ್ತು, ಅಲ್ಲಿ ಈಗಿರುವ ಜೈನ ಸನ್ಯಾಸಿಗಳೊಡನೆ ವಿಚಾರವಿನಿಮಯ ನಡೆಸಿದಾಗ ಅವರು ಅಲ್ಲಿನ ಮಠಕ್ಕೆ ಭಟ್ಟಾಕಳಂಕಮಠವೆಂದು ಹೆಸರು, ಗುರುವಿಗೆ ಅಕಲಂಕದೇವನಾದರೆ ಶಿಷ್ಯನಿಗೆ ಭಟ್ಟಾಕಲಂಕನೆಂದು ಹೀಗೆ ಅನುಕ್ರಮವಾಗಿ ಪಟ್ಟಧಾರಿಗಳಿಗೆ ಹೆಸರಿಡುವುದು ಅಲ್ಲಿನ ಕ್ರಮವೆಂದೂ ನನಗೆ ತಿಳಿಸಿ ಉಪಕಾರ ಮಾಡಿದ್ದಾರೆ. ಇದೇ ರೀತಿ ಸೋದೆಯ ಸ್ವರ್ಣವಲ್ಲೀ ಮಠ (ಹೊನ್ನೆಹಳ್ಳಿ)ದ ಗುರುಪೀಠದಲ್ಲೂ ಗುರು ಶಿಷ್ಯರ ಹೆಸರು ಸುಮಾರು ೧೬ನೆಯ ಶತಮಾನದ ಅನಂತರ ಪುನರಾವರ್ತಿತವಾಗುವುದು— ಗಂಗಾಧರೇಂದ್ರ ಸರಸ್ವತಿ ಗುರು, ಸರ್ವಜ್ಞೇಂದ್ರ ಸರಸ್ವತಿ ಶಿಷ್ಯ-ಹೀಗೆ ತಿಳಿದುಬರುತ್ತದೆ. (ಸ್ವರ್ಣವಲ್ಲೀ ಪ್ರಕಾಶ-ಗೋಪಾಲಕೃಷ್ಣ ಹೆಗಡೆ) ಆರ್. ನರಸಿಂಹಾಚಾರ್ಯರು ಕವಿಚರಿತೆಯಲ್ಲಿ ಕೊಟ್ಟ ಭಟ್ಟಾಕಳಂಕನ ಗುರುಪರಂಪರೆಯಲ್ಲೂ ಅವನ ಗುರು ಅಕಳಂಕನೆಂದೇ ಇದೆ.

ಕೆಲವೊಮ್ಮೆ ಅಕಲಂಕದೇವ, ಭಟ್ಟಾಕಲಂಕ ಎಂಬ ಎರಡೂ ಹೆಸರುಗಳು ಒಬ್ಬನೇ ವ್ಯಕ್ತಿಗೆ ಇದ್ದಂತೆ ತಿಳಿದುಬರುತ್ತದೆ. ಸಮಂತಭದ್ರ, ಪೂಜ್ಯಪಾದರ ಸಮನೆಲೆಯಲ್ಲಿ ನಿಲ್ಲುವ ಪ್ರಖ್ಯಾತ ಜೈನ ಯತಿಯು ಅಷ್ಟಶತಿ ಮೊದಲಾದ ಹಲವು ಗ್ರಂಥಗಳನ್ನು ರಚಿಸಿದ್ದು ಕ್ರಿ. ಶ. ಸು. ೬೩೪ ರಲ್ಲಿದ್ದನೆಂದೂ ಅವನಿಗೆ ಹೀಗೆ ಎರಡೂ ಹೆಸರುಗಳಿದ್ದಂತೆ ತಿಳಿಯುತ್ತದೆ. **(Jainism in South India–S. K. Ramachandra Rao)**. ಭಟ್ಟಾಕಲಂಕದೇವನೆಂಬ ಹೆಸರು ಇವನಿಗೇ ರೂಢಿಯಲ್ಲಿದ್ದು ಮುಂದೆ ಅದೇ ಹೆಸರನ್ನು ಇತರರು ಇಟ್ಟುಕೊಂಡಿರುವುದರಿಂದ ಗೊಂದಲಕ್ಕೆಡೆಯಾಗಿದೆ. "ಕರ್ಣಾಟಕ ಶಬ್ದಾನುಶಾಸನವನ್ನು ಬರೆದ ಸಂಗೀತಪುರ (ಹಾಡುವಳ್ಳಿ)ದ ಭಟ್ಟಾಕಳಂಕನೊಬ್ಬನಿದ್ದರೂ ಪ್ರಾಚೀನನಾದ ಭಟ್ಟಾಕಳಂಕನಿಗೇ ಆ ಹೆಸರು ಪ್ರಸಿದ್ಧವಾಗಿದೆ ಅವನಿಗೆ ಅಕಲಂಕಚಂದ್ರನೆಂಬ ಹೆಸರೂ ಇತ್ತು. ಸಂಗೀತಪುರ ಮಠದಲ್ಲೇ ಅಕಲಂಕ ನಾಮಧಾರಿಗಳಾದ ಹಲವು ಆಚಾರ್ಯರು ಆಗಿಹೋದರು" (ಜೈನ ಸಿದ್ಧಾಂತ, ಭಾಸ್ಕರ, ಭಾಗ ೪, ಕಿರಣ ೩, ಪುಟ ೧೫೭). ಈ ಮಾತುಗಳಿಂದ ಏಕರೀತಿಯ ಹೆಸರು ಭಿನ್ನ ಕರ್ತೃಗಳನ್ನು ಒಂದೇಯೆಂದು ತಿಳಿಯಲು ಅವಕಾಶವಾಯಿತೆಂದು ತಿಳಿಯಬಹುದು.

ವ್ಯಾಖ್ಯಾನದಲ್ಲಿ ಅಲ್ಲಲ್ಲಿ ಬರುವ ಹೇಳಿಕೆಗಳು ಭಿನ್ನಕರ್ತೃತ್ವವನ್ನು ಸೂಚಿಸುತ್ತವೆ.

ಮಂಗಲಶ್ಲೋಕದ ವಿವರಣೆ ಕೊಡುವ ಮೊದಲು ಹೇಳುವ ಪ್ರಾಸ್ತಾವಿಕವಾದ ಕೃತಿ ಪರಿಚಯಾತ್ಮಕವಾದ ವಿಚಾರವನ್ನು ವ್ಯಾಖ್ಯಾನದಲ್ಲಿ ಹೇಳುತ್ತಾ "......ಶಬ್ದಾನುಶಾಸನಾಭಿಧಾನಂ ಗ್ರಂಥಂ ಶ್ರೋತೃಶರ್ಮಾವಹಂ ನಿರ್ಮಾಯ, ತಸ್ಯ ಗ್ರಂಥಸ್ಯ ಸಾರವದನಲ್ಪಾರ್ಥಸೂಚಕ ಸ್ವಲ್ಪಾಕ್ಷರರೂಪ ಸೂತ್ರ ಸಮುದಯ ಕಲ್ಪಿತಸ್ಯ ಅರ್ಥ. ಶ್ರುತ ಪ್ರಕೃತ ಸಾಮರ್ಥ್ಯಾನುಮಿ ತೋಽಲ್ಪಧಿಯಾಂ ಜ್ಞಾತುಮಶಕ್ಯ ಇತಿ ತದನುಜಿಘೃಕ್ಷಯಾ ಸ್ವಯಮೇವ ವಿವರಣರೂಪಾಂ ಭಾಷಾ ಮಂಜರೀ ಸಮಾಖ್ಯಾಂ ವೃತ್ತಿಂ ಚಿಕೀರ್ಷು: ತದಾದೌ...... ಸ್ವಕೃತಂ ಮಂಗಲಂ ಶಿಷ್ಯಶಿಕ್ಷಾರ್ಥಂ ನಿಬಧ್ನಾತಿ"[೧೦] ಈ ವ್ಯಾಖ್ಯಾನದ ಮಾತಿನಲ್ಲಿ ಶಬ್ದಾನುಶಾಸನವನ್ನು ಸೂತ್ರಸಮುದಯದ ಅರ್ಥವು 'ಅಲ್ಪಧೀ'ಗಳಿಗೆ ತಿಳಿಯುವುದು ಕಷ್ಟವೆಂದು 'ಸ್ವಯಮೇವ' ವಿವರಣ ರೂಪವಾದ 'ಭಾಷಾಮಂಜರಿ' ಎಂಬ ವೃತ್ತಿಯನ್ನು ಬರೆಯಲಪೇಕ್ಷಿಸಿ ಮೊದಲು 'ಸುಕೃತ'ವಾದ ಮಂಗಲವನ್ನು 'ಶಿಷ್ಯ' ಶಿಕ್ಷಾರ್ಥವಾಗಿ ನಿಬಂಧಿಸುತ್ತಾನೆ ಎಂದಿದೆ. ಇಲ್ಲಿ ಸೂತ್ರ ವೃತ್ತಿಗಳನ್ನು ಮಾತ್ರ ಅವನು ಬರೆದಂತೆ ಹೇಳಿದೆ. ಶಿಷ್ಯ ಶಿಕ್ಷೆಗಾಗಿ ವ್ಯಾಖ್ಯಾನದ ರಚನೆಯನ್ನು ಸೂತ್ರ ವೃತ್ತಿಕಾರನೇ ಮಾಡಿದ್ದರೆ ಅದನ್ನು ಖಂಡಿತವಾಗಿ ಉಲ್ಲೇಖಿಸಬೇಕಿತ್ತು. ವ್ಯಾಖ್ಯಾನಕಾರ ಬೇರಾದುದರಿಂದಲೇ ಸೇರಿಸಿಲ್ಲ. 'ಶಿಷ್ಯ ಶಿಕ್ಷೆಗಾಗಿ' ಎಂದಲ್ಲಿ ವ್ಯಾಖ್ಯಾನಕಾರ ತನ್ನನ್ನೇ ಮನಸಿನಲ್ಲಿಟ್ಟು ಹೇಳಿದಂತಿಲ್ಲವೇ ? 'ನಿಭದ್ನಾತಿ' ಎಂದು ಪ್ರಥಮಪುರುಷದಲ್ಲಿ– 'ನಿಬಂಧಿಸುತ್ತಾನೆ.' ತಾನೇ ಆದರೆ 'ನಿಬದ್ನಾಮಿ' ಎನ್ನಬೇಕಿತ್ತು, ತಾನೇ ಹೇಳುವಾಗ ಉತ್ತಮಪುರುಷಕ್ಕೆ ಬದಲು ಪ್ರಥಮಪುರುಷ ಪ್ರಯೋಗಿಸುವ ರೂಢಿಯಿದೆ.

"ವಾಗ್ದೇವಿಯ ಭಂಡಾರದ ಮುದ್ರೆಯನೊಡೆದಂ ಸಾರಸ್ವತಮೆನಿಪ ಕವಿತೆಯೊಳ್ ಕವಿರನ್ನಂ"[೧೧].

"ಕಬ್ಬಿಗರಕಾವನೊಲವಿಂದೊರೆದು"[೧೨].

"ಆರುದಿಂಗಳೊಳೊಂದು ಮೂರು ತಿಂಗಳೊಳೆ ಸಮಾಪ್ತಿಯಾದುದೆನೆ ಬಣ್ಣಿಸಿದಂ ಕವಿತಾಗುಣಾರ್ಣವಂ"[೧೩].

ಹೀಗೆ ಕವಿಗಳು ತಮ್ಮನ್ನು ಹೇಳಿಕೊಳ್ಳುವಾಗಲೆಲ್ಲಾ ಉತ್ತಮ ಪುರುಷದ ಲದಲು ಪ್ರಥಮವನ್ನು ಪ್ರಯೋಗಿಸಿದ ನಿದರ್ಶನಗಳು ಬೇಕಾದಷ್ಟಿವೆ. ಇಲ್ಲಿ ತನ್ನನ್ನು ಪ್ರತ್ಯೇಕಿಸಿ ಹೇಳಿರುವುದು ಸ್ಪಷ್ಟ.

೧೦, ಅನುಶಾಸನ ವ್ಯಾಖ್ಯಾನ ೨.
೧೧. ಗದಾಯುದ್ಧ–ರನ್ನ.
೧೨. ಕಬ್ಬಿಗರಕಾವ—ಆಂಡಯ್ಯ.
೧೩. ವಿಕ್ರಮಾರ್ಜುನವಿಜಯ—ಪಂಪ.

“ನಮಃ ಶ್ರೀ ವರ್ಧಮಾನಾಯ……”ಇತ್ಯಾದಿಯಾದ ಮಂಗಲ ಶ್ಲೋಕವನ್ನು ವ್ಯಾಖ್ಯಾನಿಸುವಲ್ಲಿ ನಮಃ ಶಬ್ದವು ಇಲ್ಲಿ ಅವ್ಯಯ. ಅವವ್ಯಯವಾಗಿಯೂ ಅದರ ಪ್ರಯೋಗವಿದೆಯೆಂದು ವಿವರಿಸುತ್ತಾ “ಅತ್ರಾಯಮವ್ಯಯ ಏವೇಷ್ಟವ್ಯಃ ಅನ್ಯಥಾ ಶ್ರೀ ವರ್ಧಮಾನಾಯೇತ್ಯಾದೌ ಚತುರ್ಥೀ ನಿರ್ನಿಮಿತ್ತಾಸ್ಯಾತ್, ನನು ನೇಯಂ ಕಾರಕೇ ವಿಭಕ್ತಿಃ ತತ್ರ ಚ ಸೂತ್ರಕಾರೇಣ ನಮಶ್ಶಬ್ದ ಯೋಗ ಮಾತ್ರಂ ನಿಮಿತ್ತಮಭಿಹಿತಂ ನತು ಅವ್ಯಯಾನವ್ಯಯ ವಿಶೇಷಃ........[೧೪] ಇಲ್ಲಿ 'ಸೂತ್ರಕಾರೇಣ' (ಸೂತ್ರಕಾರನಿಂದ) ಎಂದು ಅವನನ್ನು ತನ್ನಿಂದ ಪ್ರತ್ಯೇಕಿಸಿದುದು ಕಾಣುತ್ತದೆ. ಒಬ್ಬನನ್ನೇ ಅವನ ಸೂತ್ರದ ಕುರಿತು ಹೇಳುವಾಗ ಸೂತ್ರಕಾರನೆಂದೂ ಅವನನ್ನೇ ಅವನ ವೃತ್ತಿಯ ಕುರಿತು ಹೇಳುವಾಗ 'ವೃತ್ತಿಕಾರ'ನೆಂದೂ ವ್ಯಾಖ್ಯಾನದ ಕುರಿತು ಹೇಳುವಾಗ ಅವನನ್ನೇ ವ್ಯಾಖ್ಯಾನಕಾರನೆಂದೂ ಹೇಳಬಾರದೆಂದಿಲ್ಲ. ಒಬ್ಬನೇ ಕೃತಿಕಾರನಾಗಿದ್ದರೆ ಹಾಗೆ ಬೇರೆಬೇರಾಗಿ ಹೇಳಬೇಕಿಲ್ಲ. ಕೃತಿಕಾರನೆಂದೋ ಗ್ರಂಥಕರ್ತೃವೆಂದೋ ಹೇಳಿದರೆ ಸಾಕಾಗುತ್ತಿತ್ತಲ್ಲ. ಇದೇ ಸಂದರ್ಭದಲ್ಲಿ “ವೃತ್ತಿಕಾರೇಣಾಪಿ....”[೧೫] ಎಂಬ ಪ್ರಯೋಗದಿಂದ 'ವೃತ್ತಿಕಾರ' ಬೇರೆ ಇದ್ದಾನೆಯೇ ಎಂದೂಹಿಸಲು ಅವಕಾಶವಿದ್ದರೂ ಒಂದನೇ ಉದ್ಧರಣದಲ್ಲೇ ಸೂತ್ರವನ್ನೂ ವೃತ್ತಿಯನ್ನೂ ಬರೆದೆನೆಂದು ಹೇಳಿರುವುದರಿಂದ ಈ ಸಂದೇಹಕ್ಕೆ ಇಂಬಿಲ್ಲ. ಇಲ್ಲಿ 'ವೃತ್ತಿಕಾರ' ಎನ್ನುವುದು 'ವಾರ್ತಿಕ' ಅಥವಾ 'ಅಮೋಘವೃತ್ತಿ'ಯಕಾರನನ್ನು, ಪ್ರಾರ್ಥನಾಶ್ಲೋಕದ 'ಶ್ರೀ ವರ್ಧಮಾನಾಯ' ಎಂಬ ಶಬ್ದ ಕರ್ಮಧಾರಯವೆಂದು ವಿವರಿಸುತ್ತಾ “ನಹಿವಯಂ ಭಿನ್ನಾಧಿಕರಣ ನಿಯತಂ ಜಾತಿದ್ವಯಂ ಏಕಾತ್ರಾವಿರುದ್ಧ ವೃತ್ತಿ ಭ್ರೂಮಃ”[೧೬] ನಹಿವಯಂ ಭ್ರೂಮ ನಾವು ಹೇಳುವುದಿಲ್ಲ. ಇಲ್ಲಿ ಉತ್ತಮಪುರುಷ ಪ್ರಯೋಗವು ವ್ಯಾಖ್ಯಾನಕಾರನನ್ನೇ ಸೂತ್ರಕಾರನಿಂದ ಪ್ರತ್ಯೇಕವಾಗಿ ನಿರ್ದೇಶಿಸುತ್ತದೆ.

'ಶಬ್ದಾನುಶಾಸನಮಾರಭ್ಯತ್ತೇ'[೧೭] ಎಂಬುದನ್ನು ವಿವರಿಸುತ್ತಾ ವ್ಯಾಖ್ಯಾನದಲ್ಲಿ “ಶಬ್ದಾನುಶಾಸನಸ್ಯ ಸೂತ್ರಕೃದಾರಬ್ಧತ್ವೇನ ವೃತ್ತಿಕೃತಸ್ತದಾರಂಭಣೌ ಸಂಭವಾತ್, ಸೂತ್ರ ವೃತ್ತಿ ಕೃತೋರಭೇದದ್ಯೋತನಾರ್ಥಂ ತಥಾಪ್ರಯೋಗಃ” ಅನುಶಾಸನ ಆರಂಭಿಸಲ್ಪಡುತ್ತದೆ. ಎಂದರೆ ಸೂತ್ರದೊಂದಿಗೆ ವೃತ್ತಿಯನ್ನೂ ಸೇರಿಸಿ ಹೇಳಿದ್ದಾನೆ. ಇದು ಸೂತ್ರಕಾರ ಮತ್ತು ವೃತ್ತಿಕಾರರ ಅಭೇದದ್ಯೋತನಕ್ಕಾಗಿ

---

೧೪. ಅನುಶಾಸನವ್ಯಾಖ್ಯಾನ ಪುಟ ೩.

೧೫. ಅದೇ ಪುಟ ೪.

೧೬. ಅದೇ ಪುಟ ೪.

೧೭. ಅನುಶಾಸನ ವ್ಯಾಖ್ಯಾನ ಪುಟ ೧೪.

"ಸೂತ್ರ ವೃತ್ತಿ ಎರಡೂ ಒಬ್ಬನದೇ ಎಂದು ತೋರಿಸುವುದಕ್ಕಾಗಿ" ಎಂದು ವ್ಯಾಖ್ಯಾರಕಾರ ಹೇಳುವಾಗ ಅವನು ಬೇರೆಯೆಂದು ಪ್ರತ್ಯೇಕ ಹೇಳಬೇಕೆ ? ಸೂತ್ರ ವೃತ್ತಿ ಬರೆದವನಿಗಿಂತ ಈ ವ್ಯಾಖ್ಯಾನಕಾರ ಭಿನ್ನನೆನ್ನುವುದಕ್ಕೆ ಈ ಮಾತು ಪ್ರಬಲ ಆಧಾರವಾಗಬಹುದು. 'ಇತ್ಯಾಹ' 'ಉದಾಹರತಿ' ಅನಿಷ್ಟಮಾಶಕ್ಯ ಪರಿಹರತಿ' ಇತ್ಯಾದಿ ಪ್ರಥಮಪುರುಷವಾಚಕ ಪದಗಳು ಸೂತ್ರ, ವೃತ್ತಿಕಾರ ಬೇರೆಂದು ಪ್ರತಿಪಾದಿಸಲು ಸಹಾಯವಾಗುತ್ತವೆ. ಕೆಲವೆಡೆ ಉತ್ತಮಪುರುಷ ಪ್ರಯೋಗವೂ ಬಂದಿರುವುದರಿಂದ ಸಂಸ್ಕೃತ ಶಬ್ದಗಳು ಕನ್ನಡದಲ್ಲಿ ಹೇಗೆ 'ಲಿಂಗ' (ಪ್ರಾತಿಪದಿಕ) ವಾಗುತ್ತದೆಯೆಂಬುದನ್ನು ಹೇಳುವ ಎರಡನೆ ಪಾದದ ೧೧೫ ನೆಯ ಸೂತ್ರದ ವ್ಯಾಕ್ಯಾನದಲ್ಲಿ"[೧೮] ಏಕದೇಶತಃ ಸಾಕಲ್ಯತೋವಾ ವಿಕೃತಿಂ ಆಪ್ತವತ್ಸು ತದ್ಭವೇಷ್ವೇವ ವಿಶೇಷಾನ್ ಪ್ರಕಟಯನ್ ಆದೌ ಸ್ವರಾನ್ತೇಷು ವಿಶೇಷದರ್ಶನಾರ್ಥಂ ಇದಮುಸೂತ್ರಯದಿತಿ ಸೂತ್ರಕಾರ ಹೃದಯಂ ಸ್ವಹೃದಯೇ ನಿಧಾಯ ತದೇವ ಸೂತ್ರಂ ವ್ಯಾಕರ್ತುಂ ಪಠತಿ- ಹ್ರಸ್ವ ಇತ್ಯಾದಿ" ಸೂತ್ರಕಾರ ಹೃದಯವನ್ನೇ ತನ್ನ ಹೃದಯದಲ್ಲಿರಿಸಿ ಅದೇ ಸೂತ್ರವನ್ನು ವಿವರಿಸುವುದಕ್ಕೆ ಓದುತ್ತಾನೆ. ಹ್ರಸ್ವ ಎಂದು ಇಲ್ಲಿ ಸೂತ್ರಕಾರ ಹೃದಯವನ್ನು ತನ್ನ ಹೃದಯದಲ್ಲಿರಿಸಿ (ಅವನ ಭಾವವನ್ನರಿತು) ಸೂತ್ರವನ್ನು 'ವ್ಯಾಕರ್ತುಂ' (ವ್ಯಾಖ್ಯಾನಿಸಲು) ಪಠಿಸಿದವನು ಯಾರು? ವ್ಯಾಖ್ಯಾನಕಾರನಲ್ಲವೇ ? "ಅವನ ಹೃದಯವನ್ನು ತನ್ನ ಹೃದಯದಲ್ಲಿರಿಸಿ" ಎನ್ನಬೇಕಿದ್ದರೆ ಅವನು ತನಗಿಂತ ಭಿನ್ನನೆಂಬುದು ಸ್ಪಷ್ಟ ತಾನೇ ? ಸೂತ್ರಕಾರ ವ್ಯಾಖ್ಯಾನಕಾರ ಬೇರೆಂಬುದಕ್ಕೆ ಇದೇ ಸೂತ್ರದ ವ್ಯಾಖ್ಯಾನದ ಮುಂದಿನ ಭಾಗ ಇನ್ನೊಂದು ಆಧಾರವಾಗಬಹುದು. "ಇತ್ಯೇವಂ ಸರ್ವಮಾಕಲಯ್ಯ ಸೂತ್ರಕೃತಾತ್ಪರ್ಯಮೇವ ಉದ್ಘಾಟಯತಿ"- ಯಸ್ಯ ಇತ್ಯಾದಿ"[೧೯] ಹೀಗೆ ಎಲ್ಲವನ್ನೂ ಚಿಂತಿಸಿ ಸೂತ್ರಕಾರನ ತಾತ್ಪರ್ಯವನ್ನೇ ಉದ್ಘಾಟಿಸುತ್ತಾನೆ- ಯಸ್ಯ ಇತ್ಯಾದಿ- ಉದ್ಘಾಟಿಸುವವನಾರು ಸೂತ್ರಕಾರನ ತಾತ್ಪರ್ಯವನ್ನು ? ವ್ಯಾಖ್ಯಾನಕಾರನಷ್ಟೆ. 'ಸೂತ್ರಕೃತ್' ಎಂಬುದನ್ನು ಕರ್ತೃಪದವಾಗಿಟ್ಟು ಸೂತ್ರಕಾರನು ತಾತ್ಪರ್ಯವನ್ನು ಉದ್ಘಾಟಿಸುತ್ತಾನೆ ಎಂದು ಅರ್ಥ ಮಾಡಲಾಗುವದಿಲ್ಲ. ಸೂತ್ರಕಾರನು ತನ್ನದೇ ತಾತ್ಪರ್ಯವನ್ನು ಹೇಳುವದರಿಂದ ಸೂತ್ರಕಾರನ ಕುರಿತು ವ್ಯಾಖ್ಯಾನಕಾರನೇ ತನ್ನನ್ನು ಪ್ರಥಮ ಪುರುಷವಾಗಿರಿಸಿ ಉದ್ಘಾಟಿಸುತ್ತಾನೆ ಎಂದಿದ್ದಾನೆ. 'ಮಂತ' ಎಂಬ ತದ್ಧಿತಪ್ರತ್ಯಯದ ಕುರಿತು ವ್ಯಾಖ್ಯಾನಿಸುತ್ತಾ "ಸೋಽಯಂ ಮಂತ ಪ್ರತ್ಯಯೋಽನ್ಯೋವಾ ತೋಽಯಂ ಅಸ್ತ್ಯರ್ಥ ಪ್ರತ್ಯಯಃ ಸರ್ವೋಽಪಿ ಭೂಮಾದಿವಿಷಯ ಏವಭವತಿ ನ ಯಥಾಕಥಂಚಿದಸ್ಯಾಸ್ತೀತಿ ಇತ್ಯೇವಂ ವಿಶೇಷ ಪ್ರದರ್ಶನಾರ್ಥಂ ಇತಿಕರಣಂ ಕೃತ

೧೮. ಅನುಶಾಸನ ವ್ಯಾಖ್ಯಾನ. ಪುಟ ೧೪೬.
೧೯. ಅನುಶಾಸನ ವ್ಯಾಖ್ಯಾನ. ಪುಟ ೧೪೭.

ವಾಸಿತೆ ಸೂತ್ರ ಕೃದಭಿಪ್ರಾಯಂ ಪ್ರಕಾಶಯತಿ-ಇತಿಕರಣ ಇತ್ಯಾದಿ[೨೦]" ವಿಶೇಷ ಪ್ರದರ್ಶನಕ್ಕಾಗಿ ಇತಿ ಪ್ರಯೋಗವನ್ನು ಮಾಡಿದನು ಎಂದು ಸೂತ್ರಕಾರನ ಅಭಿಪ್ರಾಯವನ್ನು ಪ್ರಕಾಶಪಡಿಸುತ್ತಾನೆ- ಯಾರು ? ವ್ಯಾಖ್ಯಾನಕಾರನಲ್ಲವೇ. ಸೂತ್ರಕಾರನ ಅಭಿಪ್ರಾಯವನ್ನು ವ್ಯಾಖ್ಯಾನಕಾರನು ಪ್ರಕಾಶಪಡಿಸುತ್ತಾನೆ ಎಂದು ವ್ಯಾಖ್ಯಾನಕಾರ ತನ್ನನ್ನು ಪ್ರಥಮಪುರುಷನಲ್ಲಿ ಹೇಳಿದ್ದಾನೆ. ಇಬ್ಬರು ಭಿನ್ನರೆಂಬುದು ಇಲ್ಲಿ ಗಮನಿಸಬೇಕಾದ ಅಂಶ. ಸೂತ್ರಕಾರನು ತನ್ನ ಅಭಿಪ್ರಾಯ ಪ್ರಕಾಶಪಡಿಸುತ್ತಾನೆ ಎಂದು ಅರ್ಥೈಸಬಹುದು. ಎಂದರೆ ಹೇಳುವವನು ಸೂತ್ರ ಕಾರನಲ್ಲವೆಂದಾಗುತ್ತದೆ. 'ಸೂತ್ರಕಾರ' ಎಂದು ಹೇಳುವವನು ಅವನಿಗಿಂತ ಹೊರತಾದವನಿರಬೇಕು. "ಅತ್ರಬ್ರೂಮಃ[೨೧]" ಇಲ್ಲಿ ಹೇಳುತ್ತೇವೆ- ಈ ಉತ್ತಮ ಪುರುಷ ವ್ಯಾಖ್ಯಾನಕಾರನದೇ. ಸೂತ್ರಕಾರನನ್ನು ಹಾಗೆಂದೇ ಹಲವೆಡೆ ನಿರ್ದೇಶಿಸ ಲಾಗಿದೆ.

"ಪ್ರಥಮಾಮಸೂತ್ರಯತ್ ಸೂತ್ರಕಾರೋ ಮುಕ್ತೇ ಇತಿ"[೨೨]-ಸೂತ್ರಕಾರ ನೆಂಬ ಉಲ್ಲೇಖವಿದೆಯಿಲ್ಲಿ. ಶಬ್ದಾನುಶಾಸನವಲ್ಲಿ ಱಟ, ಕುಳ, ಕ್ಷಳಗಳ ಪ್ರಸ್ತಾಪವಿಲ್ಲ. ಸೂತ್ರ ವೃತ್ತಿಗಳಲ್ಲಿ ಹೇಳದಿರುವ ಈ ವಿಚಾರವನ್ನು "ಡೋಬಹುಲಂ" (ಸೂ. ೧೪೦. ಪು.೧೬೨) ಎಂಬ ಸೂತ್ರದ ಕೆಳಗೆ ವ್ಯಾಖ್ಯಾನಕಾರ ತಾನು ಸೇರಿಸಿಕೊಂಡು ವಿಸ್ತಾರ ವಾಗಿ ವಿವೇಚಿಸಿದ್ದಾನೆ. ಅದರ ಕೊನೆಯಲ್ಲಿ "ಯದ್ಯಪಿ ಅಯಂ ವಿಭಾಗಃ ಶಬ್ದಸಿದ್ಧ ನಿಬಂಧನತ್ವಾತ್ ವ್ಯಾಕರಣ ವಿಷಯೋ ನಭವತೀತಿ ಸೂತ್ರಕೃತಾ ಸೋಪದಿಷ್ಟ ಇತಿ ವೃತ್ತಿಕೃತಾಪಿ ನೋಪದರ್ಶಿತಃ ತಥಾಪಿ ಕವಿಕಾವಿವಿಷಯೇ ಪ್ರಾಸಾದಿಷು ಉಪ ಯುಜ್ಯತ ಇತಿ ಮಯಾ ಕಿಂಚಿತ್ಪ್ರಪಂಚಿತ" ಈ ವಿಭಾಗವು ಶಬ್ದಸಿದ್ಧಿಗೆ ಸಂಬಂಧಿ- ಸಿದ್ದಲ್ಲಪ್ಪರಿಂದ ವ್ಯಾಕರಣ ವಿಷಯವಾಗುವುದಿಲ್ಲವೆಂದು ಸೂತ್ರಕಾರನಿಂದ ಉಪದಿಷ್ಟ ವಾಗಿಲ್ಲ. ವೃತ್ತಿಕಾರನಿಂದಲೂ ತೋರಿಸಲ್ಪಡಲಿಲ್ಲ. ಆದರೂ ಕವಿತಾ ವಿಷಯ ಪ್ರಾಸಾದಿಗಳಲ್ಲಿ ಉಪಯೋಗವಾಗುತ್ತದೆಂದು ನನ್ನಿಂದ ಸ್ವಲ್ಪ ಪ್ರಸ್ತಾಪಿಸಲ್ಪಟ್ಟಿತು ಎಂದು ಹೇಳುತ್ತಾನೆ. ಇಲ್ಲಿ ಸೂತ್ರಕಾರ ವೃತ್ತಿಕಾರ ಎಂದು ಬೇರೆಬೇರಾಗಿ ಹೇಳಲ್ಪಟ್ಟರೂ ಒಬ್ಬನೇ ವ್ಯಕ್ತಿ ಸೂತ್ರ ಬರೆಯುವಾಗ ಸೂತ್ರಕಾರನು ವೃತ್ತಿ ಬರೆಯು ವಲ್ಲಿ ವೃತ್ತಿಕಾರನೂ ಆಗಲು ಸಾಧ್ಯವಿದೆ. ಬೇರೆಂದು ಇಲ್ಲಿ ತಿಳಿಯಲು ಅವಕಾಶ ವಿದ್ದರೂ ಹಿಂದೆ ಅವ್ವೆರಡೂ ಒಬ್ಬನದೆಂದೇ ಹೇಳಿರುವುದರಿಂದ ಸಂದೇಹಕ್ಕೆ ಅವಕಾಶವಿಲ್ಲ. ಆದರೆ ವ್ಯಾಖ್ಯಾನಕಾರ ಬೇರೆಂದು 'ಮಯಾ' ಎಂಬ ಉತ್ತಮಪುರುಷವಾಚಕದಿಂದ

೨೦. ಅನುಶಾಸನ ವ್ಯಾಖ್ಯಾನ. ಪುಟ ೩೪೪.
೨೧. ಅನುಶಾಸನ ವ್ಯಾಖ್ಯಾನ. ಪುಟ ೩೭೭.
೨೨. ಅನುಶಾಸನ ವ್ಯಾಖ್ಯಾನ. ಪುಟ ೩೭೪.

ಸ್ಪಷ್ಟ. ಸೂತ್ರಕಾರನು ಹೇಳದಿರುವುದನ್ನು ತಾನು ಸೇರಿಸಿಕೊಂಡೆನೆನ್ನುತ್ತಾನೆ. ಇದರಿಂದ ಸೂತ್ರಕಾರನಿಗಿಂತ ಈ ವ್ಯಾಖ್ಯಾನಕಾರ ಭಿನ್ನನೆಂಬುದು ಸ್ಪಷ್ಟ.

ಸ್ತ್ರೀಲಿಂಗದಲ್ಲಿ 'ಅಳ್' ಪ್ರತ್ಯಯ ಬರುವುದೆಂದು ಹೇಳುವ ಸೂತ್ರ "ಅಳವು ಸ್ತ್ರೀಯಾಂ" (ಸೂತ್ರ ೪೫೩)ದ ವ್ಯಾಖ್ಯಾನದಲ್ಲಿ "ನವಯಮತ್ರ ಧಾತೋಃ ಪ್ರತ್ಯಯಸ್ಯವಾ ಲಿಂಗವತ್ತ್ವಮಪೇಕ್ಷ್ಯ ಕಿಂಚಿದಾಚಕ್ಷ್ಮಹೇ"[೨೩] ಧಾತುವಿಗಾಗಲಿ ಪ್ರತ್ಯಯಕ್ಕಾಗಲಿ ಲಿಂಗವತ್ತ್ವವನ್ನು ಅಪೇಕ್ಷಿಸಿ ನಾವಿಲ್ಲಿ ಏನೂ ಹೇಳುವುದಿಲ್ಲ- ಉತ್ತಮಪುರುಷ ಪ್ರಯೋಗ ಸೂತ್ರಕಾರನಿಗಿಂತ ಭಿನ್ನತೆ ಸೂಚಿಸುವುದನಿಲ್ಲಿ ಗಮನಿಸಬಹುದು.

ಸೂತ್ರಕಾರನೆಂಬ ಹೇಳಿಕೆ ಅಲ್ಲಲ್ಲಿ ಬರುವುವನ್ನು ಗಮನಿಸಬಹುದು. ವ್ಯಾಖ್ಯಾನಕಾರನೇ ಸೂತ್ರಕಾರನಾಗಿದ್ದರೆ ಆ ಮಾತಿಗೆ ಅವಕಾಶವಿದೆಯೇ?

"ತಥಾಪಿ ವಿವಕ್ಷಿತ ಮತಾಶ್ರಯಣೇನ ಲಕ್ಷಣಮನುಸರ್ತವ್ಯಮಿತಿಸೂತ್ರಕೃತ ತತ್ಕರಣ ಕಾಲೀನ ವಿವಕ್ಷಾವಶಾತ್ ಪಾಣಿನೀಯ ಮತಾಶ್ರಯಣೇನ ಸೂತ್ರಕರಣ ಮಿತ್ಯಭಿಪ್ರೇತ್ಯ ವ್ಯಾಕರೋತಿ - ಭಾವ ಇತ್ಯಾದಿ. ನನು ಅತ್ರ ಸೂತ್ರಕೃತಾ ಪಾಣಿನೀಯಮೇವ ಮತಮಾಶ್ರಿತಂ ನಾನ್ಯದೀಯಮಿತಿ ಕುತೋಽವಗತಮಿತಿ ಚೇತ್ ಲ್ಯಡ್ಗ್ರಹಣಾದಿತಿ ಬ್ರೂಮಃ[೨೪]" ಪಾಣಿನೀಯಮತವನ್ನನುಸರಿಸಿ ಸೂತ್ರ ರಚಿಸಲಾಗಿದೆ ಎಂದು ಅಭಿಪ್ರಾಯಿಸಿ ವ್ಯಾಕರಿಸುತ್ತಾನೆ- ಯಾರು? ವ್ಯಾಖ್ಯಾನಕಾರ. "ಸೂತ್ರಕಾರನು ಪಾಣಿನೀಯ ಮತವನ್ನೇ ಅನುಸರಿಸಿದ ಬೇರೆ ಅಲ್ಲ ಎಂದು ಹೇಗೆ ತಿಳಿಯಿತೆಂದರೆ 'ಲ್ಯಡ್‌ಗ್ರಹಣ'ದಿಂದ ಎನ್ನುತ್ತೇವೆ." ಸೂತ್ರಕಾರನು ಪಾಣಿನಿಯನ್ನು ಅನುಸರಿಸಿದ್ದಾನೆ ಎನ್ನುವುದು ಅದಕ್ಕೆ ಕಾರಣ ಕೊಡುವುದು 'ಎನ್ನುತ್ತೇವೆ' – ಎಂಬ ಆತ್ಮಾರ್ಥದ ಉತ್ತಮಪುರುಷ ಬಹುವಚನದಲ್ಲಿ ಇದು ಹೇಳುವವ ವ್ಯಾಖ್ಯಾನಕಾರ ಸೂತ್ರಕಾರನಿಗಿಂತ ಭಿನ್ನನಾದವ. ಸೂತ್ರಕಾರನೇ ಹೇಳುವುದಾದರೆ ಪಾಣಿನಿಯಮತವನ್ನು ಅನುಸರಿಸಿದ್ದಾಗಿ 'ಅಭಿಪ್ರಾಯಿ'ಸಬೇಕಾಗಿಲ್ಲ. ಅವನದೇ ಹೇಳಿಕೆಯಾಗಬೇಕಿತ್ತು.

ಭಾವಾರ್ಥದಲ್ಲಿ 'ಅ' ಕಾರಕ್ಕೆ ಲೋಪವೆನ್ನುವ ಸೂತ್ರ 'ಲುಪ್‌ತಸ್ಯ' (ಸೂ. ೫೫೨) ದ ವ್ಯಾಖ್ಯಾನದಲ್ಲಿ "ನಾತ್ರಅಲ್ಲೋಪೆ ಕಿಂಚಿದಪಿ ನಿಮಿತ್ತಮುತ್ಪಶ್ಯಾಮಃ[೨೫] ಇಲ್ಲಿ 'ಅ' ಕಾರಲೋಪಕ್ಕೆ ಏನೂ ನಿಮಿತ್ತವನ್ನು ನಾವು ಕಾಣುವುದಿಲ್ಲ ಎಂದು

೨೩. ಅನುಶಾಸನ ವ್ಯಾಖ್ಯಾನ. ಪುಟ ೯೯೨.
೨೪. ಅನುಶಾಸನ ವ್ಯಾಖ್ಯಾನ. ಪುಟ ೪೩೪.
೨೫. ಅನುಶಾಸನ ವ್ಯಾಖ್ಯಾನ. ಪುಟ ೫೪೧.

ಆಕ್ಷೇಪಿಸುವವ ಸೂತ್ರಕಾರನಾಗಲು ಸಾಧ್ಯವೇ ಇಲ್ಲ. ಸೂತ್ರದಲ್ಲಿ ಲೋಪಹೇಳಿದ ತಾನೇ ವ್ಯಾಖ್ಯಾನ ಬರೆದವನಾದರೆ ನಿಮಿತ್ತ ಕಾಣುವುದಿಲ್ಲವೆನ್ನಲು ಸಾಧ್ಯವೇ? ಸೂತ್ರಕಾರನನ್ನು ವಿಮರ್ಶಿಸುವ ವ್ಯಾಖ್ಯಾನಕಾರ ಈ ಮಾತನ್ನು ಹೇಳಿದನೆಂದರೆ ಔಚಿತ್ಯಪೂರ್ಣ. ಅಥವಾ ಸೂತ್ರಕಾರನೇ ವ್ಯಾಖ್ಯಾನಕಾರನಾಗಿ ಹೇಳುವಲ್ಲಿ ಪ್ರಥಮ ಪುರುಷದಲ್ಲಿ ಹೇಳುತ್ತಿದ್ದರೆ ಇಬ್ಬರ ಅಭಿನ್ನತೆಯ ವಾದಕ್ಕಾದರೂ ಅವಕಾಶವಿತ್ತು. ಇಲ್ಲಿ ಉತ್ತಮಪುರುಷ ಬಹುವಚನ (ಆತ್ಮಾರ್ಥದಲ್ಲಿ) ಪ್ರಯೋಗವಿರುವುದರಿಂದ ಸೂತ್ರಕಾರ ವ್ಯಾಖ್ಯಾನಕಾರ ಭಿನ್ನತೆಗೆ ದೃಢ ಅವಕಾಶವುಂಟಾಗುತ್ತದೆ. ಇದೇ ಸೂತ್ರ ವ್ಯಾಖ್ಯಾನದ ಕೊನೆಯಲ್ಲಿ "ದೀರ್ಘೌ ದೀನಾಂಡ್ವನ್ತಾನಾಂದೋಃ ಟಾದೇಶ ಲಕ್ಷಣಮಿತಿ ಬ್ರೂಮಃ[೨೬] ಎಂಬಲ್ಲೂ ಉತ್ತಮಪುರುಷ ಪ್ರಯೋಗವನ್ನು ಗಮನಿಸ ಬಹುದು. ಪ್ರತಿಪಾದದ ಕೊನೆಯಲ್ಲಿ ಬರುವ ಸಮಾಪ್ತಿವಾಕ್ಯಗಳು ಈ ಮೊದಲೇ ಸೂಚಿಸಿದಂತೆ ಕರ್ತೃ ಭಿನ್ನತೆಯ ಸಂದೇಹಕ್ಕೆ ಆಸ್ಪದವೀಯುತ್ತವೆ. ಪ್ರತಿಪಾದದ ವೃತ್ತಿಯ ಕೊನೆಯಲ್ಲಿ "ಇತಿ ಶ್ರೀ ಭಟ್ಟಾಕಲಂಕದೇವ ವಿರಚಿತಾಯಾಂ ಭಾಷಾ ಮಂಜರೀ ಸಮಾಖ್ಯಾಯಾಂ ಶಬ್ದಾನುಶಾಸನ ವೃತ್ತಾ.... ಪಾದಃ" ಎಂಬ ಸಮಾಪ್ತಿ ವಾಕ್ಯದಲ್ಲಿ ಶಬ್ದಾನುಶಾಸನದ ವೃತ್ತಿಯಲ್ಲಿ ಇಂತಿಷ್ಟನೇ ಪಾದವೆಂದಿರುವಲ್ಲಿ ಶಬ್ದಾನು ಶಾಸನ (ಸೂತ್ರ) ಮತ್ತದರ ವೃತ್ತಿಯೆಂದು ದ್ವಂದ್ವಾರ್ಥ ಮಾಡಿದರೆ ಎರಡಕ್ಕೂ ಜತೆಯಾದ ಸಮಾಪ್ತಿವಾಕ್ಯವು ಅವೆರಡರ ಏಕಕರ್ತೃಕತೆಯನ್ನು ಸೂಚಿಸಿದಂತಾಗು ತ್ತದೆ. ಸೂತ್ರ, ವೃತ್ತಿ, ವ್ಯಾಖ್ಯಾನ ಎಲ್ಲವೂ ಒಬ್ಬನದೇ ಆಗಿದ್ದರೆ ಎಲ್ಲಕ್ಕೊಂದಾಗಿ ಸಮಾಪ್ತಿವಾಕ್ಯ ಸಾಕಾಗುತ್ತಿತ್ತು. ವ್ಯಾಖ್ಯಾನಕ್ಕೆ ಪ್ರತ್ಯೇಕವಾಗಿ ಪ್ರತಿಪಾದದ ಕೊನೆಯಲ್ಲಿ "ಇತಿ ಶ್ರೀ ಭಟ್ಟಾಕಲಂಕದೇವ ವಿರಚಿತಾಯಾಂ ಸ್ವೋಪಜ್ಞ ಶಬ್ದಾನು ಶಾಸನ ವೃತ್ತೇ ಭಾಷಾಮಂಜರ್ಯಾಃ ಟೀಕಾಯಾಂ ಮಂಜರೀ ಮಕರಂದ ಸಮಾ ಖ್ಯಾಯಾಂ.... ಪಾದಃ" ಭಟ್ಟಾಕಲಂಕದೇವನಿಂದ ವಿರಚಿತವಾದುದೆಂಬ ವಿಶೇಷಣ ಇಲ್ಲಿ ಮಂಜರೀ ಮಕರಂದವೆಂಬ ಟೀಕೆಗೆ ಮಾತ್ರ ಸಂಬಂಧಿಸುತ್ತದೆ. ಎಲ್ಲವೂ ಅವನದಾದರೆ ಒಂದೇ ವಾಕ್ಯದಲ್ಲಿ ಎಲ್ಲವನ್ನೂ ಸೇರಿಸಿ ಹೇಳಲೇನಡ್ಡಿಯಿತ್ತು? ಈ ಎರಡು ಸಮಾಪ್ತಿವಾಕ್ಯಗಳಲ್ಲಿ ಒಂದನ್ನು ವಿರಚಿತ(ಶಬ್ದಾನುಶಾಸನವೃತ್ತಿ) ಪಡಿಸಿ ಇನ್ನೊಂದು ಇರುವುದರಿಂದ ಎರಡರ ಕರ್ತೃಗಳ ಹೆಸರು ಒಂದೇ ಆದರೂ ಆ ವ್ಯಕ್ತಿ ಗಳಿಬ್ಬರು ಭಿನ್ನರೆಂದು ಭಾವಿಸಬೇಕಾಗುತ್ತದೆ. ಗ್ರಂಥದ ಕಡೆಯ ನಾಲ್ಕನೇ ಪಾದದ ಕೊನೆಯಲ್ಲಿ "...... ಶಬ್ದಾನುಶಾಸನವೃತ್ತೌ ಚತುರ್ಥಃ ಪಾದಃ ಸಮಾಪ್ತಶ್ಚಾಧ್ಯಾಯಃ, ಸರ್ವ ಸಂಪೂರ್ಣಂ" ಎಂದಾಗಿ ಸೂತ್ರ ಸಂಖ್ಯೆಯನ್ನು ಹೇಳುವ ಶ್ಲೋಕ

೨೬. ಅದೇ. ಪುಟ ೪೫೨.

ಶಬ್ದಾನುಶಾಸನೇ ಸಂಖ್ಯಾಯೋಗತೋಽಷ್ಟೋನಷಟ್ಛತೀ
ಅನುಷ್ಟುಭಾಂತು ಶ್ಲೋಕಾನಾಂ ಚತುರ್ಭಿರಧಿಕಂಶತಂ

ಲ ಕಡಿಮೆಯಾಗಿರುವ ೬೦೦ ಸೂತ್ರ ಅಂದರೆ ೧೦೪ ಅನುಷ್ಟುಪ್ ಶ್ಲೋಕ ಪ್ರಮಿತವೆಂದು ಅಂತ್ಯಗೊಳ್ಳುತ್ತದೆ ವ್ಯಾಖ್ಯಾನುಕಾರನು ಮತ್ತೆ ಆರು ಶ್ಲೋಕಗಳನ್ನು ಹೇಳಿ ಕೃತಿ ಪರಿಚಯಮಾಡಿ ಸಮಾಪ್ತಿವಾಕ್ಯ ಹೇಳುತ್ತಾನೆ. 'ಸರ್ವಂ ಸಂಪೂರ್ಣಂ' ಎಂದಿರುವಲ್ಲಿಗೇ ಮೂಲಗ್ರಂಥದ ಮುಕ್ತಾಯವಾಗಿದ್ದು ವ್ಯಾಖ್ಯಾನ ಮುಂದಿನ ಜೋಡಣೆ ಎಂಬುದನ್ನು ಅದು ಸೂಚಿಸುತ್ತದೆ. ಒಬ್ಬನೇ ಕೃತಿಕಾರನಾಗಿದ್ದರೆ ಎಲ್ಲವೂ ಮುಗಿದ ಮೇಲೆ ಅದಿರಬೇಕಿತ್ತು.

ಕೆಲವೆಡೆಗಳಲ್ಲಿ ಸೂತ್ರ ವೃತ್ತಿಗಳಲ್ಲಿಲ್ಲದಿರುವ ಅಂಶವನ್ನು ವ್ಯಾಖ್ಯಾನದಲ್ಲಿ ಸೇರಿಸಿ ಕೊರತೆಯನ್ನು ನೀಗಿದ ಉದಾಹರಣೆಗಳಿವೆ. ಇದನ್ನು ವ್ಯಾಖ್ಯಾನಕಾರನೇ ಸೇರಿಸಿರಬಹುದೇ ? ಅಥವಾ ಪಂಡಿತರಾದ ಪ್ರತಿಕಾರರಿಂದ ಸೇರಿಸಲ್ಪಟ್ಟಿರಬಹುದೇ ? ಈ ಸೇರಿಸಿದ ಅಂಶವಂತೂ ಸೂತ್ರಕಾರನದಲ್ಲ. ವಾಖ್ಯಾನಕಾರನದು ಅಥವಾ ಪ್ರತಿಕಾರನದಿರಬೇಕು. ಬಹುಶಃ ವ್ಯಾಖ್ಯಾನಕಾರನೇ ಸೇರಿಸಿರಬಹುದೆನ್ನಬೇಕು. ಇದಕ್ಕೆ ದಿಙ್ಮಾತ್ರ ದರ್ಶನವಾಗಿ ಒಂದು ಉದಾಹರಣೆ. "ನಾನಿತ್ವಾದಿಭ್ಯ (ಸೂ. ೨೭೪ ಪುಟ. ೨೭೬) ಎಂಬ ಸೂತ್ರದ ವೃತ್ತಿಯಲ್ಲಿ ಅನಿತ್ವಾದಿರಾಕೃತಿಗಳ ಗಣ ಕೊಡಲಾಗಿದೆ. ಅನಿತು, ಇನಿತು, ಎನಿತು, ಏಸು, ಐಸು, ಇವಿಷ್ಟೇ, ವ್ಯಾಖ್ಯಾನದಲ್ಲಿ "ಆಕೃತಿ ಗಣತ್ವಾತ್ ಉನಿತು, ಈಸು, ಎಷ್ಟು, ಅಷ್ಟು, ಇಷ್ಟು ಇತ್ಯಾದಯ ಉಪಸಂಗ್ರಾಹ್ಯಾ" ಎಂದು ಸೇರಿದೆ. ಸೂತ್ರಕಾರನೇ ಆದರೆ ಅದನ್ನು ವ್ಯಾಖ್ಯಾನದಲ್ಲಿ ಸೇರಿಸಬೇಕಾಗಿರಲಿಲ್ಲ, ವೃತ್ತಿಯಲ್ಲೇ ಹೇಳುತ್ತಿದ್ದ. ಸೂತ್ರಕಾರನಿಗಿಂತ ವ್ಯಾಖ್ಯಾನಕಾರ ಭಿನ್ನನೆಂದು ಇದರಿಂದಲೂ ತಿಳಿಯಬಹುದು. ಇನ್ನು ಕೊನೆಯ ಶ್ಲೋಕಗಳತ್ತ ದೃಷ್ಟಿ ಹಾಯಿಸೋಣ.

ಮೊದಲಿನ ಎರಡು ಜಿನಸ್ತುತಿ ಪರವಾದವು. ಮೂರನೆಯದಾದ "ಯೋನಾನಾಮತ. ....ಭಟ್ಟಾಕಲಂಕೋ ಭುವಿ" ಎಂಬುದರಲ್ಲಿ ಭಟ್ಟಾಕಲಂಕನ ಹೊಗಳಿಕೆಯಿದೆ. ನಾನಾ ಮತಗಳ ತರ್ಕದಿಂದ ಕರ್ಕಶವಾದ ಬುದ್ಧಿಯುಳ್ಳವನೆಂದೂ ರಾಜಸಭೆಯಲ್ಲಿ ಅನೇಕಬಾರಿ ಜೈನಮತವನ್ನು ಪ್ರಖ್ಯಾಪಿಸಿದನೆಂದೂ (ಭೂಭೃತ್ಯಸಭೇನೇಕಧಾ) ಕರ್ನಾಟಕ ಸಂಸ್ಕೃತಗಳ ಶಬ್ದಸಾಗರವನ್ನು ದಾಟವವನೆಂದೂ ವ್ಯಾಖ್ಯಾನದಲ್ಲಿ ಸಮರ್ಥನಾದ ಸಾಧುಜನಪ್ರಿಯನೆಂದೂ ಹೇಳಲಾಗಿದೆ. ಈ ಪದ್ಯವನ್ನು ಅವನು ಬರೆದಿಲ್ಲವೆನ್ನೋಣವೇ ? ಅದಕ್ಕೂ ಆಧಾರವಿಲ್ಲ. ಇಲ್ಲಿ ಇನ್ನೊಂದು ಮಾತು ಮುಖ್ಯವಾಗಿರುವುದು "ವ್ಯಾಖ್ಯಾನ ಮುದ್ರಾಪಟುಃ" ಎಂಬುದು ವ್ಯಾಖ್ಯಾನದಲ್ಲಿ ಅತ್ಯಂತ ಸಮರ್ಥ, ಇದು ನಿಜ. ಅವನ ವ್ಯಾಖ್ಯಾನವಲ್ಲಿ ಕನ್ನಡ ಸಂಸ್ಕೃತ

ಗಳ ಸಮಸ್ತ ವ್ಯಾಕರಣ ಜ್ಞಾನದ ಅಗಾಧತೆಯಲ್ಲದೆ ಕೊಟ್ಟ ಕನ್ನಡ ಕಾವ್ಯಗಳ ಉದ್ಧರಣೆಯಲ್ಲಿ ಅವನ ಅಪಾರ ಸಾಹಿತ್ಯ ಜ್ಞಾನವೂ ವೇದ್ಯವಾಗುತ್ತದೆ. 'ವ್ಯಾಖ್ಯಾನ ಮುದ್ರಾಪಟುಃ' ಎಂಬುದು ಅವನು ವ್ಯಾಖ್ಯಾನಕಾರನೆಂಬುದಕ್ಕೆ ಬಲ ನೀಡುತ್ತದೆ.

ನಾಲ್ಕನೆಯ ಒಂದು ಶ್ಲೋಕದಲ್ಲಿ ಸೂತ್ರ ವೃತ್ತಿ ವ್ಯಾಖ್ಯಾನಗಳನ್ನು ಭಟ್ಟಾಕಲಂಕ ಬರೆದಂತೆ ಹೇಳಿದೆ. ಎಲ್ಲವುಗಳ ಕರ್ತೃ ಒಬ್ಬನೆಂಬುದಕ್ಕೆ ಇಲ್ಲಿ ಮಾತ್ರ ಒಂದು ಹೇಳಿಕೆಯಿದೆ. ಅದೂ ಪೂರ್ವಾರ್ಧ ಕರ್ತರಿ ಪ್ರಯೋಗದಲ್ಲಿದ್ದರೆ ಉತ್ತರಾರ್ಧ ಕರ್ಮಣಿ ಪ್ರಯೋಗದಲ್ಲಿದೆ.

ಐದನೇ ಪದ್ಯದಲ್ಲಿ ವಿವೇಚಿಸಿದಾಗ ಸಂದೇಹಕ್ಕೆ ಅವಕಾಶವಿದೆ. 'ಮಂಜರೀ ಮಕರಂದ'ವೆಂಬ ವ್ಯಾಖ್ಯಾನದ ಮಹತ್ವವನ್ನು ವರ್ಣಿಸಿ 'ಆಚಂದ್ರತಾರಾರ್ಣವ' ಅದು ವಿಜಯಿಸಲಿ ಎಂದು ಹಾರೈಸಲಾಗಿದೆ. ಮಂಜರೀ ಮಕರಂದ ಹೇಗಿರುವುದು ? ಅಕಲಂಕನೆಂಬ ಉತ್ತಮ ವ್ಯಕ್ತಿಯ ಸೂಕ್ತಿಸಾರವೆಂಬ ಸುಮನ (ಹೂ, ಒಳ್ಳೆ ಮನಸ್ಸು)ಗಳ ಸಮೂಹವನ್ನು ಅವಲಂಬಿಸಿರುವುದು. ಸಮರ್ಪಕವಾದ ವೃತ್ತಿ, ಉಕ್ತಿ ಚಮತ್ಕಾರ ಸಾರದಿಂದ ತುಂಬಿದ್ದು, ಸುಕವೀಂದ್ರರೆಂಬ ತುಂಬಿಗಳಿಗೆ (ಸೂಕ್ತಿಯನ್ನು ಹೂವಿಗೆ ಹೋಲಿಸಿದ್ದರಿಂದ) ಆನಂದವುಂಟುಮಾಡುವುದು. ಸರ್ವಜ್ಞ (ಭಗವಂತ, ಎಲ್ಲವನ್ನೂ ತಿಳಿದವ) ನ ಪಾದಗಳಿಗೆ ಅರ್ಪಿತವಾದದ್ದು. ಇಲ್ಲಿ 'ಅಕಲಂಕನ ಸೂಕ್ತಿಯನ್ನು ಅವಲಂಬಿಸಿದ್ದು' ಎಂಬುದನ್ನು ಗಮನಿಸಬೇಕು. ಭಟ್ಟಾಕಲಂಕನ ಗುರು ಅಕಲಂಕ, ಸೂತ್ರವೃತ್ತಿ ಅವನೇ ಬರೆದನೆಂದು ಇದು ಸೂಚಿಸುವಂತಿದೆ. 'ಅಕಲಂಕ' ಎಂಬ ಪದ ಭಟ್ಟಾಕಲಂಕ ಎಂಬ ವ್ಯಾಖ್ಯಾನಕಾರನ ಹೆಸರಿನಲ್ಲೂ ಇದೆ. ಗುರು ಶಿಷ್ಯರಿಬ್ಬರ ಹೆಸರೂ ಒಂದೇ ಆಗಿರುವುದರಿಂದ ಗೊಂದಲವಾಗಿದೆ. ತನ್ನ ಗುರುವಿನ ಸೂಕ್ತಿಯಾದ ಶಬ್ದಾನುಶಾಸನವನ್ನು ಅವಲಂಬಿಸಿ ತನ್ನ ವ್ಯಾಖ್ಯಾನ 'ಮಂಜರೀ ಮಕರಂದ' ವಿದೆಯೆಂಬ ಹೇಳಿಕೆ ಸ್ಪಷ್ಟವಿದೆ. ಮಂಜರೀ ಮಕರಂದಕ್ಕೆ ಪ್ರತ್ಯೇಕವಾಗಿ ಈ ಶುಭ ಹಾರೈಕೆಯ ಅವಶ್ಯವೇನು ? ಸಮಗ್ರ ಗ್ರಂಥಕ್ಕೆ ಶುಭ ಹೇಳದೆ ಅದರ ಏಕದೇಶವಾದ ವ್ಯಾಖ್ಯಾನಕ್ಕೆ ಮಾತ್ರ ಶುಭ ಹಾರೈಸುವಾಗ ಅದನ್ನು ಬರೆದವ ಸೂತ್ರಕಾರನಿಗಿಂತ ಭಿನ್ನ ಎಂಬುದು ಅದರಲ್ಲೂ ಸ್ಪಷ್ಟ. ಹೂವು ಮತ್ತೆ ಮಕರಂದಕ್ಕೆ ವ್ಯಾಕರಣ ಮತ್ತು ವ್ಯಾಖ್ಯಾನವನ್ನು ಕವಿಗಳಿಗೆ ತುಂಬಿಯನ್ನು ಹೋಲಿಸಿರುವ ಈ ಕಾವ್ಯಪ್ರಜ್ಞೆ ಮೆಚ್ಚುವಂತಹದು.

ಆರನೆಯದಾದ ಕೊನೆಯ ಶ್ಲೋಕದಲ್ಲಿ ಅಕಲಂಕನೆಂಬ ಯೋಗಿಯ ಶಿಷ್ಯಶ್ರೇಷ್ಠನಾದ ಭಟ್ಟಾಕಲಂಕನೆಂಬ ಮುನಿಯಾದ ನಾನು ಶಕವರ್ಷ ೧೫೨೬ (ಕ್ರಿ. ಶ. ೧೬೦೪) ನೇ ಶೋಭಕೃತು ಸಂವತ್ಸರದ ಮಾಘಶುದ್ಧ ಪಂಚಮಿ ಗುರುವಾರ

ರೇವತೀ ನಕ್ಷತ್ರ ಕುಂಭಲಗ್ನದಲ್ಲಿ ಮಂಜರೀಮಕರಂದವೆಂಬ ಗ್ರಂಥ (ಇದು ನನ್ನ ಅಭಿಮತ ಆ ವ್ಯಾಕರಣದ ಬಗೆಗೆ) ವನ್ನು ಬರೆದೆ ಎಂದು ಹೇಳಲಾಗಿದೆ. ಇಲ್ಲಿ ಭಟ್ಟಾಕಲಂಕನು ಮಂಜರೀ ಮಕರಂದವನ್ನು ಮಾತ್ರ ಬರೆದ ವಿಚಾರ. ಅದರ ಕಾಲ ಹೇಳಿದೆ. ವ್ಯಾಖ್ಯಾನವನ್ನು ಮಾತ್ರ ಪ್ರತ್ಯೇಕಿಸಿ ಹೀಗೆ ಹೇಳುವ ಅವಶ್ಯವೇನು ? ಸಮಗ್ರ ಗ್ರಂಥವನ್ನೇ ಅವನು ಬರೆದಿದ್ದರೆ ಇದಕ್ಕೆ ಆಸ್ಪದವೇನು ? ತನ್ನ ಗುರು ಅಕಲಂಕನನ್ನು ಇಲ್ಲೂ ಹೆಸರಿಸಿದ್ದಾನೆ. ಮೊದಲಿನ ಶ್ಲೋಕದಲ್ಲಿ "ಅಕಲಂಕೋತ್ಸಮ ಸೂಕ್ತಿಸಾರಸುಮನೋಬೃಂದಾವಲಂಬಂ" ಎಂದು ಮಂಜರೀಮಕರಂದವೆಂಬ ವ್ಯಾಖ್ಯಾನವು ಅಕಲಂಕನ ಸೂಕ್ತಿಯನ್ನು ಅವಲಂಬಿಸಿರುವುದಾಗಿ ಹೇಳಿದೆ. ಆ ಸೂಕ್ತಿ ಯಾವುದು ? ಸೂತ್ರ ವೃತ್ತಿರೂಪವಾದುದೇ ? ಅಥವಾ ಕೇಳಿ ಪಡೆದ ಸಲಹೆ ಇತ್ಯಾದಿಗಳೇ ? ವ್ಯಾಖ್ಯಾನವು ಸೂಕ್ತಿಯನ್ನು ಅವಲಂಬಿಸಿದೆಯೆಂದುದ ರಿಂದ ಸೂತ್ರವೃತ್ತಿಯನ್ನೇ ಉದ್ದೇಶಿಸಿರಬಹುದೇ ಎನ್ನಿಸುತ್ತದೆ. ಮುಂದಿನ ಶ್ಲೋಕ ದಲ್ಲಿ "ಅಕಲಂಕಾಹ್ವಯಯೋಗಿ ಶಿಷ್ಯತಿಲಕೋಗ್ರಂಥಂ ಸತಾಂ ಮಂಜರೀಮಕ ರಂದಾಖ್ಯಮಿದಂ ಮತಂ ವ್ಯರಚಯಂ ಭಟ್ಟಾಕಲಂಕೋ ಮುನಿಃ" ಎಂದು ಅಕಲಂಕನ ಶಿಷ್ಯನಾದ ಭಟ್ಟಾಕಲಂಕನೆಂಬ ಮುನಿಯಾದ ನಾನು ಮಂಜರೀಮಕರಂದ ವೆಂಬ ವ್ಯಾಖ್ಯಾನವನ್ನು ಬರೆದಂತೆ ವ್ಯಾಖ್ಯಾನವನ್ನು ಮಾತ್ರ ನಿರ್ದೇಶಿಸಿದ್ದಾನೆ. ಗುರುವನ್ನು ಎರಡು ಕಡೆ ಎತ್ತಿ ಹೇಳಿ ತನ್ನ ಹೆಸರನ್ನು ವ್ಯಾಖ್ಯಾನದೊಂದಿಗೆ ಮಾತ್ರ ಹೇಳಿದ್ದಾನೆ. ಇದರಿಂದ ಅಕಲಂಕನೇ ಸೂತ್ರ ವೃತ್ತಿಗಳ ಕರ್ತೃವಾಗಿದ್ದು ಭಟ್ಟಾಕಲಂಕ ವ್ಯಾಖ್ಯಾನ ಬರೆದನೆಂಬುದಕ್ಕೆ ಅವಕಾಶವಾಗುತ್ತದೆ. ಇಬ್ಬರ ಹೆಸ ರಲ್ಲೂ 'ಅಕಲಂಕ' ಸಮಾನವಾಗಿರುವುದರಿಂದ ವ್ಯಕ್ತಿದ್ವಯದಲ್ಲಿ ಅಭಿನ್ನತೆ ಏರ್ಪಟ್ಟಿರ ಬಹುದೇ ? ಇದಕ್ಕೆ ಆ ಜೈನಮಠದ ಈಗಿನ ಸ್ವಾಮಿಗಳು ಹೇಳಿದ ಮಾತು ಸಹಾಯವೊದಗಿಸುತ್ತದೆ. ವ್ಯಾಖ್ಯಾನದ ಕರ್ತೃ ಭಟ್ಟಾಕಲಂಕನೆನ್ನುವುದು ಸ್ಪಷ್ಟ ವಿದೆ. ಸಮಾಪ್ತಿಗದ್ಯದಲ್ಲೂ ಇದನ್ನು ಹೇಳಿದೆ. ಈ ಶ್ಲೋಕದಲ್ಲಿ ಹೇಳಿದ ಕಾಲ ಮಂಜರೀಮಕರಂದವೆಂಬ ವ್ಯಾಖ್ಯಾನದ ರಚನೆಯ ಕಾಲ, ವ್ಯಾಕರಣದ ರಚನೆಯ ಕಾಲ ಅದಕ್ಕೆ ಸ್ವಲ್ಪ ಮುಂಚಿತವಾಗಿರಬೇಕೆಂದು ಭಾವಿಸಿಕೊಳ್ಳಬಹುದು.

ಈ ವಿಸ್ತೃತವಾದ ವಿವೇಚನೆಯಿಂದ ತಿಳಿಯಬಹುದಾದುದಿಷ್ಟು : ಕರ್ನಾಟಕ ಶಬ್ದಾನುಶಾಸನವೆಂಬ ವ್ಯಾಕರಣದ ಸೂತ್ರ ಮತ್ತು ವೃತ್ತಿಗಳನ್ನು ಬರೆದವನೊಬ್ಬ, ಅವನು ಭಟ್ಟಾಕಳಂಕನ ಗುರುವಾದ ಅಕಲಂಕನಿರಬೇಕು. ಈ ವ್ಯಾಕರಣದ ವ್ಯಾಖ್ಯಾನ 'ಮಂಜರೀ ಮಕರಂದ'ವನ್ನು ಬರೆದವ ಸೂತ್ರವೃತ್ತಿಗಳ ಕರ್ತೃವಿಗಿಂತ ಭಿನ್ನನಾಗಿರುವ ಭಟ್ಟಾಕಳಂಕ.

ಈ ಭಿನ್ನ ಕರ್ತೃಕತ್ವದ ಸತ್ಯಾಸತ್ಯತೆಯನ್ನು ಪ್ರಾಜ್ಞರು ಆಳವಾಗಿ ಚಿಂತಿಸಿ, ಈ ವಿಚಾರದಲ್ಲಿ ಇನ್ನಷ್ಟು ಸಂಶೋಧನೆಯಾಗಿ ತೀರ್ಮಾನಕ್ಕೆ ಬರಬೇಕಾಗಿದೆ. ಸಮಗ್ರಗ್ರಂಥವನ್ನೋದಿದಾಗ ನನಗೆ ತಿಳಿದುಬಂದ ವಿಚಾರವನ್ನು ಸಾಧಾರವಾಗಿ ನಿರೂಪಿಸಿದ್ದೇನೆ. ಕರ್ತೃವು ಒಬ್ಬನೇ ಆಗಿದ್ದಲ್ಲಿ ಅವನಿಂದ ಬಹುಭಾಗವನ್ನು ಬೇರ್ಪಡಿಸಿ ಇನ್ನೊಬ್ಬನ ತಲೆಗೆ ಕಟ್ಟುವ ದುರುದ್ದೇಶವೇನೂ ಇಲ್ಲ.

● ●

ವಜ್ರಭಟ್ಟನ ವೀರಾವಳಿ

ಎಂ. ಎಂ. ಕಲಬುರ್ಗಿ

ಕನ್ನಡ ಸಾಹಿತ್ಯದ ಅಪೂರ್ವಭಾಗವೆನಿಸಿದ ಅನೇಕ ಗ್ರಂಥಗಳು ಇನ್ನೂ ಕಾಲಗರ್ಭದಲ್ಲಿ ಹೂಳಿಹೋಗಿವೆ. ಈ ಸಂಪತ್ತನ್ನು

೧. ಕವಿಯ ಹೆಸರು ಗೊತ್ತಿದ್ದು ಕೃತಿ ಹೆಸರು ಗೊತ್ತಿಲ್ಲದುವು: ಕವಿರಾಜಮಾರ್ಗೋಕ್ತ ಕವಿಗಳ, ಗಜಗ ಮನಸಿಜ ಚಂದ್ರಭಟ್ಟ ಮೊದಲಾದವರ ಕೃತಿಗಳು,

೨. ಕೃತಿ ಹೆಸರು ಗೊತ್ತಿದ್ದು ಕವಿ ಹೆಸರು ಗೊತ್ತಿಲ್ಲದುವು : ತತ್ತ್ವಾರ್ಥ ಮಹಾಶಾಸ್ತ್ರ ವ್ಯಾಖ್ಯಾನ, ಶೃಂಗಾರಪಿಂಡ, ಕರ್ಣಾಟೇಶ್ವರ ಕಥಾ ಇತ್ಯಾದಿ ಕೃತಿಗಳು.

೩. ಕವಿಯ ಹೆಸರು ಹಾಗೂ ಕೃತಿಯ ಹೆಸರು ಗೊತ್ತಿರುವವು : ಶ್ಯಾಮಕುಂದಾಚಾರ್ಯ ಮತ್ತು ತುಂಬಲೂರಾಚಾರ್ಯರ ಉಭಯಸಿದ್ಧಾಂತ ವ್ಯಾಖ್ಯಾನ, ಪೊನ್ನನ ಭುವನೈಕರಾಮಾಭ್ಯುದಯ, ಅಸಗನ ಕುಮಾರಸಂಭವ ಇತ್ಯಾದಿ ಕೃತಿಗಳು.

೪. ಕವಿಯ ಹೆಸರು ಹಾಗೂ ಕೃತಿಯ ಹೆಸರು ಗೊತ್ತಿದ್ದೂ ಅಪೂರ್ಣರೂಪದಲ್ಲಿ ದೊರೆತುವು: ರನ್ನ ನಿಘಂಟು, ಬಸವರಾಜದೇವರ ರಗಳೆ, ಮಧುರನ ಧರ್ಮನಾಥ ಪುರಾಣ ಇತ್ಯಾದಿ ಕೃತಿಗಳು ಎಂದು ವರ್ಗೀಕರಿಸಬಹುದು.

ಇವುಗಳಿಗಿಂತ ಬೇರೆಯಾದ ಇನ್ನೊಂದು ಗುಪ್ತನಿಧಿ ಎಂದರೆ ಕವಿಯ ಹೆಸರೂ ಕೃತಿಯ ಹೆಸರೂ ಗೊತ್ತಿಲ್ಲದುವು. ಇವು ತಮ್ಮ ಸುಳುಹನ್ನೂ ಕೊಡದೆ 'ನೆಲದ ಮರೆಯ ನಿಧಾನ'ದಂತೆ ಉಳಿದಿದ್ದು, 'ಆಕಸ್ಮಿಕ'ವಾಗಿ ಪ್ರಕಟವಾಗುತ್ತವೆ. ಈ ವರ್ಗಕ್ಕೆ ಸೇರುತ್ತದೆ, ಇತ್ತೀಚೆ ನನ್ನ ಗಮನಕ್ಕೆ ಬಂದ ವಜ್ರಭಟ್ಟಕೃತ ವೀರಾವಳಿ. ಇದು ಜ್ಯೋತಿಷ, ಶಕುನ ಮೊದಲಾದ ವಿಷಯಗಳನ್ನು ವಿವರಿಸುವ ಕೃತಿ.

ಕಳೆದ ವರ್ಷ ಕೊಲ್ಹಾಪುರದ ಶ್ರೀ ಲಕ್ಷ್ಮೀಸೇನ ಭಟ್ಟಾರಕ ಬಸದಿಯ ಹಸ್ತಪ್ರತಿ ಭಾಂಡಾರದ ಸೂಚಿಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಈ ಕೃತಿ ನನ್ನ ಗಮನಕ್ಕೆ ಬಂದಿತು.

ಇದು ೨೬೦ನೆಯ ಸಂಖ್ಯೆಯ ತಾಳೆಪ್ರತಿ ಕಟ್ಟಿನಲ್ಲಿ ಗರಿ ೬೮ರಿಂದ ೮೪ರ ವರೆಗೆ ವ್ಯಾಪಿಸಿದೆ. ಕೊನೆಯ ಗರಿಯ ಮೇಲೆ ೨ ಸಾಲುಗಳ ವರೆಗೆ ಬರೆದು ತಟ್ಟನೇ ಅಪೂರ್ಣಸ್ಥಿತಿಯಲ್ಲಿ ನಿಂತುಬಿಟ್ಟಿದೆ. ೧೪" × ೨½" ಆಕಾರದ ಈ ಪ್ರತಿಯ ಪ್ರತಿಯೊಂದು ಪುಟದಲ್ಲಿ ೯ ರಿಂದ ೧೦ ಸಾಲುಗಳಿವೆ. ಅಕ್ಷರ ಅಂದವಾಗಿದ್ದು, ಭಾಷೆ ತಕ್ಕಮಟ್ಟಿಗೆ ಶುದ್ಧವೆಂದೇ ಹೇಳಬೇಕು

ಈಗ ದೊರೆತ ಭಾಗದಲ್ಲಿ ೨೨ ಅಧಿಕಾರ (೨೨ ನೆಯದು ಅಪೂರ್ಣ)ಗಳಿವೆ. ೧. ಪೀಠಿಕಾ ಪ್ರಕರಣ (೧-೪೪), ೨. ಲಾಭಾಧಿಕಾರ (೪೫–೫೭), ೩. ವಿವಾಹಾಧಿಕಾರ (೫೮–೭೦), ೪. ಕೂಪಾರ್ಥಾಧಿಕಾರ (೭೧–೮೨), ೫. ಪುತ್ರಾಧಿಕಾರ (೮೩–೮೮), ೬. ವರ್ಷಾಧಿಕಾರ (೮೯–೧೦೪), ೭. ಬೆಳೆಯಲಧಿಕಾರ (೧–೧೯), ೮. ಅರ್ಘಾಧಿಕಾರ (೨೦–೩೩), ೯. ಭೋಜನಾಧಿಕಾರ (೩೪–೪೬), ೧೦. ಗಮನಾಧಿಕಾರ (೪೫–೬೪), ೧೧. ಯುದ್ಧಾಧಿಕಾರ (೧–೧೪), ೧೨. ರಾಜಾಧಿಕಾರ (೧–೧೦), ೧೩. ಭೃತ್ಯಾಧಿಕಾರ (೧–೧೦), ೧೪. ವಣಿಜಾಧಿಕಾರ (೧–೧೪), ೧೫. ಬಂಧನಾಧಿಕಾರ (೧-೮), ೧೬. ರೋಗಾಧಿಕಾರ (೧–೧೦), ೧೭. ಆಯುಷ್ಯಾಧಿಕಾರ (೧–೨೦), ೧೮. ಗತ್ಯಧಿಕಾರ (೧–೧೦), ೧೯. ಆಗಂತುಕಾಧ್ಯಾಯ (೧–೧೩), ೨೦. ನಷ್ಟಮುಷ್ಟಿಜ್ಞಾನ (೧–೨೯), ೨೧. ಲುಕ್ಕಾಧಿಕಾರ(೧–೧೩), ೨೨. ಚೋರಾಧಿಕಾರ (೧–೨೮ ಅಪೂರ್ಣ).

ಕೃತಿಯು "ಶ್ರೀ ವೀತರಾಗಾಯ ನಮಃ" ಎಂದು ನುಡಿಯುತ್ತಲೇ ವೀರವರ್ಧಮಾನ ಸ್ತುತಿಪರ ಕಂದದಿಂದ ಮುಂದುವರಿಯುತ್ತದೆ. ಮೊದಲಿನ ೩೪ ಪದ್ಯಗಳು ಮುಗಿಯುವಲ್ಲಿ "ನಿಮಿತ್ತ ಪ್ರಕರಣಂ ॥ ಮುಂದೆ ಪೇಳ್ವುದು" ಎಂಬ ಹೇಳಿಕೆಯಿದ್ದು, ೪೪ನೆಯ ಪದ್ಯ ಮುಗಿಯುವಲ್ಲಿ "ಇತಿ ಪೀಠಿಕಾಪ್ರಕರಣಂ ॥ ಪ್ರಥಮೋಧ್ಯಾಯಂ" ಎಂಬ ಸೂಚನೆಯಿದೆ. ೪ನೆಯ ಅಧಿಕಾರ 'ಕೂಪಾರ್ಥಾಧಿಕಾರಂ' ಎಂದು ಪ್ರಾರಂಭವಾದರೂ ಕೊನೆಗೆ "ಸುರತಾಧಿಕಾರಂ ಚತುರ್ಥ ಪರಿಚ್ಛೇದಃ" ಎಂದು ಮುಗಿಯುತ್ತದೆ. ೬ನೆಯ ವರ್ಷಾಧಿಕಾರದ ತರುವಾಯ ೭ನೆಯ ಅಧಿಕಾರವು "ಬೆಳೆಯಲಧಿಕಾರಂ ಪೇಳ್ವುದು" ಎಂದು ಪ್ರಾರಂಭವಾದರೂ "ಇತಿ ವರ್ಷಾಧಿಕಾರಂ ಸಪ್ತಮಃ ಪರಿಚ್ಛೇದ" ಎಂದು ಮುಕ್ತಾಯಗೊಂಡುದು ವಿಸ್ಮೃತಿಯ ಬರೆವಣಿಗೆಯಾಗಿರಬೇಕು. ೧೯ನೆಯದು "ಬೆಸಗೊಳ್ಳದೆ ಪೇಳ್ವ ಕ್ರಮವಿದು" ಎಂದು ಪ್ರಾರಂಭವಾಗಿ "ಆಗಂತುಕಾಧ್ಯಾಯಮೇಕೋನವಿಂಶತಿಃ" ಎಂದು ಮುಕ್ತಾಯವಾಗುತ್ತದೆ. ಈ ಗೊಂದಲಗಳನ್ನು ಬಿಟ್ಟರೆ ಮಿಕ್ಕ ಅಧಿಕಾರಗಳ ಸೂಚನೆ ನಿರ್ದುಷ್ಟವಾಗಿದೆ.

ಇದರಲ್ಲಿ ಕಂದಪದ್ಯಗಳೇ ಪ್ರಧಾನವಾಗಿದ್ದು ಮಧ್ಯಮಧ್ಯ ಅಕ್ಷರವೃತ್ತಗಳೂ ಇವೆ. ಅಭಿಪ್ರಾಯದ ಸಮರ್ಥನೆಗಾಗಿ ಇನ್ನೊಬ್ಬರ ಸಂಸ್ಕೃತ ಪದ್ಯಗಳನ್ನು

"ಮತಾಂತರ" ಹೆಸರಿನಿಂದ ಬಳಸಿಕೊಳ್ಳಲಾಗಿದೆ. ಇವುಗಳನ್ನು ಒಂದೆರಡು ಸಲ 'ಮತಾಂತರ' ಎಂದು ಸೂಚಿಸದೆ ಸ್ವೀಕರಿಸಿದ್ದುದೂ ಉಂಟು. 'ಮತಾಂತರ' ಹೆಸರಿನಿಂದ ಸ್ವೀಕರಿಸಿದ ಒಂದೇ ಒಂದು ಕನ್ನಡ ಪದ್ಯ ಹೀಗಿದೆ :

ಮತಾಂತರಂ ॥ ತಾರೆ ತಿಥಿ ವೇಳೆ ವಾರಮ ।
ನೋರಂತಿರೆ ಕೂಡಿ ದಿಕ್ಕನೆತ್ತುಗೆ ಗಿರಿಯಂ ॥
ವಾರಂ ಸಿಂದಿಹ ದಿಕ್ಕಂ ।
ಚಾರುಗುಣಂ ವಾಮದಿಂದ ಕವಿಸಾ ಗ್ರಹಮಂ ॥

ಇದು ಈ ಪೂರ್ವದ ಯಾವುದೋ ಒಂದು ಕನ್ನಡ ಕೃತಿಯಿಂದ ಸ್ವೀಕರಿಸಿದುದು. ಇದರ ಆಕರ ಇನ್ನೂ ಗೊತ್ತಾಗದೆ ಉಳಿದಿದೆ. ಕಾವ್ಯಾವಲೋಕನದಲ್ಲಿ ಬರುವ "ಊರೇರಲ್ ಮನೆ ಮಾಡಲ್......" ಎಂಬ ಜ್ಯೋತಿಷಶಾಸ್ತ್ರಕ್ಕೆ ಸಂಬಂಧಿಸಿದ ಪದ್ಯ ಈ ಕೃತಿಯಲ್ಲಿಲ್ಲ. ಕಾರಣ ಈ ಎರಡೂ ಪದ್ಯಗಳು ಕಳೆದುಹೋದ ಬೇರೊಂದು ಜ್ಯೋತಿಷಶಾಸ್ತ್ರಕ್ಕೆ ಸಂಬಂಧಿಸಿರಬೇಕು.

ಈ ಕೃತಿಯ ಹೆಸರು "ಶ್ರೀ ವೀರಾವಳಿ ಮತಂ" ಎಂದು ಕವಿಯೇ ಅನೇಕಸಲ ಹೇಳಿದ್ದಾನೆ. 'ಶ್ರೀ ವೀರಂ' ಎಂದೂ ಅಲ್ಲಲ್ಲಿ ಸೂಚಿಸಿದ್ದಾನೆ.

ಮುನಿಗೌತಮಾದಿ ಗಣಧರ ।
ಮುನಿ ವಿರಚಿತಮಪ್ಪ ಹೋರೆಯಂ ಸಕಲ ಜಗ ।
ಜ್ಜನ ಹೃದಯಕಮಲ ವಿಕಸಿತ ।
ವಿನೂತಮಿದನರಿದು ಮನದೆಗೊಳ್ಳದರೊಳರೇ ॥೨॥

ಇದು ರಾಜವಿದ್ಯೆ ವಿದ್ಯಾ ।
ವಿದರ್ಗಿಂತಿದು ಬಾರ್ತೆ ಇದನು ಕನ್ನಡದಿಂದಂ ।
ಗದಿಯಿಸು ನೀನೆನೆ ಬುಧತತಿ ।
ಸದಳಂಕಾರೋಕ್ತಿ ರಚನ ರಚನೆಗಳಿಂದಂ ॥೩॥

ಎಂದು ಹೇಳಿರುವುದರಿಂದ ಮೂಲಕೃತಿ ಗೌತಮಗಣಧರ ವಿರಚಿತವೆಂದೂ ಅದರ ಅನುವಾದವೇ ಈ ಕನ್ನಡ ಕೃತಿಯೆಂದೂ ಊಹಿಸಬಹುದಾಗಿದೆ.

ಕವಿಯ ಹೆಸರು ವಜ್ರಭಟ್ಟ; ಈತನ ತಂದೆಯ ಹೆಸರು ಆದಿತ್ಯಭಟ್ಟ; ಊರು ಕಂಚಿಯ ಮುಮುವೊಳಲು ಎಂದು ತಿಳಿದುಬರುತ್ತದೆ. ಈ ಸಂಗತಿಗಳನ್ನು ಅನೇಕ ಸಲ ಹೀಗೆ ಹೇಳಿಕೊಂಡಿದ್ದಾನೆ:

೧. ವಜ್ರಭಟ್ಟಂ ಪೇಳ್ದಂ (೧–೧).
೨. ಏಂ ಕೃತಾರ್ಥನೋ ವಜ್ರಂ (೧–೫).
೩. ವಜ್ರಭಟ್ಟನ ಮತದಿಂ (೧–೪೬).
೪. ಕಂಚಿಯ ಮುಮುವೊಳಲ ವಜ್ರಭಟ್ಟನ ಮತದಿಂ (೬–೧೦೯).

೫. ವಜ್ರಭಟ್ಟನ ಮತದಿಂ (೯–೪೪).
೬. ಮುದುವಳಲಾದಿತ್ಯಭಟ್ಟ ತನಯನ ಮತದಿಂ (೧೦-೬೩).
೭. ವಜ್ರಭಟ್ಟನ ಮತದಿಂ (೧೮–೧೪).
೮. ವಜ್ರಭಟ್ಟನ ಮತದಿಂ (೧೨–೭).
೯. ವಜ್ರಭಟ್ಟನ ಮತದಿಂ (೧೬–೬).
೧೦. ಮುದುವೊಳಲ ವಜ್ರಭಟ್ಟನ ಮತದಿಂ (೧೭-೧೭).
೧೧. ವಜ್ರಭಟ್ಟನಿಕ್ಕಿನ ಮತದಿಂ (೧೯–೧೩).

ಮುದುವೊಳಲು ಹೆಸರಿನ ಅನೇಕ ಗ್ರಾಮಗಳು ಕರ್ನಾಟಕದಲ್ಲಿವೆ. ಬೆಳಗಲಿ--೫೦೦ ಕ್ಕೆ ಸಂಬಂಧಪಟ್ಟ ಕವಿ ರನ್ನನ ಮುದುವೊಳಲು ಬೇರೆ, ಕವಿ ವಜ್ರಭಟ್ಟನ ಮುದುವೊಳಲು ಬೇರೆ. ರಾಷ್ಟ್ರಕೂಟ ೩ ನೆಯ ಕೃಷ್ಣನ ಸಂಧಿವಿಗ್ರಹಿ ನಾರಾಯಣ ಗಜಾಂಕುಶನು ಸಾಲೊಟಗಿಯಲ್ಲಿ ವಿದ್ಯಾಲಯವನ್ನು ಕಟ್ಟಿಸಿದನೆಂದು ಆ ಗ್ರಾಮದ ಒಂದು ಶಾಸನ ತಿಳಿಸುತ್ತ, ಈತನು ಮಾಹಿಷ ವಿಷಯದ ಕಾಂಚನ ಮುದುವೊಳಲು ನಿವಾಸಿಯೆಂದು ಹೇಳುತ್ತದೆ. ಕವಿವಜ್ರಭಟ್ಟನ ಕಂಚಿಯ ಮುದುವೊಳಲು ಮತ್ತು ಗಜಾಂಕುಶನ ಕಾಂಚನ ಮುದುವೊಳಲು ಒಂದೇ ಎಂಬುದು ಸ್ಪಷ್ಟ. ಇದರಿಂದ ಕವಿವಜ್ರಭಟ್ಟ, ಕವಿಗಜಾಂಕುಶ ಒಂದೇ ಊರಿನವರೆಂದು ವಿದಿತವಾಗುತ್ತದೆ. ಈ ಕಾಂಚನ ಮುದುವೊಳಲು ಗುಲ್ಬರ್ಗಾ ಜಿಲ್ಲೆಯ ಸೇಡಂ ಗ್ರಾಮಕ್ಕೆ ೮ ಮೈಲು ದೂರದಲ್ಲಿರುವ "ಕಂಸನಪಳ್ಳಿ ಮುಧೋಳ"ವೇ ಆಗಿರಬಹುದು.

> ಗುರುಗಳ್ ನಯಸೇನಮುನೀಂ
> ದ್ರರು ಗಡ ಜಯಸಿಂಹ ಚಕ್ರವರ್ತಿಯು ತಾನಾ ।
> ಳ್ದರಸು ಗಡಂ ಜಿನಮತದೊ ।
> ಳ್ವಿರಚಿತ ಕೇವಳಿಗನೇಂ ಕೃತಾರ್ಥನೊ ವಜ್ರಂ ॥ (೧–೫)

ಎಂಬ ಪದ್ಯವೊಂದು ಈ ಕೃತಿಯಲ್ಲಿ ಬರುತ್ತಿದ್ದು, ಈ ಕವಿಯ ಗುರು ನಯಸೇನ ಮುನೀಂದ್ರ, ಆಶ್ರಯದಾತ ಚಾಳುಕ್ಯ ಜಯಸಿಂಹನೆಂದು ವ್ಯಕ್ತವಾಗುತ್ತದೆ. ಧರ್ಮಾಮೃತದ ನಯಸೇನನ (ಕ್ರಿ. ಶ. ೧೧೧೧) ಗುರು ನರೇಂದ್ರಸೇನ. ಈ ನರೇಂದ್ರ ಸೇನನ ಗುರು ನಯಸೇನ ಅಥವಾ ವ್ಯಾಕರಣದ ನಯಸೇನ. ಈತನೇ ವಜ್ರಭಟ್ಟನ ಗುರುವಾಗಿರಬೇಕು. ಈ ಕಾಲಕ್ಕೆ ಬರುವ ಕಲ್ಯಾಣ ಚಾಲುಕ್ಯ ಅರಸನೆಂದರೆ ೧೦೧೫–೧೦೪೪ ರ ವರೆಗೆ ಆಳಿದ ಜಯಸಿಂಹ II. ಹೀಗಾಗಿ ಈ ಕವಿಯು ೧೧ನೆಯ ಶತಮಾನದ ಪೂರ್ವಾರ್ಧದವನೆಂದು ಹೇಳಬೇಕಾಗುತ್ತದೆ.

ಈ ಕೃತಿಯ ವಸ್ತುವಿಚಾರ ಬೇರೊಂದು ಲೇಖನದ ವಿಷಯ. ಆದರೆ ಅಲ್ಲಲ್ಲಿ ಕೆಲವು ಗಮನಾರ್ಹ ಸಂಗತಿಗಳಿವೆ.

ಬೇಳಾಗದೆ ನೆಲದರಸರು ।
ಜೋಳಕ್ಕಾಳಪ್ಪರೆಂದು ಗುರು ಕೈಕೊಂಡಾ ।
ಜೋಳಮನೆ ಬೆಳೆಯಿಕುಂ ಗಡ ।
ಜೋಳಕ್ಕಗ್ಗಳದ ಧ್ಯಾನಮುಂ ಪೆರತುಂಟೇ ॥

ಎಂಬ ಪದ್ಯ ಗುರುಗ್ರಹದ ಬಲದಿಂದ ಜೋಳ ಸಮೃದ್ಧವಾಗಿ ಬೆಳೆಯುವುದೆಂದೂ ಅದು ಧಾನ್ಯಗಳಲ್ಲಿಯೇ 'ಅಗ್ಗಳ'ವಾದುದೆಂದೂ ತಿಳಿಸುತ್ತಾನೆ. ಜೋಳಕ್ಕೆ ಪ್ರಜೆಗಳು ಆಳಾಗುವರೆಂದು(=ಜೋಳವಾಳಿ) ಅರಸರು ಜೋಳವನ್ನೇ ಹೆಚ್ಚು ಬೆಳೆಸುವರೆಂಬ ಇಲ್ಲಿಯ ಅಭಿಪ್ರಾಯ ತುಂಬ ವಿಶೇಷವಾದುದು. ಭೃತ್ಯಾಧಿಕಾರದಲ್ಲಿ ಬರುವ

ಒಡನಿರ್ದ ಶುಭಂ ದುರಿತಮು ।
ನಡದೊಡೆ ಸಮಸಂಖ್ಯೆಯಿಂದೆ ವಾಯದೆ ಮುನ್ನು ।
ಕೊಡವೆಯನೆ ತಿಂದು ಜೋಳಂ ।
ಬಡೆಯದೆ ಮುಂ ವೇಳೆಗೊಂದ(ಡ ?)ದೇಂ ಪಡೆದಪನೇ ॥
ಸ್ವಾಲಯಮುಂ ಬಿಟ್ಟರಿಯಿ ।
ದಾರ್ಲಯಮುಂ ದುರಿತಮೊಯ್ದು ಕವಿವೊಡಮಾತಂ ॥
ಗಾಳಾಗಿಯೆ ಬೇಳಾಗಿಯೆ ।
ಪಾಳಾಗಿಯೆ ಬೇಡಿದೊಡವೆಯುಂ ಪಡೆದಪನೇ ॥

ಎಂಬ ಪದ್ಯಗಳು 'ವೇಳೆವಾಳಿ' ವಿಚಾರವನ್ನು ಹೇಳುತ್ತಿರಬಹುದು. ಹೀಗೆ ಈ ಕಾವ್ಯವನ್ನು ಹಲವು ದೃಷ್ಟಿಗಳಿಂದ ಅಭ್ಯಸಿಸಬೇಕಾಗಿದೆ. ಜ್ಯೋತಿಷ್ಯ ಮೊದಲಾದ ವಿಷಯಗಳಲ್ಲಿ ಆಸಕ್ತಿಯುಳ್ಳವರು ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕು[೧]

೧. ಈ ಹಸ್ತಪ್ರತಿಯನ್ನು ಅಭ್ಯಸಿಸಲು ಅವಕಾಶಮಾಡಿಕೊಟ್ಟ ಕೊಲ್ಲಾಪುರದ ಲಕ್ಷ್ಮೀಸೇನ ಜೈನಮಠದ ಮಹಾಸ್ವಾಮಿಗಳವರಿಗೆ ನಮ್ಮ ಭಕ್ತಿಪೂರ್ವಕ ಕೃತಜ್ಞತೆಗಳು.

ಗಾಥಾಸಪ್ತಶತಿ

● ಬಿ. ಕೆ. ಖಡಬಡಿ

ಗಾಹಾಸತ್ತಸಈ (ಗಾಥಾಸಪ್ತಶತೀ) ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿಯ ಒಂದು ಅಮೂಲ್ಯ ಮತ್ತು ಅದ್ವಿತೀಯ ರತ್ನ. ಇದು ಭಾರತದ ಮೊದಲ ಜಾನಪದ ಸಾಹಿತ್ಯಗ್ರಂಥವೂ ಅಹುದು. ಮಹಾರಾಷ್ಟ್ರೀ ಪ್ರಾಕೃತದಲ್ಲಿ ಗಾಥಾ (ಆರ್ಯಾ) ವೃತ್ತ ಮೂಲಕ ವಿವಿಧ ಕವಿಗಳಿಂದ ರಚಿಸಲ್ಪಟ್ಟ ಲಕ್ಷಾವಧಿ ಮುಕ್ತಕ ಗಾಹೆಗಳ ಸಮೂಹದಿಂದ ಏಳುನೂರನ್ನು ಮಾತ್ರ ಹಾಲ(ಸಾತವಾಹನ)ನೆಂಬ ಆಂಧ್ರಭೃತ್ಯ ಅರಸನು ಸಂಕಲಿಸಿ, ಸಂಪಾದಿಸಿ, ಗಾಥಾಸಪ್ತಶತಿ ಎಂಬ ಹೆಸರಿನ ಗ್ರಂಥವನ್ನು ಯೋಜಿಸಿದನು. ಈ ಗಾಹೆಗಳಲ್ಲಿಯ ಅನೇಕನ್ನು ಹಾಲನು ತಾನೇ ರಚಿಸಿರುವದುಂಟು.

ಹಾಲನು (ಸಾತವಾಹನನು) ಆಂಧ್ರಭೃತ್ಯ ವಂಶದ ಅರಸರಲ್ಲಿ ೧೭ನೆಯವನೆಂದು ತಿಳಿದುಬರುತ್ತದೆ. ಈತನ ಕಾಲ ಸು ಕ್ರಿ. ಶ. ಮೊದಲನೆಯ ಶತಮಾನ. ಈತ ಪ್ರಾಕೃತ ಭಾಷಾಭಿಮಾನಿಯೂ, ವಿಲಾಸಿಯೂ, ಶೃಂಗಾರಪ್ರಿಯನೂ, ಕವಿಯೂ ಮತ್ತು ಕವಿವತ್ಸಲನಾದ ಅರಸನೂ ಆಗಿದ್ದನು. ಗಾಹೆಗಳ ಸಂಗ್ರಹ ಕಾರ್ಯ ಸಾಗಿದಾಗ ಹಲವಕ್ಕೆ ದೊಡ್ಡ ಧನರಾಶಿಯನ್ನಿತ್ತು ಅವುಗಳನ್ನು ಪಡೆದನೆಂಬ ಪ್ರತೀತಿಯೂ ಉಂಟು.

ಮೊದಲು ಈ ಮುಕ್ತಕ ಕಾವ್ಯಸಂಕಲನ ಗ್ರಂಥಕ್ಕೆ 'ಗಾಹಾಕೋಸ' (ಗಾಥಾಕೋಶ) ಎಂಬ ಹೆಸರಿದ್ದಿತು. ಅದರಲ್ಲಿ ಸುಮಾರು ೪೦೦ ಗಾಹೆಗಳಿದ್ದಿರಬೇಕು. ಮುಂದೆ ಕ್ರಿ. ಶ. ೧೦ ಮತ್ತು ೧೨ನೆಯ ಶತಮಾನಗಳ ಮಧ್ಯದ ಸುಮಾರಿನಲ್ಲಿ ಈ ಸಂಖ್ಯೆ ೭೦೦ಕ್ಕೆ ಏರಿ, ಗಾಥಾಸಪ್ತಶತಿ ಎಂಬ ಹೆಸರು ಬಂದು, ಮುಂದೆ ಅದೇ ರೂಢವಾಯಿತೆಂದು ಹಲವು ವಿದ್ವಾಂಸರ ಅಭಿಪ್ರಾಯ. ಗಾಹೆಗಳ ಸಂಖ್ಯೆಯಲ್ಲಿಯ ಈ ಬಗೆಯ ಬೆಳವಣಿಗೆ ಮತ್ತು ಕೃತಿಯ ಹೆಸರಿನಲ್ಲಿಯ ಬದಲಾವಣೆ ಇವು ವಿಮರ್ಶಕರಲ್ಲಿ 'ಗಾಥಾಕೋಶ' ಬೇರೆ ಮತ್ತು 'ಗಾಥಾಸಪ್ತಶತಿ' ಬೇರೆ ಎಂಬ ವಾದವನ್ನು ಎಬ್ಬಿಸಿವೆ. ಭಾರತದಲ್ಲಿ ಗಾಥಾಸಪ್ತಶತಿ ಪ್ರಥಮವಾಗಿ ಬೆಳಕನ್ನು ಕಂಡದ್ದು ೧೯೧೧ ರಲ್ಲಿ. ಆದರೆ ಜರ್ಮನಿಯ ಖ್ಯಾತವಿದ್ವಾಂಸರಾದ ವೇಬರ್ ಅವರು ಇದನ್ನು ೧೮೮೧ರಲ್ಲೇ ಸಂಶೋಧಿಸಿ, ಸಂಪಾದಿಸಿ ಪೂರ್ಣವಾಗಿ ಪ್ರಕಟಿಸಿದ್ದರು.

ಗಾಥಾಸಪ್ತಶತಿಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಮೌಲ್ಯ ಅಸಾಧಾರಣವಾದುದು, ಅನುಪಮವಾದುದು. ಇಲ್ಲಿಯ ಪ್ರತಿಯೊಂದು ಮುಕ್ತಕವೂ ಸ್ವಯಂಪೂರ್ಣವಾಗಿದೆ, ಸ್ವತಂತ್ರ ಭಾವಗೀತೆಯಾಗಿದೆ. ಮೂಲದಲ್ಲಿ ಜಾನಪದ ಕವಿಗಳಿಂದ ರಚಿಸಲ್ಪಟ್ಟಿರುವದರಿಂದ ಗಾಹೆಗಳ ಶೈಲಿ ನಿರಾಡಂಬರವೂ, ಸಹಜಸುಂದರವೂ ಆಗಿದೆ. ಈ ಗಾಹೆಗಳಲ್ಲಿ ಪಡಮೂಡಿದ ದೃಶ್ಯಗಳಾಗಲಿ, ಅನುಭವಗಳಾಗಲಿ (ಇವುಗಳಲ್ಲಿ ಕೃತಕವಲ್ಲದ, ಮುಚ್ಚು-ಮರೆಯಿಲ್ಲದ ಪ್ರಣಯ ಜೀವನದ ನಲಿವು-ನೋವುಗಳೇ ಹೆಚ್ಚಾಗಿರುವವು.) ಯಾರು ಬೇಕಾದವರ ಜೀವನದಲ್ಲಿಯೂ ಸಂಭವಿಸಬಹುದಾದುದರಿಂದ, ಅವು ಸಹಜವಾಗಿ ಸಹೃದಯಾನಂದವನ್ನು ನೀಡಬಲ್ಲವುಗಳಾಗಿವೆ. ಪ್ರಾಕೃತಭಾಷೆಯ ಸ್ವಾಭಾವಿಕ ಲಾಲಿತ್ಯ ಮತ್ತು ಮಾಧುರ್ಯ ಈ ಗಾಹೆಗಳಿಗೆ ಒಂದು ವಿಶೇಷ ಬೆಡಗನ್ನು ತಂದುಕೊಟ್ಟವೆ. ಇಲ್ಲಿಯ ಪ್ರಮುಖ ರಸ ಶೃಂಗಾರವಾದುದರಿಂದ ಎಲ್ಲೆಲ್ಲಿಯೂ ಭಾವಪೂರ್ಣತೆ, ಚಿತ್ತಾಕರ್ಷಕತೆ ಮತ್ತು ಸಾಹಿತ್ಯಿಕ ಸೌಂದರ್ಯ ಮೂಡಿಬಂದಿವೆ. ಬೇರೆಡೆಗೆಲ್ಲಿಯೂ ಸಹಜವಾಗಿ ದೊರೆಯುವ ವ್ಯಂಜಕತೆಯು ಇಲ್ಲಿಯ ಗಾಹೆಗಳನ್ನು ಅಮರವಾಗಿ ಮಾಡಿದೆ. ಗೇಯಪ್ರಧಾನ ಮತ್ತು ಶ್ರುತಿಮಧುರವಾದ ಈ ಮುಕ್ತಕಗಳು ಓದುಗರ ಮತ್ತು ಕೇಳುವವರ ಹೃದಯಗಳನ್ನು ಸಹಜವಾಗಿ ಮಿಡಿಯದೆ ಬಿಡಲಾರವು. ಈ ಎಲ್ಲ ಕಾರಣಗಳಿಂದಾಗಿ ಇವು ಪಂಡಿತವರ್ಯರ ಹಾಗೂ ಸಾಮಾನ್ಯರಸಿಕರ ಮೆಚ್ಚುಗೆಗೆ ಸರಿಯಾಗಿ ಪಾತ್ರವಾದವು; ಸುಭಾಷಿತಗಳೆಂದೂ ಹೆಸರು ಪಡೆದವು. ಬೇರೆಬೇರೆ ಕಾಲದ ವಿದ್ವಾಂಸರಿಂದ ಗಾಥಾಸಪ್ತಶತಿಯ ಮೇಲೆ ೧೮ಕ್ಕಿಂತ ಹೆಚ್ಚು ಟೀಕೆಗಳು ಬರೆಯಲ್ಪಟ್ಟವು. ಇಲ್ಲಿಯ ಅನೇಕ ಗಾಹೆಗಳನ್ನು ಕಾವ್ಯಶಾಸ್ತ್ರಕೋವಿದರು ತಮ್ಮ ಕೃತಿಗಳಲ್ಲಿ ಅಲಂಕಾರ, ರಸಾದಿಗಳ ಉದಾಹರಣೆಗಳಿಗಾಗಿ ಬಳಸಿದರು. ಸಂಸ್ಕೃತ, ಹಿಂದಿ, ಗುಜರಾಥಿ ಮೊದಲಾದ ಭಾಷೆಗಳಲ್ಲಿ ಈ ಕೃತಿಯ ಅನುಕರಣೆಯೂ ನಡೆಯಿತು. ಅನೇಕ ಆಧುನಿಕ ಭಾರತೀಯ ಭಾಷೆಗಳಲ್ಲಿ ಮತ್ತು ಹಲವು ಪಾಶ್ಚಿಮಾತ್ಯಭಾಷೆಗಳಲ್ಲಿ ಇದರ ಅನುವಾದಗಳೂ ಮೂಡಿಬಂದವು.

ಕನ್ನಡದ ಹಿರಿಯ ಪ್ರಾಧ್ಯಾಪಕರಾದ ಎಸ್. ವಿ. ಪರಮೇಶ್ವರಭಟ್ಟರು ಗಾಥಾಸಪ್ತಶತಿಯ ಮುಕ್ತಕಗಳ ಸಂಸ್ಕೃತ ಛಾಯೆಯನ್ನವಲಂಬಿಸಿದ ಶಬ್ದಶಃ (literal) ಪದ್ಯಾನುವಾದವನ್ನು ಕನ್ನಡಿಗರಿಗೆ ಒದಗಿಸಿಕೊಟ್ಟಿದ್ದಾರೆ. ಇದಕ್ಕೂ ಪೂರ್ವದಲ್ಲಿ ಪ್ರಾಧ್ಯಾಪಕ ತೀ. ನಂ. ಶ್ರೀಕಂಠಯ್ಯನವರು ಆಯ್ದ ೧೮ ಮುಕ್ತಕಗಳ ಶಬ್ದಶಃ ಪದ್ಯಾನುವಾದ ಮಾಡಿ ತಮ್ಮ 'ಒಲುಮೆ'ಯಲ್ಲಿ ಇರಿಸಿದ್ದುಂಟು. ಅಲ್ಲದೆ ಡಾ. ಕೆ. ಕೃಷ್ಣಮೂರ್ತಿಯವರು ತಾವು ಕನ್ನಡದಲ್ಲಿ ಸಂಪಾದಿಸಿದ ಧ್ವನ್ಯಾಲೋಕ, ಕಾವ್ಯಪ್ರಕಾಶಗಳಂಥ ಅಲಂಕಾರಶಾಸ್ತ್ರ ಗ್ರಂಥಗಳಲ್ಲಿ, ಅಲ್ಲಿ ಉದಾಹರಣೆಗಾಗಿ ಬರುವ ಗಾಥಾಸಪ್ತಶತಿಯಲ್ಲಿಯ ಹಲವು ಗಾಹೆಗಳು ಶಬ್ದಶಃ ಪದ್ಯಾನುವಾದವನ್ನು

ಕೊಟ್ಟಿದ್ದಾರೆ. ಆದರೆ ಮೂಲಪ್ರಾಕೃತಮುಕ್ತಕದ ಪ್ರತಿಯೊಬ್ಬ ಕವಿಯ ಭಾವ, ಆಶಯ ಸರಿಯಾಗಿ ಮೂಡಿಬರುವಂತೆ, ಅವಶ್ಯವೆನಿಸಿದಲ್ಲಿ ವ್ಯಂಗ್ಯಭಾವ ಅರಳಿ ಬರಲು ಅನುವಾಗುವಂತೆ ಮತ್ತು ಹೊಸಗನ್ನಡದ ಜಾಯಮಾನಕ್ಕೆ ಒಗ್ಗುವಂತೆ, ಈ ಗಾಹೆಗಳನ್ನು ಕನ್ನಡಿಸಬೇಕೆಂಬ ಹವಣಿಕೆ ಹಲವಾರು ವರುಷಗಳಿಂದ ನನ್ನನ್ನು ಕಾಡುತ್ತಲಿತ್ತು. ಅದರಿಂದಾಗಿ ಈ ದಿಕ್ಕಿನಲ್ಲಿ ಹಲವು ಪ್ರಯತ್ನಗಳನ್ನೂ ಪ್ರಯೋಗಗಳನ್ನೂ ಕೈಕೊಂಡದ್ದಾಯಿತು. ೧೯೬೧–೬೨ ಮತ್ತು ೧೯೬೨–೬೩ ಈ ಅಭ್ಯಾಸವರ್ಷಗಳಲ್ಲಿ, ಗಾಥಾಸಪ್ತಶತಿಯ ಮೊದಲ ಎರಡು ಶತಕಗಳು ಕರ್ನಾಟಕ ವಿಶ್ವವಿದ್ಯಾಲಯದ ಕಲಾವಿಭಾಗದ ಪದವೀ ತರಗತಿಯ ಕೊನೆಯ ವರುಷಕ್ಕೆ ಪಠ್ಯವಿಷಯವಾಗಿದ್ದಾಗ, ಅವನ್ನು ತರಗತಿಯ ವಿದ್ಯಾರ್ಥಿಗಳಿಗೆ ಕಲಿಸುತ್ತ, ಮೊದಲು ಇಂಗ್ಲಿಷ್ ಮತ್ತು ತರುವಾಯ ಕನ್ನಡ ಗದ್ಯದಲ್ಲಿ ಶಬ್ದಶಃ ಅನುವಾದ ಮಾಡಿದ್ದಾಯಿತು. ಆ ಗದ್ಯಾನುವಾದ ಮುಕ್ತಕಗಳ ಭಾವ ಮತ್ತು ಸೊಬಗನ್ನು ಹಿಡಿದುತರುವಲ್ಲಿ ಅಸಮರ್ಥವಾಗಿತ್ತೆಂದೂ ಹೆಜ್ಜೆಹೆಜ್ಜೆಗೆ ಟೀಕೆಯ ಸಹಾಯ ಬೇಕಾಗುತ್ತಿತ್ತೆಂದೂ ಬೇರೆ ಹೇಳಬೇಕಾಗಿಲ್ಲ. ಮುಂದೆ ಕೆಲಸಮಯದ ತರುವಾಯ ಈ ಪ್ರಾಕೃತ ಗಾಹೆಯಲ್ಲಿರುವಂತೆ ಬೇರೊಂದು ಅನುಕೂಲ ಗೇಯತತ್ವವನ್ನು ಇದರ ಕನ್ನಡಾನುವಾದದಲ್ಲಿ ಕಂಡುಹಿಡಿಯಬೇಕೆಂಬ ಲವಲವಿಕೆಯಿಂದ ನಾಗವರ್ಮ ಜಯಕೀರ್ತಿ ಕರ್ಕಿಯವರ ಸತ್ಸಂಗ ಮಾಡಿ ಯತ್ನಿಸಿದರೂ ದಾರಿ ಕಾಣದಾಯಿತು. ಪ್ರಾಕೃತ ಮುಕ್ತಕ–ಗಾಹೆಯ ರೂಪದಲ್ಲಿದ್ದ ಈ ಬಣ್ಣಬಣ್ಣದ ಪಾತರಗಿತ್ತಿ ಹೊಸ ಕನ್ನಡದ ಯಾವ ಛಂದೋಬಂಧದಲ್ಲಿಯೂ ಸಿಕ್ಕದಾಯಿತು. ಈ ಮುಕ್ತಕಗಳ ಅನು–ವಾದಕ್ಕೆ 'ಲಲಿತ ಚೌಪದಿ' ಏನೋ ನನಗೆ ಆಕರ್ಷಕವಾಗಿ ಕಂಡಿತು. ಆದರೆ ಹಲವು ಗಾಹೆಗಳಲ್ಲಿಯ ಭಾವನೆಗಳು ಇದರ ಕಟ್ಟಿನಲ್ಲಿಳಿಯಲು ನಿರಾಕರಿಸಿದರೆ, ಇನ್ನು ಕೆಲವುಗಳ ಭಾವಗಳು ಇದರ ಕಟ್ಟನ್ನು ಹರಿದು ಹೊರಸೂಸಿದವು.

ಪ್ರಯತ್ನದ, ಪರಿಶ್ರಮದ ಪಯಣವನ್ನು ಮುಂದುವರಿಸುತ್ತಿರುವಾಗ ಈ ಕ್ಷೇತ್ರದಲ್ಲಿ ಹಿರಿಯರಾದ ಗೋವಿಂದ ಪೈ, ಬಿ. ಎಮ್. ಶ್ರೀ, ಗೋಕಾಕರಂಥ ಆಚಾರ್ಯರು ಬೆನ್ನುತಟ್ಟಿದರು. ಮಿತ್ರರೂ ಖ್ಯಾತ ಕವಿಗಳೂ ಆದ ಚೆನ್ನವೀರ ಕಣವಿಯವರು ಹಲವು ಸೂಚನೆಗಳನ್ನಿತ್ತರು. ಹೆಚ್ಚಾಗಿ ಸಂಶೋಧನ ಕ್ಷೇತ್ರದಲ್ಲಿ ದುಡಿಯುತ್ತಿದ್ದರೂ, ನಡುನಡುವೆ ಸೃಜನಾತ್ಮಕ ಪ್ರತಿಭೆ ಮಿಂಚಿ ನಿಂತಾಗ ಕನ್ನಡ, ಇಂಗ್ಲಿಷ, ಪ್ರಾಕೃತಗಳಲ್ಲಿ ಮತ್ತು ಮುಕ್ತಛಂದದಲ್ಲಿ ಹಲವಾರು ಕವನಗಳನ್ನುಕ್ಕಿಸಿದ ಹೃದಯಕ್ಕೊಂದು ಬಗೆಯ ಹುರುಪು ಬಂದಿತು. ಹಿಡಿದ ದಾರಿಯನ್ನು ತುಳಿಯುತ್ತ ಮುಂದೆ ಸಾಗಿದಾಗ ಹೀಗೆಯೆ ಒಂದು ದಿನ, ಎಷ್ಟೋ ಬಾರಿ ನನ್ನ ಹೃದಯವನ್ನು ಸೂರೆಗೊಂಡ, ಆಗಾಗ 'ಎದೆಯನ್ನು ಕುಣಿಸಿದ' ಗಾಥಾಸಪ್ತಶತಿಯಲ್ಲಿಯ ಹಲವಾರು ಗಾದೆಗಳು ಕನ್ನಡದ **ಮುಕ್ತ ಚೌಪದಿ**ಯಲ್ಲಿ ಮೂಡಿಬಂದವು, ಚಿತ್ತಕ್ಕೆ

ಸಂತಸ ತಂದವು. ಹೀಗಾಗುವಾಗ ಮೂಲದಲ್ಲಿಯ ಗಾಥಾಛಂದಸ್ಸಿನಲ್ಲಿರುವ ಹಾಡುಗಬ್ಬ ತನ್ನದೇ ಆದ ಒಂದು ರೂಪವನ್ನು ಪಡೆಯಿತು; ಪ್ರತಿಯೊಂದು ಗಾಹೆಯ ಶಬ್ದಶಃ ಅನುವಾದ ಅಸಾಧ್ಯವಾಗಿ, ಸಾಮಾನ್ಯವಾಗಿ ಸರಳಾನುವಾದ ಕೈಗೂಡಿಬಂದಿತು. ಈ ರೀತಿ ಕನ್ನಡಿಸಲ್ಪಟ್ಟ ಗಾಥಾಸಪ್ತಶತಿಯಲ್ಲಿಯ ಗಾಹೆಗಳಲ್ಲಿ ಈ ಕೆಳಗಿನ ಕೆಲವು ಮಾದರಿಗಾಗಿ ಮೀಸಲು :

೧

ಸಿಡುಕಿನಿಂದ ಕೆಂಪಡರಿದ ಗೌರಿಯ ಮೊಗದಿಂಗಳು
ಸಂಧ್ಯಾವಂದನೆಗೆ ನಿಂತ ಶಿವನ ಬೊಗಸೆ ನೀರೊಳು
ಪಡಿಮೂಡಿರೆ, ಕೆಂದಾವರೆ ಅರ್ಘ್ಯ ಪಿಡಿದಂತಿಹ
ಪಶುಪತಿಯಂಜಲಿಗೆ ಬೆಳಗು–ಭಕುತಿಯ ವಂದನೆಗಳು ! (೧–೧)

೨

ಬಗೆದು ನೋಡೆ ಪ್ರಾಕೃತ ಕಾವ್ಯವಮೃತದಂತಿಹುದು !
ಅದನು ಓದಿ, ಕೇಳಿ, ತಿಳಿಗುಕೊಳಲು ಬಾರದಿದ್ದರು
ಪ್ರಣಯದ ತತ್ತ್ವಜ್ಞಾನವ ಹರವಿ ಹರಟುತಿರುವವರು
ನಾಚಿಕೆಯನದೆಂತು ತಾನೆ ತೋರದಿಹರೋ—ತಿಳಿಯದು ! (೧–೨)

೩

ಕೋಟಿ ಗಾದೆಗಳ ದೊಡ್ಡ ರಾಶಿಯನೆ ತಂದು ಮುಂದಿರಿಸಿ,
ವಿವಿಧಲಂಕಾರಗಳನೊಳಗೊಂಡ ಏಳುನೂರನು ಮಾತ್ರ ಆರಿಸಿ,
ಸಂಕಲಿಸಿಹನೀ ಚೆಮ್ಮಿಯ "ಗಾಥಾಸಪ್ತಶತಿ"ಯನು
ಕವಿವತ್ಸಲನೆನಿಸಿದ ಹಾಲ ಸಾತವಾಹನರರಸನು ! (೧–೩)

೪

ಅದೊ ನೋಡದೊ ! ತಾವರೆಯಾ ಹಸಿರಾದೊಂದೆಲೆಯಲಿ
ಅಲುಗದೆ ಬುಲಿಪುವೆ ಬೆಳ್ಳಕ್ಕಿಯು ಕೂತಿರುವುದು ಅಲ್ಲಿ !
ಹಸನಾಗಿ ಹೊಳೆಯುತಿಹ ಪಚ್ಚದ ಬಟ್ಟಲ ತಟ್ಟೆಯಲಿ
ಸರಿಯಾಗಿಟ್ಟ ಶಂಖದ ಚಿಪ್ಪಿನಂತೆ ತೋರುತ್ತಿದೆ ನಿಲ್ಲಿಲ್ಲಿ! (೧–೪)

೫

ಮಾಗಿ ಬಿಳಿದಾಗಿಹ ಬತ್ತದ ಗದ್ದೆಗಳನು ಕಂಡು
ಬಾಗಿಸಿ ಮೊಗವನು ಅಳುತಿಹೆ ನೀನೇತಕೆ ಇಂದು ?
ಮೊಗಕೆ ಅರಪಾಳವ ಬಳಿದ ನವನಟಿಯಂತಾಗಿದೆಯಲ್ಲ,
ಗೆಳತಿ, ಬದಿಗದೊ ಬೆಳೆದು ನಿಂತಿಹ ಸಣಬಿನ ಹೊಲವೆಲ್ಲ ! (೧-೯)

೬

ಕೇಳಿದರಾ ಸಲಿಗೆಯ ಗೆಳತಿಯರೆಲ್ಲರು ಕೂಡಿ :
"ಹೇಳು ಹೇಳೆ, ಸಖಿ, ನಿನ್ನಯ ಮನಸಿನ ಬಯಕೆಗಳನು ಎಣಿಸಿ" !
ಚೊಚ್ಚಲ ಬಸುರಿ ಮೌನದಿ ನಸುನಗೆಯನು ಬೀರಿ,
ಬಿಚ್ಚಿದಳೊಳಬಯಕೆಯನೊಂದೇ: ನಲ್ಲನ ಕಣ್ತುಂಬಾ ನೋಡಿ !
(೧-೧೫)

೭

ಹುಸಿ ನಿದ್ದೆ ಹೂಡಿನಿತು ಕಂಗಳ ದಣಿಸುತಿಹ ನಲ್ಲ,
ತುಸು ಬದಿಗೆ ಸರಿದು ನನಗೂ ಇಂಬುಗೊಡು ಮೆಲ್ಲ !
ಇಗೊ ಮುತ್ತಿಡಲು ಮಿದುಗಲ್ಲ ಮುಳ್ಳೊಡೆಯಿತಲ್ಲ ?
ನನ್ನಾಣೆ, ನನ್ನೆರೆಯ, ಇನ್ನು ತಡಮಾಡೆ ಸಲ್ಲ ! (೧-೨೦)

೮

ನಾಳೆಯೆ ಪಯಣಂಗೆಳಸುವನೆಂದು ಜನರಾಡುತಿಹರು:
ತಿಳಿಸನೆನಗಿದನು ನನ್ನೆರೆಯ ಕಲ್ಲೆದೆಯನವನು !
ಬೆಳಗಾಗದಂತವಗೆ ಬೆಳೆಬೆಳೆದು ನಿಲ್ಲು, ಓ ನಿಶಾತಾಯಿ,
ಬೆಳಗುವೆನು ನಿನಗೆನ್ನ ಹೃದಯದಾರತಿ ಮಾಯಿ, ತಾಯಿ ! (೧-೪೬)

೯

ಸಿಡಿಲಿನ ಸದ್ದನು ಮೀರುವ ಬಿಲ್ಲಿನ ಟಂಕಾರವನು
ಬಂದಿಸಿ ಬೇಡಿತಿ ಕೇಳುತಲದು ಪತಿಯದೆ ಎಂದರಿತು,
ಬನ್ನವು ಬಯಲಾಯಿತು ಎನ್ನುತ ಹಿಗ್ಗಿಲಿ ಉಬ್ಬಿದಳು
ಕೂಡಲೆ ಸಹಬಂದಿನಿಯರ ಕಂಗಳನೂ ಒರಸಿದಳು ! (೧-೫೮)

೧೦

ಕನಿಕರದಿ, ಚನ್ನಿಗನೆ, ನೀನಿಂದು ನನ್ನೆಡೆಗೆ ಬಂದಿರಲು
ಇನಿತೊಂದು ಸೊಗಸೆನ್ನ ಮನವನಾವರಿಸಿಹುದು !
ವಂಚನೆಯಳಿದು ಒಲವಿನಲಿ ಬಳಿಸಾರುತಿರಲು
ಎನಿತೊಂದು ಸೊಗವನುಳಿದವರು ಸವಿಯುತಿರಬಹುದು ? (೧–೮೫)

೧೧

ಕಳೆದಿರುಳಿನಲಿ ತುಟಿಗಳಿಗೆ ತಾ ಬಳಿದು ಕೆಂಬಣ್ಣವನು
ಅವಳೆರೆಯನೊಲುಮೆಯಲಿ ತೊಡೆದು ಹಾಕಿರಲು,
ಬೆಳಗಿನಲಿ ತಾನರಳಿದ ಮನದಲಿ ಎದ್ದು ಬರುತಿರಲು
ಸವತಿಯರಾ ಕಂಗಳಲದು ಮೂಡಿದುದನು ಕಂಡಳು ! (೨–೬)

೧೨

ತಾವರೆ ಹೂಗಳ ಹಾಸಿಗೆಯೊಳೊಂದೂ ಮುದುಡಿಲ್ಲ, ಕಂದಿಲ್ಲ !
ನೂರಾರು ಅರಸಂಚೆಗಳಲೊಂದೂ ಹಾರಿ ಹೊರಹೋಗಿಲ್ಲ !
ನಮ್ಮೂರಿನಾ ಕೆರೆಯೊಳಗತ್ತೆ ಆವನದಾವನೊ ಧೀಮ
ಮುಗಿಲನು ಅಂಗತ್ತಾಗಿಯೆ ತಾ ತಂದೆಸೆದಿಹನಮ್ಮ ! (೨–೧೦)

೧೩

ಮಗನ ಲಾಲಿಸಿ ಯಶೋದಾ ಮಾತೆಯಾ ದಿನವಂದು
ನುಡಿದಳು : ದಾಮೋದರ ನನ್ನವನಿನ್ನೂ ಬಾಲಕನು !
ಬದಿಗಡಗಿದ ಗೋಪಿಯರಾಗ ಒಬ್ಬರೊಬ್ಬರ ಮೊಗಗಂಡು
ಪ್ರಿಯನಣಕಿಸುತೋರೆಗಣ್ಣಿನಲಿ ನಸುನಗೆಯಾಡಿದರು ! (೨–೧೨)

೧೪

ಕುಣಿಯುವ ಸಹಗೋಪಿಯರನು ಹೊಗಳುವ ನೆವದಲ್ಲಿ
ನಿಪುಣಳು ಗೋಪಿಕೆಯೊಬ್ಬಳು ಒಡನೆಯೆ ಬಳಿಸಾರುತಲಿ,
ಕಿವಿಯೊಳು ನುಡಿವಂತೆಯೆ ನಾಡಿ ಮುದ್ದಿಡುತಿಹಳವರ
ಕೆನ್ನೆಯ ಕನ್ನಡಿಯೊಳು ಪಡಿಮೂಡಿದ ಕೃಷ್ಣನ ಚೆಲು
ಮೊಗವ ! (೨–೧೪)

೧೫

ನನ್ನೊಳಪನೊಲುಮೆ ಸಲೆ ಬಲುಹಿನದು ! ನೀ ಬಲ್ಲೆ,
ನಾನಂತು ಮಾತುಮಾತಿಗೆ ನಾಚುವವಳು !
ಗೆಳತಿಯರೋ–ಹಾಡುವ ಹಕ್ಕಿಯ ಪುಚ್ಚವನೆಣಿಸುವರು !
ಅಲತಿಗೆಯದು ಕಾಲಿಗೆ ಏತಕೆ ? ಸರಿ, ದೂರಾಗು ! (೨-೨೭)

೧೬

ನೇಸರನಡಗುವ ಮುಂಚೆಯೆ ಚತುರೆಯು ಆ ಮಡದಿ
ತನ್ನೆರೆಯಗೆ ಬೇಡಾದರು ಕೈಹಿಡಿದವನನು ಕರೆತಂದು,
ಒಲುಮೆಯಿಂದ ನಗು–ನಗುತಲೆ ಕಾಲನು ತೊಳೆಯುವಳು;
ಒಲ್ಲೆನ್ನಲು ಆಗದೆ ಅವಳಿಷ್ಟವನಂತು ಅವನೂ ನಸುನಗುವ !
(೨-೩೦)

೧೭

ಬೊಗಸೆಯನೊಡ್ಡಿ ಮೊಗನರಳಿಸಿ ನೀರೀಂಟುವ ಪಥಿಕ
ಕಣ್ಣನೆತ್ತಿ ಕಣ್ಣೊಳಗಿರಿಸಿ ಕೈಬೆರಳನು ಸಡಿಲಿಸಲು,
ಮೊಗಪೆಯ ನೀರಿನ ತೆಳುಧಾರೆಯನಿನ್ನೂ ತೆಳುವಾಗಿಸುತ
ಅರವಟ್ಟಿಗೆಯಾ ಹುಡುಗಿ ಚಾಣಿಸಿದಳು ಪಡಿಯಾಗಿ ! (೨-೬೧)

೧೮

ಗುಡಿಸಲಿನ ಚಪ್ಪರದ ಹುಲ್ಲು ಬಿರುಗಾಳಿಗೆದ್ದು ಸರಿದಾಡಿರಲು,
ಗಡಸಿನ ಮಳೆಗರೆದು ನೀರು ಒಳಗಿಳಿಯುತಿರಲು,
ಗೋಡೆಗೆ ಕೊರೆದೆರೆಯನ ಮರುಪಯಣದ ಎಣಿಕೆಯನು
ನೋಡುತಲಾ ಮಡದಿ ಅಂಗೈಯಲಿ ಮುಚ್ಚುತ
ಕಾಪಾಡಿದಳದನು ! (೨-೭೦)

೧೯

ಮುಕ್ತ ಮನದಿಂದ ಅಲೆದಾಡು ಧಾರ್ಮಿಕನೆ ನೀನಿನ್ನು,
ಕಿಡಿಗೇಡಿ ಸೊಣಗದಾ ಕಾಟ ಕೊನೆಗೂ ಅಳಿದಿಹುದು :
ಗೋದಾವರೀ ತಟದ ದಟ್ಟಾದ ಮೆಳೆಯೊಳಡಗಿಕೊಂಡು
ಕಾದಿರುವ ಹಿರಿ ಸಿಂಗವೊಂದದನು ಇಂದು ಕೊಂದಹುದು ! (೨-೭೪)

೨೦

ನಾಲ್ಕಾರು ಸಲ ಸಿನ್ನೆರಿಯುಳಿಗೆ ಸರಿಯಾಗಿ ಹೇಳಿದೆನು
ನನ್ನೊಡನೆ ನೀನಂದು ಕಳುಹಿಸಿದಾ ಸಂದೇಶವನು !
"ತಿಳಿಯದು, ಸರಿಕೇಳದು" ಎಂದೆನುತವಳು
ನುಡಿಯಿಸಿಕೊಂಡಳು ನೂರುಸಲ ಮನ ತಣಿವಪ್ಪೊಲು !
(೨–೯೮)

೨೧

ಪಯಣಿಗನ ಮನೆಯುವಳು ಪತಿ ಬೇಗ ಬರಲೆಂದು
ಅನ್ನದ ಪಿಂಡವನು ಬಾಗಿ ಕೆಳಗೆ ತಾನಿಡುತಿರಲು,
ಕೊರಗಿದ ಮುಂಗೈಯಿಂದದರ ಸುತ್ತಲು ಬಿದ್ದ ಬಳೆಯುನು
ಬಲಿಯೆಂದು ಬಗೆದ ಕಾಗೆ ಬಳಿಸಾರದಿಹುದು ! (೭–೫)

೨೨

ನನ್ನಾ ಚನ್ನಿಯ ಮೊಗವು ನಿಜವಾಗಿ ಚಂದಿರನಂತಿಹುದು !
ಅವಳಾ ಬಟ್ಟಬಾಯ ರಸವು ತಾನಮೃತದಂತಿಹುದು !
ಅವಳಾ ಸೀಳ್ದ ಕುರುಳ್ಗಳನವಸರದಿ ಕೈಗೊಂಡು
ಪಡೆದೊಲುಮೆಯ ಮುದ್ದೇತರಂತಿಹುದೊ ಎನಗೆ ಅರಿದು ! (೩–೧೩)

೨೩

ನೀನಲ್ಲಿಂದ ಪೋದೊಡನೆ, ಮರುಳ, ಚನ್ನಿಯುವಳು
ತನ್ನನಾವರಿಸಿದ ಬೇಲಿಯಾ ಒಂದೊಂದು ಸಂದಿಯೊಳಗಿಂದ
ಚಂಚಲ ಮಿಂಚಿನ ಕಂಗಳನಿಟ್ಟು ನೆರೆ ಸಿರುಕಿಸಿದಳು
ಪಂಜರದೊಳಗಿಟ್ಟ ಕಾತರವ ಪಕ್ಕಿಯ ಪರಿಯಲಂತು ! (೩–೨೦)

೨೪

ಇನಿಯನ ನೆನಪಿಸಿಂದೆಡಬಿಡದೆ ಹರಿಯುತಿರುವ
ಕಂಬನಿಗಳುದುರಿ ನಂದಬಹುದೆಂಬಂಜಿಕೆಯಿಂದ
ಪಯಣಿಗನಾ ಪೆಂಡತಿ ಪಡೆದೆಚ್ಚರಿಕೆಯುನು
ಕೊರಗಿದ ಕತ್ತಾಚೆಗೆ ತಿರುಗಿಸಿ ದೀಪ ಕೈಗಿಡುವಳು ! (೩ ೨೨)

೧೫

ಚನ್ನಿಗನವನು, ಸಖಿ, ಮಧ್ಯಮನಾಗಿರುವದೆ ಲೇಸು !
ದುರ್ಜನ–ಸುಜನರನು ಪಡೆದು ನಾವು ಮಾಡುವದೇನು ?
ದುರ್ಜನನ ಸಂಗವೊದಗಲು ಕಾವೇರುವದು ಮನಕೆ !
ಸುಜನನ ಸಂಗವಂತೊದಗುವದೆ ಅಪರೂಪ ನೋಡೆ ! (೩-೧೪)

೧೬

ಊರಿಗೆ ಊರೆ ಜೇಂಕಿ ಹತ್ತಿ ಭರದಿಂದುರಿಯುತಿರಲು,
ಸನ್ನದೆನ್ನುವದೆಲ್ಲ ತಾನುರಿಯ ಬಾಯಿಗೆ ಬಿದ್ದಿರಲು,
ನೀರಿನ ಕೊಡವ ನಾವಿಬ್ಬರು ಒಬ್ಬರೊಬ್ಬರ ಕೈಯಿಂದೊಯ್ಯುತಿರಲು,
ಅಹಹ ! ಅದೆಂಥ ನೆಮ್ಮದಿ ಮನಕಂದು ನುಗ್ಗಿ ಬರುತಲಿತ್ತು !
(೩-೧೯)

೧೭

ನಡುನಡುಗಿ ಬೆವರುತಿಹ ಕೈಬೆರಳುಗಳೊಳಗಿಂದ
ತಡೆತಡೆದು ಜಾರುತಿಹ ಹೊಸ ಲೆಕ್ಕಣಿಕೆಯಿಂದ
'ಶ್ರೀ' ಎಂಬಕ್ಕರಂಗಳೆ ತೀಡಿ ತೀರದಾದವು !
ಬರೆಯಲಿನ್ನೇನು, ನಲುಮೆಯ ಗೆಳತಿ, ನನ್ನೀ ಓಲೆಯೊಳು ?
(೩-೪೪)

೧೮

ಒಲುಮೆಯ ಕಲಹದೊಳು ಕೆಳಗಿಳಿಸಿದೆರೆಯಳ
ಮೊಗವನು ಅಂಗೈಗಳಾಸರೆಯನಿತ್ತೆರೆಯ ಮೇಲಕೆತ್ತಿ,
ಮದಿರೆಯ ಗುಟುಕನೊಂದವಳ ಬಾಯಿಗಿಟ್ಟಿರಲು
ಮಾನದ ಮದ್ದೆಂದು ಬಗೆದು ಅವಳವನಾಗಲೆ ಕುಡಿದಿಹಳು ! (೩-೭೦)

೧೯

ಗಟ್ಟಿಮುಟ್ಟಾಗಿ ಬಿಗಿದ ಗಂಟನು ಸಡಿಲಿಸಿಕೊಂಬಂತೆ
ಕಟ್ಟೆರಸೆನ್ನವ ಕೊರಳಿಗೆ ತಬ್ಬಿದ ತೋಳುಗಳೆನ್ನ ಬಿಡಿಸಿಕೊಂಡ !
ನಾನಾಗವನೆದೆಯಲಿ ನೆರೆ ನೆಟ್ಟಿನ್ನಯ ಕುಚಗಳನು
ಮನದಾಳೆಯನಿಡದೆ ಅನುರಾಗದಿ ಕಿತ್ತುಕೊಂಡಿಹೆನು ! (೩-೭೬)

೩೦

ಪಯಣಂಬೋದೊಡೆಯನ ಅಗಲಿಕೆಯಲಿ ಕಡು ಕೊರಗಿದ
ಹೆಂಡತಿ ಹಾಸಿಗೆ ಹಿಡಿದೊರಗಿರೆ ಹತಾಶೆಯಲಿ,
ಮಗ್ಗುಲವ ಬದಲಿಸೆ, ಕೇಳಬಂದವಳ ಬಳೆಗಳ ಸದ್ದು
ಕುಗ್ಗಿದ ಮನದಾ ಪರಿಜನರ ಮೊಗಗಳಲಿ ಕಳೆಯು ತಂತು ! (೩–೮೩)

ಪ್ರಾಶಯ-ಆಶಯ-ಉಪಾಶಯ

● ದೇವೇಂದ್ರಕುಮಾರ ಹಕಾರಿ

ಇತಿಹಾಸದ ಸುದೀರ್ಘ ಕಾಲಾವಧಿ ದೃಷ್ಟಿಯಿಂದ, ಜಾನಪದ ಅಧ್ಯಯನ ಪ್ರಪಂಚದ ವಿದ್ವಾಂಸರ ಗಮನಸೆಳೆದಿರುವುದು ತೀರ ಇತ್ತೀಚೆಗೆ. ಆದಿಮಾನವನ ಮನರಂಜನೆಯ ಸಾಧನಗಳಾದ ಹಾಡು ಕುಣಿತ-ಕಥೆಗಳು, ಪುರಾಣ, ಐತಿಹ್ಯ, ಧಾರ್ಮಿಕ ವಿಧಿಗಳಲ್ಲಿ ಅವನ ನಂಬುಗೆ, ನಿಷೇಧ ಮತ್ತು ಮೂಢನಂಬಿಕೆಗಳ ಬಗೆಗೆ ಅವನಲ್ಲಿ ಮೂಡಿಬಂದ ಭಯ, ತನ್ನ ಭಾಷೆಯಲ್ಲೇ ಹುದುಗಿದ ಅವನ ವಿಭಿನ್ನ ರೂಪದ ಅಭಿವ್ಯಕ್ತಿಗಳು- ಹೀಗೆ ನಾನಾ ಮುಖವಾಗಿ ಹರಡಿದ ಜನಪದ ವಿವಿಧ ಅಂಶಗಳನ್ನು ಸಂಗ್ರಹಿಸಿ ವ್ಯವಸ್ಥಿತಗೊಳಿಸಿ, ವಿಶ್ಲೇಷಿಸಿ ಮಾನವಜನಾಂಗದ ಸಾಂಸ್ಕೃತಿಕ ಸ್ಪಂದನೆಗಳನ್ನು ಗುರುತಿಸುವ ಕಾರ್ಯ ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ತೀವ್ರಗತಿಯಲ್ಲಿ ನಡೆಯುತ್ತಿದೆ. 'The essential of all folklore study is collecting and attempting to understand that which has been collected'[೧] 'ಸಂಗ್ರಹಣೆ ಮತ್ತು ಸಂಗ್ರಹಿಸಿದ್ದನ್ನು ಅರ್ಥಮಾಡಿಕೊಳ್ಳುವ ಯತ್ನವೇ ಎಲ್ಲ ಜಾನಪದ ಅಧ್ಯಯನದ ಸಾರ' ಎನ್ನುವುದು ಸ್ಟಿತ್‌ಥಾಮ್ಸನ್‌ರ ಅಭಿಪ್ರಾಯ.

ಜನಪದಕಥೆಗಳನ್ನು ಕುರಿತು ಈ ವಿದ್ವಾಂಸ ಮಾಡಿದ ಕಾರ್ಯ ಈ ಅಧ್ಯಯನಕ್ಷೇತ್ರದಲ್ಲಿ ಹೊಸಕ್ಷಿತಿಜಗಳನ್ನು ತೆರೆಯಿತು. ಜನಪದಕಥೆಗಳ ಅಧ್ಯಯನದ ದೃಷ್ಟಿಯಿಂದ ಸ್ಟಿತ್ ಥಾಮ್ಸನ್ ಅವರು 'ಒಂದು ಮೈಲುಗಲ್ಲು'[೨] ಎಂದು ಭಾವಿಸಲಾಗಿದೆ. ಅವರ 'Folk Tale' ಕೃತಿಯಲ್ಲಿ ಜನಪದಕಥೆ, ಅವುಗಳ ರೂಪರಚನೆ, ವರ್ಗೀಕರಣ, ಪ್ರಪಂಚದ ಜನಪದಕಥೆಗಳ ವೈವಿಧ್ಯ, ಕಥೆಗಳ ಹುಟ್ಟಿನ ಬಗೆಗೆ ರೂಪುಗೊಂಡಿರುವ ಸಿದ್ಧಾಂತಗಳ ಗುಣದೋಷಗಳನ್ನು ಕುರಿತು ವ್ಯಾಪಕವಾಗಿ ಚರ್ಚೆ ಮಾಡಲಾಗಿದೆ. ಈ ಕೃತಿ ಜಾನಪದ ಕಥೆಗಳ ಅಧ್ಯಯನಕ್ಕೆ

೧. Stith Thompson-p. 1 'Introducing Folklore' by Kenneth & Mary Clarke.

೨. ಕನ್ನಡ ಜನಪದ ಕಥೆಗಳು-ಜೀ. ಶಂ. ಪ ಪು. xxxiii.

ಒಂದು ತಳಹದಿಯಾಗಿದ್ದು ಈ ದಿಸೆಯಲ್ಲಿ ಕಾರ್ಯಮಾಡುವ ವಿದ್ವಾಂಸರಿಗೆ ಮಾರ್ಗದರ್ಶಿ.

ವಿಶ್ವದ ಜಾನಪದಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಕಥೆಯು ಸಾಮಗ್ರಿ ವಿಪುಲವೂ ಅದ್ಭುತವೂ ಆಗಿರುವುದರಿಂದ ಅನೇಕ ವಿದ್ವಾಂಸರ ಗಮನ ಜನಪದ ಕಥೆಗಳ ಅಧ್ಯಯನದ ಕಡೆಗೇ ತಿರುಗಿದೆ. ಅದಕ್ಕೆ 'ಮುಖ್ಯ ಕಾರಣ ಅದರ ವಿಶ್ವವ್ಯಾಪಕ ಗುಣ'[೩]. ಶಿಷ್ಟಸಾಹಿತ್ಯದ ಕಥೆಗಳ ಜೊತೆಗೆ ಇರಬಹುದಾದ ಜನಪದಕಥೆಗಳ ಸಂಬಂಧ, ವಿಭಿನ್ನ ಜನಸಮುದಾಯದ ಮೇಲೆ ಅವುಗಳ ಪರಿಣಾಮಪ್ರಭಾವ, ಅವುಗಳಲ್ಲಿ ಹುದುಗಿರಬಹುದಾದ ಜೀವನಸ್ವರೂಪ, ಅದ್ಭುತರಮ್ಯ ಕಲ್ಪಕತೆ, ಕಲಾತ್ಮಕ ಪ್ರತಿಭೆಗಳನ್ನು ಗುರುತಿಸುವುದು ಇಂಥ ಅನೇಕ ಅಂಶಗಳನ್ನು ಲಕ್ಷ್ಯದಲ್ಲಿರಿಸಿ ಕಥೆಗಳನ್ನು ಸಂಗ್ರಹಿಸಿ, ವರ್ಗೀಕರಿಸಿ, ವಿಶ್ಲೇಷಿಸಿ ವಿಮರ್ಶೆ ಮಾಡುವ ಯತ್ನ ಎಲ್ಲ ಕಡೆಗೂ ತೀವ್ರಗತಿಯಲ್ಲಿ ನಡೆದಿದೆ

ಪ್ರಾಣಿಕಥೆ, ನೀತಿಕಥೆಗಳಿಂದ ಮೊದಲುಗೊಂಡು ಅತಿಮಾನುಷ, ಮಾಂತ್ರಿಕ, ಅದ್ಭುತ, ರಮ್ಯ, ಸಾಹಸ ಮತ್ತು ಕಾಲ್ಪನಿಕ ಕಥೆಗಳ ವರೆಗೆ ಜನಪದಕಥೆಗಳ ವರ್ಗೀಕರಣ ಮಾಡಿ ಇವುಗಳ ಅಧ್ಯಯನಕ್ಕೆ ಒಂದು ಹಿರಿವಾದ ಯತ್ನ ನಡೆಯಿತು. ಆದರೆ ಈ ವಿಭಾಗಗಳಲ್ಲಿ ಕಾಣಿಸಿಕೊಂಡ ಒಂದು ನ್ಯೂನತೆಯೆಂದರೆ ಈ ವಿಭಿನ್ನ ಭಾಗದ ಕಥೆಗಳು ಒಂದರಲ್ಲಿ ಮತ್ತೊಂದು ಸೇರಿಕೊಂಡಿರುವುದು. ಆದ್ದರಿಂದ ಈ ವಿಭಜನಾಕ್ರಮ ಅಷ್ಟೊಂದು ಸಮರ್ಥವಾಗಿ ತೋರಲಿಲ್ಲ. 'ಈ ಎಲ್ಲದರಿಂದ ಗೊತ್ತಾಗುವುದು ಇಷ್ಟೆ : ಈ ಯಾವುದೇ ವಿಭಾಗಕ್ರಮ ಸಮರ್ಪಕವಾಗಿ ನಿರ್ವಹಿಸುವುದಿಲ್ಲ ಎಂಬುದು'[೪].

ಆಂಟಿ ಆರ್ನೆ ಮತ್ತು ಸ್ಟಿತ್ ಥಾಂಪ್ಸನ್ ಅವರು ಕಥೆಗಳ ಅಧ್ಯಯನಕ್ಕೆ ಮತ್ತೊಂದು ವರ್ಗೀಕರಣ ವಿಧಾನವನ್ನು ಅನುಸರಿಸಿದರು: ಅದು Type 'ಮಾದರಿ' ಮತ್ತು Motif 'ಆಶಯ'ಗಳ ವಿಧಾನ. ಒಂದು ಕಥೆಯ 'ಮಾದರಿ' ಮತ್ತು 'ಆಶಯ'ಗಳ ಮುಖಾಂತರ ಕಥೆಗಳ ಪರಸ್ಪರ ಸಂಬಂಧ, ಅವುಗಳಲ್ಲಿರುವ ವಿಭಿನ್ನತೆಗಳನ್ನು ಗೊತ್ತುಪಡಿಸುವುದು ಮತ್ತು ಕಥಾವಸ್ತುವಿನ ಮೂಲಸಮಸ್ಯೆಯನ್ನು ಕಂಡುಹಿಡಿದು ಎಲ್ಲ ಕಥೆಗಳ ನಿರ್ದಿಷ್ಟ ಅರ್ಥ ರೂಪಿಸುವುದು. ಡಾ. ಹಾ. ಮಾ. ನಾಯಕರು 'ಆಶಯ' ಕಥೆಯ ವಸ್ತು; 'ಮಾದರಿ' ಕಥೆಯ ತಾಂತ್ರಿಕ ಸ್ವರೂಪ ಎನ್ನುತ್ತಾರೆ.[೫]

---

೩. Stith Thompson – The Folk Tale–p. vii.

೪. ಕರ್ನಾಟಕ ಜಾನಪದ ಕಥೆಗಳು ಪು. xxiv ರಾಗೌ.

೫. ಜನಪದ ಸಾಹಿತ್ಯ ಅದರ ಸ್ವರೂಪ–ಡಾ. ಹಾ. ಮಾ. ನಾಯಕ; ಸುವರ್ಣ ಸಂಚಿಕೆ ಪು. ೩೨.

ಒಂದು ಕಥೆ 'ಮಾದರಿ'ಯಾಗಬೇಕಾದರೆ ಅದಕ್ಕೆ ಸ್ವತಂತ್ರ ಅಸ್ತಿತ್ವವಿರಬೇಕು ಮತ್ತು ಅದು ಸಾಂಪ್ರದಾಯಿಕವಾಗಿರಬೇಕು. ಅಲ್ಲದೆ ಗುರಿಯ ದೃಷ್ಟಿಯಿಂದ ಸ್ವಪರಿಪೂರ್ಣವಾಗಿರಬೇಕು. ಕಥೆಯ 'ಮಾದರಿ'ಯಲ್ಲಿ 'ಆಶಯ' ಒಂದೇ ಇರಬಹುದು ಅಥವಾ ಅನೇಕ 'ಆಶಯ'ಗಳು ಅದರಲ್ಲಿ ಕೂಡಿರಬಹುದು. 'ಆಶಯ'ಗಳ ಸೇರಿಕೆಗೆ ತಕ್ಕಂತೆ ಕಥೆ ದೀರ್ಘವಾಗುತ್ತ ಹೋಗುತ್ತದೆ. ಕಥೆಯ ಪ್ರತಿ 'ಮಾದರಿ'ಯಲ್ಲಿ ಆಶಯವಿರುತ್ತದೆ. ಆದರೆ ಪ್ರತಿಯೊಂದು 'ಆಶಯ' ಕಥೆಯ 'ಮಾದರಿ' ಆಗಬೇಕಾಗಿಲ್ಲ. 'ಆಶಯ' ಯಾವುದೇ ಕಥೆಯ ಅತಿ ಸಣ್ಣ ಘಟಕವಾಗಿರುತ್ತದೆ. ಅದನ್ನು ಮೂಲಾಂಶವೆನ್ನಬಹುದು.

'ಆಶಯ' ಎನ್ನುವುದು ಒಂದು ವಿಶಿಷ್ಟ ಪಾರಿಭಾಷಿಕ ಸ್ವರೂಪವನ್ನು ಪಡೆದಿದೆ. 'ಆಶಯ'ಸ್ವಾಭಾವಿಕ, ಸಹಜವಾಗಿರುವುದಿಲ್ಲ; ಅದ್ಭುತ, ಅಸಾಮಾನ್ಯ ರಮ್ಯಕಲ್ಪಕತೆಗಳಿಂದ ಕೂಡಿರುತ್ತದೆ. ಆಶಯಗಳನ್ನು ಮೂರುಗುಂಪುಗಳಾಗಿ ವಿಭಜಿಸಲಾಗುತ್ತದೆ: ಮೊದಲನೆಯದು. ಪಾತ್ರಗಳು–ದೇವತೆ, ಕಿನ್ನರ–ಕಿಂಪುರುಷ, ಯಕ್ಷ, ಭೂತ, ರಾಕ್ಷಸ, ಮಲತಾಯಿ, ಕಿರಿಯಮಗ ಮುಂತಾದುವು: ಎರಡನೆಯದು ಕಥಾಕ್ರಿಯೆಗೆ ಅನುಗುಣವಾಗಿ ಬರುವ ವಿಷಯವಸ್ತುಗಳು–ಮಾಂತ್ರಿಕ, ವಿಲಕ್ಷಣ ಸಂಪ್ರದಾಯ ಪದ್ಧತಿ, ವಿಶಿಷ್ಟ ನಂಬಿಕೆ ಮುಂತಾದುವು: ಮೂರನೆಯದು ಕೆಲವು ಬಿಡಿ ಘಟನೆ.[೬]

ಕಥೆ ವಿಸ್ತೃತಗೊಳ್ಳುತ್ತ ಹೋಗುವುದು 'ಆಶಯ'ಗಳ ಮೂಲಕವಾಗಿಯೇ ಆದ್ದರಿಂದ 'ಆಶಯ'ವನ್ನು ಕಥಾಕ್ರಿಯೆಯ ಪ್ರೇರಕ ಶಕ್ತಿ ಎನ್ನಬಹುದು 'ಆಶಯ'ಗಳ ವಿಷಯವೈವಿಧ್ಯವನ್ನು ಚರ್ಚಿಸಿದ ವಿದ್ವಾಂಸರು ಒಟ್ಟು 'ಆಶಯ'ಗಳು ಸುಮಾರು ೧೦,೦೦೦ ಎಂದು ಅಂದಾಜು ಮಾಡಿದ್ದಾರೆ; ಇದಕ್ಕೂ ಮೀರಿ ಇರುವುದಾದರೆ ಅವು ಕೇವಲ ಕೆಲವು ಎಂದು ಅವರ ಅಭಿಪ್ರಾಯ.

ಕಾರ್ಲೆಕ್ರೊಹ್ನರಿಂದ ಸ್ಫೂರ್ತಿ ಪಡೆದ, ಫಿನ್ಲೆಂಡ್‌ದೇಶದ ವಿದ್ವಾಂಸ ಆಂಟಿಆರ್ನೆ ಮೊದಲಬಾರಿ 'ಆಶಯ'ಗಳ ಸೂಚಿಗೆ ತಳಪಾಯ ಹಾಕಿದರು. ೧೯೨೫ರಲ್ಲಿ ಈ ವಿದ್ವಾಂಸ ಕಾಲವಾದ ಬಳಿಕ ಆ ಕಾರ್ಯವನ್ನು ಮುಂದುವರೆಯಿಸಿ, ೧೯೬೧ರಲ್ಲಿ 'The Types of Folk Tale' ಕೃತಿ ಹೊರತಂದರು. ಆ ಬಳಿಕ 'ಮಾದರಿ'ಗೆ ಪೂರಕವಾದ 'ಆಶಯ'ಗಳನ್ನು ಗುರುತಿಸಿ 'ಆಶಯ'ಗಳನ್ನು ಆಧರಿಸಿ ಜನಪದ ಕಥೆಯ ವಿಶ್ಲೇಷಣೆಗೆ ತೊಡಗಿದ ಅವರು 'Motif index of Folk literature' ಬೃಹತ್ ಸಂಪುಟಗಳನ್ನು ಬೆಳಕಿಗೆ ತಂದರು.

ಪ್ರಪಂಚದ ವಿವಿಧ ಭಾಗಗಳಲ್ಲಿ ನೆಲೆಸಿರುವ ಜನಪದ–ಮಾನವ ಸಮುದಾಯಗಳೆಂದರೆ ಜಾನಪದ ಕಥೆಗಳ ಉಗ್ರಾಣಗಳು. ಈ ಉಗ್ರಾಣಗಳಿಂದ ಕಥೆಗಳನ್ನು

೬. Folk Tale – Stith Thompson p. 415–16.

ಸಂಗ್ರಹಿಸಿ ಆಯಾ ಪ್ರದೇಶದ ಪಾರಂಪರಿಕ ಕಥೆಗಳ ಪರಿವೀಕ್ಷಣೆ, ವಿಶ್ಲೇಷಣೆಗೆ 'ಮಾದರಿಸೂಚಿ' ಮತ್ತು 'ಆಶಯಸೂಚಿ'ಗಳ ಆಧಾರ ಅಗತ್ಯ.

ಒಂದು ಕಥನ 'ಮಾದರಿ'ಯ ವಿವಿಧ ಪಾಠಾಂತರಗಳಿಂದ ಕಥೆಯ ಆನುವಂಶಿಕ ಸಂಬಂಧವನ್ನು ಗುರುತಿಸುವುದು ಸುಲಭ. 'ಆಶಯ ಸೂಚಿ' ಕಥೆಯ ತಾಂತ್ರಿಕ ಬೆಳವಣಿಗೆಯನ್ನು ಸೂಚಿಸುತ್ತದೆ. ಒಂದಕ್ಕೊಂದು ಪೂರಕವಾಗಿರುವ ಈ ಎರಡು ಸೂಚಿಗಳು ಜಾನಪದ ಕಥೆಗಳ ಅಧ್ಯಯನಕ್ಕೆ ದಿಕ್ಸೂಚಿಗಳಾಗಿದ್ದು ಮೂಲಾಧಾರ ವಾಗುತ್ತವೆ; ಪ್ರೇರಕವಾಗುತ್ತವೆ.

ವಿಭಿನ್ನ ಜನಾಂಗಗಳ ಭಾಷೆ ಮತ್ತು ಸಂಸ್ಕೃತಿಗೆ ಅನುಗುಣವಾಗಿ ಕಥೆಗಳು ರೂಪಾಂತರ ಪಾಠಾಂತರ ಪಡೆಯುವುದರಿಂದ ಅವುಗಳ ಹುಟ್ಟು, ಬೆಳವಣಿಗೆ, ಪ್ರದೇಶ, ದೇಶ, ರಾಷ್ಟ್ರಗಳಿಂದ ಪರಸ್ಪರ ಪ್ರಸಾರ ಮುಂತಾದ ವಿಷಯಗಳನ್ನು ಕುರಿತು ಅನೇಕ ವಿದ್ವಾಂಸರು– ಆಂದ್ರಿವ್‌ಲ್ಯಾಂಗ್, ಟೈಲರ್, ಗ್ರಿಮ್, ಜೇಸ್ಸ್, ಮ್ಯಾಕ್ಸ್‌ಮುಲ್ಲರ್–ಜಾನಪದ ಕ್ಷೇತ್ರದಲ್ಲಿ ಹೊಸ ಹೊಸ ಸಿದ್ಧಾಂತಗಳನ್ನು ಮಂಡಿಸಿ ದ್ದಾರೆ. 'ಜಗತ್ತಿನ ಸಮಗ್ರಕಥನಸಾಹಿತ್ಯಸಂಪೂರ್ಣವಾಗಿ ಸಂಗ್ರಹವಾಗುವವರೆಗೆ ಯಾವ ನಿರ್ಣಯಾತ್ಮಕ ನಿಲುವಿಗೂ ಬರಲಾಗದು ಎಂಬುದು ಈ ಸಂದರ್ಭದಲ್ಲಿ ನೆನಪಿನಲ್ಲಿಡಬೇಕಾದ ವಿಷಯ'[೭]. ಆದರೆ ಈಗ ಕಥೆಗಳ ಅಧ್ಯಯನಕ್ಕೆ 'ಮಾದರಿ ಸೂಚಿ' ಮತ್ತು 'ಆಶಯಸೂಚಿ'ಗಳನ್ನೇ ಆಧಾರವಾಗಿ ಇಟ್ಟುಕೊಳ್ಳುವುದು ಅನಿ ವಾರ್ಯ ಮತ್ತು ಅಗತ್ಯವಾಗಿದೆ.

'ಮಾದರಿ' ಕಥಾವಸ್ತುವನ್ನು ಕುರಿತದ್ದು ಎನ್ನುವ ಮಾತು ಸ್ಫುಟವಾಗಿದೆ. ಒಂದು ಕಥೆಯಲ್ಲಿ ಒಂದು 'ಆಶಯ' ಅಥವಾ ಅನೇಕ 'ಆಶಯ'ಗಳು ಇರಬಹುದು. ಆಶಯಗಳು ಬಂದು ಸೇರಿಕೊಂಡಂತೆಲ್ಲ ಕಥೆಯ ತಾಂತ್ರಿಕರೂಪ ವಿಭಿನ್ನ ಹಂತಗಳಲ್ಲಿ ಮುಂದುವರೆದು ಅದರ ಸ್ವರೂಪ ರಚನೆಯಾಗುತ್ತದೆ. ಒಂದು ಕಥೆಯಲ್ಲಿ ಒಂದೇ 'ಆಶಯ'ವಿದ್ದಾಗ, ಉದಾ– ಜಾಣನರಿ ಕಥೆಯ 'ಮಾದರಿ' ಮತ್ತು 'ಆಶಯ'ಗಳ ಬಗೆಗೆ ಯಾವುದೇ ತಪ್ಪು ಭಾವನೆ, ಅಸ್ಪಷ್ಟತೆ ತಲೆದೋರುವುದಿಲ್ಲ. ಏಕೆಂದರೆ ಇದು ಸಾದಾ ಸೀದಾ ಕಥೆ. ಇಲ್ಲಿ ವಸ್ತು, ತಂತ್ರ, ಸಂಕೀರ್ಣತೆ ಮುಂತಾದ ಪ್ರಶ್ನೆಗಳು ಬರುವುದೇ ಇಲ್ಲ. ಆದರೆ ಸಂಕೀರ್ಣಕಥೆಗಳ 'ಮಾದರಿ'ಯನ್ನು ಕುರಿತು ಆಲೋಚಿಸು ವಾಗ– ಕಥೆಯ ವಸ್ತು ವಿವಿಧ ಹಂತಗಳಲ್ಲಿ ಅನಿರೀಕ್ಷಿತ ತಿರುವು ಪಡೆಯುವುದು. ಅದ್ಭುತ ಮತ್ತು ಆಶ್ಚರ್ಯಜನಕ ಮಾಂತ್ರಿಕ ವ್ಯಕ್ತಿ ವಸ್ತುಗಳು ಬಂದು ಸೇರಿ ಆಶಯಗಳು, ಉಪ ಆಶಯಗಳು ಹೆಣೆದುಕೊಂಡು ಇಡೀ ಕಥೆಯ ಶಿಲ್ಪವನ್ನು ರಚಿಸು

---

೭. ಕರ್ನಾಟಕ ಜಾನಪದ ಕಥೆಗಳು– ರಾ. ಗೌ. ಪು. xxviii.

ವುದು- ಈ ಮುಂತಾದ ಅಂಶಗಳು ನಮ್ಮ ವಿಶೇಷ ಗಮನ ಸೆಳೆಯುತ್ತವೆ. ಈ ಎಲ್ಲ ಅಂಶಗಳು ಕಥೆಯ ರಚನಾತ್ಮಕ ಸ್ವರೂಪವನ್ನು ಕುರಿತ ಚಿಂತನೆಯ ಅಗತ್ಯತೆಯನ್ನು ಎತ್ತಿ ತೋರಿಸುತ್ತವೆ.

ಒಂದು ಕಥೆಯ ವಸ್ತು ಅದರ 'ಮಾದರಿ'ಯನ್ನು ಸೂಚಿಸಿದರೆ ಅದರ ಘಟನೆಗಳು ಕಥೆಯ 'ರಚನಾತ್ಮಕ ಸ್ವರೂಪ'ವನ್ನು ಖಚಿತಗೊಳಿಸಿ 'ಆಶಯ' ಸೂಚಿಗೆ ಆಧಾರವಾಗುತ್ತವೆ. 'ಮಾದರಿ' ಮತ್ತು 'ಆಶಯ'ಗಳ ಪರಸ್ಪರ ಸಂಬಂಧ ಮತ್ತು ಒಟ್ಟು 'ಕಥಾಶಿಲ್ಪ' ಸಾದಾ, ಸಂಕೀರ್ಣ ಯಾವುದೇ ಕಥೆಯಿರಲಿಕ್ಕೆ ಇವು ಬೆಸೆದುಕೊಳ್ಳುವ ರೀತಿಯನ್ನು ತುಂಬ ಗಮನವಿಟ್ಟು ಗುರುತಿಸಬೇಕಾಗುತ್ತದೆ. ಇಲ್ಲದೆಹೋದರೆ ಜಾನಪದ ಕಥೆಗಳ ಅಧ್ಯಯನವನ್ನು ಕೈಕೊಂಡ ವ್ಯಕ್ತಿ ಗೊಂದಲಕ್ಕೆ ಸಿಲುಕುತ್ತಾನೆ. 'A common source of confusion for the beginner is the difference between Stith Thompson's Motif-Index of Folk Literature, an index of motifs, and Aarne-Thompson's The Types of the Folk-Tale, an index of whole tales commonly called the Type Index'[೮]. 'ಆಶಯ'ಸೂಚಿ ಮತ್ತು 'ಮಾದರಿ' ಸೂಚಿಗಳ ವ್ಯತ್ಯಾಸವನ್ನು ಗುರುತಿಸುವಲ್ಲಿ ಉಂಟಾಗಬಹುದಾದ ಒಂದು ಸಾಮಾನ್ಯ ಗೊಂದಲಕ್ಕೆ ಕಾರಣ ಇರುವ ಸಾಧ್ಯತೆಯನ್ನು ಈ ಮಾತುಗಳು ಸೂಚಿಸುತ್ತವೆ.

'ಮಾದರಿ' ಕಥೆಯ 'ರೂಪ'ವಾದರೆ 'ಆಶಯ' ಕಥೆಯ 'ತಿರುಳಿ'ಗೆ ಸೂಚಕ. ಒಂದು ಕಥೆಯ ಸಂಕೀರ್ಣರೂಪಕ್ಕೆ ಅನುಗುಣವಾಗಿ ಅನೇಕ ಆಶಯಗಳು ಹುಟ್ಟಿಕೊಳ್ಳುತ್ತಾಹೋಗಿ ಇಡೀ ಕಥೆಯ ರಚನಾತ್ಮಕ ಸ್ವರೂಪ (Structural Form) ಒಂದು ಕಥಾಶಿಲ್ಪವಾಗಿ ರೂಪಗೊಳ್ಳುತ್ತದೆ. ಹಾಗಾದರೆ ಈ 'ಆಶಯ'ಗಳಿಗೆ ಆಶ್ರಯಸ್ಥಾನ ಯಾವುದು ? ಒಂದು 'ಆಶಯ'ವಿದ್ದ ಕಥೆಗೆ ಆಶ್ರಯದ ಪ್ರಶ್ನೆ ಬರುವುದಿಲ್ಲ. ಆದರೆ ಅನೇಕ ವಿಭಿನ್ನರೂಪದ 'ಆಶಯ'ಗಳು ಹುಟ್ಟಿಕೊಳ್ಳುವ ಕಥೆಯಲ್ಲಿ ಈ ಎಲ್ಲ 'ಆಶಯ'ಗಳನ್ನು ಸೂತ್ರಿಸುವ-ಸಂಯೋಜಿಸುವ ಬೇರೊಂದು ಅತ್ಯಂತ ಮಹತ್ವದ ಅಂಶವೊಂದು ಇರಲೇಬೇಕು ಮತ್ತು ಆ ಅಂಶ ಕಥೆಯ ಒಟ್ಟುಶಿಲ್ಪದ ರಚನಾತ್ಮಕ ಆಯಾಮವನ್ನು ಸೂತ್ರಿಸುವುದಲ್ಲದೆ, ಎಲ್ಲ 'ಆಶಯ'ಗಳನ್ನು- ವಿವಿಧ ಬಗೆಯ ಅತಿಮಾನುಷ, ಅಸಾಮಾನ್ಯ, ಅದ್ಭುತವಿಸ್ಮಯ, ವಿಲಕ್ಷಣ-ಹೊತ್ತು ನಿಲ್ಲುವ, ಕಥೆಯ ಮೂಲಾಂಶವಾಗಿರುತ್ತದೆ. ಅದನ್ನು 'ಪ್ರಧಾನವಾದ ಆಶಯ'ವೆಂದು ಕರೆಯಬಹುದು. ಒಂದು ಯಾವುದೇ ಉದ್ದೇಶದಿಂದ ಪ್ರೇರಿತವಾದ ಕಥೆ,

---

೮. Introducing Folklore-Kenneth & Mary clarke p-119.

ಹಂತಹಂತವಾಗಿ ಮುಂದುವರಿದು ಅನೇಕ 'ಉಪಾಶಯಗಳು' ಹುಟ್ಟಿಕೊಂಡು, ಸಂಕೀರ್ಣತೆಯನ್ನು ಸೃಷ್ಟಿಸಿಕೊಳ್ಳುತ್ತ ಒಂದು ನಿಶ್ಚಿತ ಮಜಲಿಗೆ ಒಂದು ಪೂರ್ಣ ಗೊಳ್ಳುತ್ತದೆ. ಹೀಗೆ ಕಥೆಯನ್ನು ನಿಶ್ಚಿತಮಜಲಿಗೆ ಕೊಂಡೊಯ್ಯುವ ಒಂದು ಪ್ರಮುಖವಾದ ಆಶಯ ಇನ್ನುಳಿದ 'ಆಶಯ'ಗಳಿಗೆ ಪ್ರೇರಕವೂ ಹೌದು, ಆಶ್ರಯವೂ ಹೌದು; ಇಂಥ ಒಂದು ಪ್ರಮುಖ ಆಶಯವಿಲ್ಲದೆ ಹೋದರೆ ಅಂಥ ಕಥೆಯಲ್ಲಿ ಬರುವ ಇತರ ಆಶಯಗಳು ಅಷ್ಟಪಟ್ಟಕ್ಕೆ-ಸೂತ್ರವಿಲ್ಲದ ಮಣಿಗಳಂತೆ ಚೆಲ್ಲಾಪಿಲ್ಲಿ ಯಾಗಿ ಕಥೆಯ ರಚನಾತ್ಮಕ ಸ್ವರೂಪಕ್ಕೆ, ಶಿಲ್ಪಕ್ಕೆ ಧಕ್ಕೆ ಉಂಟಾಗುತ್ತದೆ.

ಇಂಥ ಒಂದು ಪ್ರಮುಖ ಆಶಯದ ಆಲೋಚನೆಯನ್ನು ಇದುವರೆಗೂ ಮಾಡ ದಿರುವುದರಿಂದ ಜಾನಪದ ಕಥೆಗಳ ಅಧ್ಯಯನದಲ್ಲಿ ಅಲ್ಲಲ್ಲಿ ಗೊಂದಲಸ್ಥಿತಿ ಉಂಟಾ ಗುವ ಸಾಧ್ಯತೆಯಿದೆ.

ಈಗ ಇನ್ನೊಂದು ಪ್ರಮುಖ ಸಮಸ್ಯೆ ತಲೆದೋರುತ್ತದೆ. ಕಥೆಯ ಗುರಿ, ಉದ್ದೇಶಗಳನ್ನೇ ಪ್ರಮುಖ ಆಶಯ ಎಂದು ಕರೆದರೆ 'ಆಶಯ' ಎನ್ನುವುದಕ್ಕೆ ಈಗ ಕೊಟ್ಟಿರುವ ಪಾರಿಭಾಷಿಕ ಪರಿಕಲ್ಪನೆಯ ಗತಿಯೇನು? ಕಥೆಯ ಶಿಲ್ಪವನ್ನು ರೂಪಿಸುವ, ಸೂತ್ರಿಸುವ ಇಂಥ ಒಂದು ಪ್ರಮುಖ ಆಶಯವನ್ನು ನಿರ್ದೇಶಿಸಿದರೆ ಉಳಿದ 'ಆಶಯ'ಗಳಿಗೆ ಒಂದು ತಾಂತ್ರಿಕಶಕ್ತಿ ಪ್ರಾಪ್ತವಾಗುತ್ತದೆ ಅಲ್ಲದೆ ಆ ಆಶಯಗಳ ಪಾರಿಭಾಷಿಕ ಸ್ವರೂಪಕ್ಕೂ ಧಕ್ಕೆ ತಗಲುವುದಿಲ್ಲ. ಆದ್ದರಿಂದ ಈ ಪ್ರಮುಖ ಆಶಯವನ್ನು 'ಪ್ರಾಶಯ' ಎಂದು ಕರೆಯುವುದು ಸೂಕ್ತವಾದೀತು. ಆಗ ಒಂದು ಕಥೆಯ 'ಆಶಯ' ಸೂಚಿಯಲ್ಲಿ 'ಪ್ರಾಶಯ' 'ಆಶಯ' ಮತ್ತು 'ಉಪಾಶಯ'- **'prime Motif, Motif, Sub-motif'** ಎಂದು ನಮೂದಿಸಬೇಕು.

ಒಂದು ಕಥೆಗೆ ಒಂದೇ 'ಆಶಯ'ವಿದ್ದಾಗ 'ಪ್ರಾಶಯ' ಎನ್ನುವುದು ಅಪ್ರಸ್ತುತ, ಏಕೆಂದರೆ ಆಗ ಆಶಯವೇ ಕಥೆಯ ಪ್ರೇರಕಾಂಶ. ಆದರೆ ಅನೇಕ ಆಶಯಗಳು ಹುಟ್ಟಿ ಕೊಳ್ಳುವ ಕಥೆಯೊಂದರಲ್ಲಿ¹—

—ಉದಾ: ಮಾಂತ್ರಿಕನೊಬ್ಬ ಹಕ್ಕಿಯನ್ನಾಗಿ ಪರಿವರ್ತಿಸಿಕೊಂಡೊಯ್ದ ತನ್ನ ತಾಯಿಯ ವಿಷಯವನ್ನು ತನ್ನ ಅಜ್ಜಿಯಿಂದ ಕೇಳಿ ತಿಳಿದ ಕಿರಿಯಮಗ, ತಾಯಿಯನ್ನು ಪಡೆಯುವ ಗುರಿಯಿಂದ ಪ್ರೇರಿತನಾಗಿ ಮನೆಬಿಟ್ಟು- ಕಾಡಿನಲ್ಲಿ ಅಲೆದು ಮರದಡಿ ರಾತ್ರಿ ಕಳೆಯುವುದು- ಮರದಮೇಲಿನ ಗಿಳಿಗಳು ಬಾಲಕನ ಕಷ್ಟ ಕುರಿತು ಮಾತನಾಡುವುದು- ಬಾಲಕ ಕಣ್ತೆರೆದಾಗ ಕಾಣುವ ಋಷಿ-ಬಾಲಕನ ದುಃಖದ ಕಾರಣ ನಿವೇದನೆ-ಋಷಿಯಿಂದ ತಾಯಿ ಶಿಲಾಮೂರ್ತಿಯಾದ ಸಂಗತಿ- ಬಾಲಕನ ದುಃಖ ಪರಿಹಾರಕ್ಕಾಗಿ ಋಷಿ ಏಳು ಮಂತ್ರದ ಹರಳು ಕೊಡುವುದು-

೧. ದಿ. ಮಲ್ಲಪ್ಪ ಹಕಾರಿ ಹೇಳಿದ್ದ ಜನಪದಕಥೆ-ಬಾಲನಾಗಮ್ಮ ಕಥೆಯ ಮಾದರಿ.

ಹಾದಿಯಲ್ಲಿ ಜಲಪ್ರವಾಹ, ರಾಕ್ಷಸ, ಪಿಶಾಚಿಗಳ ಪೀಡೆ–ಮಂತ್ರದ ಹರಳುಗಳ ನೆರವು–ಮಂತ್ರವಾದಿಯ ರೂಪದಲ್ಲಿ ಗಿಳಿರೆಕ್ಕೆಯ ಹಕ್ಕಿಯ ಮರಣ–ಶಿಲೆಯಾಗಿದ್ದ ತಾಯಿ ಜೀವಂತವಾಗುವುದು–ತಾಯಿ ಮಗ ಕೂಡಿ ರೆಕ್ಕೆಗುದುರಿ ಏರಿ ಮರಳುವುದು—ಒಂದು ಪ್ರಮುಖವಾದ 'ಗುರಿ' ಇದ್ದು ಇದು ಇಡೀ ಕಥೆಯಲ್ಲಿ ಬರುವ ಎಲ್ಲ ಆಶಯಗಳಿಗೆ ಆಶ್ರಯವಾಗುತ್ತದೆ. ಇಲ್ಲಿ ಬಾಲಕ ತನ್ನ ತಾಯಿಯನ್ನು ಪಡೆಯುವ ಗುರಿಯಿಂದ ಪ್ರೇರಣೆಪಡೆದು ಮನೆಬಿಟ್ಟು ಹೋಗುತ್ತಾನೆ. ಅವನ ಈ ಗುರಿ ಅತ್ಯಂತ ವಾಸ್ತವಿಕ ಮತ್ತು ಮೂಲಭೂತ ಅಂಶವಾಗಿದೆ. ಕಥೆಯ ಮೂಲಾಂಶವೆನ್ನಬಹುದಾದ ಪ್ರಮುಖಗುರಿ, ಅನೇಕ ಅಸಾಮಾನ್ಯ, ಅದ್ಭುತ 'ಆಶಯ'ಗಳ ಹುಟ್ಟಿಗೆ ಪ್ರೇರಕವಾಗುತ್ತದೆ. ಕಥೆಯೊಂದರಲ್ಲಿ ಎಷ್ಟೇ ವಿಧದ 'ಆಶಯ'ಗಳು ಮೂಡಿದರೂ ಕಥೆಯ ಪ್ರಮುಖಗುರಿ ಕಥೆಯ ಉದ್ದಕ್ಕೂ ಗುಪ್ತಗಾಮಿನಿಯಾಗಿ ಕಥೆಯನ್ನು ಸೂತ್ರಿಸುತ್ತದೆ. ಆದ್ದರಿಂದ ಮೂಲಾಂಶವಾದ ಪ್ರಮುಖಗುರಿ ಕಥೆಯ 'ಮಾದರಿ' ಮತ್ತು 'ಆಶಯ'ಗಳ ಪರಿಚಲನೆಗೆ ಅಕ್ಷವಾಗುತ್ತದೆ.

ಜನಪದ ಕಥೆಗಳ 'ಮಾದರಿ' ಸೂಚಿಯಲ್ಲಿ 'ಮಾದರಿ' ಮತ್ತು 'ಉಪಮಾದರಿ' (Subtype)[೧೦] ಎಂದು ನಮೂದಿಸಲಾಗುತ್ತದೆ. ಅದರಂತೆ ಅಗತ್ಯವಿದ್ದಕಡೆಗಳಲ್ಲಿ ದೀರ್ಘವಾದ, ಸಂಕೀರ್ಣ ಕಥೆಗಳ ಆಶಯಗಳನ್ನು ಗುರುತಿಸುವಾಗ 'ಪ್ರಾಶಯ' 'ಆಶಯ' 'ಉಪಾಶಯ' ಎಂದು ನಮೂದಿಸಬೇಕು. ಇದರಿಂದ 'ಮಾದರಿ' ಮತ್ತು 'ಆಶಯ'ಗಳ ಪರಸ್ಪರ ಸಂಬಂಧದ ವಿಚಾರಮಾಡುವಾಗ ಇದುವರೆಗೂ ಕಳಚಿ ಹೋಗಿದ್ದ ಒಂದು ಮಹತ್ವದ ತಂತುವನ್ನು ಜೋಡಿಸಿದಂತಾಗುತ್ತದೆ; ಆದ್ದರಿಂದ 'ಪ್ರಾಶಯ' ಎನ್ನುವುದು ಒಂದು ಜನಪದ ಕಥೆಯಲ್ಲಿ ನಿರ್ದಿಷ್ಟ ಗುರಿಯುಳ್ಳ, ವಾಸ್ತವಿಕ ಅಥವಾ ಅಸಾಮಾನ್ಯ ವಿಲಕ್ಷಣ ಉದ್ದೇಶದಿಂದಲೂ ಪ್ರೇರಿತವಾಗಿರಬಹುದಾದ[೧೧] ರಚನಾತ್ಮಕ ಸ್ವರೂಪದಲ್ಲಿ ಮಹತ್ವದ ಪಾತ್ರ ನಿರ್ವಹಿಸುವ ಒಂದು ಮೂಲಾಂಶ.

'ಪ್ರಾಶಯ' ವಾಸ್ತವಿಕವಾಗಿರಬಹುದು; ಅದ್ಭುತ ಅಸಾಮಾನ್ಯ ವಿಲಕ್ಷಣವೂ ಆಗಿರಬಹುದು. ಆದರೆ 'ಆಶಯ' ಮಾತ್ರ ವಾಸ್ತವಿಕತೆಯಿಂದ ಭಿನ್ನವಾಗಿದ್ದು ವಿಲಕ್ಷಣತೆ, ಅಸಾಮಾನ್ಯತೆ ಅದರ ರೂಪಾಂಶವಾಗಿರುತ್ತದೆ. ಒಟ್ಟಾರೆ 'ಆಶಯ'ಗಳ ಸೂಚಿಯಲ್ಲಿ 'ಪ್ರಾಶಯ' 'ಆಶಯ' 'ಉಪಾಶಯ' ಎಂದು ನಮೂದಿಸುವುದರಿಂದ ಕಥೆಗಳ ಅಧ್ಯಯನದಲ್ಲಿ ಯಾವ ಗೋಜು ಅಥವಾ ಗೊಂದಲ ಉಳಿಯಲಾರದು ಎಂದು ಆಶಿಸಲಾಗಿದೆ. ● ●

೧೦. 'Where a subtype exists, it is designed by a letter following the number of the tale type' 'Introducing Folklore' by Kenneth & Mary clarke p-119.

೧೧. ರಾಜಕುಮಾರನೊಬ್ಬನಿಗೆ ನಕ್ಕರೆ ಮುತ್ತು ಸುರಿಯುವಂಥ ಕನ್ನೆಯನ್ನೇ ಮದುವೆಯಾಗುವ ಹಂಬಲ.

ಹೊಸದಾಗಿ ದೊರೆತ ಮೂರು ಸ್ವರವಚನಗಳು

● ಎಸ್. ಎಸ್. ಭೂಸರಡ್ಡಿ
● ವೀರಣ್ಣ ರಾಜೂರ

ಬಸವಾದಿ ಶಿವಶರಣರು ವಚನಗಳನ್ನು ರಚಿಸಿದಂತೆ ರಾಗ–ತಾಳಗಳಿಂದ ಕೂಡಿದ ಹಾಡುಗಳನ್ನೂ (ಇವುಗಳಿಗೆ ಸ್ವರವಚನಗಳೆಂದು ಕರೆಯುತ್ತಾರೆ) ಬರೆದಿರುವುದು ಸಾಹಿತ್ಯಾಭ್ಯಾಸಿಗಳಿಗೆ ವಿದಿತವಾದ ವಿಷಯ. ಈ ಸ್ವರವಚನಗಳ ಸಂಕಲನವಾಗಿ ಡಾ. ಎಲ್. ಬಸವರಾಜ ಅವರ 'ಶಿವದಾಸ ಗೀತಾಂಜಲಿ' ೧೯೬೩ರಲ್ಲಿ ಹೊರಬಂದಿದೆ. ಅದರಲ್ಲಿ ವಿವಿಧ ಶರಣರ ೧೮೭ ಸ್ವರವಚನಗಳು ಎಡೆಪಡೆದಿವೆ.* ಇವುಗಳ ಗುಂಪಿಗೆ ಸೇರುವ ಮೂರು ಸ್ವರವಚನಗಳು ಸಧ್ಯ ಕನ್ನಡ ಅಧ್ಯಯನಪೀಠದ ಹಸ್ತಪ್ರತಿಗಳಲ್ಲಿ ಹೊಸದಾಗಿ ದೊರಕಿವೆ. ಅವು ಬಸವಣ್ಣ, ನಿಜಗುಣಯೋಗಿ (ಸು. ೧೧೬೦) ಕರಸ್ಥಲ ನಾಗಿದೇವ (ಸು. ೧೪೩೦) ರಿಂದ ರಚಿತವಾಗಿದ್ದು ಕ್ರಮವಾಗಿ ಮೊದಲನೆಯದು ತಾ. ಪ್ರ. ೩೦೪೨ ಗರಿ ೧೯೪, ಎರಡನೆಯದು ಕಾ. ಪ್ರ. ೬೦೪೩ ಪು. ೨೮ ಹಾಗೂ ಮೂರನೆಯದು ತಾ. ಪ್ರ. ೩೦೫೧ ರಲ್ಲಿ ದೊರೆತಿವೆ. ಅವನ್ನಿಲ್ಲಿ ಪರಿಷ್ಕರಿಸಿ ಕೊಡಲಾಗಿದೆ.

೧

ಸ್ವರಪದ :

ಬಿಡದೆ ಸಲಹು ದೇವನೆ ಎನ್ನೊಳಗತಿ
ದೃಢವೆ ನಿನಗೆ ದೇವನೆ
ಪೊಡವಿ ಈರೇಳುವ ದಡದಡಿಸುವ ಮದನನ
ನಡುಗಣ್ಣ ಕಿಡಿಯಿಂದ ಮಡುಹಿದ ದೇವನೆ. ॥ ಪಲ್ಲ ॥

ಕಂದುಕಂದರ ಭಾಳನೇತ್ರ ವಿಲಸಿತ ದಯಾ
ಸಿಂಧು ಶರಣಜನ ಬಂಧು
ಮಂದರಗಿರಿ ಮಂದಿರ ಸಿಂಧುರ ಸುರಮರ್ದನ
ಬಂಧುರ ಭಕ್ತರ ಮದಹರನೆ. ೧

---

* ಶಿವದಾಸಗೀತಾಂಜಲಿಯಲ್ಲಿ ಬಸವಣ್ಣನವರ ೨೧, ನಿಜಗುಣಯೋಗಿಯ ೮, ಕರಸ್ಥಲ ನಾಗಿದೇವನ ೯ ಸ್ವರವಚನಗಳು ಸಮಾವೇಶಗೊಂಡಿವೆ.

ಪಕ್ಷಿವಾಹನನಕ್ಷಿಸಾದ ಪರಾತ್ಪರ
ಯಕ್ಷ ಸುಪಕ್ಷ ಜನರಕ್ಷ
ಅಕ್ಷರವಕ್ಷರ ದಕ್ಷ ಶಿರಕ್ಷಯು
ಮೋಕ್ಷವಿವರ್ಧನ ಕರುಣ ಕಟಾಕ್ಷ. ೨

ಅಂಬರಕೇಶ ಜನೇಶ ಪೊಳೆವ ಚಿ-
ದಂಬರ ಚೇಲ ದಿಗಂಬರ
ತ್ರ್ಯಂಬಕ ಭಕ್ತ ಕುಟುಂಬಕ ವಿಶ್ವಕ-
ದಂಬಕ ಬಿಂಬ ಧೃತಂಬಿಕೆಯುರಸಾ. ೩

ಸುರಗಿರಿ ಚಾಪಕಲಾಪ ದೇವರದೇವ
ಶಿರಧರ ಶೂರ ಗಂಭೀರ
ಪುರಹರ ವರಕರ ರಜನಿಕರಧರ
ಮುರಹರ ಮರ್ದಿತ ಹರ ಪರಮೇಶಾ. ೪

ಸಂಗೀತಲೋಲ ದಿವ್ಯಾಂಗ ಸಜ್ಜನ ಜನ
ಸಂಗದುಮರ್ಾಯ ವಿಭಂಗ
ಮಂಗಳ ಶರಣರ ಸಂಗದೊಳನುಶ್ರುತ
ಓಂಗಪೆ ನೆಲಸಿಹ ಸಂಗಮದೇವ ಸಿರಂಗಕೃಪಾಂಗಾ. ೫

೨

ಜ್ಞಾನ ಪ್ರಕಾಶಸ್ಥಲ : ರಾಗ : ಫಳಮಂಜರಿ

ಆಲಿಂಗದ ಮಾಯಾ ಸಂಭ್ರಮ ಮರೀಚಿಕಾ
ಜಲದಂತೆ ತೋರಿಯಡಗಿತ್ತು. ॥ ಪಲ್ಲ ॥

ಜಲದಲಿ ಅನಿಲವಿಕಾರದಿಂ-
ದುಲಿದೇಳುವ ಫೇನ ತರಂಗ
ಚಲನೆಯಿಂಧಲಿ ಕಂಡೆನೆಂದಡೆ
ಮಲಿನ ಬಂಧದಲಿ ಬಿದ್ದರು. ೧

ರಜ್ಜು ಸರ್ಪ ಸ್ಥಾಣು ಚೋರ ಭ್ರಮೆಯ
ತ್ಯಜಿಸಬಾರದ ವಿವರಣೆ
ಭಜನೆಯಿಂದಲಿ ಕಂಡೆನೆಂದಡೆ
ಅಜಹರಿರುದ್ರರ ಕಂಡಿತ್ತು. ೨

ಅರಸುವಱಿಕೆಯುಳ್ಳನ್ನಕ್ಕರ ಈ ಮಾಯೆ
ಮಱಿಕೆ ಸತ್ತಡೆ ಮಾಯಾಲೋಪ
ಅಱಿವಿನ ಸೂತಕದ ತಲೆಯು
ನಱಿಯಲಲ್ಲಿಯೆ ಮಾಯೆಯು ಲೋಪವಾಯಿತ್ತು. ೩

ಎಲ್ಲರನೊಳಕೊಂಡಿತ್ತು ಮಾಯೆ
ಬಲ್ಲಿದರೆಂಬವರಾರುಯಿಲ್ಲ
ಮೆಲ್ಲಮೆಲ್ಲನೆ ಉಲುಹಡಗಲು
ಅಲ್ಲಿಯೆ ಮಾಯೆ ಲೋಪವಾಯಿತ್ತು. ೪

ಆನುಳ್ಳನ್ನಕ್ಕರ ನೀನುಂಟೆಲೆ ಮಾಯೆ
ಆನಿಲ್ಲದಿರ್ದಡೆ ನೀನುಯಿಲ್ಲ
ನಾನೀನೆಂಬುಭಯವಳಿಯಲು
ಆನಂದ ನಿಜಗುಣಯೋಗಿ. ೫

೩

ಮಾಡಲಿಲ್ಲವೆ ಮನವೆ ಮಹಾಲಿಂಗ ಸಾಧನೆಯ
ರೂಢಿಯೊಳು ಭಕ್ತಿಯೆಂದೆಂಬ ಗರುಡಿಯೊಳು ॥ ಪಲ್ಲ ॥

ಸತ್ಯ ಸದಾಚಾರವೆಂಬ ಚಲ್ಲಣವ ತೊಟ್ಟು
ನಿತ್ಯ ನೇಮಗಳೆಂಬ ದಟ್ಟಿಯುಟ್ಟು
ಭಕ್ತಿ ವೈರಾಗ್ಯವೆಂದೆಂಬ ಬಂದಿಕೋಲ್ಪಿಡಿದು
ನಿತ್ಯ ನಿಜತತ್ವವೆಂದೆಂಬ ಸಾಧನೆಯ. ೧

ಗುರುಲಿಂಗ ಜಂಗಮಗೆ ದೀರ್ಘದಂಡವನೊತ್ತಿ
ವರಭಸಿತ ಮುತ್ತುಕೆಯ ಮೈಗೆ ಪೂಸಿ
ಅರಿಷಡುವರ್ಗವನು ಎಳೆದೆಳೆದು ಇಳೆಗೊರಸಿ
ಪರಮ ಸುಜ್ಞಾನವೆಂದೆಂಬ ಕಂಬವನು ಕಟ್ಟಿ. ೨

ಪ್ರಣವ ಪಂಚಾಕ್ಷರಿಯೆಂದೆಂಬ ಸಗ್ರಣವೆತ್ತಿ
ಅಣಿಮಾದಿ ಸಿದ್ಧಿಗಳಬೊಡತಿರುಹಿ
ತ್ರಿಣಯಧ್ಯಾನವೆಂದೆಂಬ ಕೊಡತಿಯ ತೊಡರಿ
ಮಣಿಯ ರುದ್ರಾಕ್ಷಿಯೆಂದೆಂಬ ಗೋಣತರವ ಪೊತ್ತು. ೩

ಅಷ್ಟ ಮದಗಳನೆಲ್ಲ ಅಡಿಮೆಟ್ಟಿ ಕುಪ್ಪಳಿಸಿ
ಇಷ್ಟಲಿಂಗವ ಕರದಿ ಪಿಡಿದು ಜಳ್ಳಿಸುತ
ದೃಷ್ಟಿ ಕರಣಾದಿಗಳ ಕೈವಶಮಾಡಿಕೊಂಡು
ತುಟ್ಟತುದಿ ಮೊದಲನೆಲ್ಲವ ಕಂಡು ನಲಿದು. ೪

ಇಂತಪ್ಪ ಸಾಧನೆಯು ಮಾಡುತಿಹ ಮಹಿಮಗ-
ನಂತ ಜನ್ಮದಿನಾಳಿನಾಳಾಗಿ
ಚಿಂತೆಯಿನ್ನೇಕೋ ಗುರು ಶಾಂತೇಶ್ವರ ಎ-
ನ್ನಂತರಂಗವ ಕಂಡು ನೆಲಸಿ ನಿಜವಾದಬಳಿಕ.*- ೫

● ●

---

* ಹಸ್ತಪ್ರತಿಗಳನ್ನು ಬಳಸಿಕೊಳ್ಳಲು ಅನುಮತಿಯಿತ್ತ ಅಧ್ಯಯನಪೀಠದ ಮುಖ್ಯಸ್ಥರಾದ ಡಾ. ಎಂ. ಎಸ್. ಸುಂಕಾಪುರ ಅವರಿಗೆ ನಮ್ಮ ಕೃತಜ್ಞತೆಗಳು.

ಜನಪದ ಕವಿಚರಿತೆ

● ಎಂ. ಎಸ್. ಲಠ್ಠೆ

೫೧. ಕೋಲಕುಂದಿ ಬಾಪಣ್ಣ (೧೮೫೩-೧೯೧೭) :

ಕೋಲಕುಂದಿ ಸೇಡಂ ತಾಲೂಕಿನ (ಕಲಬುರ್ಗಿ ಜಿಲ್ಲೆ) ಒಂದು ಹಳ್ಳಿ. ಕವಿಯ ಮೂಲ ಬೀದರ ಜಿಲ್ಲೆ ಆದರೂ ಬಂದು ನೆಲೆಸಿದ್ದು ಈ ಕೋಲಕುಂದಿಯಲ್ಲಿ. ಚಿಕ್ಕಂದಿನಲ್ಲಿಯೆ ತಂದೆ-ತಾಯಿಗಳನ್ನು ಕಳೆದುಕೊಂಡ ಬಾಪಣ್ಣನಿಗೆ ಯಾರೂ ದಿಕ್ಕಿರಲಿಲ್ಲ; ಈತ ಭಿಕ್ಷಾಟನೆಯೊಂದಿಗೆ ಜೀವನ ಸಾಗಿಸುತ್ತಿದ್ದನು. ಈತ ನಿರಕ್ಷರಿ.

ಕೋಲಕುಂದಿಯ ಊರಹೊರಗಿನ ವೀರಭದ್ರದೇವರ ಗುಡಿಯಲ್ಲಿ ವಾಸವಾಡುತ್ತಿದ್ದನು. ಬ್ರಾಹ್ಮಣನಾದ ಈತನಿಗೆ ಭಿಕ್ಷೆ ಬೇಡುವುದು ಹಿಡಿಸಲಿಲ್ಲ. ಆತ್ಮಹತ್ಯೆಗೆ ಪ್ರಯತ್ನಿಸಿ ವೀರಭದ್ರನ ಕೃಪೆಯಿಂದ ಬದುಕುತ್ತಾನೆ, ಜ್ಞಾನೋದಯವಾಗುತ್ತದೆ, ಹಾಡುಹೇಳಲು ಪ್ರಾರಂಭಿಸುತ್ತಾನೆ. ಹಾಡುತ್ತ ಭಿಕ್ಷೆಗೆ ತಿರುಗುತ್ತಿರುತ್ತಾನೆ. ಜನ 'ಹುಚ್ಚ' ಎಂದು ಆಗಾಗ ಕಲ್ಲು ಎಸೆಯುತ್ತಿರುತ್ತಾರೆ. ತಾಳಲಾರದೆ ಒಮ್ಮೆ "ಮರಗಮ್ಮ ದುರಗಮ್ಮ ಪಾರಗೋಳಿಗ್ಯಾಕ ಮರತೆವ್ವ" ಎಂದು ಪದ ಹಾಡಿಬಿಟ್ಟದ್ದರಿಂದ ಆ ಊರಿಗೆ ಕಾಲರಾ ಬಂದು ಮಕ್ಕಳು ಬೇನೆಯಿಂದ ಬಳಲಹತ್ತಿದರಂತೆ. ಆಗ ಈ ಭಿಕ್ಷುಕ ಹೇಳಿದ ಹಾಡನ್ನು ನೆನಪಿಟ್ಟುಕೊಂಡ ಜನ ತಪ್ಪಾಯಿತು ಕ್ಷಮಿಸು ಎಂದು ಬೇಡಿಕೊಂಡರಂತೆ. ಮಕ್ಕಳ ಪರವಾಗಿ "ಮರಗಮ್ಮ ಮರಗಮ್ಮ ಪಾರುಗೋಳಿಗೆಲ್ಲಾ ಬಿಡಮ್ಮ" ಎಂದು ಹಾಡಿದ್ದರಿಂದ ಕಾಲರಾಬೇನೆ ಕಿತ್ತೋಡಿತಂತೆ. ನೂರಾರು ಭಜನಿಹಾಡು ಹೇಳುತ್ತ ಶಿವಾಧೀನನಾದನೆಂದು ತಿಳಿದುಬರುತ್ತದೆ. ಇವನು ಸತ್ತು ಈಗ ೬೫ ವರುಷಗಳಾಗಿರಬೇಕೆಂದೂ ಆಗ ಕನಿಷ್ಠ ೭೦ ವರುಷದವನಿದ್ದನೆಂದೂ ಚಿತಾಪುರದ ಶ್ರೀ ರೇಷ್ಮಿ ಕಲ್ಲಪ್ಪಜ್ಜ ಅವರು ಹೇಳಿದರು. ಕೋಲಕುಂದಿಯ ಷ. ಬ್ರ. ರಾಚೋಟೇಶ್ವರಸ್ವಾಮಿ ಮೂಲಿಮಠ ಅವರಲ್ಲಿ ಬಾಪಣ್ಣನ ಹಾಡುಗಳಿವೆಯೆಂದೂ ತಿಳಿದುಬಂದಿದೆ ಅವುಗಳನ್ನು ಕೊಟ್ಟರೆ ನಮ್ಮ ಜಾನಪದದ ಭಾಗ್ಯ ಹೆಚ್ಚುತ್ತದೆ.

೫೨. ಧಂಗಾಪುರ ಬಸವಣ್ಣೆಪ್ಪ (೧೮೭೦–೧೯೭೦) :

ಆಳಂದತಾಲೂಕಿನ ಧಂಗಾಪುರಗ್ರಾಮದ ಕಬ್ಬಲಗೇರ ಮನೆತನದ ಬಸವಣ್ಣೆಪ್ಪ ಏಳನೆ ತರಗತಿಯ ವರೆಗೆ ಕಲಿತವನು. ಮನೆತನದ ಉದ್ಯೋಗ ಒಕ್ಕಲುತನ. ಜೊತೆಜೊತೆಗೆ ಬಡಿಗತನ, ಕಮ್ಮಾರಿಕೆ ಕಸಬುಗಳನ್ನು ಬಲ್ಲವನು. ಈತನ ಹೆಂಡತಿಯ ಅಣ್ಣ ಭಾಗಣ್ಣ ಬಹಳೇ ಪುಢಾರಿ ಇದ್ದನಂತೆ. ಅವನೆಂದರೆ ಜನ ಹೆದರುತಿದ್ದುದರಿಂದ ಕವಿ ಬಸವಣ್ಣೆಪ್ಪ ತನ್ನ ಹಾಡುಗಳಲ್ಲಿ 'ಭಾಗಣ್ಣ'ನ ಹೆಸರನ್ನು ಸೇರಿಸಿದ್ದಾನೆ. 'ಭಾಗಣ್ಣ' ಎಂದು ಅಂಕಿತವಿದ್ದ ಹಾಡುಗಳು ಈ ಬಸವಣ್ಣೆಪ್ಪ ನಾಟಕಾರನ ಹಾಡುಗಳಾಗಿವೆ.

ಬಸವಣ್ಣೆಪ್ಪ ಬದುಕಿದ್ದು ನೂರು ವರುಷ. ೬೭ ವರುಷದ ಹಿಂದೆ ಸ್ವರ್ಗವಾಸಿಯಾದ ಈತನ ತಂದೆ ಸಿದ್ದಪ್ಪನೂ ಪ್ರಸಿದ್ಧ ಹಾಡುಗಾರನಿದ್ದನಂತೆ. ಹಾಡು ರಚಿಸುವ ಕಲೆಯನ್ನೂ ತನ್ನ ತಂದೆಯಿಂದ ಕಲಿತುಕೊಂಡಿದ್ದನು. ಡಪ್ಪುಹಿಡಿದು ನಾಗೇಶಿ ಹಾಡು ಹೇಳುತ್ತ ನಾಡಿನ ತುಂಬೆಲ್ಲ ಸಂಚರಿಸಿದ್ದವುದ್ದು ತಿಳಿದುಬರುತ್ತದೆ. ಈತನ ಮಗನೂ ಇಂದು ಕವಿ, ಹಾಡುಗಾರ ಎನಿಸಿದ್ದಾನೆ.

ಬಸವಣ್ಣೆಪ್ಪ ಒಂದು ಸಣ್ಣಾಟ 'ಉಪ್ಪಾದ್ಯಾನ ಸಂಗೀತ' ಎಂಬುದನ್ನು ಬರೆದಿದ್ದಾನೆ. ನೂರಾರು ಮೋಹರಮ್ ಪದ, ಹಂತಿಹಾಡು, ಭಜನಿ ಪದ ರಚಿಸಿದ್ದಾನೆ. ಶರಣಬಸವೇಶ್ವರರ ಕುರಿತಾದ ಲಾವಣಿಯೂ ಇದೆ. ಲಚಮಣ್ಣ ಎನ್ನುವ ಕಲಾಕಾರ ಈತನಿಗೆ ಸಾತಿ ಕೊಡುತ್ತಿದ್ದನಂತೆ.

"ನಿಜಾಮ ಇಲಾಕಾ ಕಲಬುರ್ಗಿ ತಾಲೂಕಾ।
ದೂರತನಕಾ ಬೆಳಕಾ।
ಮುಂಬಯಿ ಮದ್ರಾಸ ನಂದನತನ।
ಹಾಯ್ ಹಾಯ್. ಅಂತಾದರಿ।
ಶಾಹರ ಹುಮನಾಬಾದಿ ಧರಿ ಕಲ್ಯಾಣ"

ಕವಿ ಬರೆದ ಲಾವಣಿಗಳಲ್ಲೆಲ್ಲಾ 'ರಾಣಜಿಪೀರ'ನ ಲಾವಣಿ ಪ್ರಸಿದ್ಧಿ ಪಡೆದದ್ದಾಗಿದೆ.

"ಸತ್ಯವಂತರ ಕಥಿ ಸಂತೋಷ ಅದ ಇದು।
ಸುತ್ತಮುತ್ತ ಸುಮ್ಮ ಕುಂತು।
ಚಿತ್ತ ಇಟ್ಟು ಕೇಳಬೇಕ್ರಿ ಶರಣರ ಚರಿತ್ರ।
ಒಂದು ಮುಸಲ್ಮಾನ ಮುಂದಿ ಒಂದು ಸಮಾನರೆಂದು ತಿಳಿ।
ಭೇದ ಇಲ್ಲ ಒಂದೇ ಭಾವ ಕೂಡಿ ಆಗಿದಾರು ಮಿತ್ರ।
ರಾಣಜಿಪೀರ ದೇವರ ಹಾರ ಸೇವಾ ಮಾಡಿ ಆಗರಿ ಪವಿತ್ರ ಗಿ॥ ॥೧॥

ಧಂಗಾಪುರ ಊರಭರತಿ ದೇವರ ಮಾರುತಿ ।
ಭಾಗಣ್ಣ ಕವಿ ಗೀ ಪದ ಮಾಡಿಕೊಟ್ಟ ಫ್ರೋಟೋ ಹಚ್ಚಿದಂಗ ಚಿತ್ರ ।"

೫೩. ಕಲಬುರ್ಗಿಯ ಅಂಬಾದಾಸ (೧೮೭೭ ೧೯೩೨) :

ವಂಶಪಾರಂಪರ್ಯವಾಗಿ ಜನಪದಹಾಡು ಹಾಡುತ್ತ ಬಂದ ಮನೆತನ ಅಂಬಾದಾಸನದು. ಈತನ ತಂದೆ ವಿಠೋಬನೂ ಕೂಡ ಪ್ರಸಿದ್ಧ ಹಾಡುಗಾರ, ಕವಿ. ಹೆಣ್ಣು ಹೆಚ್ಚು ಎಂದು ಸಾರುವ 'ನಾಗೇಶಿ' ಪಂಗಡ ಇವರದು.

ಅಂಬಾದಾಸ ತೀರಿಕೊಂಡು ಇಂದಿಗೆ ಸುಮಾರು ೪೫ ವರುಷಗಳಾಗಿರಬೇಕು. ಆಗ ಈತನಿಗೆ ೫೫ ವರುಷಗಳಿರಬೇಕೆಂದು ನೋಡಿದವರು ಹೇಳುವ ಅಂದಾಜು. ದೇಗಾಯಿ ಹಜರತ ಕವಿಯ ಜೊತೆ ಈ ಕವಿ ತೋಡಿ ಕಟ್ಟುತ್ತಿದ್ದನಂತೆ. ತನ್ನ ಹಾಡುಗಳಲ್ಲಿ ಅಂಬಾದಾಸ ಕಲಬುರ್ಗಿ ಶರಣಬಸವೇಶ್ವರ ಮತ್ತು ಬಂದೇನವಾಜ ಇಬ್ಬರನ್ನೂ ಸ್ಮರಿಸಿದ್ದಾನೆ. ಈ ಇಬ್ಬರು ಮಹಾನುಭಾವರ ಮೇಲೂ ಲಾವಣಿ, ಗೀಗೀ, ಭಜನೆ, ರಿವಾಯತ ಮೊದಲಾದ ಸುಂದರ ಹಾಡು ರಚಿಸಿದ್ದಾನೆ. ಈತನ 'ಕಲ್ಗಿ' ಇಲ್ಲದ ಹೊರತು ಬಂದೇನವಾಜನ ಗಂಧ ನಡೆಯುವುದಿಲ್ಲ. ಈಗಲೂ ಈತನ ಮಗ ವಿಠ್ಠಲ ಪ್ರತಿವರುಷವೂ ಜಾತ್ರೆಯ ಕಾಲಕ್ಕೆ ಹಾಡು ಹೇಳಿದಾಗಲೇ ಉತ್ಸವ ಪ್ರಾರಂಭ ವಾಗುತ್ತದೆ. ಜಾಣನೂ ಪ್ರತಿಭಾವಂತನೂ ಆಗಿದ್ದ ಅಂಬಾದಾಸನ ಹೆಸರು ಹಿಂದೂ, ಮುಸಲ್ಮಾನರೆಲ್ಲರಿಗೂ ಅಚ್ಚುಮೆಚ್ಚು. ಮಗ ವಿಠ್ಠಲನೂ ಇಂದು ಪ್ರಸಿದ್ಧ ಹಾಡುಗಾರ. ಅದರಂತೆ ಕವಿಯೂ ಇದ್ದಾನೆ. ಕಲಬುರ್ಗಿಯ ಒಕ್ಕಲಗೇರಿ ಯಲ್ಲಿ ಮನೆಮಾಡಿಕೊಂಡಿದ್ದ ವಿಠ್ಠಲನು ಇಂದು ಸೊಲ್ಲಾಪುರದಲ್ಲಿ ವಾಸಮಾಡಿದ್ದಾನೆ. ಮಹಾರಾಷ್ಟ್ರದಲ್ಲೂ ಈತ ಹಾಡು ಹೇಳುತ್ತಾನೆ.

"ದೇಶದೊಳಗ ಲೇಸ ಜಿಲ್ಲಾ ಗುಲ್ಬರ್ಗಾ
ಕಲಬುರ್ಗೆಯಲ್ಲೆ ನೆನದ ಬಂದೇನವಾಜ ದರ್ಗಾ
. . . .
. . . .
ದೇಶದೊಳಗ ಲೇಸವಾದ ಕಲಬುರಗಿ ಜಾಗಾ
ಗಂಧದ ಮುಂದ ಅಂಬಾದಾಸನ ಕಲ್ಗಿ ಮೆರೆಯೂನು
ಇಂದೀಗ ಅಲ್ಲಿ ಬಂದೆನವಾಜನ ಮುಂದ
ಅಂಬಾದಾಸ ಪದಾಮಾಡಿ ಇಟ್ಟ".

೫೪. ಕಲಬುರ್ಗಿಯ ಚೆನ್ನಬಸವೇಶ್ವರಸ್ವಾಮಿ (೧೮೮೪ ೧೯೪೦) :

ಕಲಬುರ್ಗಿಯ ಹಾರೂಗೇರಿ (ಬ್ರಹ್ಮಪುರ) ಯಲ್ಲಿ ವಾಸಿಸುತ್ತಿದ್ದ ಚೆನ್ನಬಸವೇಶ್ವರನು ಮೂಲತ ಹಿರಾಪುರದವನು ತಂದೆ ಪರ್ವತೇಶ್ವರಸ್ವಾಮಿ

ನಂದಿಮಠರಿಗೆ ೧೮೮೪ರಲ್ಲಿ ಹುಟ್ಟಿದ ಚೆನ್ನಬಸಯ್ಯನೇ ಚೆನ್ನಬಸವೇಶ್ವರ ಎಂದು ಪ್ರಸಿದ್ಧಿ ಪಡೆದವನು. ಕಲಿತದ್ದು ಸಾಸಿವೆಯಷ್ಟು, ಕೃತಿ ರಚಿಸಿದ್ದು ಸಾಗರದ ಹಾಗೆ. ಹುಟ್ಟು ಕವಿಯಾದ ಈತನು ಅಕ್ಷರ ಕಲಿತದ್ದು ಒಂದು ಪವಾಡವೇ ಎನ್ನಬೇಕು. ಹರಸೂರ ಗ್ರಾಮದ ಪರ್ವತಮಠದ ಸ್ವಾಮಿಗಳಲ್ಲಿ ವಿದ್ಯಾಭ್ಯಾಸ ಮಾಡಿದ್ದು ತಿಳಿದು ಬರುತ್ತದೆ. ನಾಲ್ಕು ತಿಂಗಳಲ್ಲಿ ಕನ್ನಡವನ್ನೂ ಐದು ತಿಂಗಳಲ್ಲಿ ಮರಾಠಿಯನ್ನೂ ಕಲಿತು ಖಾಸಗಿ ಶಾಲೆಯ ಶಿಕ್ಷಕನಾಗಿಯೂ ಕಾರ್ಯನಿರ್ವಹಿಸಿದ್ದನಂತೆ. ಕೆಲಕಾಲ ಅಂಗಡಿಯೊಂದರಲ್ಲಿ ಗುಮಾಸ್ತನಾಗಿ, ಆಮೇಲೆ ಶರಣಬಸವೇಶ್ವರ ಸಂಸ್ಥಾನದಲ್ಲಿ ಸೇವೆ ಸಲ್ಲಿಸಿದನು. ಶರಣಬಸವೇಶ್ವರರ ಹೆಸರನ್ನೇ ತನ್ನ ಜನಪದ ಹಾಡುಗಳಲ್ಲಿ (ಶರಣ) ಮುದ್ರಿಕೆಯಾಗಿ ಬಳಸಿಕೊಂಡಿದ್ದಾನೆ.

ಜನಪದಸಾಹಿತ್ಯಕ್ಕೆ ಸಂಬಂಧಿಸಿದ ಹೋಳೀ ಹಾಡು, ಸೋಬಾನ ಪದ, ಬಯಲಾಟ, ಭಜನಿ ಹಾಡುಗಳನ್ನು ರಚಿಸಿದ್ದಾನೆ. 'ಶ್ರೀ ಶರಣಬಸವೇಶ್ವರ ವಿಜಯ' ಎಂಬ ಶರಣರ ಚರಿತ್ರೆಯೂ ಇವನಿಂದಲೇ ಬರೆಯಲ್ಪಟ್ಟಿದೆ. ಶಂಭಾಸುರ, ಕಾರ್ತವೀರ್ಯಾರ್ಜುನ ಮೊದಲಾದ ದೊಡ್ಡಾಟಗಳನ್ನೂ ಗಣಿತಚಮತ್ಕಾರಚಂದ್ರಿಕೆ, ಕೀರ್ತನ ತರಂಗಿಣಿ ಮೊದಲಾದ ಕೃತಿಗಳನ್ನೂ ರಚಿಸಿ ಕೀರ್ತಿಶೇಷನಾಗಿದ್ದಾನೆ. ೮೩ ವರುಷಗಳ ತುಂಬುಜೀವನ ಸಾಗಿಸಿ ೧೯೬೭ರಲ್ಲಿ ಲಿಂಗೈಕ್ಯನಾದನು; ಕಾಯಕ ಧೀರನೂ, ಪೂಜಾನಿಷ್ಠನೂ ಆದ ಕವಿ ಸತ್ಯಶೀಲನಾಗಿದ್ದನು.

I ಕುಂಕುಮ ಹಚ್ಚುವ ಪದ :

ಕುಂಕುಮ ಹಚ್ಚುವ ಬನ್ನಿರೆ। ಶಂಕರನ ಸತಿಗೆ ॥
ಪಂಕಜಮುಖಿಯರು ಶಂಕರಭರಣದ ರಾಗ ಮಾಡುತೆ ಪಾಡಿ ॥ ಪಲ್ಲ ॥

ಪನ್ನಗವೇಣಿಯರು ಚಿನ್ನದಾಭರಣಿಟ್ಟು।
ಸನ್ನಯಿಂದಲಿ ಬಂದು ಕನ್ಯ ಪಾರ್ವತಿಯಳಿಗೆ ॥ ೧ ॥

ಪಟ್ಟೆ ಪೀತಾಂಬರುಡಿಸಿ ಪಟ್ಟೆ ಕುಪ್ಪಸ ತೊಡಿಸಿ।
ಕಟ್ಟುತ ದಂಡಿ ತಲೆಗೆ ಮುಟ್ಟಿ ಹಸ್ತಗಳಿಂದ ॥ ೨ ॥

ಹತ್ತು ವರುಷದ ಗೌರಿ ಉತ್ತಮ ಶಿವನಿಗೆ।
ಸತ್ಯದಿ ಕೊಟ್ಟಾರೆಂದು ಒತ್ತಿ ಹೇಳುವ ಫಣೆಗೆ ॥ ೩ ॥

ಅಕ್ಕರದಿಂದ ಒಂದು ಸಕ್ಕರಿ ವೀಳ್ಯ ಕೊಂಡು।
ಚೊಕ್ಕ ಶ್ರೀ ಶರಣನ ತಕ್ಕ ಮಹಾದೇವಿಗೆ ॥ ೪ ॥

II ಐರಣಿ ತರುವ ಪದ :

ಪಾತಿವ್ರತೆಯರ್ಕೈರಾಣಿ ತರುವರೀಗ ॥ ಪಲ್ಲ ॥
ಕುಂಭಕಾರನ ಕುಂಭ ತರಲಿಕ್ಕಾರಂಭ ಲೋಪಮುದ್ರಾ ।
ಸಂಭ್ರಮದಿಂದಲ್ಲಿ ರಂಭೆ ಪ್ರತಿಭಾವತಿ ।
ಅಂಬುಜಾಕ್ಷಿಯರನುಸೂಯ ಸುಮತಿಯರು ॥ ೧ ॥

ಮಂದಹಾಸ್ಯದ ಸುಂದರ ಸುಮುಖಿ ಚಂದ್ರವದನ ಪುಷ್ಪವೇಣಿ ।
ಬಂಧುರವಚನ ಪ್ರಮಾಣಿ ಸಾವಿತ್ರಿಯು ।
ರುಂಧತಿ ಸುರಭಿಯರೊಂದುಗೂಡುತೀಗ ॥ ೨ ॥

ಜಾತಪತಿವ್ರತ ಖ್ಯಾತಿಯ ಸ್ತ್ರೀಯರು ಆತುರದಿಂ ಪೋಗುತಲಿ ।
ರೀತಿಯಿಂದುಡುಗೊರಿ ಸತಿಯಳಿಗೈಯುತೆ ।
ತಾತ ಶ್ರೀ ಶರಣನ ಪ್ರೀತಿಲೆ ಪಾಡುತ ॥ ೩ ॥

೫೫. ಕಾರಭಾಸಗಿಯ ರೇವಣಸಿದ್ಧಯ್ಯ ಸ್ವಾಮಿ (೧೮೯೦-೧೯೭೩) :

ಕಲಬುರ್ಗಿಯ ಅಫಜಲಪುರ ತಾಲೂಕಿನ ಕಾರಭಾಸಗಿಗ್ರಾಮದ ಮರಿಸ್ವಾಮಿ ಮತ್ತು ಗಂಗಮ್ಮ ದಂಪತಿಗಳ ಮಗ ಈ ರೇವಣಸಿದ್ಧಯ್ಯ ಚಿಕ್ಕಂದಿನಲ್ಲಿಯೆ ಹಾಡುವ ಕಲೆ ರೂಢಿಸಿಕೊಂಡವನು. ಕಲಿತದ್ದು ೪ನೇ ಈಯತ್ತೆಯ ವರೆಗೆ. ಮೋಡಿ. ಗಾಂವಟಿ ಶಾಲೆಯಲ್ಲಿ ಶಿಕ್ಷಕನಾಗಿ ಸೇವೆಸಲ್ಲಿಸಿದ್ದಾನೆ. ಸಿನ್ನೂರ ಗುರುಪಾದಯ್ಯ ಸ್ವಾಮಿಗಳ ಕೃಪಾಛತ್ರದಲ್ಲಿ ಬೆಳೆದ ಇವನು ಹಾಡು ರಚಿಸುವ ಕಲೆಯನ್ನು ಕರಗತಮಾಡಿಕೊಂಡನು.

ಮಂಗಳಾರತಿ, ಕಡ್ತಿಬತ್ತಿ, ಭಜನೆ ಮೊದಲಾದ ಹಾಡುಗಳನ್ನು ರಚಿಸಿದ್ದಾನೆ. ಹಲವಾರು ನಾಮಾವಳಿಗಳನ್ನೂ ರಚಿಸಿದ್ದಾನೆ. ಬಯಲಾಟಗಳನ್ನೂ ರಚಿಸಿದ್ದಾನೆ. ಬಾಣಾಸುರ, ಭೀಮವಿಲಾಸ, ಹರಿಶ್ಚಂದ್ರ ಕಥೆ, ವೀರ ಅಭಿಮನ್ಯು, ಜಗಜ್ಯೋತಿ ಬಸವೇಶ್ವರ, ಕನಕಾಂಗಿ ಕಲ್ಯಾಣ, ಶಿವಜಲಂಧರ ಮೊದಲಾದವು ಇವನು ರಚಿಸಿದ ಪ್ರಮುಖ ಬಯಲಾಟಗಳು.

ಭಾಸಗಿಯಲ್ಲಿ ಹುಟ್ಟಿದ ಕವಿ ಆಮೇಲೆ ಇದ್ದದ್ದು ಮದರಾ(K)ದಲ್ಲಿ. ಮದರಾದಲ್ಲಿಯೇ ಇವನು ಕಾವ್ಯ ರಚಿಸಿದ್ದು. ಆಗ ಒಕ್ಕಲುತನ ಮಾಡುತ್ತಿದ್ದನು. ಹೆಚ್ಚಾಗಿ ಶಿಷ್ಯರ ಸೇವೆಗಾಗಿಯೆ ನಿಂತ ರೇವಣಸಿದ್ಧಯ್ಯನಿಗೆ ಪಂಚಾಂಗ, ಭವಿಷ್ಯ ಹೇಳುವದರಲ್ಲೂ ಆಸಕ್ತಿ. ಕುದುರೆ ಓಟದಲ್ಲಂತೂ ಎತ್ತಿದ ಕೈ. ಆಯುರ್ವೇದ ಔಷಧ ಜ್ಞಾನವೂ ಇವನಿಗಿತ್ತು. ೮೦ ವರುಷಗಳವರೆಗೆ ಬಾಳಿದ ಇವನ ಜೀವನ ತುಂಬು ಜೀವನವಾಗಿತ್ತು. ಬಯಲಾಟಗಳಲ್ಲಿ ಸ್ವತಃ ವೇಷವನ್ನು ಹಾಕುತ್ತಿದ್ದನು. ಅಲ್ಲದೆ ಹಿಮ್ಮೇಳದಲ್ಲಿ ಭಾಗವಹಿಸುತ್ತಿದ್ದನು.

ಕಡ್ಡಿಬತ್ತಿಪದ :

ಕಡ್ಡಿಬತ್ತಿಯ ಬೆಳಗಿರೆ ನೀರೆ, ಶ್ರೀ ಮಹಾದೇವಗೆ ।
ಕಡ್ಡಿಬತ್ತಿಯ ಬೆಳಗಿರೆ ನೀರೆ ॥ ಅ. ಪ. ।
ಕಡ್ಡಿಬತ್ತಿಯ ಬೆಳಗು ಒನ್ನಿರಿ ಗುಡ್ಡದೊಡೆಯನ ।
ಪಾದದಡಿಯಲಿ ಧಡ್ಡಗುಣಗಳ ಬಿಟ್ಟು ನಾವು ।
ದೊಡ್ಡ ಗುರುವಿನ ಕರುಣದಿಂದ ॥ಪಲ್ಲ॥

ಹೀನಮನ ತೃಣಕಡ್ಡಿಯನು ಮಾಡಿ ।
ಧನಪದ ತ್ರೈಲೋಕೊತ್ತಿ ಮುಳಿಗ್ಯಾಡಿ ಹಸ್ತದೋಳ್ಹಿಡಿ ।
ಕಳೆದು ಕತ್ತಲೆ ಅಳಿದು ಹೋಗುವ ಬೆಳಗು ಜ್ಞಾನದಿ ।
ಜ್ಯೋತಿ ತಲುಪಿಸಿ ಬಳಲುದ್ಯಾತಕೆ ! ತಿಳಕೋ ।
ಗುರುವಿನ ಬಳಿಯು ನಿನಗಿದು ಹೊಳಪು ಕಾಣದು ॥೧॥

ಸತ್ತು ಚಿತ್ತಾನಂದ ರೂಪನಿಗೆ ಆ ಮಹಾತ್ಮಗೆ
ನಿತ್ಯ ನಿರಂಜನ ಮೂರ್ತಿಗೆ ಪರಮಾತ್ಮಗೆ
ಮಿಥ್ಯವಾದಿ ದೇಹಸಂಸಾರ ಹತ್ತಿ ಬೆನ್ನು ಬಿಡದು
ಎಮಗಿದು ಎತ್ತ ನೋಡಿದರತ್ತ ಕತ್ತಲಿ
ಒತ್ತಿ ಹಾಕುವ ಜ್ಯೋತಿಲಿಂದಲಿ ॥೨॥

ಪೊಡವಿಯೊಳು ಘುಡಿ ಕಾರಭಾಸಿಗಿ ನದಿ ಧಡದಿ ।
ಮೆರೆಯುವ ಒಡೆಯ ಕಾಡಸಿದ್ಧ ಶಿವಯೋಗಿ ।
ದೃಢದಿಂದೆ ಪೋಗಿ ವರವ ಬೇಡುವೆ ಅರವಿನೊಳು ಘನ ।
ತರದ ಜ್ಯೋತಿ ಪ್ರಕಾಶದೊಳು ಮನ ಮುಟ್ಟಿ ಬೆಳಗುವೆ ।
ಧಿಟ್ಟತನದಲಿ ಕೆಟ್ಟಗುಣಗಳ ಸುಟ್ಟುಬಿಡುವ ॥೩॥

೫೬. ಅಮ್ಮಾಪುರದ ಹನ್ಮ (೧೮೯೦–೧೯೪೬) :

ಸುರಪುರ ತಾಲೂಕಿನ ಅಮ್ಮಾಪುರಗ್ರಾಮದ ಹನುಮಂತಪ್ಪ ಆ ಭಾಗದ ಹಲವಾರು ಹಾಡುಗಾರರಿಗೆ ಗುರುವಾಗಿದ್ದನು. ಸ್ವತಃ ಕವಿಯೂ ಇದ್ದ. ಟಣಕೆದಾರ ಮನೆತನದ ಈತ ಬೇಡರವನು, ಒಕ್ಕಲುತನ ಮಾಡುತ್ತಿದ್ದನು. ಕನ್ನಡ ನಾಲ್ಕನೆಯ ತರಗತಿಯವರೆಗೆ ಅಭ್ಯಾಸವಾಗಿತ್ತು.

ಇದೇ ಊರಿನ ಪೀರಣ್ಣ ಕವಿ ಮತ್ತು ಹಾಡುಗಾರ ಬಸಪ್ಪ ಶೆಟ್ಟರು ಈತನ ಸಮಕಾಲೀನರಾಗಿದ್ದರು. ಹನುಮಂತ ಮತ್ತು ಬಸಪ್ಪ ಸುಪ್ರಸಿದ್ಧ ಹಾಡುಗಾರ

ರಾಗಿದ್ದರು. ವೀರಣ್ಣ ಹನುಮಂತನ ಸ್ನೇಹಕ್ಕೆ ಮಾರುಹೋಗಿ ತಾನು ರಚಿಸಿದ ಹಾಡುಗಳನ್ನು ಹನುಮನ ಹೆಸರಿನಲ್ಲಿ ಹಾಡುತ್ತಿದ್ದನು. ಹಾಗೆಯೇ ಹನುಮನಾದರೂ ತಾನು ರಚಿಸಿದ ಹಾಡುಗಳನ್ನು ವೀರಣ್ಣ ರಚಿಸಿದವು ಎಂದು ಸಾರುತ್ತಿದ್ದನು. ವೀರಣ್ಣ ಅಕ್ಕಸಾಲಿಗನಾಗಿದ್ದನು. 'ಸರ್ವೋತ್ತಮ' ಎಂಬ ಮುದ್ರಿಕೆಯೂ ಇವರ ಹಾಡುಗಳಲ್ಲಿ ಬರುತ್ತದೆ. ಅವು ಹನುಮಂತ ರಚಿಸಿದ ಹಾಡುಗಳೆಂದೂ ಹೇಳುತ್ತಾರೆ. ೭೦ ವರುಷಗಳ ಹಿಂದೆ ಹನುಮಂತಪ್ಪ ತೀರಿಕೊಂಡನು. ಆಗ ಅವನಿಗೆ ೫೫ ವರುಷಗಳಿದ್ದವಂತೆ. ಗಂಡು ಹೆಚ್ಚೆಂದು ಹೇಳುವ ಗೀಗೀ ಹಾಡು, ಲಾವಣಿ, ಭಜನಿ, ಹಂತಿ ಹಾಡು ಹೀಗೆ ನೂರಾರು ಜನಪದ ಹಾಡು ರಚಿಸಿದ್ದು ತಿಳಿದುಬರುತ್ತದೆ. ಹನ್ಮ ವೀರಣ್ಣರ ಹಾಡುಗಳಲ್ಲಿ ಅಮ್ಮಾಪುರದ ಬಲಭೀಮನ ಸ್ಮರಣೆಯೂ ಇದೆ.

"ಸಭೆ ಕುಂತ ಕೇಳರಿ ಗಪ್ಪ ಆಯಿತೊ ನೆಪ್ಪ ।
ಚಲೋ ಸಂದರ್ಭ ತಗದಿನೊಂದ ।
ಚಿತ್ತಿಟ್ಟು ಕೇಳರಿ ಬಡವನ ಮಾತೊಂದ ।
ಏನು ಸತ್ಯವಂತ ಶ್ರೀ ಇದ್ದನು ಹರಿಶ್ಚಂದ್ರ ॥

... .
....
ಸುರಪುರ ತಾಲೂಕ ಪೈಕಿಗಿ ।
ಅಮ್ಮಾಪುರ ಇರುವದು ಮಿಗಿಲಾಗಿ ।
ಬಲಭೀಮನ ಪಾದಕ ಎರಗಿ ।
ಹನ್ಮ ಬಸನ ಹಾಡ್ವದು ಜೋಡಾಗಿ ।
ತಿಳಿದ್ಹೇಳತಾರ ಸಭಾದವರಿಗಿ ।
ವಸ್ತಾದರ ಕೃಪಾ ಅವರಿಗಿ ।
ಸರಿಗಾಣೆ ಸರ್ವೋತ್ತಮನ ಕವಿಗಿ
ಸವಿಬೆಲ್ಲ ಸರ್ವ ಶಾಣೇರಿಗಿ ।"

ಇವರ 'ಮುಲತಾಯಿ' ಹಾಡು ಬಹಳೇ ಪ್ರಸಿದ್ಧಿ ಪಡೆದ ಹಾಡಾಗಿದೆ. ಸ್ತ್ರೀಯರ ಹಗರಣವಂತೂ ಮನಬಿಚ್ಚಿ ಹಾಡಿದ್ದಾರೆ.

"ಗಂಡಗ ಹತ್ತಿತು ತನ್ನ ಹೆಂಡತಿ ಮಾಡ್ತಾಳಂತ ಹಾವರ ।
ತಿಳಿಯಬೇಕಂದ ಮಜಕೂರ ।
ಬುತ್ತಿ ಕಟ್ಟ ಬಬಲಾದಿಗಿ ನಾನು ಹೋಗಾವಾದ ಅವಸರ । ಜೀ ಜೀ

ಊಂಗ್ಹೋಂವ ಸುದ್ದಿ ಕೇಳಿಕೊಂಡು ತಳವಾರ।
ಸಂಜಿಲಿ ಆದ ತಯಾರ।
ಹೋಗಿ ಕುಂತಿದ್ದ ಬಂದು ಜರ।
ಕುಂಡಿ ಇಲ್ಲದ ಕುಲಕರ್ಣಿ ಕೂಗುವ ದನಿ ಕೇಳಿದ ತಳವಾರ। ॥ಜೀ ಜೀ॥

ಅಂಜಿ ಹೇತ ಉಚ್ಚಿ ಪಂಜಿಯು ತುಂಬ
ತೋಯ್ದು ಹೋಯ್ತು ಧೋತರ।
ಪಾರ ಮಾಡ ಹ್ಯಾಗರ ॥ಜೀ ಜೀ॥"

೫೭. ಜಂಬಗಿ ಶರಣ (೧೯೦೬–) :

ಕಲಬುರ್ಗಿಜಿಲ್ಲೆಯ ಜಂಬಗಿಊರಿನ ಹರಿಜನ ಮನೆತನದ ಶರಣಪ್ಪ ಈ ಭಾಗದ ಶ್ರೇಷ್ಠ ಜನಪದಕವಿ. ಶಿವಮ್ಮ ಮತ್ತು ಶಿವಪ್ಪ ದಂಪತಿಗಳಿಗೆ ಮಗನಾಗಿ ಶರಣಪ್ಪನು ೧೯೦೬ ರಲ್ಲಿ ಹುಟ್ಟಿದನು. ತೀರಬಡತನದಲ್ಲಿ ಬೆಳೆದುಬಂದ ಶರಣಪ್ಪನಿಗೆ ಹೆಚ್ಚಿನ ವಿದ್ಯಾಭ್ಯಾಸವಿಲ್ಲ. ಎಮ್ಮಿ ಮಣಕಾ ಕಾಯುತ್ತ ಮೊಟ್ಟೆ ಹೊಡೆಯುತ್ತ ಕನ್ನಡ ಓದಲು ಕಲಿತನಂತೆ. ಅದೇ ಊರ ತಿಪ್ಪಣ್ಣ ಈತನಿಗೆ ಹಾಡು ಹೇಳಿಕೊಟ್ಟ ಗುರು. ಗುರು ತಿಪ್ಪಣ್ಣನೂ ಜನಪದಕವಿಯಾಗಿ ಕಂಗೊಳಿಸಿದ್ದಾನೆ. ಓದು ಬರಹ ಬಾರದಿದ್ದರೂ ತಾಳ, ಲಯ, ಗತ್ತುಗಳನ್ನು ಕರಗತಮಾಡಿಕೊಂಡಿದ್ದ ತಿಪ್ಪಣ್ಣನೂ ಹಲವಾರು ಲಾವಣಿ, ಭಜನಿ ಹಾಗೂ ಹಂತಿಯ ಹಾಡುಗಳನ್ನು ರಚಿಸಿದ್ದಾನೆ. ಈತನ ಮಾರ್ಗದರ್ಶನದಲ್ಲಿ ಶರಣಪ್ಪ ಹಾಡು ಹಾಡಲು ಅದರಂತೆ ಸ್ವತಃ ಹಾಡು ರಚಿಸಲು ಕಲಿತದ್ದು. ಲಿಪಿಯ ಮೇಲಿಂದ ಕನ್ನಡದ ಜೊತೆಗೆ ಮೋಡಿಯನ್ನೂ ಕೂಡ ಓದಲು ಬರೆಯಲು ಕಲಿತಿದ್ದಾನೆ.

ಶರಣಪ್ಪನಿಗೆ ತನ್ನ ೧೬ ನೇ ವಯಸ್ಸಿನಲ್ಲಿ ಲಗ್ನವಾದ ನೆನಪು. ಹಲವಾರು ಮಕ್ಕಳ ತಂದೆಯಾದರೂ ಶರಣಪ್ಪನ ಜೀವನ ಸಾತ್ವಿಕಜೀವನ. ಜಾಲವಾದಿಯ 'ಭೀಮಾಶಂಕರ' ಎಂಬ ಗುರುಗಳಿಂದ ಲಿಂಗದೀಕ್ಷೆ ಪಡೆದ ಶರಣಪ್ಪನು ಲಿಂಗದಲ್ಲಿ ನಿಷ್ಠೆ, ವೀರಶೈವ ಧರ್ಮದಂತೆ ಆಚರಣೆ ಇಟ್ಟುಕೊಂಡು ಬಂದಿದ್ದಾನೆ. ಡಾ. ಅಂಬೇಡಕರ, ಮಹಾತ್ಮಾಗಾಂಧೀಜಿ, ಬಸವೇಶ್ವರ, ಶರಣಬಸವೇಶ್ವರರೆಂದರೆ ಪಂಚಪ್ರಾಣ. ಇವರೆಲ್ಲರ ತತ್ತ್ವಗಳನ್ನು, ಚರಿತ್ರೆಗಳನ್ನು ಜನಪದಹಾಡುಗಳಲ್ಲಿ ಹೊಸೆದು ಜನರನ್ನು ಸುಸಂಸ್ಕೃತರನ್ನಾಗಿ ಮಾಡುವಲ್ಲಿ ವಿಶೇಷ ಪರಿಶ್ರಮವಹಿಸಿದ್ದಾನೆ. ಸೋಬಾನ, ತೊಟ್ಟಿಲ ಹಾಡು, ಬೀಗರ ಹಾಡು, ಲಾವಣಿ, ಜೀಸು ಕುಟ್ಟೊ ಹಾಡು, ಭಜನಿಹಾಡುಗಳನ್ನು ಅಲ್ಲದೆ ದಾನಶೂರ, ಮಧುರಾಜ ಎಂಬ ಎರಡು ಡಪ್ಪಿನಾಟಗಳನ್ನೂ ರಚಿಸಿದ್ದಾನೆ. ಹೆಣ್ಣು ಹೆಚ್ಚು ಎಂದು ಸಾರುವ ನಾಗೇಶಿ ಹಾಡುಗಳನ್ನು ರಚಿಸಿದ್ದಾನೆ.

ಕವಿಯ ಉದ್ಯೋಗ-ಕೂಲಿ; ಹಾಡು ಹೇಳುತ್ತ ಊರೂರು ಅಡ್ಡಾಡುತ್ತಾನೆ. ಗ್ವಾಡಿ ಕಟ್ಟುವ ಕೆಲಸ, ಒಡಿಗತನ, ಒಕ್ಕಲುತನ ಮೊದಲಾದ ಉದ್ಯೋಗಗಳನ್ನು ತನ್ನ ವಯಸ್ಸಿನಲ್ಲಿ ಮನಮುಟ್ಟಿ ಮಾಡಿದವನು. 'ಭೀಮಾಶಂಕರ' ಎಂಬುದು ಕವಿಯ ಹಾಡುಗಳಲ್ಲಿ ಬರುವ ಅಂಕಿತವಾಗಿದೆ. ತನ್ನ ಗುರುವಿನ ಸ್ಮರಣೆಗೆ ಸಂಕೇತ ಈ 'ಭೀಮಾಶಂಕರ' ಅಲ್ಲದೆ ಜಂಬಗಿ ಶರಣ ಎನ್ನುವ ಹೆಸರೂ ಕೆಲ ಹಾಡುಗಳಲ್ಲಿ ಬರುತ್ತದೆ.

ಕವಿಗೆ ಈ ಭಾಗದಲ್ಲಿ ಹಲವಾರು ಜನ ಶಿಷ್ಯಂದಿದ್ದಾರೆ. ಕಲಬುರ್ಗಿಯ ಪ್ರಸಿದ್ಧ ಹಾಡುಗಾರ ಭವಾನಿ ಚವ್ಹಾಣ ಈತನ ಶಿಷ್ಯ. ಗುರು-ಶಿಷ್ಯರಿಬ್ಬರೂ ಸೇರಿ ಕೆಲ ಹಾಡು ರಚಿಸಿದ್ದಾರೆ. ಸಾವಳಗಿಯ ಹರಿಜನವಾಡಿಯಲ್ಲಿ ಹೆಣ್ಣುಮಕ್ಕಳು ಹಾಡಿದ ಹಾಡುಗಳನ್ನು ಕೇಳಿ ಕವಿಯನ್ನು ಹುಡುಕುತ್ತ ಹೊರಟದ್ದು—ಪ್ರತ್ಯಕ್ಷ ಕಂಡಾಗ ಸಾಧುವಿನ ವೇಷ, ಕೊರಳಲ್ಲಿ ಲಿಂಗ, ರುದ್ರಾಕ್ಷಿ, ಹಣೆಯಲ್ಲಿ ವಿಭೂತಿ, ಬಾಯಲ್ಲಿ ಜನಪದ ಹಾಡುಗಳು.

'ಸುರವಿಗೆ ನೆನದೇನೊ ಶ್ರೀಗೌರಿ ಸುತನಿಗೆ
ಮರಿಯಲಾರೆನೊ ಧ್ಯಾನ ಅಡಿಗಡಿಗೆ,
ವರುವ ತಪ್ಪಿದ ನುಡಿಗೆ......'

೫೮. ಸಲ್ಗರದ ಸಿದ್ರಾಮಪ್ಪ (೧೯೦೭-೧೯೬೭ :)

ಕಲಬುರ್ಗಿ ಜಿಲ್ಲೆಯ ಆಳಂದ ತಾಲೂಕಿನ ಒಂದು ಹಳ್ಳಿ ಸಲ್ಗರ. ಇದನ್ನು ವಜ್ರಸಲ್ಗರ ಎಂದೂ ಕರೆಯುವರು. ಇದು ಜನಪದ ಕವಿಗಳಿಗೂ ಕಲಾಕಾರರಿಗೂ ಜನ್ಮಭೂಮಿ. ಬಯಲಾಟ, ಲಾವಣಿ, ಮಂಗಳಾರತಿ, ಭಜನಿ, ಕೋಲಾಟ ಮೊದಲಾದ ಹಾಡುಗಳ ರಚನೆ ಈ ಊರಿನಲ್ಲಿ. ಇಲ್ಲಿಯ ವೀರಶೈವ ಸಾಖರೆ ಮನೆತನದ ಭದ್ರಪ್ಪನವರ ಮಗ ಸಿದ್ರಾಮಪ್ಪ ಕ್ರಿ. ಶ ಸು. ೧೯೦೭ ರಲ್ಲಿ ಜನ್ಮವೆತ್ತಿದವನು. ತಂದೆ ಒಕ್ಕಲುತನ ಮಾಡುತ್ತಿದ್ದ. ಈತನು ಕಿರಾಣಿ ಅಂಗಡಿಯೊಂದನ್ನು ಹಾಕಿಕೊಂಡು ವ್ಯಾಪಾರಮಾಡುತ್ತಿದ್ದನು. ಆಗಾಗ ಬಯಲಾಟಗಳಲ್ಲಿ ವೇಷತೊಟ್ಟು ಕುಣಿಯುತ್ತಿದ್ದನು. ಅದೂ ಸ್ತ್ರೀಪಾತ್ರ ಹಾಕುವುದರಲ್ಲಿ ನಿಷ್ಣಾತ.

ಕವಿ ಹಲವಾರು ಬಯಲಾಟಗಳನ್ನೂ ರಚಿಸಿದ್ದಾನೆ. ಧರ್ಮಪಾಲ, ಪತಿವ್ರತಾ ಮಹಾತ್ಮೆ ಇವು ಸಣ್ಣಾಟಗಳಾದರೆ, ಲವಕುಶ, ಲಂಕಾದಹನ ಮೊದಲಾದವು ದೊಡ್ಡಾಟಗಳಾಗಿವೆ. ಅಲ್ಲದೆ ನೂರಾರು ಭಜನಿ ಹಾಡು, ಕೋಲಾಟದ ಹಾಡು, ಲಾವಣಿ ರಚಿಸಿರುವನು. ಈತನ ಲಾವಣಿಗಳಲ್ಲೆಲ್ಲ ಅತ್ಯಂತ ಜನಪ್ರಿಯವಾದದ್ದು 'ರಾಜವಿಕ್ರಮ' ಲಾವಣಿ. ಭಜನಿ ಹಾಡುಗಳಲ್ಲಿ ಹೆಚ್ಚಾಗಿ ವೀರಶೈವ ಧರ್ಮದ

ತತ್ತ್ವಗಳನ್ನು ಪ್ರತಿಪಾದಿಸಿದ್ದಾನೆ. ಈಗ ೮-೧೦ ವರುಷಗಳ ಹಿಂದೆ ಸ್ವರ್ಗಸ್ಥನಾದ ಕವಿಯು ಬದುಕಿದ್ದು ಸುಮಾರು ೬೦ ವರುಷ. ಈ ಕವಿಯ ಜೀವನವೆಲ್ಲ ಜಾನಪದ ಕಲೆಗೇ ಮುಡುಪಾಗಿತ್ತು. ೧೯೪೨ ರ ಚಳುವಳಿಯಲ್ಲೂ ಭಾಗವಹಿಸಿ, ರಾಷ್ಟ್ರಪ್ರಜ್ಞೆ ಮೆರೆದ ಕವಿ ಈತ. ವೀರಶೈವ ಸಮಾಜದ ಉದ್ಧಾರಕ್ಕಾಗಿಯೂ ದುಡಿದವನು. ಲಾವಣಿಗಳಲ್ಲಿ ಹರದಾಸ ಪಂಥದವನಿವನು. ಸಲ್ಗರ ಗ್ರಾಮದ ಮಹಾಂತೇಶನನ್ನು ನೆನೆಸಿದ್ದಾನೆ.

"ದೇಶ ದೇಶಕ ಹೆಸರಿಗೆ ಬಂತು ವಾಸ ಸಲ್ಗರ ಗ್ರಾಮ।
ಈಶ ಮಹಾಂತೇಶ ದೋಷರಹಿತನೆ ಇಡು ಎನಮೇಲೆ ಪ್ರೇಮ।
ಬ್ಯಾಸಲಿಲ್ಲದ ಕವಿಯ ಮಾಡಿದನೊ ಹರದಾಸ ಸಿದ್ರಾಮ।
ಕಲಿಯ ಕರ್ಣನೆಂದು ಹೆಸರಿಗೆ ಬಂದ ರಾಜಾ ವಿಕ್ರಮ।"

೫೯. ಸಿರಗಾಪುರದ ಬಂಡೆಪ್ಪ : (೧೯೦೦-೧೯೫೯) :

ಕಲಬುರ್ಗಿಯಿಂದ ಸುಮಾರು ಹದಿಮೂರು-ಹದಿನಾಲ್ಕು ಮೈಲುಗಳ ಅಂತರದಲ್ಲಿ ಇರುವ ಸಿರಗಾಪುರ ಒಂದು ಸಣ್ಣ ಹಳ್ಳಿ. ಬೆಣ್ಣೆತೊರೆ ಹಳ್ಳದ ದಂಡೆಯ ಮೇಲಿರುವ ಈ ಊರ ಮುಖ್ಯ ದೇವರು ವೀರಭದ್ರ. ಈ ದೇವರ ಭಕ್ತ ಬಂಡೆಪ್ಪನು ಲಿಂಗವಂತ ಮನೆತನದ ಮಡೆಪ್ಪ ಮತ್ತು ವೀರಮ್ಮ ದಂಪತಿಗಳ ಉದರದಿಂದ ಸುಮಾರು ೧೯೦೦ ರಲ್ಲಿ ಹುಟ್ಟಿದನು. ಚಿಕ್ಕವಯಸ್ಸಿನಲ್ಲಿ ಲಗ್ನವೂ ಆಗಿತ್ತು. ಮನೆತನದ ಉದ್ಯೋಗವಾದ ಒಕ್ಕಲುತನವನ್ನು ಮಾಡಿಕೊಂಡು ಹಳ್ಳಿಯಲ್ಲಿ ಬಾಳುತ್ತಿದ್ದನು. ಮಕ್ಕಳೂ ಆಗಿದ್ದವು. ಆಗಾಗ ಭಜನೆ ಮೇಳಗಳಲ್ಲೂ ಊರ ಜಾತ್ರೆ ಮೊದಲಾದ ಉತ್ಸವಗಳಲ್ಲೂ ಭಯ-ಭಕ್ತಿಯಿಂದ ಭಾಗವಹಿಸುತ್ತಿದ್ದನು. ಇದ್ದಕ್ಕಿದ್ದಂತೆ ಹೆಂಡತಿ ಸತ್ತುಹೋದಳು. ಜೀವನದಲ್ಲಿ ಜಿಗುಪ್ಸೆ ಉಂಟಾಗಿ ಊರು ಬಿಟ್ಟು ಸ್ನೇಹಿತರೊಂದಿಗೆ ದೇಶಸಂಚಾರಕ್ಕೆ ಹೋದನು. ಶ್ರೀಶೈಲದ ಕಡೆ ಹೋಗಿದ್ದನಂತೆ. ಅಲ್ಲಿ ಎಲ್ಲಿ ಸುತ್ತಿದರೂ ಮನಸ್ಸಿಗೆ ಶಾಂತಿ ದೊರಕದ್ದಕ್ಕೆ ತಿರುಗಿ ತನ್ನ ಊರಿಗೆ ಬಂದು ನೆಲೆಸಿಂತನು.

ಮನೆಯ ವ್ಯವಹಾರದ ಕಡೆಗೆ ಅಷ್ಟು ಲಕ್ಷ್ಯಕೊಡದ ಬಂಡೆಪ್ಪನ ಜೀವನ ಒಂದು ರೀತಿಯಲ್ಲಿ ಸನ್ಯಾಸಿಯ ಜೀವನವೇ ಆಗಿತ್ತು. ಲೋಕದ ಕಣ್ಣಿಗೆ ಹುಚ್ಚನೆನಿಸಿಕೊಂಡಿದ್ದರೂ ನಿಜದ ಅರಿವು ಮೂಡಿಸಿಕೊಂಡವನು. ಜಾದನಹಳ್ಳಿಯ ಮಹಾಂತಸ್ವಾಮಿಗಳ ಕೃಪಾಶೀರ್ವಾದದಿಂದಲೂ, ಬಬಲಾದಿಯ ಶ್ರೀ ಚೆನ್ನಬಸವಸ್ವಾಮಿಗಳವರ ಗುರುಕರುಣೆಯಿಂದಲೂ ಅನುಭವದ ಎತ್ತರಕ್ಕೆ ಏರಿದನು. ಶ್ರೀಸಾಮಾನ್ಯರಿಗೂ ಅರ್ಥವಾಗುವಂತಹ ಜನಪದ ಹಾಡುಗಳನ್ನು ರಚಿಸಿದನು. ಬಂಡೆಪ್ಪ ಸ್ವತಃ

ಪ್ರಸಿದ್ಧ ಹಾಡುಗಾರನೂ ಆಗಿದ್ದನು. ಕಂಚಿನಕಂಠ ಅವನದಾಗಿತ್ತೆಂದು ಆತನನ್ನು ಬಲ್ಲ ಜನರ ಹೇಳಿಕೆ. ಸುಶ್ರಾವ್ಯವಾಗಿ ಮನಕರಗುವಂತೆ ಹಾಡು ಹೇಳುತ್ತಿದ್ದ ಬಂಡೆಪ್ಪನನ್ನು ನೆನೆಸಿಕೊಂಡು ಈ ಭಾಗದ ಜನ ಈಗಲೂ ಕೊಂಡಾಡುತ್ತಾರೆ.

ಈ ಭಾಗದಲ್ಲೆಲ್ಲ ಬಂಡೆಪ್ಪನ ಹಾಡುಗಳೆಂದರೆ ಅಚ್ಚುಮೆಚ್ಚು. ಭಜನೆಯ ಹಾಡುಗಳಲ್ಲಂತೂ ಈತನದು ಎತ್ತಿದ ಕೈ. ಸಿರಗಾಪುರದ ಮಾಣಿಕಪ್ಪನು ಕವಿಯ ಸ್ನೇಹಿತ, ಈತ ಹಾಡುವುದನ್ನು ಕೇಳಿದರಂತೂ ಮೈನವಿರೇಳುತ್ತದೆ. ತತ್ವದ ಪದಗಳಲ್ಲದೆ ಲಾವಣಿ, ಗೀಗೀ ಹಾಡುಗಳನ್ನು ರಚಿಸಿದ್ದಾನೆ. ಕಲಿತದ್ದು ಗಾಂವಟಿ ೨ನೇ ಈಯತ್ತೆ. ಊರ 'ವೀರಭದ್ರದೇವರ' ಗುಡಿಯಲ್ಲಿ ಕುಳಿತು ಹಾಡು ರಚಿಸುತ್ತಿದ್ದುದನ್ನು ಅಲ್ಲಿಯ ಜನ ಈಗಲೂ ಹೇಳುತ್ತಾರೆ. **'ಸಿರಗಾಪುರದ ಈಶ ವೀರೇಶ'** ಎನ್ನುವುದು ಕವಿಯ ಮುದ್ರಿಕೆ. ೧೮ ವರುಷಗಳ ಹಿಂದೆ ಸ್ವರ್ಗವಾಸಿಯಾದ ಕವಿ ಬದುಕಿದ್ದು ೬೯ ವರುಷ. ಕವಿ ಲೋಕಾನುಭವಿಯಾಗಿದ್ದನು. ಇದ್ದದ್ದನ್ನು ಇದ್ದಂತೆ ಹೇಳುವ ಎದೆಗಾರ. ಜೀವನದ ವಾಸ್ತವಿಕ ಘಟನೆಗಳನ್ನು ಎತ್ತಿಕೊಂಡು ತನ್ನ ಹಾಡುಗಳಿಗೆ ವಸ್ತುವನ್ನಾಗಿಸಿಕೊಂಡಿದ್ದಾನೆ. ಕುರುಡುನಂಬಿಕೆಗಳ ಮೇಲೂ ಹಾಡು ರಚಿಸಿದ್ದಾನೆ. ಕವಿಗೆ ಆಧ್ಯಾತ್ಮದತ್ತ ಒಲವು ಇತ್ತು. ಉದಾರಿಯಾಗಿದ್ದನು. ಇನ್ನೊಬ್ಬರು ಕೆಟ್ಟ ವ್ಯಸನಗಳಿಗೆ ಬಲಿಬೀಳಬಾರದಂತೆ ಎಚ್ಚರಿಕೆ ವಹಿಸುತ್ತಿದ್ದನು.

"ಕೈಲಾಗಲಾರದ ಎತ್ತ ಕಡಕೊಂಡ ಹಾರ್ತದ।
ಹಿಡಕೊಂಡು ಹಳ್ಳಕ ನಡಿಯಿರೊ।
ಸಗ್ಗಲಗೇಡಿ ಸತ್ತತೆಪ್ಪ ಹೊಡಿಯಬ್ಯಾಡರ್ರೊ।
ಕಟ್ಟಿ ಮೇಸಿ ಕಾರಹುಣಿವಿಗೊಮ್ಮೆ ಕರಿಯ ಕಡಿರೊ।"

"ನೀನೊಲಿದರೆ ಕಲ್ಲು ಕನಕವಯ್ಯ।
ಕರುಣಾತ್ಮಕ ಜೀಯಾ ಕರುಕಷ್ಟ ಮಾಡಿದಯ್ಯ।
ಬರಡಾಕಳ ಸುರಧೈನವ ಮಾಡಿದಿ।
....
....
ನಂಬಿದ ಮನುಜಗಂಬಲಿಯುಣಿಸಿದಿ।
ಅನುದಿನ ನುಡಿಸಿದಿ ಆಸೆ ಅಳಿವಮ್ಯಾಲಮೃತ।
....
ಸಿರಗಾಪುರಕ ಹೋಗಬೇಕು ಈಶ ವೀರೇಶನ
ಕೂಸಾಗಿ ದುಡಿಬೇಕು॥"

"ಕಲ್ಲ ಪೂಜೆಯ ಮಾಡಬಾರದೊ
ಕಲ್ಲೆಂದು ನುಡಿದರೂ……
ಕಲ್ಲು ಕಲ್ಲೇ ಆಗುವುದು"

೬೦. ಕಮಲಾಪುರದ ಮಲ್ಲಿಕಾರ್ಜುನ (೧೯೧೨-)

ಕಲಬುರ್ಗಿತಾಲೂಕಿನ ಕಮಲಾಪುರಗ್ರಾಮದ ಈ ಮಲ್ಲಿಕಾರ್ಜುನ ಕವಿ ಹಲವಾರು ವಿದ್ಯೆಗಳನ್ನು ಬಲ್ಲವನು. ಒಕ್ಕಲುತನ, ಬಡಿಗತನ, ಕಮ್ಮಾರಿಕೆ, ಚರ್ಮದ ಕೈಗಾರಿಕೆ, ಉಪ್ಪಾರ ಕೆಲಸ— ಹೀಗೆ ಹಲವಂದದ ವಿದ್ಯೆಗಳನ್ನು ಕರಗತಮಾಡಿ ಕೊಂಡ ಜನಪದ ಕಲಾಕಾರನು. ಚಿಕ್ಕಂದಿನಿಂದಲೂ ಹಾಡುವ ಕಲೆಯನ್ನೂ ರೂಢಿಸಿ ಕೊಂಡವನು. ನಾಲ್ಕನೇ ಇಯತ್ತೆಯ ಮರಾಠಿ ಕಲಿತ ಕವಿಗೆ ಉರ್ದುಭಾಷೆಯೂ ಗೊತ್ತು. ಕನ್ನಡದಲ್ಲಿ ನೂರಾರು ಜನಪದ ಹಾಡು ರಚಿಸಿ ಈ ಭಾಗದ ಕವಿಗಳಿಗೆಲ್ಲ ಗುರುಸ್ಥಾನದ ಪ್ರಸಿದ್ಧಿ ಪಡೆದಿದ್ದಾನೆ. ಈತನ ಪಟ್ಟಶಿಷ್ಯನೆಂದರೆ ಇದೇ ಗ್ರಾಮದ ವೀರಶೆಟ್ಟಿ.

೧೯೧೨ ರಲ್ಲಿ ಬಡ ಡೋಹರ ತ್ರಿಮುಖೆ ಕುಟುಂಬದಲ್ಲಿ ಜನಿಸಿದ ಕವಿಯನ್ನು ಮಲ್ಲಣ್ಣನೆಂದು ಕರೆಯುತ್ತಾರೆ. ಲಾವಣಿ, ರಿವಾಯತ, ಭಜನಿ, ಹಂತಿ ಹಾಡು ಗಳನ್ನಲ್ಲದೆ ಡಪ್ಪಿನಾಟಗಳನ್ನೂ ರಚಿಸಿದ್ದಾನೆ. 'ಮಲ್ಲಿಕಾರ್ಜುನ' ಎಂಬುದು ಕವಿಯ ಮುದ್ರಿಕೆ.

"ಸುತ್ತ ಕುಂತಿರಿ ಮುತ್ತಿನಂತಾ ಜನಾ ।
ಕಮಲಾಪುರ್ದು ಕೇಳ್ರಿ ಕವನಾss ।
ಚಮತ್ಕಾರ ಎಂಥಾ ಮಾತರಿ ।
ಕನಸ ಕಂಡ್ಹಾಂಗ ಆತರಿ ।
ಮಾಲಿಗೌಡನ ಮಗಳು ।
ಒಂಬತ್ತು ಪುಸ್ತಕ ಓದಿದವಳು ।
………………
………………
ಕವಿಯ ಕಮಲಾಪುರ ಬಯ್ಯಾನಾ ।
ಕೇಳಿದಾರ ಹುಚ್ಚಾಯ್ತ್ರಿ ಜನಾ ।
ಮಲ್ಲಿಕಾರ್ಜುನನ ಹಾಡರಿs ।
ತಪ್ಪು ಒಪ್ಪೊ ನೀವ ನೋಡರಿ ।
ಸಣ್ಣ ಹುಡುಗ ಸರ್ವರಿಗಿ ಪ್ರೀತಿ ।

ಸಾಷ್ಟಾಂಗ ಹಾಕಿ ಮಾಡುವೆ ಶರಣಾರ್ಥಿ ।
ನುಡಿಗಳು ಬಂಗಾರದ ವರ್ಣ ।
ಉಂಡಂಗ ಆಯ್ತು ಬಾಳಿಯ ಹಣ್ಣು ।”

ಕವಿ ತ್ರಿಮುಖಿಯ ಮಾರ್ಗದರ್ಶನದಲ್ಲಿ ಹಾಡಲು, ಸ್ವತಃ ಹಾಡೂ ರಚಿಸಲು ಕಲಿತ ಶಿಷ್ಯ ವೀರಶೆಟ್ಟಿ ೪೦ ವರುಷದ ಒಕ್ಕಲಿಗ. ತನ್ನ ಗುರುವನ್ನು ಹಾಡುಗಳಲ್ಲಿ ಕೊಂಡಾಡಿದ್ದಾನೆ.

“ಕಮಲಾಪುರದಾಗ ಇದ್ದೀದಿ ಕೋಳಿ ।
ಗುರು ಹುಚ್ಚೇಶ್ವರನ ಪವಳ್ಯಾಗ ಮೊಯ್ತಾದ ಕೋಳಿ ।
ಮಲ್ಲಿಕಾರ್ಜುನನ ಮನಿಯಾನ ಕೋಳಿ ।
ವೀರಶೆಟ್ಟಿಗೆಚ್ಚ್ಯಾರ ಮಾಡೀತ ಕೋಳಿ ।”

“ನಿನ್ನ ಉಪಕಾರ ತೀರಿಸುವುದಕ ನಾನೇನು ಮಾಡಲಿ ।
ಬೆಲ್ಲ ಸಕ್ರಿ ಪತ್ರಿ ಪುಷ್ಪನಿಂದು ನಿನಗ್ಹ್ಯಾಂಗ ಏರಿಸಲಿ ।
ಅಂತರಂಗದ ದೃಷ್ಟಿಲಿ ಕಂಡರ ಕಾಣತೀದಿ ಬಲ್ಲಿ ।
ಮಲ್ಲಿಕಾರ್ಜುನನ ವೀರಶೆಟ್ಟಿ ಹಾಡ್ತಾನ ಕಮಲಾಪುರದಲ್ಲಿ ।”

(ಮುಂದುವರಿಯುವುದು)

ಲಾವಣಿಯ ಉಗಮ ಮತ್ತು ವಿಕಾಸ

● ಶ್ರೀರಾಮ ಇಟ್ಟಣ್ಣವರ

ಒಂದು ಸಾಹಿತ್ಯಪ್ರಕಾರದ ಇತಿಹಾಸವನ್ನು ಕ್ರಮವಾಗಿ ಅಭ್ಯಸಿಸುವಾಗ ಅದರ ಮೂಲವನ್ನು ಕುರಿತು ಖಚಿತ ಅಭಿಪ್ರಾಯ ಕೊಡುವುದು ಕಷ್ಟದ ಕೆಲಸ. ಏಕೆಂದರೆ ಅದು ರೂಪುಗೊಳ್ಳುತ್ತಿರುವ ಪ್ರಾರಂಭದ ದಿನಮಾನಗಳಲ್ಲಿ ಜನರಿಗೆ ಮುಖ್ಯವಾಗಿರುವುದು ಅದರ ರಚನೆಗಳೇ ಹೊರತು ಇತಿಹಾಸವಲ್ಲ. ಬೆಳವಣಿಗೆ ಪ್ರಬುದ್ಧ ಸ್ಥಿತಿಗೆ ಬಂದಮೇಲೆ ಅದರ ಇತಿಹಾಸದ ಕಡೆಗೆ ಮನಸ್ಸು ಒಲಿಯುತ್ತದೆ. ಆಗ ನೆರವಾಗುವ ಸಾಮಗ್ರಿಗಳೆಂದರೆ ಆ ಪ್ರಕಾರಕ್ಕೆ ನೇರವಾಗಿ ಸಂಬಂಧಪಟ್ಟ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟ ಕಾಲ ಹಾಗೂ ಖಚಿತ ಕಾಲ ನಿರ್ಣಯ ಪಡೆದ ಬೇರೆ ಸಾಹಿತ್ಯರೂಪಗಳಲ್ಲಿ ನಾವು ಅಭ್ಯಸಿಸಬೇಕಿದ್ದ ಸಾಹಿತ್ಯಕೃತಿಗಳ ಉಲ್ಲೇಖ.

ಈ ನೆಲೆಗಟ್ಟಿನ ಮೇಲೆ ಕನ್ನಡ ಜಾನಪದ ಸಾಹಿತ್ಯದ ಒಂದಂಗವಾಗಿ ಬೆಳೆದು ಬಂದ ಲಾವಣಿಸಾಹಿತ್ಯದ ಮೂಲ, ವಿಕಾಸಗಳನ್ನು ಅಭ್ಯಸಿಸಬೇಕಾಗಿದೆ. ಆಡು ನುಡಿಯ ಲಯವನ್ನು ಪಡೆದುಕೊಂಡು ಜನಸಾಹಿತ್ಯಶ್ರೇಣಿಯಲ್ಲಿ ಶಿಖರದಂತಿರುವ ಲಾವಣಿಗೆ ಕನ್ನಡವೇ ಮೂಲವಾಗಿರಬೇಕು ಎನ್ನಿಸುವಷ್ಟು ಈ ನುಡಿಯೊಂದಿಗೆ ಏಕತೆ ಹೊಂದುತ್ತದೆ. ಅಂಶಗಣಾನ್ವಯವಾಗಿರುವ ಛಂದಸ್ಸು ಈ ಅನಿಸಿಕೆಯನ್ನು ಇನ್ನಷ್ಟು ಬಲಪಡಿಸುತ್ತದೆ. ಆದರೆ ಲಾವಣಿಯ ಇತಿಹಾಸ, ಲಾವಣಿ ಪ್ರಚಾರ ಗೊಂಡ ಪ್ರದೇಶ ಇವುಗಳನ್ನು ಅಭ್ಯಸಿಸಿದರೆ ಅದರ ಉಗಮಸ್ಥಾನ ಪೂರ್ಣವಾಗಿ ಯಲ್ಲದಿದ್ದರೂ ಮುಕ್ಕಾಲು ಪಾಲಾದರೂ ಗೋಚರಿಸೀತು.

ಲಾವಣಿಗಳಲ್ಲಿ ಕಂಡುಬರುವ ದೊಡ್ಡ ಕೊರತೆಯೆಂದರೆ ತಾನು ಹುಟ್ಟಿದ ಕಾಲ ವನ್ನು ಅದು ಹೇಳದಿರುವುದು. ಯಾವೊಬ್ಬ ಲಾವಣಿಕಾರ ತಾನು ಈ ಲಾವಣಿ ಯನ್ನು ಇಂಥ ದಿನ ಬರೆದೆನೆಂದು ಹೇಳಿಕೊಂಡಿಲ್ಲ. ತೇಪೆ ಹಚ್ಚಿದಂತೆ ಕೊನೆಯಲ್ಲಿ ಅದನ್ನು ಹೇಳುವುದು ಸಮಂಜಸವಲ್ಲವಾದರೂ ಅದನ್ನು ಬರೆದ ದಿನವನ್ನು ಬರೆದಿಡ ಬಹುದಿತ್ತು. ಹಾಗೇ ಬರೆದಿಡುವ ಅನಿವಾರ್ಯತೆ ಅವರಿಗೆ ತೋರಲಿಲ್ಲ ಎನಿಸುತ್ತದೆ. ಕಂಠಸ್ಥವಾಗಿಯೇ ಕ್ರಮಿಸುವ ಹಾಡುಗಳಿಗಂತೂ ಈ ಮಾತು ಅನ್ವಯಿಸುವುದಿಲ್ಲ. ಹೀಗಾಗಿ ಲಾವಣಿಯ ಪ್ರಾಚೀನತೆ ನೋಡಬಯಸುವ ನಮಗೆ ಆಧಾರವಾಗಬಹುದಾದ ಇನ್ನೊಂದು ಅಂಶವೆಂದರೆ ಬೇರೆ ಕೃತಿಗಳಲ್ಲಿ ಕಂಡುಬರುವ ಲಾವಣಿಯ ಉಲ್ಲೇಖ.

ಈ ಲೇಖನದ ರಚನೆಗೆ ಮಾರ್ಗದರ್ಶನ ನೀಡಿದ ಡಾ. ಬೆಟಗೇರಿ ಕೃಷ್ಣಶರ್ಮಾ, ಡಾ. ಎಂ. ಎಂ. ಕಲಬುರ್ಗಿ ಅವರಿಗೆ ಕೃತಜ್ಞತೆಗಳು.

ಕವಿರಾಜಮಾರ್ಗಕ್ಕಿಂತ ಬಹಳ ಮೊದಲು ಅಂದರೆ ಎರಡುಸಾವಿರ ವರ್ಷಗಳ ಹಿಂದೆ ಲಾವಣಿಯ ನೆಲೆಯನ್ನು ಕಾಣುವ ಪ್ರಯತ್ನವೊಂದಿದೆ. "ಪುಟ್ಟಿ ಇಲ್ಲಿಗೆ ತುರಾ ಕಲ್ಗಿ ಚರ್ಚೆ ತಿಳಿಯಲೊ ಜಾಹಿರ ಒಟ್ಟ ಸಾವಿರದೊಂಭೈನೂರ ವರ್ಷಗಳ ಮೇಲೆ ಚಿಲ್ಲರ" ಎಂಬ ಪದ್ಯವನ್ನು ಆಧಾರವಾಗಿಟ್ಟುಕೊಂಡು "ಲಾವಣಿ ಸುಮಾರು ಎರಡು ಸಾವಿರ ವರ್ಷಗಳ ಹಿಂದಿನಿಂದ ಪ್ರಚಲಿತವಾಗಿರುವುದೆಂಬ ನಂಬಿಕೆಯಿದೆ. ಋಗ್ವೇದದಲ್ಲಿ ಮತ್ತು ಬೌದ್ಧಸಾಹಿತ್ಯದಲ್ಲಿ ಕಂಡುಬರುವ ಸಂವಾದಗಳಲ್ಲಿ ಲಾವಣಿಯ ಮೂಲವನ್ನು ಕಾಣಬಹುದೆಂದು ಕೆಲವು ವಿದ್ವಾಂಸರ ಅಭಿಪ್ರಾಯ"[1] ಇವೆಲ್ಲ ಲಾವಣಿಯ ಬಗ್ಗೆ ಸರಿಯಾದ ತಿಳುವಳಿಕೆಯಿಲ್ಲದವರ ಮಾತುಗಳಾಗಿವೆ.

ಜಗತ್ತಿನ ಕಣ್ಣುಕುಕ್ಕುವಂತೆ ಅನೇಕ ರಾಜಮಹಾರಾಜರು ಕರ್ನಾಟಕದಲ್ಲಿ ಆಳಿ ಹೋದರು. ಅನೇಕ ಸ್ಥಿತ್ಯಂತರಗಳು ಕರ್ನಾಟಕದ ರಾಜಕೀಯ ಜೀವನದಲ್ಲಿ ಘಟಿಸಿದವು. ಅವುಗಳನ್ನು ಕುರಿತು ಒಂದೂ ಲಾವಣಿ ನಮಗೆ ಸಿಗುವುದಿಲ್ಲ—೧೯ ನೆಯ ಶತಮಾನಕ್ಕೆ ಬರುವ ವರೆಗೆ. ಲಾವಣಿಗಳು ಆ ಕಾಲಕ್ಕೆ ಪ್ರತಿಧ್ವನಿಯಾಗಿ ಹುಟ್ಟಿದುವು. ಆದರೆ ಅವುಗಳನ್ನು ಕಳೆದುಕೊಂಡಿದ್ದೇವೆಂಬೊಂದು ಹೇಳಿಕೆಯೊಂದಿದೆ. "ಆಯಾ ಕಾಲದಲ್ಲಿ ಇಂಥ ಅರಸರನ್ನು ಲಾವಣಿಕಾರರು ಹಾಡಿ ಕೊಂಡಾಡಿ ಕುಣಿದಿರಬೇಕು. ದುರ್ದೈವದಿಂದ ಲಾವಣಿಗಳ ಸಂಗ್ರಹಕಾರ್ಯ ನಡೆಯದೆ ಇಂದಿನ ನಾವು ಅಂಥ ವೀರಕಾವ್ಯದ ಭಾಗ್ಯದಿಂದ ವಂಚಿತರಾಗಿದ್ದೇವೆ."[2] ಬಹುಶ ಇದು ಅಭಿಮಾನದ ಅಭಿಪ್ರಾಯವೇ ಸರಿ. ಲಾವಣಿಗಳ ಸಂಗ್ರಹಕಾರ್ಯ ನಡೆದ ಸುಮಾರು ೪೦ ವರ್ಷಗಳ ಅವಧಿಯಲ್ಲಿ ತೀರ ಪ್ರಾಚೀನ ಹೋಗಲಿ ೪೦೦-೫೦೦ ವರ್ಷಗಳ ಹಿಂದಿನದು ಎನ್ನುವಂಥ ಲಾವಣಿ ಒಂದೂ ದೊರೆಯಲಿಲ್ಲ. ದೊರೆಯಲಿಲ್ಲ ಎನ್ನುವುದಕ್ಕಿಂತ ಆ ಕಾಲದಲ್ಲಿ ಇನ್ನೂ ಕನ್ನಡದ ಲಾವಣಿ ಜಾನಪದಸಾಹಿತ್ಯದ ಒಂದು ಪ್ರಕಾರವಾಗಿ ಬೆಳೆದುಕೊಂಡಿರಲಿಲ್ಲ ಎಂದರೆ ಹೆಚ್ಚು ಸಮಂಜಸವಾಗುವಂತೆ ತೋರುತ್ತದೆ. ಲಾವಣಿ ಕೇವಲ ಕಂಠಸ್ಥವಾಗಿಯೇ ಉಳಿದುಬರಲಿಲ್ಲ. ಗ್ರಂಥಸ್ಥವಾಗಿಯೂ ಬರೆದಿಡುತ್ತಿದ್ದರು. ಇಂಥ ಯಾವೊಂದು ಉಲ್ಲೇಖ ಕೂಡ ನಮಗೆ ದೊರೆಯುವುದಿಲ್ಲ.

ಡಾ. ಬೆಟಗೇರಿ ಕೃಷ್ಣಶರ್ಮ ಮತ್ತು ಶ್ರೀ ಪಿ. ಕೆ. ಖಾಡೋಜಿಯವರು ಲಾವಣಿಯ ಮೂಲವನ್ನು ಮರಾಠಿಯ ಪೋವಾಡಾಗಳಲ್ಲಿ ಕಾಣುತ್ತಾರೆ. "ಸೈನಿಕರನ್ನು ಹುರಿದುಂಬಿಸಲು ತ್ಯಾಗಕ್ಕೆ ಸಿದ್ಧಗೊಳಿಸಲು ಸಮರ್ಥವಾದ ಮಂತ್ರಶಕ್ತಿಯನ್ನು ಪಡೆದ ಈ ಪೋವಾಡಾಗಳು ಮರಾಠರ ಪೇಶ್ವೆಯರ ರಾಜ್ಯ ಕಟ್ಟುವುದಕ್ಕೆ ವಿಸ್ತಾರಗೊಳಿಸುವುದಕ್ಕೆ ಕಾರಣವಾಗಿವೆ. ಇಂದಿಗೂ ದೇಶಾಭಿಮಾನ, ಭಾಷಾಭಿ

೧. ಜ್ಞಾನಗಂಗೋತ್ರಿ. ಸಂಪುಟ ೫; ಪುಟ-೫೫೧.
೨. ಜಾನಪದ ವೀರಗೀತೆಗಳು. ಪುಟ-೮.

ಮಾನ, ಮತಾಭಿಮಾನ ಬೆಳೆಸುವಲ್ಲಿ ಮರಾಠಿಭಾಷೆಯ ಈ ಪೋವಾಡಾಗಳು ಅದ್ಭುತ ಸಾಮರ್ಥ್ಯ ತೋರುತ್ತವೆ. ಈ ಪರಂಪರೆಯೇ ಕನ್ನಡ ವೀರಲಾವಣಿಗಳಿಗೆ ಮೂಲವಾಗಿರಬೇಕು. ಕನ್ನಡದಲ್ಲಿ ಒಂದು ವಿಶಿಷ್ಟತಂತ್ರದ ಸಾಹಿತ್ಯವನ್ನೆಲ್ಲ ಲಾವಣಿಯೆಂದು ಕರೆದರೆ ಮರಾಠಿಭಾಷೆಯಲ್ಲಿ ಲಾವಣಿ ಹಾಗೂ ಪೋವಾಡಾ ಇವುಗಳಲ್ಲಿ ಭೇದವನ್ನು ಹೇಳಲಾಗುತ್ತದೆ. ಶ್ರೀಸಾಮಾನ್ಯರ ಬಾಳಿನಲ್ಲಿ ರಸತುಂಬುವ, ಉತ್ಸಾಹ ತುಂಬುವ ಕಾರ್ಯಕ್ಕೆ ಪ್ರೇರಣೆಯನ್ನೂ ಸ್ಫೂರ್ತಿಯನ್ನೂ ಒದಗಿಸುವ ವಿಷಯಗಳೆರಡು: ಒಂದು ಶೃಂಗಾರ, ಇನ್ನೊಂದು ಶೌರ್ಯ ಸಾಹಸದ ಕಲ್ಪನೆ. ಮಹಾಕಾವ್ಯಗಳಲ್ಲಿಯೂ ಶೃಂಗಾರ ವೀರರಸಗಳಿಗೇ ಪ್ರಧಾನತೆ ಇರುವಾಗ ಲಾವಣಿಗಳಲ್ಲಿಯೂ ಇರುವುದು ಸಹಜ. ಲಾವಣ್ಯಪ್ರಧಾನವಾದುವು ಲಾವಣಿಗಳಾಗಿ ವೀರರಸ ಪ್ರಧಾನವಾದುವು ಪೋವಾಡಾ ಆದುವು.[೩] ಕನ್ನಡದಲ್ಲಿ ಲಾವಣಿ ಸ್ವತಂತ್ರರೂಪ ತಾಳಿದ ಮೇಲೆ ಯಾವ ವಿಷಯವನ್ನು ಒಳಗೊಂಡಿದ್ದರೂ ಅದು ಕೇವಲ ಲಾವಣಿಯೆನ್ನುವ ಹೆಸರನ್ನೇ ಪಡೆಯಿತು. ಪೋವಾಡಾ ಹೆಸರು ಕನ್ನಡದಲ್ಲಿ ಉಳಿಯಲಿಲ್ಲ ಎಂದು ಇವರ ಅಭಿಪ್ರಾಯದ ಸಾರಾಂಶ.

ಕಣ್ಣೆದುರಿರುವ ಆಧಾರಗಳನ್ನೇ ಲಿ ಹೇಳುವುದಾದರೆ ಕನ್ನಡದಲ್ಲಿ ಲಾವಣಿಗಾಗಿ ಭೂಮಿಕೆ ೧೬-೧೭ ನೆಯ ಶತಮಾನದಲ್ಲಿ ಸಿದ್ಧವಾಗಲು ಮೊದಲಾಯಿತೆಂದು ತೋರುತ್ತದೆ. ೧೩ ನೆಯ ಶತಮಾನದಲ್ಲಿ ದೇವಗಿರಿಯ ಸೇವುಣರಿಂದಾಗಿ ಮರಾಠಿ ಅಲ್ಲಲ್ಲಿ ಬಳಕೆಯಲ್ಲಿದ್ದಿರಬಹುದಾದರೂ ಅದು ಹೆಚ್ಚಾದದ್ದು ೧೫ ನೆಯ ಶತಮಾನದ ಉತ್ತರಾರ್ಧದಲ್ಲಿ ಉತ್ತರ ಕರ್ನಾಟಕದ ಮಹಾರಾಷ್ಟ್ರದ ಗಡಿಗುಂಟ ಒಳಪ್ರದೇಶಗಳಲ್ಲಿ ಮರಾಠಿಗರು ಆಕ್ರಮಿಸಿಕೊಂಡಂತೆ ಮರಾಠಿ ಕನ್ನಡದೊಂದಿಗೆ ಏಕರಸವಾಗಿ ಪ್ರಸಾರ ಪಡೆಯಿತು. ನುಡಿಯ ಈ ರೀತಿಯ ಪ್ರಸಾರ ಬಲಗೊಂಡು ಬರುಬರುತ್ತ ಅದರ ಸಾಹಿತ್ಯವೂ ಇಲ್ಲಿ ಕಾಲಿಟ್ಟಿತು. ಈ ಪ್ರವಾಹದಲ್ಲಿ ಮಹಾರಾಷ್ಟ್ರದಿಂದ ತೇಲಿ ಬಂದ ಒಂದು ಜಾನಪದ ಸಾಹಿತ್ಯಪ್ರಕಾರ ಲಾವಣಿ ಎಂಬುದಕ್ಕೆ ಸಾಕಷ್ಟು ಆಧಾರಗಳನ್ನು ಒದಗಿಸಬಹುದು:

೧. ಮೊದಲನೆಯದಾಗಿ ಇದು ಕರ್ನಾಟಕ ಮಹಾರಾಷ್ಟ್ರ ಗಡಿಗುಂಟ ಸಮೃದ್ಧವಾಗಿ ಬೆಳೆದದ್ದು. ಹೊಂದಿಕೊಂಡಿರುವ ಯಾವುದೇ ಎರಡು ಭಿನ್ನ ಭಾಷೆಯ ಪ್ರದೇಶ(ರಾಜ್ಯ)ಗಳ ನಡುವೆ ಭಾಷಾಸಂಕರ ಇದ್ದೇ ಇರುತ್ತದೆ. ಕೇವಲ ಶಬ್ದಗಳ ಕೊಡುಕೊಳ್ಳುವಿಕೆಯೊಂದೇ ನಡೆಯಬೇಕೆಂದೇನೂ ಇಲ್ಲ. ಶಕ್ತಿಯುಳ್ಳ ಸಾಹಿತ್ಯವಿದ್ದರೆ ಅದರ ಇಡಿಯಾದ ಅನುಕರಣೆ ಇನ್ನೊಂದು ಭಾಷೆಯಲ್ಲಿ ನಡೆದೇ ನಡೆಯುತ್ತದೆ. ನಿಜಸ್ಥಿತಿ ಹೀಗಿರುವುದರಿಂದಲೇ ಮರಾಠಿಯಲ್ಲಿ ತುಂಬ ಜನಪ್ರಿಯತೆ ಗಳಿಸಿ

೩. ಜಾನಪದ ಸಾಹಿತ್ಯದರ್ಶನ. ಪುಟ–೨೨೩.

ಕೊಂಡ ಸಾಹಿತ್ಯರೂಪವೊಂದರ ಅನುಕರಣೆಯಿಂದಲೇ ಕನ್ನಡದಲ್ಲಿ ಗೀಗೀಪದ (ಲಾವಣಿ)ಗಳು ಹುಟ್ಟಿಕೊಂಡವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. "ಉತ್ತರ ಕರ್ನಾಟಕದಲ್ಲಿ ಈಗ ಹೆಚ್ಚಾಗಿ ಪ್ರಚಾರದಲ್ಲಿರುವ 'ಶಾಹಿರಕಿ ಹಾಡು' ಅಥವಾ 'ಗೀಗೀಪದ'ಗಳ ಮೇಳಗಳು ಮಹಾರಾಷ್ಟ್ರದ ಶಾಹಿರ್ ಗಾಣಾ ಪರಂಪರೆಯ ಪಡಿನೆಳಲಾಗಿವೆ."[೪] ಮೂಲತಃ ರಾಜಸ್ಥಾನದ ಚಾರಣಗೀತೆಗಳಂತೆ ವೀರರಸವನ್ನೆ ಪರಿಪೋಷಿಸುತ್ತಿದ್ದ ಈ ಶಾಹಿರ್ ಗೀತೆಗಳು ಬರುಬರುತ್ತ ಎಲ್ಲ ರಸಪೋಷಣೆಗೆ, ಸಾಮಾನ್ಯ ವಿಷಯಗಳಿಗೆ ಅವಕಾಶವಿತ್ತಿವೆ. ಇದೇ ಅನುಕರಣೆ ಕನ್ನಡದಲ್ಲಿಯೂ ಮೊದಲಾಗಿ ಎಲ್ಲ ಬಗೆಯ (ವಿವಿಧ ರಸಪೋಷಣೆಯ) ಲಾವಣಿಗಳು ಹುಟ್ಟಿಕೊಂಡವು ಕನ್ನಡದ ಲಾವಣಿಗಳಲ್ಲಿಯೂ ವೀರರಸಪೂರಿತ ಲಾವಣಿಗಳಿದ್ದರೂ 'ಪೋವಾಡಿ' ಗಳೆಂಬ ಪ್ರತ್ಯೇಕ ಹೆಸರು ಅವುಗಳಿಗೆ ಇಲ್ಲ. 'ಲಾವಣಿ' ಎಂಬ ಸಾಮಾನ್ಯ ಹೆಸರಿನಿಂದಲೇ ಅವು ಕರೆಯಿಸಿಕೊಳ್ಳುತ್ತವೆ.

ಮಹಾರಾಷ್ಟ್ರದಲ್ಲಿ ಒಂದು ಕಾಲದಲ್ಲಿ ಜನಮನವನ್ನು ಸೂರೆಗೊಂಡಿದ್ದ ಪೋವಾಡಾಗಳ ಸ್ಥಾನವನ್ನು ಕ್ರಮೇಣ ತಮಾಷಾಗಳು ತುಂಬಿಕೊಂಡು ಹಳ್ಳಿ ಹಳ್ಳಿಗೆ ಸಾಗಿ ಹರವಾದ ಪ್ರಚಾರ ದೊರಕಿಸಿಕೊಂಡವು. ತಮಾಷಾ ಎಂದರೆ ಶೃಂಗಾರಪೂರಿತ ಲಾವಣಿಯ ಹಿನ್ನೆಲೆಯಲ್ಲಿ ಭಾವಕ್ಕೆ ತಕ್ಕಂತೆ ಅಂಗಪ್ರದರ್ಶನ ಮಾಡುತ್ತ ಸಾಗುವ ಹೆಣ್ಣಿನ ಕುಣಿತ. ಹಿಮ್ಮೇಳದಲ್ಲಿ ಏಕಪ್ರಕಾರವಾಗಿ ಹರಿದು ಬರುವ ತುಂತುಣಿಯ ನಾದ, ಚೆಲ್ಲುವ ಹೆಜ್ಜೆಗೆ ಸರಿಯಾದ ಮಾರ್ಗದರ್ಶನ ನೀಡಿ ಸನ್ನಿವೇಶಕ್ಕೆ ಚೇತನ ತುಂಬುವ ಡೋಲಕೀಯ ರಭಸ, ಕೇಳುಗರೆದೆ ಮಿಡಿದು ಗಿಲ್ ಗಿಲ್ ಎಂದು ಆವರಣವನ್ನೆಲ್ಲ ವಿಸ್ಮಯಗೊಳಿಸುವ ಕಾಲ್ಗೆಜ್ಜೆಗಳ ಝಣತ್ಕಾರ-ಶೃಂಗಾರಕ್ಕೆ ಪೂರಕಗಳು. ಇಂತು ಸಹಜಾಕರ್ಷಣೆಯಿಂದ ಕೂಡಿದ ತಮಾಷಾಗಳು ಮಹಾರಾಷ್ಟ್ರವನ್ನು ವ್ಯಾಪಿಸಿ ಗಡಿಭಾಗದ ಕರ್ನಾಟಕದ ಜನತೆಯನ್ನು ಸಹಜವಾಗಿ ಮರುಳುಗೊಳಿಸಿದುವು. ಹೀಗೆ ಅನುಕರಣೆ ಮೊದಲಾಗಿ ಶೃಂಗಾರಪೂರಿತ ಲಾವಣಿಗಳ ರಚನೆ ಕನ್ನಡದಲ್ಲಿ ಪ್ರಾರಂಭವಾಯಿತು. ಆದರೆ ಏನು ಕಾರಣವೋ ಕುಣಿತ ಮಾತ್ರ ಕನ್ನಡಕ್ಕೆ ಹೊರತಾಯಿತು. ಸಾಕ್ಷಿಯಾಗಿ ರಾಯಭಾಗ, ಅಥಣಿ, ಚಿಕ್ಕೋಡಿ, ಹುಕ್ಕೇರಿ, ಜಮಖಂಡಿ, ಮುಧೋಳ, ವಿಜಾಪೂರ, ಗೋಕಾಕ, ಬೈಲಹೊಂಗಲ ತಾಲೂಕುಗಳಲ್ಲಿ ಲಾವಣಿಯ ಬೆಳೆ ಸಮೃದ್ಧವಾಗಿದೆ. ಇಷ್ಟೊಂದು ಫಸಲು ಕರ್ನಾಟಕ—ಮಹಾರಾಷ್ಟ್ರದ ಗಡಿಯಿಂದ ದೂರವಿದ್ದ ಪ್ರದೇಶಗಳಲ್ಲಿ ಸಿಗಲಾರದು ಹೀಗೆ ಪ್ರಾರಂಭದಲ್ಲಿ ಕನ್ನಡದ ಲಾವಣಿಗೆ ಪ್ರೇರಣೆಯಿತ್ತುವು: ಮರಾಠಿಯ ಪೋವಾಡಾಗಳು ಹಾಗೂ ಲಾವಣಿಗಳು. ಈ ಎಲ್ಲ ಆಮದಿಗೆ ಕ್ಷೇತ್ರವಾಗಿ ನಿಂತುದು ಉತ್ತರ ಕರ್ನಾಟಕದ ಗಡಿಪ್ರದೇಶ ಎಂಬ ಮಾತನ್ನು ಒತ್ತಿ ಹೇಳಬೇಕು.

೪. ಆನಂದಕಂದ. ಕರ್ನಾಟಕ ಜನಜೀವನ. ಪುಟ-೧೧೦.

ಬೆಂಗಳೂರು ಮೈಸೂರಿನ ಕಡೆಗೆ ಲಾವಣಿಗಳು ಇವೆಯಾದರೂ ಉತ್ತರ ಕರ್ನಾಟಕದ ಸಂಪ್ರದಾಯಕ್ಕೂ ಅವುಗಳಿಗೂ ವ್ಯತ್ಯಾಸವಿದೆ. ಅಲ್ಲಿಯ ಲಾವಣಿಗಳ ಭಾಷೆ ಗ್ರಾಂಥಿಕ; ಉತ್ತರ ಕರ್ನಾಟಕದ ಕಡೆಯ ಲಾವಣಿಗಳಂತೆ ಮರಾಠಿ ಪ್ರಭಾವ ಆ ಲಾವಣಿಗಳಲ್ಲಿ ಕಾಣಸಿಗಲಾರದು. 'ಉಡನ್' 'ಗುಲ್ ಉಡಾನ್' ಮುಂತಾದ ಶಬ್ದಗಳನ್ನು ನೋಡಿದರೆ ಇವುಗಳ ಮೇಲೆ ಉರ್ದು ಭಾಷೆಯ ಪ್ರಭಾವ ಹೆಚ್ಚಿರುವಂತೆ ತೋರುತ್ತದೆ.

ಉತ್ತರ ಕರ್ನಾಟಕದ ತುಂಬ ಮರಾಠಿ ಒಡೆತನದಲ್ಲಿ ಅಧಿಕಾರ ನಿರ್ವಹಿಸುತ್ತಿದ್ದ ಸಂಸ್ಥಾನಿಕರು, ದೇಸಾಯಿಗಳು, ಗೌಡರು ಮೊದಲಾದವರು ಗೀಗೀ ಮೇಳಗಳಿಗೆ ಸಾಕಷ್ಟು ಪ್ರೋತ್ಸಾಹ ಕೊಡುತ್ತಿದ್ದರು. ಮೇಲಿಂದಮೇಲೆ ಗೋಷ್ಠಿಗಳನ್ನು ಕೂಡಿಸುತ್ತಿದ್ದರು. ವಿಜಾಪೂರ ಜಿಲ್ಲೆಯ ಕೋರಳ್ಳಿ ಗ್ರಾಮದ ಭೀಮಪ್ಪನಿಗೆ ನಂದಿ ಸಾಹುಕಾರರು ನಾಗೇಶಿಗೆ ಹಚಿಯದ ಸೀರೆಯೊಂದು ಹದಿನಾರು ಎಕರೆ ಜಮೀನು ನೀಡಿದುದು ಉಲ್ಲೇಖನಾರ್ಹ.

೨. ಮಹಾರಾಷ್ಟ್ರದಲ್ಲಿ ಆಗಿಹೋದ ಭಕ್ತಿಪಂಥದ ಗಾಢವಾದ ಸೇರ್ಪಡೆ ಈ ಸಾಹಿತ್ಯದಲ್ಲಿ ವಿಶೇಷವಾಗಿರುವಂತೆ ತೋರುತ್ತದೆ. ಸಂತಜ್ಞಾನದೇವ, ತುಕಾರಾಮ, ದಾಮಾಜಿಪಂತ ಮುಂತಾದವರ ಜೀವನ ಚರಿತ್ರೆಯನ್ನೋ ಘಟನೆಗಳನ್ನೋ ಒಳಗೊಂಡು ಅನೇಕ ಲಾವಣಿಗಳು ಜನ್ಮತಾಳಿವೆ. ವಿಶೇಷ ಆಕರ್ಷಣೆಯಿಲ್ಲದ ಹೊರತು ಒಂದು ನಾಡಿನಲ್ಲಿ ಹುಟ್ಟಿಬೆಳೆದವರ ವಿಚಾರ, ಚರಿತ್ರೆ ಮತ್ತೊಂದು ನಾಡನ್ನು, ಮತ್ತೊಂದು ಸಾಹಿತ್ಯವನ್ನು ಪ್ರವೇಶಿಸಲಾರವು. ಇಂಥ ಪ್ರಭಾವಕ್ಕಾಗಲಿ ಅದೂ ಜಾನಪದ ಸಾಹಿತ್ಯದ ವಿಷಯದಲ್ಲಿ ಮುಖ್ಯವಾಗಿ ಸಹಾಯಕವಾದುದು ಪ್ರದೇಶ ಸಾಮಿಪ್ಯ. ಸಂತಪಂಥದ ಹಾಡುಗಳ ಪ್ರವೇಶಕ್ಕೆ ಕಾರಣವೆಂದರೆ ಈ ಸಂತರ ಪವಾಡಸದೃಶ ಜೀವನ ಸಂಗತಿಗಳು ಜನರ ಮನವನ್ನಾಕರ್ಷಿಸಿ ಗಡಿಭಾಗದಲ್ಲಿ ಹಾಗೂ ಅದಕ್ಕೆ ಹೊಂದಿಕೊಂಡಿರುವ ಒಳನಾಡಿನಲ್ಲಿ ಜನಜನಿತವಾಗಿದ್ದುದು. ಮೇಲಾಗಿ ಮರಾಠಿಯಲ್ಲಿ ಸಂತರು ನಿರ್ಮಿಸಿದ ಸಾಹಿತ್ಯ ಹಾಗೂ ಸಂತರನ್ನು ಕುರಿತ ಸಾಹಿತ್ಯ ಹುಟ್ಟಿಕೊಂಡು ವ್ಯಾಪಕತೆಯನ್ನು ಪಡೆದು, ಜನರಲ್ಲಿ ಭಕ್ತಿಭಾವದ ತರಂಗಗಳನ್ನು ಎಬ್ಬಿಸುತ್ತಿದ್ದವು. ಪಂಡರಪುರದ ವಿಠ್ಠಲನ ಭಕ್ತರು ಗಡಿನಾಡಿನ ಮೇರೆಯಲ್ಲಿ ಹೆಚ್ಚಿರುವುದು ವಿಶೇಷ ಸಂಗತಿ. ಉತ್ತರ ಕರ್ನಾಟಕದ ಅನೇಕ ಜನ 'ಸಂತ'ರಾಗಿ ಅಭಂಗಗಳನ್ನು ಹಾಡಿ ಭಕ್ತಿಭಾವ ಪ್ರಕಟಿಸುತ್ತಾರೆ. ಈ ಅಭಂಗಗಳ ಮೂಲಕವೂ ಮರಾಠಿ ಪ್ರಭಾವ ಹೇರಳವಾಗಿದೆ. ಹೀಗೆ ಮರಾಠಿ ಪುಣ್ಯಪುರುಷರ ಜೀವನ ಚರಿತ್ರೆಗಳಿಂದ, ಮರಾಠಿ ಜನಸಾಮಾನ್ಯರ ಸಂಪರ್ಕದಿಂದ ನಮ್ಮ ಜನ ಈ ಸಾಹಿತ್ಯವನ್ನು ಓದಿದರು, ಅರಗಿಸಿಕೊಂಡರು. ಆ ಸಂಸ್ಕಾರ ಬಲಗೊಂಡು ನಮ್ಮ ಜನರೂ ಸಂತರನ್ನು ಕುರಿತಾದ ಸಾಹಿತ್ಯವನ್ನು ನಿರ್ಮಾಣಮಾಡಿದರು.

ಬಿಟ್ಟುಕೊಟ್ಟು ಮರಾಠಿಯನ್ನು ಆ ಶಾಲೆಗಳಲ್ಲಿ ಕಲಿಸಲಾಗುತ್ತಿತ್ತು."* ಶಾಲೆಗಳಲ್ಲಿ, ಸಮಾಜದಲ್ಲಿ ಮೂಡಿದ ಈ ರೀತಿಯ ಪ್ರಭಾವವಲಯದಿಂದ ನಮ್ಮವರಿಗೆ ತಪ್ಪಿಸಿ ಕೊಳ್ಳುವುದು ಸಾಧ್ಯವಿರಲಿಲ್ಲ. ಮರಾಠಿ ಶಾಲೆಗಳ ಸಂಪರ್ಕವನ್ನೇ ಹೆಚ್ಚು ಪಡೆದವ ರಿವರು. ಅದರಲ್ಲೂ ಸೀಮೆಯುಗುಂಟ ಪಸರಿಸಿದ ಜನಜೀವನಕ್ಕೆ ಮರಾಠಿಯೇ ಮುಖ್ಯ ವಾಯಿತು. ಇಂದಿಗೂ ಗಡಿಯಲ್ಲಿಯ ಜನ ಮರಾಠಿಯಿಂದ ಮುಕ್ತವಾಗಿಲ್ಲ. ಮರಾಠಿ ಜನರೊಂದಿಗೆ ಒಡನಾಟವಿರುವವರೆಗೆ ಅದು ಸಾಧ್ಯವೂ ಅಲ್ಲ. ಲಾವಣಿ ಕವಿಗಳು ನೂರಕ್ಕೆ ಎಂಭತ್ತರಷ್ಟಾದರೂ ಮರಾಠಿ ಬಲ್ಲವರಾಗಿದ್ದರು: ಮರಾಠಿಯನ್ನು ಓದಿ ಆ ಸಾಹಿತ್ಯದ ನಾನಾ ಪ್ರಕಾರಗಳನ್ನು ಮೆಚ್ಚಿದ ಇವರು ಅವರಂತೆ ತಾವೂ ಸಾಹಿತ್ಯ ವೊಂದನ್ನು ನಿರ್ಮಿಸಬೇಕೆಂದು ಬಯಸಿ, ಪ್ರಯೋಗಿಸಿ, ಯಶಸ್ಸು ಸಾಧಿಸಿದರು.

೭. ವಾದ್ಯ ಪರಿಕರಗಳಲ್ಲಿ ತುಂತುಣಿ, ತಾಳ, ಗೆಜ್ಜೆಗಳು ಮರಾಠಿಯ ಶಾಹಿರ್‌ಗಾಣಾಕ್ಕೂ ಕನ್ನಡದ ಲಾವಣಿಗಳಿಗೂ ಸಮನಾಗಿವೆ. ಇಂದು ನಮ್ಮ ಗೀಗೀ ಮೇಳಗಳಲ್ಲಿ ಕಾಲ್ಗೆಜ್ಜೆ ಕಾಣಬರುವುದಿಲ್ಲ. ಆದರೆ ಲಾವಣಿಯ ಮುಂಚಿನ ದಿನಗಳಲ್ಲಿ ಬಯಲು ಲಾವಣಿ ಹಾಡುಗರು ಕಾಲಿಗೆ ಗೆಜ್ಜೆ ಕಟ್ಟಿ ಕುಣಿಕುಣಿದು ಹಾಡು ತ್ತಿದ್ದರು. "ಗೆಜ್ಜೆ ಕಟ್ಟಿ ಕುಣಕುಣದ ಹಾಡಿದರ ಹ್ಯಾಂವ್ಟಾವ ಅನ್ನೂದ ಜಗವೆಲ್ಲಾ" ಎಂಬ ಮಾತು ಮೇಲಿನ ಹೇಳಿಕೆಯನ್ನು ಸ್ಪಷ್ಟಪಡಿಸುತ್ತದೆ. ತಮಾಷಾಗಳಲ್ಲಿ ಕಾಲ್ಗೆಜ್ಜೆ ಬೀರುವ ಧ್ವನಿತರಂಗದ ಪರಿಣಾಮ ಮನಸೆಳೆದು ಇವರೂ ಗೆಜ್ಜೆ ಕಟ್ಟಿ ಚಿಟಕಿಹಾಕುತ್ತ ಕುಣಿಯುತ್ತ ಹಾಡಲು ಮೊದಲುಮಾಡಿದರು. ಅಷ್ಟೇ ಅಲ್ಲ. ಒಂದು ಕಾಲದಲ್ಲಿ ನಾಗೇಶಿ ಪಕ್ಷ ವಹಿಸುವ ಗಂಡು ಸೀರೆಉಟ್ಟು ಕುಪ್ಪಸ ತೊಟ್ಟು ಹೆಣ್ಣುವೇಷಧಾರಿಯಾಗುತ್ತಿದ್ದನಂತೆ. ಗೋಷ್ಠಿಗಳಲ್ಲಿ ಹೆಣ್ಣುಮಕ್ಕಳು ಚೆನ್ನಾಗಿ ಭಾಗವಹಿಸದಿದ್ದ ಅಂದಿನ ಕಾಲದಲ್ಲಿ ಆ ಕೊರತೆಯನ್ನು ತಾವೇ ವೇಷದ ಮುಖಾಂತರ ತುಂಬಿಕೊಳ್ಳಬೇಕಾಯಿತೆಂದು ತೋರುತ್ತದೆ. ಇದು ಮರಾಠಿ ತಮಾಷಾದ ಪೂರ್ಣ ಅನುಕರಣೆ. ಕಾಲಗತಿಸಿದಂತೆ, ಹಾಡಿನ ಅರ್ಥದಿಂದಲೇ ನಾಗೇಶಿ ಪಕ್ಷದ ಅರಿವು ಸಭಿಕರಿಗಾಗುತ್ತದೆಂಬ ತಿಳಿವಳಿಕೆ ಹಾಡುಗರಿಗೆ ಬಂದಿರಬೇಕು. ಆದ್ದರಿಂದ ಇಂದು ಈ ರೀತಿಯ ವೇಷ ನಿಂತುಹೋಗಿದೆ.

೮. ಮರಾಠಿಯ ತಮಾಷಾಗಳಲ್ಲಿ ಕುಣಿಯುವ ಹೆಣ್ಣುಮಕ್ಕಳೆಲ್ಲ ಹಿಂದುಳಿದ ಜಾತಿಗಳಿಗೆ ಸಂಬಂಧಪಟ್ಟವರು. "ತಮಾಷಾ ಕಲಾವಂತರು ಹೆಚ್ಚಾಗಿ ಹರಿಜನರು, ಕೊಲ್ಹಾಟಿಗರು, ಮಾಂಗರು ಮೊದಲಾಗಿ ಸಮಾಜದಲ್ಲಿ ಅನಾದಿಕಾಲದಿಂದ ಮೇಲಿನ ವರ್ಗದವರಿಂದ ತುಳಿಯಲ್ಪಟ್ಟವರು".† ತಮಾಷಾಗಳಲ್ಲಿ ಭಾಗವಹಿಸುವ ಸ್ತ್ರೀ ಯೆಂದರೆ ಕೀಳು ಎಂಬ ಹೇಯಭಾವ. ಇದೇ ಮಾತು ಕನ್ನಡ ಲಾವಣಿಮೇಳದಲ್ಲಿ

---

* ಪ್ರೊ. ಸ. ಸ. ಮಾಳವಾಡ. "ಸಾಹಿತ್ಯ ಸಂಗಮ".

† ಸಂತೋಷಕುಮಾರ ಗುಲ್ವಾಡಿ; ಪ್ರಜಾವಾಣಿ-ದೀಪಾವಳಿ ಸಂಚಿಕೆ ೧೯೬೫, ಪುಟ: ೫೭.

ಭಾಗವಹಿಸುವ ಹೆಣ್ಣುಮಕ್ಕಳಿಗೂ ಅನ್ವಯಿಸುತ್ತದೆ. ಲಾವಣಿ ಹಾಡುವುದೆಂದರೆ ಮಾನವಂತರ ಕೆಲಸವಲ್ಲ ಎನ್ನುವ ಭಾವನೆ ಮೇಲಿನ ವರ್ಗದವರದು. ನಮ್ಮ ಲಾವಣಿ ಗೋಷ್ಠಿಗಳಲ್ಲಿ ಭಾಗವಹಿಸುವ ಹೆಣ್ಣುಮಕ್ಕಳು ಹೆಚ್ಚಾಗಿ ಹರಿಜನ ವರ್ಗಕ್ಕೇ ಸೇರಿದವರು. ಕೇವಲ ಸಾಹಿತ್ಯವಲ್ಲ, ಇಂಥವರೇ ಈ ಹಾಡುಗಳನ್ನು ಹಾಡಬೇಕು ಎನ್ನುವ ಬಲಿತ ಭಾವವೂ ಮರಾಠಿಯಿಂದ ಕನ್ನಡಕ್ಕೆ ಆಗಮಿಸಿತು.

ಮೇಲಿನ ಎಲ್ಲ ಅಂಶಗಳಿಂದ ಉಂಟಾಗುವ ಪರಿಣಾಮದೊಂದಿಗೆ ಒಂದು ಮಾತನ್ನು ನೆನಪಿನಲ್ಲಿಡಬೇಕು. ನಮ್ಮವರು ಮರಾಠಿಯಿಂದ ಲಾವಣಿಸಾಹಿತ್ಯ ನಿರ್ಮಾಣಕ್ಕೆ ಪ್ರೇರಣೆಯನ್ನು ಪಡೆದರೇ ಹೊರತು ಎಲ್ಲ ಕಾಲಕ್ಕೂ ಕುರುಡಾಗಿ ವಸ್ತುವಿಷಯಗಳನ್ನಾಗಲಿ ಗೋಷ್ಠಿವಿಧಾನವನ್ನಾಗಲಿ ಮಕ್ಕಾಮಕ್ಕಿ ಎನ್ನುವಂತೆ ಸ್ವೀಕರಿಸಲಿಲ್ಲ. ಮರಾಠಿ ಜನಜೀವನವನ್ನು ಒಮ್ಮೆ ತೀರ ಆಕರ್ಷಿಸಿದ್ದ ಪೋವಾಡಾಗಳನ್ನಷ್ಟೇ ನಮ್ಮ ಲಾವಣಿಕಾರರು ಸ್ವೀಕರಿಸಲಿಲ್ಲ. ಇದರಿಂದ ನಮ್ಮ ಸಮಾಜದ ಪರಿಸರಕ್ಕೆ ಹೊಂದಿಕೆಯಾದ ಸಾವಿರಾರು ಮನೋಹರವಾದ ಲಾವಣಿಗಳು ಜನ್ಮ ತಾಳಿಮವು. ಉಳಿದ ಲಾವಣಿ ಮೊತ್ತವನ್ನು ನೋಡಿದರೆ ಕನ್ನಡದಲ್ಲಿ ವೀರಲಾವಣಿಗಳ ಪ್ರಮಾಣ ಕಡಿಮೆಯೆನ್ನಬೇಕು. ಎರಡನೆಯದಾಗಿ ಮರಾಠಿಯಲ್ಲಿ ಜನಪ್ರಿಯವಾಗಿದ್ದ ತಮಾಷಾಗಳಲ್ಲಿಯ ಉತ್ತಾನ ಶೃಂಗಾರದ ಹಾಡುಗಳೊಂದಿಗಿದ್ದ ಕುಣಿತವನ್ನು ಇವರು ತ್ಯಜಿಸಿದರು. ಅದರಿಂದ ಶೃಂಗಾರದಲ್ಲಿ ಇವರು ಸ್ವೀಕರಿಸಿದ್ದು ಕೇವಲ ವರ್ಣನಾವೈಖರಿ. ಒಂದುವೇಳೆ ಮಕ್ಕಾಮಕ್ಕಿ ಸ್ವೀಕರಣವನ್ನೇ ಮಾಡಿದ್ದರೆ ಈ ಬಗೆಯ ವೈವಿಧ್ಯ ಸಾಧ್ಯವಾಗುತ್ತಿರಲಿಲ್ಲ. ಕನ್ನಡ ಲಾವಣಿಸಾಹಿತ್ಯವನ್ನು ತುದಿ ಮೊದಲ್ಗೊಂಡು ಪರಿವೀಕ್ಷಿಸಿದಾಗ ಪರಾಧೀನತೆ ತೋರದೆ ವೈವಿಧ್ಯ ತೂರಿ ಬರುತ್ತದೆ, ಕವಿಗಳ ಸ್ವತಂತ್ರಶಕ್ತಿ ತಲೆದೂಗಿಸುತ್ತದೆ.

ಲಾವಣಿಯ ಉಗಮ ಕುರಿತಾಗಲಿ ಪ್ರಾರಂಭದ ಬೆಳವಣಿಗೆ ಕುರಿತಾಗಲಿ ಇದುವರೆಗೆ ಮಾಡಿದ ಚರ್ಚೆ ಗಟ್ಟಿ ಊಹೆಗಳನ್ನು ಕೈಬಿಡದೆ ಸಾಗಿದೆ. ಇನ್ನು ಕೊಡುವ ಗ್ರಂಥಸ್ಥ ಆಧಾರ ಮುಂಚಿನ ವಿಶ್ಲೇಷಣೆಯನ್ನು ಬಲಪಡಿಸುವಲ್ಲಿ ಸಹಾಯನೀಡುತ್ತದೆ. ಲಾವಣಿಯ ಪ್ರಾಚೀನ ಉಲ್ಲೇಖವೆಂದರೆ ೧೭ನೆಯ ಶತಮಾನದ್ದು. ಬಹಳ ದಿನಗಳ ವರೆಗೆ ಲಾವಣಿಯು ವಿಷಯ ಯಾವ ಕಾವ್ಯದಲ್ಲಿಯಾಗಲಿ ಶಾಸ್ತ್ರಗ್ರಂಥದಲ್ಲಿಯಾಗಲಿ ದೊರೆಯದೆ ಅಜ್ಞಾತವಾಗಿ ಉಳಿದು ವಿದ್ವಾಂಸರ ತಲೆತಿನ್ನುತ್ತಿತ್ತು. ಕನಿಷ್ಠಪಕ್ಷ ಎಂದಿನಿಂದ ಕನ್ನಡದಲ್ಲಿ ಲಾವಣಿ ಬಳಕೆಯಲ್ಲಿದೆ ? ಎಂಬುದರ ಬಗೆಗೆ ಸ್ಥೂಲವಾಗಿಯಾದರೂ ಒಂದು ಗ್ರಂಥಸ್ಥ ಆಧಾರ ಬೇಕಾಗಿತ್ತು. ಗುಣಚಂದ್ರನ ಛಂದಸ್ಸಾರದ ಮುಖಾಂತರ ಅದನ್ನು ಮೊಟ್ಟಮೊದಲು ಹೆಕ್ಕಿ ತೆಗೆದು ಮುಂದಿನವರಿಗೆ ಅಭ್ಯಾಸದ ದಿಸೆತೋರಿ ಉಪಕರಿಸಿದವರು ಡಾ. ಎಂ. ಎಂ. ಕಲಬುರ್ಗಿ.* ೧೭ನೆಯ

* ಬಾಳಗೋಪಾಳನ ಲಾವಣಿಗಳು—ಮುನ್ನುಡಿ.

ಶತಮಾನದಲ್ಲಿ ರಚಿತವಾದ ಗುಣಚಂದ್ರನ ಛಂದಸ್ಸಾರದಲ್ಲಿ ಲಾವಣಿಯ ಪ್ರಸ್ತಾಪ ಬಂದಿದೆ. ಲಾವಣಿಯ ಛಂದೋಲಕ್ಷಣವನ್ನು ಹೇಳುವ ಗುಣಚಂದ್ರ ತನ್ನ ಸಮಕಾಲೀನ ಲಾವಣಿಸಾಹಿತ್ಯದ ವೈವಿಧ್ಯ, ಗೋಷ್ಠಿ ಇತ್ಯಾದಿಗಳ ಬಗ್ಗೆ ಹೇಳಿರದಿದ್ದರೂ ಆತನು ಮಾಡಿರುವ ಉಲ್ಲೇಖದಿಂದ ೧೭ ನೆಯ ಶತಮಾನದಲ್ಲಿ ಲಾವಣಿ ಅಸ್ತಿತ್ವದಲ್ಲಿದ್ದಿತು ಎಂಬ ತೀರ್ಮಾನಕ್ಕೆ ಬರುತ್ತೇವೆ.

ಉಪಲಬ್ಧವಿದ್ದ ಐತಿಹಾಸಿಕ ಲಾವಣಿಗಳೆಲ್ಲ ೧೯ನೆಯ ಶತಮಾನಕ್ಕೆ ಸಂಬಂಧಪಟ್ಟವುಗಳು. ಕಿತ್ತೂರ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ನರಗುಂದ ಬಾಬಾಸಾಹೇಬರ ಕುರಿತಾದ ಲಾವಣಿಗಳ ಕಾಲ ೧೯ ನೆಯ ಶತಮಾನದ ಪೂರ್ವಾರ್ಧ. ಹಲಗಲಿ ಬೇಡರ ಲಾವಣಿಗೆ ಸಂಬಂಧಪಟ್ಟಕಾಲ ೧೯ ನೆಯ ಶತಮಾನದ ಮಧ್ಯ. ಘಟನಾವಳಿಯ ದಿನಗಳಿಗೆ ತೀರ ನಿಕಟವಾಗಿ ಹುಟ್ಟಿದ್ದರೂ ದೊರೆತ ಲಾವಣಿಗಳ ಪ್ರಾಚೀನತೆ ಇಷ್ಟು. ಇನ್ನು ಚರಿತ್ರೆ ಘಟಿಸಿದ್ದ ಬಹುದಿನಗಳ ತರುವಾಯ ಸಾಹಿತ್ಯ ನಿರ್ಮಾಣವಾಗುವ ಸಾಧ್ಯತೆ ಇರುವುದರಿಂದ ೧೯೦೦ರ ಸುಮಾರಿಗೆ ಈ ಲಾವಣಿಗಳು ನಿರ್ಮಾಣವಾಗಿದ್ದರೂ ನಾವು ಆಶ್ಚರ್ಯಪಡಬೇಕಿಲ್ಲ. ೧೭ ನೆಯ ಶತಮಾನದಲ್ಲಿ ಲಾವಣಿಸಾಹಿತ್ಯ ಪ್ರಚಾರದಲ್ಲಿದ್ದ ಕಾರಣ ಕಿತ್ತೂರ ಕ್ರಾಂತಿಯೊಂದಿಗೇ ಈಗ ದೊರೆತಿರುವ ಕಿತ್ತೂರ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ ಲಾವಣಿಗಳು ಹುಟ್ಟಿಕೊಂಡಿರುವ ಸಾಧ್ಯತೆ ಇದೆ. ಹೀಗೆ ಛಂದಸ್ಸಾರದಲ್ಲಿಯ ಉಲ್ಲೇಖ ಹಾಗೂ ಐತಿಹಾಸಿಕ ಲಾವಣಿಗಳ ಆಧಾರದಿಂದ ಈಗಿನವುಟ್ಟಿಗೆ ಕನ್ನಡದ ಲಾವಣಿಯ ಉಗಮವನ್ನು ಮುನ್ನೂರು ವರ್ಷಗಳಷ್ಟು ಹಿಂದೆ ಹೇಳಬಹುದು.

೧೭ ನೆಯ ಶತಮಾನ ದಾಟಿ ೧೯ನೆಯ ಶತಮಾನದ ವರೆಗೆ ಅಂದರೆ ಐತಿಹಾಸಿಕ ಲಾವಣಿಗಳು ಕಣ್ಣಿಗೆ ಬೀಳುವವರೆಗೆ ೨೦೦ ವರ್ಷಗಳ ಅವಧಿಯಲ್ಲಿ ಹುಟ್ಟಿಕೊಂಡ ಲಾವಣಿಗಳಾಗಲಿ, ಲಾವಣಿಯ ವಿಷಯಕವಾದ ಹೇಳಿಕೆಗಳಾಗಲಿ ದೊರೆಯುವುದಿಲ್ಲ. ಸುಮಾರು ಹತ್ತೊಂಭತ್ತನೆಯ ಶತಮಾನದ ಪ್ರಾರಂಭದಿಂದ ಲಾವಣಿ ಸಂಪತ್ತು ಪೌರಾಣಿಕ–ಚಾರಿತ್ರಿಕ ಸಾಮಾಜಿಕ ಮುಂತಾಗಿ ಬೆಳೆದು ಬಂದಿತು. ತೇರದಾಳ ತುಕಾರಾಮ, ಗೋಪಾಳ ದುರದುಂಡಿ, ಮದರಕಂಡಿ ಯಲ್ಲಪ್ಪ, ಮುರಗೋಡ ಕುಬಣ್ಣ– ಮುಂತಾದವರು ಲಾವಣಿಗೆ ಒಂದು ವ್ಯವಸ್ಥಿತ ರೂಪಕೊಟ್ಟವರು. ತರುವಾಯ ದೇಶದ ಸ್ವಾತಂತ್ರ್ಯ ಚಳುವಳಿಯ ಕಾಲಕ್ಕೆ ಲಾವಣಿ ವಹಿಸಿದ ಪಾತ್ರ ದೊಡ್ಡದು: ಖಾದಿ ಪ್ರಚಾರ, ಗಾಂಧೀಜಿಯವರ ಪ್ರಶಂಸೆ, ಬ್ರಿಟಿಶರ ದಬ್ಬಾಳಿಕೆ ಕುರಿತಾದ ಲಾವಣಿಗಳು ಸಾಕಷ್ಟು ಹುಟ್ಟಿಕೊಂಡವು. ಹುಲಕುಂದ ಭೀಮಸೇನನನ್ನು ಇಲ್ಲಿ ಸ್ಮರಿಸಬೇಕು. ಇವುಗಳಲ್ಲಿ ಲಾವಣಿ ಹುಟ್ಟಿದಕಾಲ ನಮೂದಿಸಲ್ಪಟ್ಟಿಲ್ಲವಾದರೂ ಹಾಡಿನ ವಸ್ತು ಅವುಗಳ ಕಾಲವನ್ನು ನಿರ್ಣಯಿಸಿಕೊಡುತ್ತವೆ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಲಾವಣಿಯ ರುಚಿ ಕಡಿಮೆಯಾಗತೊಡಗಿದೆ. ಕಲಿತವರ ಉಪೇಕ್ಷೆ, ವೈಜ್ಞಾನಿಕ ಮನರಂಜನ ಸಾಧನಗಳು ಇದಕ್ಕೆ ಮುಖ್ಯ ಕಾರಣ.

● ●

ಕಂಚರಸನ ತುರಮರಿಯ ಶಾಸನ

● ಎಂ. ಬಿ. ಭೋಯಿ

ತುರಮರಿಯು ಬೆಳಗಾವಿಜಿಲ್ಲೆಯ ಬೈಲಹೊಂಗಲತಾಲೂಕಿನಲ್ಲಿ ಮಲಪ್ರಭಾ ನದಿಯ ದಕ್ಷಿಣ ತಟದಲ್ಲಿರುವ ಒಂದು ಹಳ್ಳಿ. ಬೈಲಹೊಂಗಲದಿಂದ ನೇರಕ್ಕೆ ೯ ಮೈಲುಗಳು ಮತ್ತು ಬೆಳಗಾವಿಯಿಂದ ೨೩ ಮೈಲುಗಳ ಅಂತರದಲ್ಲಿದೆ. ಊರು ಚಿಕ್ಕಬೆಟ್ಟವೊಂದರ ಉತ್ತರ ಮತ್ತು ಪೂರ್ವ ಪಾರ್ಶ್ವಗಳಲ್ಲಿ ಹಬ್ಬಿದ್ದು ಇದೇ ಗುಡ್ಡದ ದಕ್ಷಿಣ ತುದಿಗಿರುವ ಬಹುಕಡಿದಾದ ಶಿಖರದ ಮೇಲೆ ಬಸವಣ್ಣನ ಗುಡಿಯಿದೆ. ಅದರ ಪಕ್ಕದಲ್ಲಿ ಪ್ರಸ್ತುತ ಶಾಸನವಿರುವ ಹಾಸುಗಲ್ಲು ಬಿದ್ದುಕೊಂಡಿದೆ. ೪೫" ಉದ್ದ ಮತ್ತು ೩೫" ಅಗಲ ಇದ್ದು ಬಲಗಡೆ ಮೇಲ್ಭಾಗದಲ್ಲಿ ಸೀಳಿ ತುಂಡಾಗಿರುವುದರಿಂದ ಮೊದಲಿನ ಒಂಬತ್ತು ಸಾಲುಗಳ ಕೆಲವು ಅಕ್ಷರಗಳು ಲೋಪಗೊಂಡಿವೆ. ಆ ತುಂಡುಗಲ್ಲೂ ಅಲ್ಲಿಯೆ ಬಿದ್ದಿದೆ. ಇಷ್ಟಲ್ಲದೆ ಕಲ್ಲಿನ ಕೆಳಭಾಗದಲ್ಲಿ ನಟ್ಟನಡುವೆ ಸು. ೭" ವ್ಯಾಸದ ತೂತು ಕೊರೆಯಲ್ಪಟ್ಟಿರುವುದರಿಂದ ನಾಲ್ಕು ಸಾಲುಗಳ ಪಾಠಮಧ್ಯದಲ್ಲಿ ಪೂರ್ಣ ಲೋಪಗೊಂಡಿದೆ. ಒಟ್ಟು ಶಾಸನವು ಹಲವು ಸ್ಥಳಗಳಲ್ಲಿ ಸವೆದು ಹೋಗಿರುವುದರಿಂದ ಅಲ್ಲಲ್ಲಿ ಕೆಲವು ಅಕ್ಷರಗಳು ಲೋಪಿಸಿವೆ.

ಪ್ರಸ್ತುತ ಶಾಸನವು ಮೂಲತಃ ಬಸವಣ್ಣನ ಗುಡಿಯದಲ್ಲವೆಂತಲೂ ಬೇರೆಡೆಯಿಂದ ಈಗಿನ ಸ್ಥಳಕ್ಕೆ ಸಾಗಿಸಿದ್ದೆಂತಲೂ ತಿಳಿದುಬರುತ್ತದೆ. ಆದರೆ ಎಲ್ಲಿಂದ ಸಾಗಿಸಿದ್ದು ಎಂಬ ವಿಷಯದಲ್ಲಿ ಊರವರಿಂದ ಖಚಿತವಾದ ವಿವರಗಳು ದೊರೆಯುತ್ತಿಲ್ಲ. ಶಾಸನದಲ್ಲಿ ತುರಮರಿಗ್ರಾಮದ ಉಲ್ಲೇಖವಿಲ್ಲ. ಅದರ ಬದಲು 'ಪಟ್ಟದ ಕುರುಗುಂದ' ಎಂಬ ಊರ ಉಲ್ಲೇಖವಿದೆ. ಮಲಪ್ರಭಾನದಿಯ ಉತ್ತರತಟದಲ್ಲಿ, ತುರಮರಿಯಿಂದ ಒಂದು ಮೈಲು ಅಂತರದಲ್ಲಿ ಈಗ 'ಕುರುಗುಂದ' ಎಂಬ ಹಳ್ಳಿಯಿದೆ. ಶಾಸನವು ಮೂಲದಲ್ಲಿ ಈ ಕುರುಗುಂದದ್ದೆಂಬ ಊಹೆಸದಾಗಿರಲೂಬಹುದು.

ಶಾಸನದ ಅಕ್ಷರಗಳ ಪ್ರಮಾಣ ½"×೧" ನಷ್ಟು ಇದ್ದು, ಲಿಪಿ ೧೦ ೧೧ನೆಯ ಶತಮಾನದ್ದಾಗಿದೆ. ಪ್ರಾರಂಭದಲ್ಲಿ ಹಳಗನ್ನಡ ಗದ್ಯವಿದ್ದು ಅದರ ಕೊನೆಯಲ್ಲಿ ಸಂಸ್ಕೃತ ಪದ್ಯಗಳ ಫಲಶ್ರುತಿಯಿದೆ. ಅದಾದಮೇಲೆ ಕನ್ನಡ ಕಂದಪದ್ಯಗಳಿವೆ: ತೀರಕೊನೆಯಲ್ಲಿ ಕವಿ ಮತ್ತು ಕಂಡರಣೆಕಾರರ ಹೆಸರುಗಳಿವೆ. ಶಾಸನದಲ್ಲಿ ಮಿತಿಯ ಉಲ್ಲೇಖವು ಸ್ಪಷ್ಟವಿದ್ದು ಕ್ರಿ. ಶ. ೧೦೫೧ ಕ್ಕೆ ಸಂಹೋಗುವ ೯೭೩ ನೆಯ ಖರ ಸಂವತ್ಸರವೆಂದು ಸ್ಪಷ್ಟಪಡಿಸಲಾಗಿದೆ. ಇದು ಕಲ್ಯಾಣ ಚಾಳುಕ್ಯದೊರೆ ಆಹವಮಲ್ಲ ಎಂದರೆ ೧ನೆಯ ಸೋಮೇಶ್ವರನ ಆಳ್ವಿಕೆಗೆ ಸೇರಿದ್ದಾಗಿದೆ.

ಈ ಶಾಸನದಿಂದ ಮೊದಲಬಾರಿಗೆ ಹಲವು ಸಂಗತಿಗಳು ಬೆಳಕಿಗೆ ಬರುತ್ತಿವೆ. ರಾಷ್ಟ್ರಕೂಟ ಒಂದನೆಯ ಅಮೋಘವರ್ಷನ ಸಾಮಂತನಾಗಿದ್ದ (?) ಗಂಗದೊರೆ ಸೈಗೊಟ್ಟ ಶಿವಮಾರನು ಶಕವರ್ಷ ೨೬೧ ರಲ್ಲಿ[೧] ಕುಪ್ಪಟೂರುದವಾಡದ ಜೈನಬಸದಿಗೆ ಕೊಟ್ಟಿದ್ದ ದತ್ತಿಯನ್ನು ಗಂಗದೊರೆ ಕಂಚರಸನು ಪುನರ್ದತ್ತಿಯಾಗಿತ್ತು, ಉದ್ಧರಿಸಿದ ನೆಂದು ಕಲಭಾವಿ ಶಾಸನದಲ್ಲಿ ಹೇಳಿದೆ.[೨] ಎಂದರೆ ಕಲಭಾವಿಶಾಸನದಲ್ಲಿ ಕಂಚರಸನು ದತ್ತಿಕೊಟ್ಟ ಕಾಲವನ್ನು ನಮೂದಿಸದೆ ಸೈಗೊಟ್ಟ ಶಿವಮಾರನು ದತ್ತಿಕೊಟ್ಟ ಕಾಲ ವನ್ನು ಮಾತ್ರ ಹೇಳಿದೆ. ಫ್ಲೀಟರು ಶಾಸನದ ಲಿಪಿಯನ್ನು ಗಮನಿಸಿ ಅದರ ಕಾಲ ಸು. ೧೧ ನೆಯ ಶತಮಾನವೆಂದು ಹೇಳಿದ್ದರು. ಪ್ರಸ್ತುತ ತುರಮರಿಯ ಶಾಸನವು ಕ್ರಿ. ಶ. ೧೦೫೧ ರಲ್ಲಿ ಕಾದಲಿವಳ್ಳಿ ಮೂವತ್ತನ್ನು ಕಂಚರಸನು ಮನ್ನೆಯ ಸ್ವಾಮ್ಯ ದಿಂದ ಆಳುತ್ತಿದ್ದನೆಂದು ಸ್ಪಷ್ಟವಾಗಿ ಉಲ್ಲೇಖಿಸುವುದರಿಂದ ಫ್ಲೀಟರ ಊಹೆಗೆ ಖಚಿತತೆ ಬಂದಂತಾಗಿದೆ. ಕಂಚರಸನಿಗೆ ನಂದಗಿರಿನಾಥ, ಕೊಂಗುಣಿವರ್ಮ ಧರ್ಮ ಮಹಾರಾಜ, ಸಮುದಕರಿಲಾಂಛನ ಎಂಬ ಬಿರುದುಗಳನ್ನು ಕೊಟ್ಟಿರುವುದರಿಂದ ಕಲಭಾವಿ ಶಾಸನದ ಗಂಗದೊರೆ ಕಂಚರಸನೇ ಈತ ಎಂಬುದು ಸ್ಪಷ್ಟ. ಒಟ್ಟಿನಲ್ಲಿ ಕಂಚರಸನನ್ನು ಉಲ್ಲೇಖಿಸುವ ಈವರೆಗಿನ ಪ್ರಕಟಿತಶಾಸನಗಳಲ್ಲಿ ಇದು ಎರಡನೆ ಯದು. ಮತ್ತು ಆತನ ಕಾಲದ ಬಗೆಗೆ ಖಚಿತ ಆಧಾರ ನೀಡುವಂಥದು.

ದಕ್ಷಿಣದಲ್ಲಿ ಚೋಳರ ದಾಳಿಯಿಂದಾಗಿ ತಲಕಾಡಿನ ಗಂಗಮನೆತನ ನಷ್ಟವಾಯಿ ತಷ್ಟೆ. ಆ ಸಂದರ್ಭದಲ್ಲಿ ಕಲ್ಯಾಣದ ಚಾಳುಕ್ಯರು ಗಂಗರನ್ನು ಪುನರುದ್ಧರಿಸ ಬೇಕೆಂಬ ಮನೀಷೆಯಿಂದ ಕಂಚರಸನನ್ನು ಉತ್ತರದ ಈ ಭಾಗದಲ್ಲಿ ತಂದು ಪ್ರತಿಷ್ಠಿ ಸಿರಬೇಕು. ಈ ಪ್ರತಿಷ್ಠಾಪನೆ ಹತ್ತನೆಯ ಶತಮಾನದ ಕೊನೆ ಅಥವಾ ಹನ್ನೊಂದ ನೆಯ ಶತಕದ ಆದಿಯಲ್ಲಿ ಜರುಗಿರಬೇಕು. ಕಾದಲವಳ್ಳಿ ಮೂವತ್ತನ್ನು ಕ್ರಿ. ಶ.

---

೧. ಡಾ. ಆರ್. ಎನ್. ಗುರವ ಅವರು, ಕಲಭಾವಿ ಶಾಸನದ ಕಾಲ ಫ್ಲೀಟ ಹೇಳುವಂತೆ ಶಾ. ಶ. ೨೬೧ ಅಲ್ಲ, ಶಾ. ಶ. ೭೬೧ ಎಂದರೆ ಕ್ರಿ. ಶ. ೮೩೯ ಎಂದು ಅಭಿಪ್ರಾಯ ಪಡು ತ್ತಾರೆ. ಎಂದರೆ ಫ್ಲೀಟ ಅನುಮಾನಿಸುವಂತೆ ಶಾಸನದ ಮಿತಿ ಕಾಲ್ಪನಿಕವಲ್ಲವೆಂದು ಡಾ. ಗುರವ ಅವರ ಅಭಿಪ್ರಾಯ. ಆದರೆ ಕ್ರಿ. ಶ. ೮೩೯ ರಲ್ಲಿ ರಾಷ್ಟ್ರಕೂಟ ದೊರೆ ೧ನೆಯ ಅಮೋಘವರ್ಷನೇನೋ ಇದ್ದ. ಗಂಗದೊರೆ ಶಿವಮಾರ ಮಾತ್ರ ಇರಲಿಲ್ಲ. ಅದಾಗಲೇ ಅವನು ತೀರಿಹೋಗಿದ್ದನೆಂದು ಇತಿಹಾಸ ಹೇಳುತ್ತದೆ. ಹೀಗಿರುವಾಗ ಕಲಭಾವಿ ಶಾಸನವು ಹೇಳಿಕೊಳ್ಳುವಂತೆ ಕ್ರಿ. ಶ. ೮೩೯ ರಲ್ಲಿ ಸೈಗೊಟ್ಟನು ದತ್ತಿಬಿಟ್ಟಿರು ವುದು ತೀರ ಅಸಂಭವ. ಜತೆಗೆ ಸೈಗೊಟ್ಟ ಶಿವಮಾರನಿರುವ ವರೆಗೆ ರಾಷ್ಟ್ರಕೂಟ ಮತ್ತು ಗಂಗ ಮನೆತನಗಳಲ್ಲಿ ವೈರತ್ವವಿತ್ತೇ ಹೊರತು ಮೈತ್ರಿ ಇರಲಿಲ್ಲ. ಮೂರನೆಯ ಗೋವಿಂದನ ಮರಣಾನಂತರ ಒಂದೆರಡುವರ್ಷಗಳಲ್ಲಿಯೇ ರಾಷ್ಟ್ರಕೂಟರಿಗೂ ಗಂಗರಿಗೂ ಭಯಂಕರ ಯುದ್ಧವಾಗಿ ಸೈಗೊಟ್ಟನು ತೀರಿಹೋದನು.

೨. Indian Antiquary. xviii. pp 309-313, ಕಲಭಾವಿ ಶಾಸನ.

೧೦೭೫ ರಲ್ಲಿ ಚಾಲುಕ್ಯ ಭುವನೈಕಮಲ್ಲ ಎರಡನೆಯ ಸೋಮೇಶ್ವರನ ದಂಡನಾಯಕ ಸೋಮೇಶ್ವರ ಭಟ್ಟನು ಆಳುತ್ತಿದ್ದುದಾಗಿ ಕಾದರವಳ್ಳಿಯ ಶಾಸನವೊಂದರಿಂದ[೩] ತಿಳಿಯುವುದರಿಂದ ಮತ್ತು ಅದರಲ್ಲಿ ಕಂಚರಸನ ಉಲ್ಲೇಖವಿಲ್ಲದಿರುವುದರಿಂದ ಈ ಇಪ್ಪತ್ತೈದು ವರ್ಷಗಳಲ್ಲಿ ಈ ಗಂಗಮನೆತನವೂ ನಷ್ಟಗೊಂಡಿತ್ತೆಂದು ಊಹಿಸಬಹುದು; ಆ ಪ್ರದೇಶವು ಗೋವೆಯ ಕದಂಬರ ಕೈಗೆ ಇನ್ನೂ ಬಂದಿರಲಿಲ್ಲವೆಂದೂ ತಿಳಿಯಬಹುದು.

ಕಂಚರಸನ ಜೊತೆಗೆ ರಾಷ್ಟ್ರಕೂಟ ಭೀಮದೇವನೆಂಬವನನ್ನು ಶಾಸನವು ಉಲ್ಲೇಖಿಸುತ್ತದೆ. ಈತನ ಇತಿವೃತ್ತಗಳಾವವೂ ಶಾಸನದಲ್ಲಿ ಇಲ್ಲ. ಈ ಭೀಮದೇವನ ಹೆಂಡತಿ ದೇಯಬ್ಬೆರಾಣಿಯೆ ಶಾಸನೋಕ್ತದತ್ತಿಯನ್ನು ಬಿಟ್ಟವಳು. ಇವಳು ವಸ್ತ್ರಪುರದವಳೆಂದು ಶಾಸನ ಹೇಳುವಂತೆ ತೋರುತ್ತದೆ. ಆದರೆ ಶಾಸನದ ಆ ಭಾಗ ಸ್ಪಷ್ಟವಿಲ್ಲ. ಅಂತೂ ೧೧ ನೆಯ ಶತಮಾನದ ಮಧ್ಯದಲ್ಲಿ ಕಾದರವಳ್ಳಿಯ ಪ್ರದೇಶದಲ್ಲಿ ರಾಷ್ಟ್ರಕೂಟರ ವಂಶಸ್ಥರು ನೆಲೆಸಿದ್ದರೆಂಬುದು ಈ ಶಾಸನದಿಂದ ಪ್ರಥಮಬಾರಿಗೆ ಗೊತ್ತಾಗುತ್ತದೆ.

ಪಟ್ಟಕುರುಗುಂದದ ಕುಪ್ಪೆಯಗೆರೆಗೆ ದೇಯಬ್ಬೆ ರಾಣಿಯು ಎಂಟು ಮತ್ತರು ಭೂಮಿಯನ್ನು ದಾನವಾಗಿತ್ತ ಸಂಗತಿಯನ್ನು ತಿಳಿಸುವುದು ಶಾಸನದ ಮುಖ್ಯೋದ್ದೇಶ. ಕೆರೆಯ ವರ್ಣನೆ ಮತ್ತು ದಾನದ ಹಿರಿಮೆಗಳು ಪ್ರೌಢವಾದ ಕನ್ನಡಗದ್ಯದಲ್ಲಿವೆ. ಕೊನೆಯಲ್ಲಿ ೬ ಕಂದಪದ್ಯಗಳಿವೆ. 'ಹರಚರಣ ಸರಸಿಜಾರ್ಚಿತೆ'ಯಾದ ದೇಯಬ್ಬೆಗೆ 'ದಾನವ್ಯಸನಮೆ ಪರಮ ವ್ಯಸನ'ವಾಗಿತ್ತೆಂದು ಶಾಸನ ಹೇಳುತ್ತದೆ.

ಶಾಸನ ಪಾಠ :

೧ ಸ್ವಸ್ತಿ ಸಮಸ್ತ [ಭು]ವನಾಶ್ರಯ ಶ್ರೀ ಪ್ರಿಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಸ್ವರ

೨ ಪರಮಭಟ್ಟಾರ ×೦ ಸತ್ಯಾಶ್ರಯ ಕುಳತಿಳಕಂ ಚಾಳ(ಳು)ಕ್ಯಾಭರಣಂ ತ್ರೈಳೋಕ್ಯ ಮಲ್ಲಂ ಶ್ರೀ

೩ ಮದಾಹವಮಲ್ಲದೇವರ ವಿಜಯರಾಜ್ಯಮಭಿವೃದ್ಧಿಗಾಚಂದ್ರಾರ್ಕ್ಕತಾರಂಬರಂ ಸಲುತ್ತಮಿರೆ ಸಕ ನೃ

೪ ಪಕಾಳಾತೀತ×ಂವತ್ಸರ ಶತಂಗ ೯೭೩ ನೆಯ ಖರಸಂವತ್ಸರದ ಪೌಷ್ಯ ಸು [ದ್ಧ]

೩. Indian Antiquary -I. pp. 141–143.

೫ ಸೋಮು ? × [ರ ?]ಮುಂ ವ್ರತೀಪಾತದಂದು ಗಂಗಾ[ಜಳ ?] ಧೌತ ನಿರ್ಮ್ಮಳ ವಸ್ತ್ರಪುರಾ [ಧಿ ?]

೬ × × ಳು?ತ್ರ ಗೋತ್ರೆಯುಮಂ ಬನ್ಧುಜನನಿಧಾನೆಯುರುಮ[ಪ್ಪ] ಶ್ರೀ ಮುದ್ದೀ [ಯಬ್ಬೆ]

೭ ಧಲ (ರಲ?) ॥ ಸ್ವಸ್ತಿ ಸಮಧಿಗತ ಪಞ್ಚಮಹಾಶಬ್ದ ಮಹಾಮ[ಣ್ಡ]ಳೇಸ್ವರ × ×

೮ × × ವರೇಶ್ವರಂ ನನ್ದಗಿರಿನಾಥಂ ಲೋಕವಿಖ್ಯಾತಂ ಕಂಬಳಾ[ತೂ]ರ್ಯ್ಯನಿರ್ಗ್ಘೋಷ × ×

೯ [ಕೊ]ಂಗುಣಿವರ್ಮ್ಮ ಧರ್ಮ್ಮಮಹಾರಾಜಂ ಹಯವತ್ಸರಾಜಂ ಸಮದಕರಿ ಲಾಂಛನ ×

೧೦ . . . . ಂನ ಮಾರ್ತ್ತಣ್ಡ ನಾಮಾದ್ಯನೇಕಾಂಕಮಾಳಿಕಾ ಸಮೇತರಪ್ಪ ಶ್ರೀ ಮತು ಕುಂಚರಸಕ್ಕ[ೞ]ದ

೧೧ ಲವಳ್ಳಿ ಮೂವತ್ತಱ ಮನ್ನೆಯ[ಸ್ಥಾ]ನ್ಮದಿ[ಂ] ಸು[ಖ] ಸಂಕಥಾವಿನೋದದಿಂ ರಾಜ್ಯಂಗೆಯ್ಯೆ॥ ಭೂಮಿ

೧೨ ದಾನಮೆ ಮಹಾದಾನಮಪ್ಪುದನಷ್ಟಾದಶಪುರಾಣದೋದು[ಂ] ಮನು ಬೃಹಸ್ಪತಿ ವಸಿ

೧೩ ಷ್ಟಾದಿಗಳಪ್ಪ ಮಹಾತ್ಮರ ಪೇಳ್ದ ಸ್ಮೃತಿಗಳೊಳಱಿವು ಕೇಸಯು ? ಯವುಳ್ಳದಱಿಂ ದಾನವಿನೋ

೧೪ ದದೆ ದಾನವ್ಯಸನಮೆ ತನಗೆ ಪರಮ ವ್ಯಸನಮಪ್ಪುದಱಿಂ ಪಟ್ಟದ ಕುಱುಗುನ್ದದ

೧೫ ತೆಂಕಣವೋ ? ದ ಮಹಾಸಮುದ್ರೋಪಮಮುಂ ಒಕಬಳಾಕಹಂಸಚಕ್ರವಾಕಾದ್ಯನೇಕ ಜಳ

೧೬ ವಿಹಂಗಮ ವಿರಾಜಿತಮುಂ ಮಕರ ಗ್ರಾಹಸಿಯಮಾರಸಪರ ಕಚ್ಛಪಪ್ರಮುಖ ಜಳಧರ

೧೭ ನಿಚಯ ನಿಚಿತಮುಂ ನೀಳನೀರಜನೀರಜ ಕುಮುದ ವಿಷಜ ಬಹುವಿಧ ಕುಸುಮ ಸಂಶೋಭಿ

೧೮ ತಮುಮಮಯಪಂಶೋಪ್ರೋಪಮಾ ? ಚ್ಛಾಹಿ ಪರಿಪೂರ್ಣ್ನಮಪ್ಪ ಕುಪ್ಪೆಯ ಗೆಱೆ[3] × ×

೧೯ × ದಾನೀಂತನ × × ಯಬ್ರಿಗಟ್ಟಿಗಳ್ ಮಣ್ಣಂ ಮತ್ತರ್ × × ಇನ್ನಿದ
ನಾವನೊರ್ವಂ ರಕ್ಷಿಸಿದಂ ಬಾ

೨೦ × ರಾಸಿಯೊಳಂ ಕುರುಕ್ಷೇತ್ರದೊಳನುಯ್ನ್ × ಬ್ರಾಹ್ಮಣಗ್ಗಯ್ನ್ ಅಂ
ಕವಿಲೆಯುಂ ಕೊಟ್ಟ ಫಲ [ಂ]

೨೧ ×[ದ]ನಳಿವ[ಂ] ಬಾಣರಾಸಿಯೊಳಂ ಕುರುಕ್ಷೇತ್ರದೊಳನುಯ್ನ್ ಪ್ಪಬ್ರಾಹ್ಮ
ಣರುಮನಯ್ನ್ ಅಂಕವಿ[ಲೆ]

೨೨ [ಯು]ಮನಳಿದ ಪಾತಕಂ ಸ್ವದತ್ತಂ ಪರದತ್ತಂ ವಾಯೋ ಹರೇತ ವಸುನ್ಧ
ರಾಂ ಷಷ್ಟಿರ್ವ್ವರ್ಷಸಹ

೨೩ ಶ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿ ॥ ಬಹುಭಿರ್ವ್ವಸುಧಾ ಭುಕ್ತಾ ರಾಜಭಿ
ಸ್ಸಗರಾದಿಭಿರ್ಯ್ಯಸ್ಯ

೨೪ ಯಸ್ಯ ಯದಾ ಭೂಮಿಸ್ತಸ್ಯ ತಸ್ಯ ತದಾ ಫಲಮಿತಿ॥ ಶ್ರೀರಾಷ್ಟ್ರಕೂಟ ವಂಶನ
ವೀರಾಗ್ರಣಿ ×

೨೫ ಮಹಾದೇವ ಭೂಪನ ವಧು ಘಾ × ಣಿಯೆನಿಸಿಪ್ಪೊನ್ದು ಅಪಿನೊಳಾವಾಣಿ ದೇಯಬ್ಬೆ
ರಾಣಿಗನ್ಯಾಂಗ ×

೨೬ ಯರ್ ॥ ಹರಚರಣಸರಸಿಜಾರ್ಚ್ಚಿತೆ ಪರಮಾಕೊತೆ? ಯುದಾರಚರಿತೆಯ
. . . . .

೨೭ ಶ್ವ? ವರದಾನಮೊಳ್ಳಿತೆಂದಾದರದಿಂ ಶ್ರೀ ದೇಯಬ್ಬರಸಿಮರ್ತ್ಸಿತ್ರದಿಂ ॥ ಕು
ಅುಗುಂದದ ಕುಪ್ಪೆಯ ಗೆ . .

೨೮ ಅುಯೊಳ್ಬಿಟ್ಟ . . . . . ಸ ಉತಿದಿಗು? ದೇಯಬ್ಬರಸಿಯರಅುದಿತ್ತಗ್ಗಳ್
ಮತ್ತರೆಂಟಂ

೨೯ ಮುದದಿಂ ॥ ಭೀಮಮಹೀಪಾಳನ ವಧು ಭೂಮಿಯನೊಮ್ರ್ತ್ತರೆಸೆವ
ಗಳ್ದಿಯ ಮಣ್ಣಂ ಶ್ರೀಮದ್ ಕುಪ್ಪೆ

೩೦ ಯಗೆಱಗೆಸ್ಪೀ ಮಹಿ ಪೊಗಳ್ವನ್ನೆ ಬಿಟ್ಟ . . . . ದಾಸ
ಗುಣದಿಂದೆ ಪಡೆದಳಾಸಿಸಿದೇಯಿಬ್ಬೆರಾಣಿ

೩೧ × ದ ವಾಸ್ಪದಮಂ ॥ ದೀನಮನದನ [ಭೀ ?] . . . . [ಣ] ತ್ತು
ಸುಗತಿವಡೆವುದು ಮೊಗ್ಗೆ ॥

೩೨ ದಾನ × × ವಂ ಪೇಳ್ದಡೆ ಮಾಸಿತ . . . . ಬುಧನುತನೊಳ್ಳಾ
ನೀನಗುತ್ತ ವೃತ್ತನೊಳೇನೊ

೨೩ × ×[ಸಿಂಘ?] ಮುನ್ನತಮೆಂಬ × ಶ್ರೀ. . . . . ರಡಾ ಸ. ಸೇನ
ಬೋವಾಯ್ತುವರ್ಮ್ಮಯ ನಾ[ಯಕ]

೨೪ [ನೊರೆದಂ] ದರ್ಮ್ಮಗಳ ॥ ವಾರ . . . . . ಜ ಸಾಸನವುಂ ಪ್ರೊಯ್ದು[೪]॥

● ●

೪ ಈ ಶಾಸನದ ಸೂಚನೆಯಿತ್ತುದಕ್ಕಾಗಿ ಡಾ. ಆರ್. ಸಿ. ಹಿರೇಮಠ ಕುಲಪತಿಗಳು, ಕ. ವಿ. ವಿ, ಧಾರವಾಡ, ಪಡಿಯಚ್ಚನ್ನು ತೆಗೆಯುವುದರಲ್ಲಿ ನೆರವಾದ ಪ್ರೊ. ಎಂ. ಎಸ್. ಇಂಚಲ ಮತ್ತು ತುರಮರಿಗ್ರಾಮದ ಪ್ರೊ. ಎಂ. ಆರ್. ಹಾರೂಗೊಪ್ಪ. (ಜಾಬಿನ ಸಾಯಿನ್ಸ ಕಾಲೇಜ, ಹುಬ್ಬಳ್ಳಿ), ಹಾಗೂ ಈ ಶಾಸನ ಮತ್ತು ಕಲಭಾವಿ ಶಾಸನಗಳ ಕಾಲವಿಷಯದಲ್ಲಿ ನೆರವಾದ ಡಾ. ಆರ್. ಎನ್. ಗುರವ ಅವರಿಗೆ ಲೇಖಕನು ಕೃತಜ್ಞ.

ಶಾಂಭವೀ ನಿರ್ಣಯದ ವಚನ

● ಕಾಶಿಪುಟ್ಟ ಸೋಮಾರಾಧ್ಯ

ವಚನಸಾಹಿತ್ಯದಲ್ಲಿ ಅನೇಕ ವಚನಕಾರರ ಹೆಸರುಗಳು ಅಜ್ಞಾತವಾಗಿವೆ. ಕೆಲವರ ಹೆಸರು ಮಾತ್ರ ದೊರೆತು, ಅವರ ವಚನ ದೊರೆಯದೇ ಇದ್ದರೆ, ಇನ್ನೂ ಕೆಲವರ ವಚನದ ಅಂಕಿತ ದೊರೆತು, ಅವರ ಹೆಸರು ದೊರೆತಿಲ್ಲ. ಪ್ರಸ್ತುತ 'ಶಾಂಭವೀ ನಿರ್ಣಯದ ವಚನ'ದ ಕರ್ತೃ ಯಾರೆಂಬುದು ತಿಳಿದುಬಂದಿಲ್ಲ. ಅಂಕಿತ 'ಮುದ್ವೀರ ಪ್ರಿಯ ಸಂಗಮೇಶ್ವರ' ಎಂದಿದೆ. 'ಮುದ್ವೀರ' ಎಂಬುದು ಬಹುಶ 'ಮುದ್ದುವೀರ→ಮುದ್ವೀರ→ಮುದ್ವೀರ→ಮುದ್ವೀರ ಎಂದಾಗಿರಬಹುದು. ಇದುವರೆಗೆ ಬೆಳಕಿಗೆಬಾರದ ಈ ವಚನ ಈಗ ಕನ್ನಡ ಅಧ್ಯಯನಪೀಠದ ಹಸ್ತಪ್ರತಿಭಾಂಡಾರದ ಕಾಗದ ಪ್ರತಿ ೩೦೬೨ ರಲ್ಲಿ ದೊರೆತಿದೆ.*

ಈ ವಚನವನ್ನು ಪರಿಷ್ಕರಿಸಿ ಇಲ್ಲಿ ಕೊಡಲಾಗಿದೆ :

ಕಂಗಳ ಮುಂದಣ ಬಯಲಿನೊಳಗೊಂದು ಪಿಟ್ಟ ಪ್ರಕಾಶಾನ್ವಿತವಾದ
ಮಹಾ ಜ್ಯೋದ್ಯತರವಾದುದೊಂದು ಗಗನ ಕೋಶವುಂಟು.
ಅಲ್ಲೊಂದು ದಿವ್ಯತರವಾದುದೊಂದು ಕಮಲವುಂಟು.
ಆ ಕಮಲದ ಮಧ್ಯದಲ್ಲಿ ಆವರಣತ್ರಯಾನ್ವಿತವಾದ ಮಹತ್ಕರ್ಣಿಕೆಯುಂಟು.
ಮತ್ತದರಗ್ರದಂತರ್ವರ್ಣತ್ರಯಂಗಳೊಳಗೆ ನೀಲ ವಿದ್ರುಮ
ರತ್ನ ಚಂದ್ರ ಪ್ರಕಾಶ ದಿವ್ಯ ಸಿಂಹಾಸನದ ಮೇಲೆ ಬೆಳಗುತ್ತಿರ್ಪ
ಶಿವಲಿಂಗವನನುಸಂಧಾನಿಸಿ ಪೂಜಿಸುವ ಕ್ರಮವೆಂತೆಂದೊಡೆ:
ಶ್ರೀ ಗುರು ಕರುಣಕಟಾಕ್ಷವೀಕ್ಷಣ ಬಲದಿಂದ
ಕಲ್ಮಷ ಕಂಟಕಾದಿಗಳಂ ತೊಲಗಿಸಿ
ಶಿವಲೋಕದ ಮಾರ್ಗವಿಡಿದು ಹೋಗಿ,
ಆ ಶಿವಲೋಕದ ಸಮೀಪಕ್ಕೆ ಸೇರಿ, ಪರೀಕ್ಷೆಯಮಾಡಿ ನೋಡಲು,
ಆ ಶಿವಲೋಕದ ಬಹಿರಾವರ್ಣದಲ್ಲಿ
ಮೂವತ್ತೆರಡು ಬಹಿರ್ಮುಖಿಳ ಸಂಸ್ಥಿತರಾದ ವಿವರ :
ಈಶಾನ್ಯ, ಪರ್ಜನ್ಯ, ಜಯಂತು, ಮಹೇಂದ್ರ, ಆದಿತ್ಯ, ಸತ್ಯ, ಭೃಂಸ್ಯ,
ಅಂತರಿಕ್ಷ, ಅಗ್ನಿ, ಪೂಷ, ವಿಥತ ಗ್ರಹಕ್ಷತ, ಯಮ, ಗಂಧರ್ವ,
ಭೃಂಗರಾಜ, ಮೃಗಸಿರುತಿ, ದೌವ್ವಾರಿಕ, ಸುಗ್ರೀವ, ಪುಷ್ಪದತ್ತ

* ಹಸ್ತಪ್ರತಿಯನ್ನು ಬಳಸಿಕೊಳ್ಳಲು ಅನುಮತಿ ನೀಡಿದ ಕನ್ನಡ ಅಧ್ಯಯನ ಪೀಠದ ನಿರ್ದೇಶಕರಿಗೆ ಕೃತಜ್ಞತೆಗಳು.

ವರುಣ, ಅಸುರ, ಶೇಷ, ರುಗ, ವಾಯು, ನಾಗಮುಖ್ಯ
ಪಲಾಟಕ, ಸೋಮ, ಭೂತ, ಅಧಿತ, ಧಿತರೆಂಬುವರೇ
ಮೂವತ್ತೆರಡು ವಸ್ತು ದೇವತೆಯರ ಒಡಂಬಡಿಸಿಕೊಂಡು,
ಅವರಿಂದೊಳಗಿರ್ಪ ಸೂರ್ಯವೀಥಿಯೆನಿಸುವ ತೃತೀಯ
ವರ್ಣದ ಮೂವತ್ತೆರಡು ದಳದಲ್ಲಿ
ಎಂಟು ಶೂನ್ಯದಳಗಳನುಳಿದು,
ಮಿಕ್ಕ ಇಪ್ಪತ್ತುನಾಲ್ಕು ದಳಗಳಲ್ಲಿರುವ
ಇಪ್ಪತ್ತುನಾಲ್ಕು ವಿಕಲಕ್ಷರಂಗಳೇ
ಅಷ್ಟವಿಧೇಶ್ವರರು, ಅಷ್ಟ ದಿಕ್‌ಪಾಲ್ಕಗಳು,
ಅಷ್ಟ ವಸುಗಳಾದ ವಿವರ :
ಕಕಾರವೆ ಅನಂತ, ಖಕಾರ ಇಂದ್ರ, ಗಕಾರವೇ ಧರಾ
ಘಕಾರವೇ ಸೂಕ್ಷ್ಮ, ಓಂಕಾರವೇ ಅಗ್ನಿ,
ಚಕಾರವೇ ಧ್ರುವ, ಛಕಾರವೇ ಶಿವೋತ್ತಮ,
ಜಕಾರವೇ ಯಮ, ಝಕಾರವೇ ಸೋಮ,
ಞಕಾರವೇ ಏಕನೇತ್ರ, ಟಕಾರವೇ ನಿರುತಿ,
ಠಕಾರವೇ ಆಪು, ಡಕಾರವೇ ರುದ್ರ, ಢಕಾರವೇ ವರುಣ,
ಣಕಾರವೇ ಅನಿಲ, ತಕಾರವೇ ತ್ರಿಮೂರ್ತಿ, ಥಕಾರವೇ
ವಾಯುವ್ಯ, ದಕಾರವೇ ಅನಲ, ಧಕಾರವೇ ಶ್ರೀಕಂಠ,
ನಕಾರವೇ ಕುಬೇರ, ಪಕಾರವೇ ಪ್ರತ್ಯುಂಷ, ಫಕಾರವೇ ಶಿಖಂಡಿ,
ಬಕಾರವೇ ಈಶಾನ್ಯ, ಭಕಾರವೇ ಪ್ರಭಾಸ ಇಂತೀ ವಿಧೇಶ್ವರಾದಿ
ಗಳಿಗಭಿವಂದಿಸಿ, ಅದರಿಂದೊಳಗಿರ್ಪ ಚಂದ್ರವೀಧಿ
ಯೆನಿಪ ದ್ವಿತೀಯಾವರ್ಣದ ಷೋಡಶದಳದಲ್ಲಿರುವ
ಷೋಡಶ ಸ್ವರಾಕ್ಷರಂಗಳೆ ಷೋಡಶ ರುದ್ರರಾದ ವಿವರ :
ಅಕಾರವೇ ಉಮೇಶ್ವರ, ಆಕಾರವೇ ಭವ,
ಇಕಾರವೇ ಚಂಡೇಶ್ವರ, ಈಕಾರವೇ ಶರ್ವ,
ಉಕಾರವೇ ನಂದಿಕೇಶ್ವರ, ಊಕಾರವೇ ರುದ್ರ,
ಋಕಾರವೇ ಮಹಾಕಾಳ, ೠಕಾರವೇ ಉಗ್ರ,
ಌಕಾರವೇ ಭೃಂಗಿರೀಟಿ, ೡಕಾರವೇ ಭೀಮ,
ಏ ಕಾರವೇ ಗಣೇಶ್ವರ, ಐಕಾರವೇ ಈಶಾನ್ಯ,
ಓಕಾರವೇ ವೃಷಭೇಶ್ವರ, ಔಕಾರವೇ ಪಶುಪತಿ,
ಅಂ ಎಂಬುದೇ ಷಣ್ಮುಖಿ, ಅಃ ಎಂಬುವೇ ಮಹಾದೇವನು.

ಇಂತಪ್ಪ ಷೋಡಶರುದ್ರರಿಗೆ ಸಾಷ್ಟಾಂಗವೆರಗಿ ಬಿನ್ನೈಸಿಕೊಂಡು, ಅದರಿಂದೊಳಗಿರ್ಪ, ಅಗ್ನಿವೀಥಿಯೆನಿಸುವ ಪ್ರಥಮಾವರ್ಣ ಅಷ್ಟದಳಗಳಲ್ಲಿರ್ಪ ಅಷ್ಟವ್ಯಾಪಾಕಕ್ಷರಂಗಳೆ ಅಷ್ಟಶಕ್ತಿಯರಾದ ವಿವರ:

ಸಾಕಾರವೇ ವಾಮೆ, ಷಕಾರವೇ ಜೇಷ್ಠೆ,
ಶಕಾರವೇ ರೌದ್ರೆ, ವಕಾರ ಕಾಳೆ, ಲಕಾರವೇ ಬಾಲೆ,
ರಕಾರವೇ ಬಲಪ್ರಮಥನಿ, ಯಕಾರವೇ ಸರ್ವಭೂತದಮನೆ,
ಮಕಾರವೇ ಮನೋನ್ಮನಿ–

ಇಂತಪ್ಪ ಶಿವಶಕ್ತಿರಪಾದ. ಪದ್ಮಂಗಳಿಗೆ ಸಾಷ್ಟಾಂಗವೆರಗಿ, ಪೊಡಮಟ್ಟು ಅದರಿಂದೊಳಗಿರ್ಪ ಅತಿರಹಸ್ಯವಾದ, ಮೂವತ್ತೆರಡು ಕೇಶರಂಗಳಿಗಾಶ್ರಯವಾದ ಶಾಂತಿ ಬಿಂದುಮಯವಾದ ಅಂತರ್ಮಂಡಲದ ಚತುರ್ದಳದಲ್ಲಿರುವ ಚತುರಕ್ಷರಂಗಳೇ ಚತುಃಶಕ್ತಿಯರಾದ ವಿವರ:

ಸ ಎಂಬುದೇ ಅಂಬಿಕೆ, ಅಂ ಎಂಬುದೇ ಗಣಾನಿ,
ಡಿಂ ಎಂಬುದೇ ಈಶ್ವರಿ, ಕ್ಷಂ ಎಂಬುದೇ ಉಮೆ–
ಇಂತಪ್ಪ ಪರಶಕ್ತಿಯರ ಪಾದಾರವಿಂದವನು
ಅನೇಕ ಪ್ರಕಾರದಿಂ ಸ್ತುತಿಮಾಡಿ ಬೇಡಿಕೊಂಡು,
ಅವರಪ್ಪಣೆವಿಡಿದು ಒಳಪೊಕ್ಕು
ಅಲ್ಲಿ ಕದಂಬಗೋಳಕಾಕಾರ ಸ್ಫುರಶಕ್ತಿದಿಧಿಕಾಯೆಂದುಂಟಾಗಿ
ರಹಸ್ಯಕ್ಕೆ ರಹಸ್ಯವಾದ ಷಡಧ್ವಜನ್ಮಭೂಮಿಯಾದ
ಶಕ್ತಿ ಶಿರೋಗ್ರದಲ್ಲಿ ಪಂಚಾಕಾಶ ಷಟ್ತಾರಕ
ತ್ರಿವಿಧ ಲಿಂಗಾಂಗಗಳೇ ಕಕಾರವಾದ ಪರಬ್ರಹ್ಮದ
ನೆಲೆಯನರಿಯುವುದೆ ಮು[1]ದ್ವೀ[1]ರ ಪ್ರಿಯ ಸಂಗಮೇಶ್ವರ
ನಲ್ಲಿ ಬೆರೆವಂತೆ ನಿಜಯೋಗ ಕಾಣಿರೋ !

● ●

---

೧. ದ್ದೇ(ಮೂಲ).

ಪೊನ್ನಕವಿ ಮತ್ತು ಕನ್ನಡನಿಘಂಟು

● ಹಂಪ. ನಾಗರಾಜಯ್ಯ

ಕರ್ನಾಟಕ ಸರಕಾರದ ಉದಾರ ಧನ ಸಹಾಯದಿಂದ, ಕನ್ನಡ ಸಾಹಿತ್ಯ ಪರಿಷತ್ತಿನವರು, ಬೃಹತ್ ಕನ್ನಡನಿಘಂಟನ್ನು ಕಳೆದ ಇಪ್ಪತ್ತು ವರ್ಷಗಳಿಂದ ಸಿದ್ಧಪಡಿಸುತ್ತಿದ್ದಾರೆ. ಈಗ ಅದರ ಮೂರು ಸಂಪುಟಗಳು ಮುದ್ರಣವಾಗಿವೆ. ಇದುವರೆಗೆ ಅಚ್ಚಾಗಿರುವ ಸಂಪುಟ ಹಾಗೂ ಸಂಚಿಕೆಗಳನ್ನು, ಪೊನ್ನಕವಿಯ ಶಾಂತಿಪುರಾಣದ ಹಿನ್ನೆಲೆಯಲ್ಲಿ ಪರಾಮರ್ಶಿಸುವುದು ಈ ಲೇಖನದ ಉದ್ದೇಶ.

ನೂರಾರು ಹಳಗನ್ನಡ-ನಡುಗನ್ನಡ ಕಾವ್ಯಗಳಿಂದ ಶಬ್ದಗಳನ್ನು ಸಂಗ್ರಹಿಸಿದ್ದಾರೆ. ಅದರಂತೆ ಪೊನ್ನನ ಶಾಂತಿಪುರಾಣದಿಂದಲೂ ಶಬ್ದಸಂಗ್ರಹವಾಗಿದೆ. ಆದರ ಪೊನ್ನನ ಕಾವ್ಯದಿಂದ ಮಾಡಿರುವ ಶಬ್ದಸಂಗ್ರಹಕಾರ್ಯ ಅತ್ಯಂತ ಅವಹೇಳನಕರವಾಗಿದೆ. ಅದರ ಅಸಮರ್ಪಕತೆಯನ್ನು ಹೆಜ್ಜೆ ಹೆಜ್ಜೆಗೂ ಕಾಣಬಹುದು. ಪೊನ್ನನಿಗೆ ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಸಲ್ಲಬೇಕಾದ ಸ್ಥಾನ ಸಿಕ್ಕಿಲ್ಲ. ಗಾಯದ ಮೇಲೆ ಬರೆ ಎಳೆದಂತೆ, ಈ ನಿಘಂಟಿನಲ್ಲೂ ಪೊನ್ನನಿಗೆ ಅವಜ್ಞೆ ಸಂದಿದೆ. ಇದು ಉದ್ದೇಶಪೂರ್ವಕವಾಗಿ ಆದುದಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೂ ಸಂಪಾದಕ ಮಂಡಲಿ ಸದಸ್ಯರು ಹಳಗನ್ನಡ ಕಾವ್ಯಗಳ ಅಭ್ಯಾಸಕ್ಕೆ ಗಮನಕೊಟ್ಟಿಲ್ಲವೆಂಬುದು ಸ್ಪಷ್ಟವಾಗುತ್ತದೆ. ನನ್ನ ಹೇಳಿಕೆಯನ್ನು ಕೆಲವು ಉದಾಹರಣೆಗಳನ್ನಿತ್ತು ಸಮರ್ಥಿಸುತ್ತೇನೆ :

೧. **ಅನೇಡ ಮೂಕ** (ಪುಟ ೨೭೦) : 'ಕಿವುಡ ಮತ್ತು ಮೂಕ'
ಈ ಶಬ್ದದ ಪ್ರಾಚೀನ ಪ್ರಯೋಗಗಳಲ್ಲಿ ಪೊನ್ನನದು ಪ್ರಮುಖವಾಗಿದ್ದರೂ ಇದರ ಉಲ್ಲೇಖ (೮-೧೩೨ ವ) ಬಿಟ್ಟುಹೋಗಿದೆ.

೨. **ಇಂದೊಳ** (೬೩೨) : 'ಹಿಂದೋಳ ರಾಗ'
ಸಂಸ್ಕೃತದ ಹಿಂದೋಳ ಶಬ್ದದತದ್ಭವರೂಪವಾದ 'ಇಂದೋಳ'ವನ್ನು ಪಂಪಾದಿಗಳು ಬಳಸಿದ್ದಾರೆ. ಆದರೆ ಹ್ರಸ್ವಸ್ವರಯುಕ್ತವಾದ ಇಂದೊಳವೆಂಬ ರೂಪಕ್ಕಿರುವ ಪ್ರಾಚೀನತಮ ನಿದರ್ಶನ ಪೊನ್ನನದು. ನಿಘಂಟಿನಲ್ಲಿ ಶಾಂತಿಪುರಾಣದ (೮-೬೫) ಉಲ್ಲೇಖ ಸೇರಿಲ್ಲ.

೭. **ಊರ್ಜ** (೧೦೨೨) : 'ಶಕ್ತಿ. ಸಾಮರ್ಥ್ಯ'
ಈ ಶಬ್ದಕ್ಕೆ ಶಕ್ತಿ-ಸಾಮರ್ಥ್ಯ ಎಂಬ ಅರ್ಥಕೊಟ್ಟು, ಪ್ರಯೋಗ ಯಾವುದೂ ಸಿಕ್ಕಿಲ್ಲವೆಂದು ಕೈಯಾಡಿಸಿಬಿಟ್ಟಿದ್ದಾರೆ. ಆದರೆ ಇದಕ್ಕೆ ಪೊನ್ನನ ಶಾಂತಿಪುರಾಣದಲ್ಲಿ (೪-೬೧) ಪ್ರಯೋಗವಿದೆ. ಸ್ವಾರಸ್ಯವೆಂದರೆ ಪೊನ್ನನ ಪ್ರಯೋಗವನ್ನು ಗುರುತಿಸಿಯೂ ಮರೆತುಬಿಟ್ಟಿದ್ದಾರೆ. ಅಣಿವಿಣಿ ಶಬ್ದಕ್ಕೆ (ಪುಟ ೧೭೧) ಅರ್ಥ ಹೇಳಿ ಪ್ರಯೋಗ ಕೊಡುವಾಗ ಉದಾಹರಿಸಿರುವ ಪೊನ್ನನ ಪದ್ಯಭಾಗದಲ್ಲೇ ಊರ್ಜ ಶಬ್ದವೂ ಇದೆ.

೪. **ಕರೇಣು** (೧೫೬೦) : 'ಹೆಣ್ಣಾನೆ'
ಈ ಶಬ್ದದ ಕೆಲವೇ ಪ್ರಾಚೀನ ಪ್ರಯೋಗಗಳಲ್ಲಿ ಪೊನ್ನ ಕವಿಯದೂ ಒಂದು; ಇದು ಕೂಡ ನಿಘಂಟಿನಿಂದ ಮರೆಯಾಗಿದೆ (೨-೮).

೫. **ಒಡಹುಟ್ಟು** (೧೨೧೮) : 'ಜತೆಯಲ್ಲಿ ಹುಟ್ಟುವುದು'
ಈ ಶಬ್ದಕ್ಕೂ ಪೊನ್ನನದೇ ಪ್ರಾಚೀನ ಪ್ರಯೋಗ (೭-೧೦೪). ಇದುಕೂಡ ನಿಘಂಟಿನಲ್ಲಿ ತಪ್ಪಿಹೋಗಿದೆ.

೬. **ಕಿಂಕಿಣಿ** (೧೭೯೬) : 'ಕಿರುಗೆಜ್ಜೆ'
ಯಥಾಪ್ರಕಾರ ಇಲ್ಲಿಯೂ ಪೊನ್ನನ ಪ್ರಯೋಗ (೪-೬೮) ಮಂಗಮಾಯವಾಗಿದೆ.

೭. **ಅಪಾಕೃತ** (೨೯೫) : 'ಹೊರದೂಡಿದ, ನಿರಾಕರಿಸಲಾದ'
ಈ ಶಬ್ದಕ್ಕೆ ಸಿಗುವ ಮೂರನೆಯ ಪ್ರಯೋಗ ಪೊನ್ನನದು (೧ ೭೧ ವ).

೮. **ಅಭಿಭೂತ** (೩೨೧) : 'ಸೋತುಹೋದ'
ಇದಕ್ಕೆ ಸಿಗುವ ಏಕೈಕ ಪ್ರಯೋಗ ಪೊನ್ನನದು (೧-೭೧ ವ). ಇದೂ ಇಲ್ಲ.

೯. **ಒಣರ್** (೧೨೨೧) : 'ಕೂಡು, ಸೇರು'
ಪೊನ್ನನದೇ (೧-೮೧) ಹಳೆಯ ನಿದರ್ಶನ. ಅದನ್ನೂ, ಅದರ ಜತೆಗೆ 'ತೊಡಗು, ಪ್ರಾರಂಭಿಸು' ಎಂಬರ್ಥವನ್ನು ಕೊಡಬೇಕು.

೧೦. **ಆಲಾನ ಸ್ತಂಭ** (೬೭೧) : 'ಆನೆಯನ್ನು ಕಟ್ಟುವ ಕಂಬ'
ಪಂಪನದನ್ನು ಬಿಟ್ಟರೆ ಪೊನ್ನನದೇ ಪ್ರಾಚೀನ ಪ್ರಯೋಗ (೨-೮).

೧೧. **ಉದಾತ್ತ** (೯೦೮) : 'ಶ್ರೇಷ್ಠ'
ಈ ಶಬ್ದಕ್ಕೂ ಸಿಗುವ ಎರಡನೆಯ ದೃಷ್ಟಾಂತವೇ ಪೊನ್ನಕವಿಯದು (೭-೧೮ವ).

೧೨. **ಅಂಗಚಿತ್ತ** (೮) : 'ಉಡುಗೊರೆ'
'ಅಂಗಚಿತ್ತಂಗೊಡು' (೩–೫೩ ವ) ಎಂಬುದಕ್ಕೆ ಪೊನ್ನನದು ಏಕೈಕ ನಿದರ್ಶನ.

೧೩. **ಅಭಿಯೋಗ** (೩೨೩) : 'ಆಸಕ್ತಿ' + 'ಸಂತೋಷ'
ಶಾಂತಿಪುರಾಣದಲ್ಲಿದೆ (೩–೫೪). 'ಸಂತೋಷ' ಎಂಬರ್ಥ ಸೇರಬೇಕು.

೧೪. **ಉದಂತ** (೯೦೩) : 'ವೃತ್ತಾಂತ, ಸುದ್ದಿ'
ಪೊನ್ನಕವಿಯದು (೨–೧೮ ವ) ಕಾಲದ ಗಣನೆಯಿಂದ ಮೊದಲು ಬರುತ್ತದೆ.

೧೫. **ಅನಿವಂಗೆಯ್** (೨೩೯) : 'ಒತ್ತಾಯಪಡಿಸು'
ಪೊನ್ನನ ಶಾಂತಿಪುರಾಣದಲ್ಲಿದೆ (೪–೬೭ ವ), ನಿಘಂಟಿನಲ್ಲಿಲ್ಲ.

೧೬. **ಅವಿತಥ** (೪೬೦) : 'ಸುಳ್ಳಲ್ಲದ'
ಇದಕ್ಕೂ ಶಾಂತಿಪುರಾಣದ ಪ್ರಯೋಗವನ್ನು (೨–೧೯) ಬಿಡುವಂತಿಲ್ಲ.

೧೭. **ಅಳ್ಳೆವಿಳ್ಳೆ** (೫೩೫) : 'ಚದುರುವಿಕೆ'
ಪಂಪನ ಉಲ್ಲೇಖ ಬಿಟ್ಟರೆ ಪೊನ್ನನದೇ, 'ಅಳ್ಳೆವಿಳ್ಳೆಯಾಗು' (೨–೨೭ ವ) ಎಂಬ ಕ್ರಿಯಾರೂಪದ ಪ್ರಯೋಗ ಉಪಲಬ್ಧವಾಗಿರುವುದು, ಇಲ್ಲಿಲ್ಲ.

೧೮. **ಅನೋಕಹ** (೨೭೧) : 'ಮರಗಿಡ'
ಶಾಂತಿಪುರಾಣದ (೨–೯೨) ಪ್ರಯೋಗ ಕೊಡಬೇಕು.

೧೯. **ಆಸಾರ** (೬೯೬) : 'ಮಳೆ'
ಶಾಂತಿಪುರಾಣದ ಉದಾಹರಣೆ ಉಲ್ಲೇಖ್ಯ.

೨೦. **ಇಂದ್ರನೀಲ** (೭೩೪) : 'ನೀಲವರ್ಣದ ರತ್ನ'
ಈ ಶಬ್ದಕ್ಕೆ ಸಿಗುವ ಮೊತ್ತಮೊದಲನೆಯ ಉಲ್ಲೇಖವೇ ಪೊನ್ನನದು.(೨–೯೪) ಇದು ನಿಘಂಟಿನಲ್ಲಿ ಉದಾಹೃತವಾಗಿಲ್ಲ.

೨೧. **ಉಪಲ** (೯೪೫) : 'ಕಲ್ಲು'
ಈ ಶಬ್ದದ ಪ್ರಾಚೀನತಮ ಪ್ರಯೋಗ ಪೊನ್ನನದು (೨–೯೪).

೨೨. **ಓಳಿ** (೧೩೧೪) : 'ಸಾಲು, ಕ್ರಮ'
ಪೊನ್ನನ (೨–೧೦೪) ಶಾಂತಿಪುರಾಣದ ದಾಖಲೆ ಗಮನಾರ್ಹ.

೨೩. **ಅತ್ತಿಗೆ** (೧೮೯) : 'ಅಣ್ಣನ ಹೆಂಡತಿ'
ಇಲ್ಲೂ ಶಾಂತಿಪುರಾಣದ ಮಾತು (೬-೮೦) ಮರೆಯಾಗಿದೆ; ಶಬ್ದಾರ್ಥ ವಿಜ್ಞಾನದ ದೃಷ್ಟಿಯಿಂದ, ಪಂಪನ ಪ್ರಯೋಗದಂತೆ ಪೊನ್ನನದೂ ಮುಖ್ಯ ವಾಗುತ್ತದೆ.

೨೪. **ಕಱುತ್ತಿಱು** (೧೬೬೦) : 'ತೀಕ್ಷ್ಣವಾಗಿ ಇರಿ'
ಈ ಮಾತಿಗೂ ಪಂಪನದನ್ನು ಬಿಟ್ಟರೆ ಪೊನ್ನನ ಶಾಂತಿಪುರಾಣದ (೩-೬೬) ಪ್ರಯೋಗವೇ ಲಭ್ಯ ದಾಖಲೆ.

೨೫. **ಉಲ್ಲವ** (೯೯೫) : 'ವಿತಾನ, ಮೇಲ್ಕಟ್ಟು'
ಇಲ್ಲಿಯೂ ಪೊನ್ನನ ದೃಷ್ಟಾಂತ ತಪ್ಪಿಹೋಗಿದೆ.

೨೬. **ಆಸಂದಿ** (೬೯೨) : 'ವೇತ್ರಾಸನ'
ಪ್ರಾಚೀನ ಕನ್ನಡ ಕಾವ್ಯಗಳಲ್ಲೆಲ್ಲಾ ಸಿಗುವ ಏಕೈಕ ದೃಷಾಂತ ಪೊನ್ನನದು (೧೦-೬೭). ಇದೇ ನಿಘಂಟಿನಲ್ಲಿದು ಅದೃಶ್ಯ !

೨೭. **ಅವಮೋದರ್ಯ** (೪೪೮) : 'ಜೈನ ತಪ'
ಪೊನ್ನನ ನಿದರ್ಶನಕ್ಕೆ (೯-೧೦೫ ವ) ಕೊಕ್ ಕೊಡಲಾಗಿದೆಯಲ್ಲದೆ ಜನ್ನನ ಅನಂತನಾಥ ಪುರಾಣದ (೪-೧೬ ವ) ಪ್ರಯೋಗಕ್ಕೂ ಸೊನ್ನೆಬಿದ್ದಿದೆ.

೨೮. **ಏಡಿಸು** (೧೧೫೩) : 'ನಿಂದಿಸು'
ಇದಕ್ಕೆ 'ಗೇಲಿಮಾಡು, ತಮಾಷಿಸು' ಎಂಬರ್ಥವೂ ಉಂಟು. ಈ ಹೊಸ ಅರ್ಥವನ್ನೂ ಸೂಚಿಸುವುದಲ್ಲದೆ, ಅದಕ್ಕೆ ಪೊನ್ನನ ಶಾಂತಿಪುರಾಣದ (೯-೮೦ ವ). ಪ್ರಯೋಗವನ್ನು ಹೊಸದಾಗಿ ಸೇರಿಸಬೇಕು.

೨೯. **ಊನ** (೧೦೧೭) : 'ಕುಂದು'
ಪಂಪನ ನಿದರ್ಶನ ಕೊಟ್ಟಿದ್ದಾರೆ. ಅದರ ಜತೆಗೆ ಕೊಡಲೇಬೇಕಾದ ದೃಷ್ಟಾಂತ ಪೊನ್ನನದು (೯-೧೩); ಇಲ್ಲಿ 'ಶಕ್ತಿಹೀನ' ಎಂಬರ್ಥ ಕೂಡ ಬರುತ್ತದೆ.

೩೦. **ಕಫ** (೧೫೦೬) : 'ಶ್ಲೇಷ್ಮಧಾತು'
ಈ ಶಬ್ದಕ್ಕಿರುವ ಮೊತ್ತಮೊದಲನೆಯ ಪ್ರಯೋಗ ಪೊನ್ನನದು (೭ ೪).

೩೧. **ಅಣಿವಿಣಿ** (೧೭೧) : + 'ಅಂದವಾಗಿ ವಿನ್ಯಾಸಗೊಳಿಸಿದ ಕಟ್ಟು'
ಈ ಶಬ್ದಕ್ಕೆ ನಿಘಂಟಿನಲ್ಲಿ ಬಿಕ್ಕಟ್ಟು, ಅಡ್ಡಿ, ತಡೆ, ನಿರೋಧ ಎಂಬ ಅರ್ಥಗಳ ನ್ನಿತ್ತು ಪೊನ್ನನ ಶಾಂತಿಪುರಾಣದ (೪-೬೧) ಪ್ರಯೋಗ ಕೊಟ್ಟಿದ್ದಾರೆ.

ವ್ಯುತ್ಪತ್ತಿ ಭಾಗದಲ್ಲಿ 'ಪರಾ । ಮರಾಠಿ. ಅಣೀಬಾಣೀ' ಎಂದು ಸೂಚಿಸಿದ್ದಾರೆ. ಇದು ತಪ್ಪು. ಅಣಿವಿಣಿ ಎಂಬುದು ಅನ್ಯದೇಶ್ಯವಲ್ಲ, ಇದು ಶುದ್ಧ ದೇಶ್ಯ ಶಬ್ದ; ತಮಿಳಿನಲ್ಲಿ ಅಣಿ + ಪಿಣಿ ಎಂಬ ಜ್ಞಾತಿರೂಪಗಳಿವೆ. ನಿಘಂಟಿನಲ್ಲಿ ಕೊಟ್ಟಿರುವ ಅರ್ಥವೂ ಸರಿಯಲ್ಲ. ಅಣಿ + ಪಿಣಿ = ಅಣಿವಿಣಿ = 'ಅಂದವಾಗಿ ವಿನ್ಯಾಸಗೊಳಿಸಿದ ಕಟ್ಟು' ಎಂಬ ಅರ್ಥವನ್ನು ಸೂಚಿಸಬೇಕು.

೨೨. **ಅವಡವಡು** (೪೪೧) : 'ರಾಶಿ, ಮುದ್ದೆ' (?)

ಇದಕ್ಕೆ ಪೊನ್ನನದೊಂದೇ ಏಕೈಕ ಪ್ರಯೋಗ (೬–೨೧). ನಿಘಂಟಿನಲ್ಲಿ ಉದಾಹರಿಸಿದ್ದರೂ ನಿಷ್ಪತ್ತಿಸುವಾಗ ಎಡವಿದ್ದಾರೆ. ಇದಕ್ಕೆ ನಿಷ್ಪತ್ತಿ ಭಾಗದಲ್ಲಿ 'ಪರಾ/ಮರಾಠಿ' ಅವಡಚಿವಡ' ಎಂದೂ, ಅರ್ಥವನ್ನು 'ಅಸ್ತವ್ಯಸ್ತ' ಎಂದೂ ಸೂಚಿಸಬೇಕು.

೨೩. **ಎಯ್ಯಪಿಂಡು** +

'ಮುಳ್ಳುಹಂದಿಗಳ ಹಿಂಡು' ಎಂಬರ್ಥದ ಈ ಶಬ್ದ ಮತ್ತು ಪ್ರಯೋಗ ಹೊಸದಾಗಿ ನಿಘಂಟಿಗೆ ಸೇರಬೇಕಾಗಿದೆ. ಪೊನ್ನನ ಶಾಂತಿ ಪುರಾಣದ (೪–೧೬ ವ) ಪ್ರಯೋಗ ತುಂಬ ಗಮನಾರ್ಹ ಚಾರಿತ್ರಿಕ ದಾಖಲೆಯಾಗಿದೆ. ಇದು ದೇಶ್ಯ ಶಬ್ದ.

೨೪. **ಉಸುರ್** +

ನಿಘಂಟಿನಲ್ಲಿ ಕೊಟ್ಟಿರುವ ಎರಡು ಉಸುರ್ ಶಬ್ದಗಳಲ್ಲದೆ ಪೊನ್ನನ ಕಾವ್ಯದಲ್ಲಿ ಇನ್ನೊಂದು ಉಸುರ್ ಶಬ್ದವಿದೆ (೪–೮೨). ಇದು ತುಂಬ ಅಪೂರ್ವ ಶಬ್ದ. ಬಹುಶಃ ಇಡೀ ಕನ್ನಡ ವಾಙ್ಮಯದಲ್ಲೇ ಪೊನ್ನನದು ಏಕೈಕ ಪ್ರಯೋಗ. ಇಷ್ಟು ಅಪರೂಪದ ಶಬ್ದ ಈ ಬೃಹತ್ ನಿಘಂಟಿನಲ್ಲಿ ದಾಖಲಾಗಿಲ್ಲ! ಉಸುರ್$_1$ ಉಸುರ್$_2$ ಎಂದು ಕೊಟ್ಟಿರುವಂತೆ ಉಸುರ್$_3$ ಎಂದು ಇದನ್ನು ಹೊಸದಾಗಿ, ಪರಿಷ್ಕೃತ ಮುದ್ರಣ ಅಥವಾ ಅನುಬಂಧ ಕೊಡುವಾಗಲಾದರೂ ಅವಶ್ಯ ಸೇರಿಸಬೇಕು. ಇದಕ್ಕಿರುವ ಅರ್ಥ 'ಆಧಿಕ್ಯ, ಅಗಾಧತೆ' ಎಂಬುದು. ಇದು ದೇಶ್ಯ ಶಬ್ದ. ತಮಿಳಿನಲ್ಲಿ ಇದಕ್ಕೆ ಉಯಿರ್ (= ಎತ್ತರ, ಆಧಿಕ್ಯ) ಎಂಬ ಜ್ಞಾತಿರೂಪವಿದೆ. ಹಳಗನ್ನಡ ಕವಿಗಳಲ್ಲಿ ಪೊನ್ನನೊಬ್ಬ ಕನ್ನಡದ ಈ ರೂಪವನ್ನು ಎರಡು ಪ್ರಯೋಗಗಳ ಮೂಲಕ (೪–೮೨. ೪–೮೨ ವ) ಶಾಂತಿ ಪುರಾಣದಲ್ಲಿ ಉಳಿಸಿಕೊಟ್ಟಿದ್ದಾನೆ.

೨೫. **ಅಜಯ್ಯ** +

ಇದು ಶಾಂತಿಪುರಾಣದಲ್ಲಿ ಎರಡುಕಡೆ ಬರುತ್ತದೆ (೧–೪೦, ೧–೪೫). ಕನ್ನಡ ಸಾಹಿತ್ಯದಲ್ಲಿ ಇದೂ ಒಂದು ಅಪೂರ್ವ ಶಬ್ದ, ಅನ್ಯ ಪ್ರಯೋಗಗಳಿಲ್ಲ. ಇದು

ಸಂಸ್ಕೃತದ 'ಅಜಯ' ಶಬ್ದದಿಂದ ಬಂದಿದೆ, 'ಸೋಲಿಸಲಾಗದವನು' ಎಂದು ಅರ್ಥ. ಪೊನ್ನನ ಈ ಅಪೂರ್ವ ದಾಖಲೆಯನ್ನು ಹೊಸದಾಗಿ ನಿಘಂಟಿನಲ್ಲಿ ಸೇರಿಸಬೇಕು.

೨೬. **ಕವಳಿಗೆ (೧೬೨೩) :**

ಪೊನ್ನನ ಪ್ರಯೋಗ (೮-೧೨೬)ಕೊಟ್ಟಿದ್ದಾರೆ. ಆದರೆ ನಿಘಂಟಿನಲ್ಲಿ ಪೊನ್ನನ ಶಬ್ದವನ್ನು ತಪ್ಪಾಗಿ ಅರ್ಥೈಸಿಕೊಂಡು 'ಭಿಕ್ಷಾಪಾತ್ರೆ' ಎಂಬರ್ಥದ ಕೆಳಗೆ ಉದಾಹರಿಸಿದ್ದಾರೆ. ಇದು ಎಷ್ಟು ಅಭಾಸಕರವಾಗಿದೆ ಎಂಬುದನ್ನು ಪೊನ್ನನ ಇನ್ನೊಂದು ಪ್ರಯೋಗ (೮-೧೩೪ ವ) ದೃಢಪಡಿಸುತ್ತದೆ. ಪೊನ್ನನ ಈ ಎರಡೂ ಪ್ರಯೋಗಗಳಿಗೆ ಇರುವ ಅರ್ಥ 'ಓಲೆಗ್ರಂಥ' ಎಂಬುದು.

ಈ ರೀತಿಯಾಗಿ ಇನ್ನೂ ಕೆಲವು ಉದಾಹರಣೆಗಳನ್ನು ಕೊಡಬಹುದು. ಈ ಪಟ್ಟಿಯನ್ನು ಇನ್ನು ಬೆಳೆಸುವುದು ಬೇಕಿಲ್ಲ. ಇಷ್ಟರಿಂದಲೇ ಸ್ಪಷ್ಟವಾಗುವಂತೆ ಪೊನ್ನಕವಿಗೆ ಈ ನಿಘಂಟಿನಲ್ಲಿ ಅಪಚಾರವಾಗಿದೆ. ಇಂಥ ನ್ಯೂನತೆಗಳು ನಿಘಂಟಿನ ಮೌಲ್ಯವನ್ನು ತಗ್ಗಿಸುತ್ತವೆ. ಮುಂದೆ ಇನ್ನೂ ಪ್ರಕಟವಾಗಬೇಕಾದ ನಿಘಂಟಿನ ಭಾಗ ಅರ್ಧಕ್ಕಿಂತ ಹೆಚ್ಚಿದೆ. ಅದರಿಂದ ಮುಂದೆ ಬರುವ ಸಂಚಿಕೆಗಳಲ್ಲಿ ಪೊನ್ನನ ಹಾಗೂ ಇತರ ಕವಿಗಳ, ಶಾಸನಗಳ ಪ್ರಾಚೀನ ಪ್ರಯೋಗಗಳು ತಪ್ಪಿಹೋಗದಂತೆ ಸಂಪಾದಕ ಸಮಿತಿಯವರು ವ್ಯವಸ್ಥೆ ಸಬೇಕಾಗಿ ಪ್ರಾರ್ಥಿಸುತ್ತೇನೆ.

● ●

ಎರಡು ಕವನಗಳು

● ಲತಾ. ಎಂ. ಗುತ್ತಿಪಾಟೀಲ

೧. ಸಹನೆ

ಮನದ ಭಾವನೆಯೆಲ್ಲಾ ತ್ರಿಜ್ಯವಾಗಿದ್ದಾಗ
ನೇರ ಬಿಂದುವಿನಲ್ಲಿ ನಿಂತ ನಾನು
'ಜ್ಯಾ' ಆಗಲಿಕ್ಕೆ ಪ್ರಯತ್ನಿಸಿದರೂ
ಆ 'ಕೈವಾರ' ನನ್ನನ್ನಾಗಲೇ
ತ್ರಿಜ್ಯದೆಡೆಗೆ ಸಾಗಿಸಿ ಆಚೆಗೆ
ಹೋಗಲಾರದೆ ಅಲ್ಲೆ ನಿಂತು....
ಅದರೊಳಗ ಏನೇನೋ ವಿಚಾರ.
ಸಂತ್ಯಾಗ ಸಿಕ್ಕ ತಲೆಕೆಡಿಸಿಕೊಂಡು
ಬ್ಯಾಸರಾದಾಗ ದೂರದೂರ ಹೋಗಬೇಕನ್ನುವಾಗಲೇ
ಆ ತ್ರಿಜ್ಯ ತನ್ನ ಬಂದೀಖಾನೆಯು .
ಬಿಂದುವಿನಲ್ಲಿ ತಳ್ಳುತ್ತಿರುವಂತೆ
ತಳ್ಳಿದಾಗ ನಾ ಬಿಂದುವಿನಲ್ಲೇ ಕುಸಿದಿದ್ದೆ.

೨. ಶೇಷ

'Love is blind' ಅಂತಾ
ಗೊತ್ತಿದ್ದರೂ ಮತ್ತೂ
ಎಲ್ಲಾರೂ ಕುರುಡಾಗಾಕನs ಹೋಗ್ತಾರ
ಕಣ್ಣುಕಳಕೊಂಡ ಕೊಚ್ಚ್ಯಾಗ ಹೊರಳಾಡಿ
ಈ ಕಡೆ ಬರೂದುಂದ
ರಾಡಿ ಹತ್ತಿದಂಗಾಗಿ
ಅಡಬಡಿಸಿ ಕಣ್ಣುತೆರೆದ ನೋಡಿದರ
ಅದೇನ ಬಿಡ್ತದನs ವಿಚಾರ ಮಾಡಾಕ ಹಚ್ಚತೈತಿ
ಕುರುಡಾಗಿ ಏನೇನೋ ಮಾಡಿ
ಕಣ್ತೆರದ ಜಳಕಾ ಮಾಡಾಕ ಹೋದರ
ಅದರ ಮುಲಿಸ ಅಂಶ ಸ್ವಲ್ಪಾರ ಉಳೀದ ಬಿಡ್ತದನs

● ●

ಬತ್ತೀಸರಾಗಗಳು-ಬತ್ತೀಸಾಯುಧಗಳು

● ಕೆ. ಶ್ರೀಕಂಠಯ್ಯ

ಹಳಗನ್ನಡ ಕಾವ್ಯಗಳನ್ನು ಪರಾಮರ್ಶಿಸಿದಾಗ 'ಬತ್ತೀಸರಾಗಗಳು' ಮತ್ತು ಬತ್ತೀಸಾಯುಧಗಳು ಎಂಬ ಪ್ರಯೋಗಗಳು ಅಲ್ಲಲ್ಲಿ ಕಂಡುಬರುತ್ತವೆ. ಅವುಗಳನ್ನು ಕುರಿತು ಒಂದು ಸಣ್ಣ ವಿವೇಚನೆ ಇಲ್ಲಿ ನಡೆದಿದೆ. ಮುಂದೆ ಇವುಗಳ ಬಗೆಗೆ ಹೆಚ್ಚಿನ ಚಿಂತನೆಗೆ ಪ್ರಾಜ್ಞರಿಗೆ ಇದು ಒಂದು ನೆನಪಿನ 'ಮೀಟುಗೋಲಾಗಲಿ' ಎಂದು ಇವುಗಳನ್ನು ಇಲ್ಲಿ ಪ್ರಸ್ತಾಪಿಸಿದ್ದೇನೆ. ಇಲ್ಲಿ ಎಲ್ಲ ಕನ್ನಡ ಕಾವ್ಯಗಳನ್ನು ಪರಿಶೀಲಿಸಲು ಆಗಿಲ್ಲ. ಹಾಗೇ ಅವುಗಳನ್ನು ಸಮಗ್ರವಾಗಿ ಪರಿಶೀಲಿಸಿದಾಗ ಬತ್ತೀಸಾಯುಧ, ಬತ್ತೀಸರಾಗಗಳಂತೆ 'ಬತ್ತೀಸ' ಎಂಬ ಹೆಸರಿನಿಂದ ರೂಢಿಯಲ್ಲಿದ್ದ ಇನ್ನೂ ಕೆಲವು ವಿಷಯಗಳು ವಿದ್ವಾಂಸರ ಗಮನಕ್ಕೆ ಬಂದಾವು ! ಅಲ್ಲದೆ ಬತ್ತೀಸಾಯುಧ, ಬತ್ತೀಸರಾಗ ಎಂಬ ಹೆಸರುಗಳು ಯಾವುವು ಎಂಬುದರ ಪೂರ್ಣಸ್ವರೂಪ ಯಾವುದರಲ್ಲೂ ಖಚಿತವಾಗಿ ಗೊತ್ತಾಗುವುದಿಲ್ಲ: ಒಂದುಪಕ್ಷ ಯಾವುದೊ ಒಂದೆರಡು ಮೂಲಗಳಿಂದ ದೊರೆತರೂ, ಅವುಗಳ ಬಗೆಗೆ ಏಕಾಭಿಪ್ರಾಯವಿಲ್ಲ. ಹೀಗೆ ಈ 'ಬತ್ತೀಸ' ಎಂಬ ಪದ ಕನ್ನಡ ಕಾವ್ಯಗಳಲ್ಲಿ ಸಾಕಷ್ಟು ಪ್ರಯೋಗವಾಗಿದ್ದರೂ, ಅವುಗಳ ಬಗೆಗೆ ಇನ್ನೂ ಹೆಚ್ಚಿನ ಸಂಶೋಧನೆ ಅಗತ್ಯವೆನಿಸುತ್ತದೆ.

ಬತ್ತೀಸರಾಗಗಳು :

ವಿಜಯದಾಸರು ತಮ್ಮ ಪುರಂದರದಾಸರ ಚರಿತ್ರೆಯಲ್ಲಿ ದಾಸರಾಯರ ಕಾಲದಲ್ಲಿ ಬತ್ತೀಸ(೩೨) ರಾಗಗಳು ಬಳಕೆಯಲ್ಲಿದ್ದವೆಂದು ಹೇಳಿದ್ದಾರೆ. ೧೨ನೆಯ ಶತಮಾನದಲ್ಲಿದ್ದ ಬಸವಣ್ಣನವರು ತಮ್ಮ ವಚನ ಒಂದರಲ್ಲಿ ಬತ್ತೀಸರಾಗವ ಹಾಡಿಸಯ್ಯ ಎಂದಿದ್ದಾರೆ. ಇದರಿಂದ ೧೨ನೆಯ ಶತಮಾನದಿಂದ ಪುರಂದರದಾಸರ ಕಾಲದ ವರೆಗೂ ಕರ್ನಾಟಕಸಂಗೀತದಲ್ಲಿ ೩೨ ರಾಗಗಳು(ಬತ್ತೀಸ) ಬಳಕೆಯಲ್ಲಿದ್ದವೆಂಬುದು ಸ್ಪಷ್ಟಪಡುತ್ತದೆ. ಆರ್. ಸತ್ಯನಾರಾಯಣ ಅವರು 'ಪ್ರಾಚೀನಕಾಲದ ಸಂಗೀತ'ವನ್ನು ಕುರಿತು ಬರೆಯುತ್ತಾ ಅಧಿಕಸಂಖ್ಯೆಯಲ್ಲಿ ರಾಗಗಳು ಕರ್ಣಾಟಕದಲ್ಲಿ ಬಳಕೆಯಲ್ಲಿದ್ದರೂ ಬತ್ತೀಸವೆಂದು ಕರೆಯಲಾದ ಮೂವತ್ತೆರಡು ರಾಗಗಳ ಗುಂಪು ವಿಶೇಷವಾಗಿ ಬಳಕೆಯಲ್ಲಿದ್ದವು ಎಂದು ಬಸವವಚನ ಮತ್ತು ಬಸವಪುರಾಣವನ್ನು ಉದಾಹರಿಸಿ ಹೇಳುವರು. ಬಸವಪುರಾಣದಲ್ಲಿ (೧೯-೬) ಬತ್ತೀಸರಾಗಗಳಲ್ಲಿ ವೀಣೆಯನ್ನು ನುಡಿಸಿದ ಉಲ್ಲೇಖವಿದೆ.

ಸಂಗೀತಾಭ್ಯಾಸಿಗಳು ಚಿಕ್ಕಂದಿನಿಂದಲೇ ಬತ್ತೀಸರಾಗಗಳನ್ನು ಕಲಿತು ಪ್ರೌಢಿಮೆಯನ್ನು ಗಳಿಸಿ ಮುಂದೆ ಸಂಗೀತ ಸಭೆಗಳಲ್ಲಿ ಭಾಗವಹಿಸುತ್ತಿದ್ದರು ಎಂಬ ಅಂಶವನ್ನು ಪ್ರೌಢದೇವರಾಯನ ಕಾವ್ಯದಲ್ಲಿ ಅದ್ರೀಶ ಕವಿ ಹೇಳುತ್ತಾನೆ: "ಬಾಲಪ್ರಾಯದೊಳು ಬತ್ತೀಸರಾಗವ ಕಲಿತು ಮೇಲೆ ಪ್ರೌಢಿಯಾಗುತೊಂದು ದಿವಸ ಭೂಪಾಲನಾ ಸ್ಥಾನಕ್ಕೆ ಬಂದು ಗಾನವ ಪಾಡೆ. . . . ."(ಪ್ರೌ.ಕಾ. ೧೦-೧೩. ೭-೧೪) ಬತ್ತೀಸರಾಗಗಳು ಬಳಕೆಯಲ್ಲಿದ್ದವು ಎಂಬ ಅಂಶ ಅನೇಕ ಕಡೆಗಳಿಂದ ಸ್ಪಷ್ಟವಾದರೂ, ಈ ಬತ್ತೀಸರಾಗಗಳು ಯಾವವು ಎಂಬ ಬಗೆಗೆ ಏಕಾಭಿಪ್ರಾಯವಿದ್ದಂತೆ ಕಂಡುಬರುತ್ತಿಲ್ಲ.

ಪ್ರೌಢದೇವರಾಯನ ಕಾಲದಲ್ಲಿದ್ದ ಸಿಂಗಿರಾಜನು (೧೪೦೦) "ಮಾಳವ. ಶ್ರೀ, ತೋಡಿ, ಧನ್ಯಾಸಿ, ನಾಟಿ, ಬಂಗಾಳಿ, ಭೈರವಿ, ಸಿಂಧು, ದೇಶಿ, ದೇಶಾಳಿ. ಹಿಂದೋಳ, ನಾರಣಿ, ಗೌಳ, ಸೌರಾಷ್ಟ್ರ, ಗುರ್ಜರಿ. ವಸಂತ, ಸಾವೇರಿ, ಛಾಯ, ಗೌಳ. ಮಲಹರಿ, ಲಳಿತೆ, ಬಹುಳಿ, ಗುರ್ಜರಿ, ಲಲಿತೆ, ಗೌಳ, ಮಂಗಳಕಾಸಿ, ಮೇಘರಂಜಿನಿಯು, ಭೂಪಾಳಿ ಮೊದಲಾದ ಬತ್ತೀಸರಾಗಂಗಳಿಂ ಪಾಡುತಿರ್ಪರು ಸತಿಯರು" (ಸಿಂಗಿರಾ ೩೮-೧೧, ನೋಡಿ: ಬಸಪ್ಪ ೧೯.೬) ಎಂದು ಕೆಲವು ರಾಗಗಳ ಹೆಸರನ್ನು ಮಾತ್ರ ಹೇಳುತ್ತಾನೆ. ಕೆಲವು ರಾಗಗಳು ಪುನರುಕ್ತಿಯಾದಂತೆ ಕಂಡರೂ ಬತ್ತೀಸರಾಗಗಳ ಪೂರ್ಣ ಹೆಸರಿಲ್ಲ.

ಪುರಂದರದಾಸರು ಕರ್ನಾಟಕದಲ್ಲಿ ಕೊನೆಯ ಪಕ್ಷ ೧೬ನೆಯ ಶತಮಾನದಿಂದಲೂ ಬೆಳೆದು ಬಂದಿದ್ದ ಬತ್ತೀಸರಾಗಗಳಲ್ಲಿ ಹಾಡಿ ಈ ಎಲ್ಲ ರಾಗಗಳಲ್ಲಿಯೂ ಪ್ರಯೋಗ ನಡೆಸಿದ್ದಾರೆ. ಪುರಂದರದಾಸರು ತಮ್ಮ ಕೀರ್ತನೆಯೊಂದರಲ್ಲಿ ಬತ್ತೀಸರಾಗದ ಹೆಸರನ್ನು ಪ್ರಸ್ತಾಪಿಸಿದ್ದಾರೆ. "ತುತ್ತುರು ತೂರೆಂದು ಬತ್ತೀಸರಾಗಗಳನು ಚಿತ್ತವಲ್ಲಭ ತನ್ನ ಕೊಳಲನೂದಿದನು" (ಪು.ಕೀ. ೪೬.೨). ಪುರಂದರದಾಸರು ಹೇಳಿರುವ ಈ ರಾಗಗಳಿಗೂ ನಿಜಗುಣ ಶಿವಯೋಗಿಗಳು ಹೇಳಿರುವ ೩೨ ರಾಗಗಳಿಗೂ ಬಹುಮಟ್ಟಿನ ಸಾಮ್ಯವನ್ನು ಕಾಣಬಹುದು. ನಿಜಗುಣರು ವಿವೇಕಚಿಂತಾಮಣಿಯಲ್ಲಿ ಬತ್ತೀಸರಾಗಗಳೆಂದು ಹೇಳದಿದ್ದರೂ ಪ್ರಸಿದ್ಧ ಮೂವತ್ತೆರಡು ರಾಗಗಳೆಂದು ಈ ರಾಗಗಳನ್ನು ಹೆಸರಿಸುತ್ತಾರೆ.

"ಬಳಿಕೀ ಸಮಸ್ತ ರಾಗಂಗಳೊಳಗೆ ರಾಮಕ್ರಿ. ಭೂಪಾಳಿ. ವಸಂತ. ನಾಟಿ. ಸಾಳಗ, ಚೌಳಿ. ಕಾಂಬೋದಿ, ಗುಜ್ಜರಿ (ಘೂರ್ಜರಿ), ಭೈರವಿ. ಗುಂಡಕ್ರೀ, ಮಲಹರಿ (ಪಾಠಾಂತರ-ಬಲಹರಿ), ಧನ್ಯಾಸಿ, ಲಲಿತೆ, ಫಳಮಂಜರಿ (ಪದಮಂಜರಿ). ಬಂಗಾಳಿ, ದೇಶಿ, ದೇವಗಾಂಧಾರಿ. ಮೇಘರಂಜಿ, ಕುರಂಜಿ. ಆಹರಿ (ಆಹೀರ), ಶ್ರೀರಾಗ, ಪಹಡಿ, ಗೌಳ, ಸಿಂಧುರಾಮಕ್ರಿ, ಶಂಕರಾಭರಣ, ಭುಲ್ಲಿಕಿ, ದೇಶಾಕ್ಷಿ. ವರಾಳಿ. ದೇವಗುಪ್ತಿ,

ಮಂಗಳ ಕೌಶಿಕೆ, ನಾರಣಿ (ನಾರಾಯಣಿ), ಆರಭಿ–* ಎಂಬ ಮೂವತ್ತೆರಡು ರಾಗಂಗಳೇ ಲೋಕಪ್ರಸಿದ್ಧವಾಗಿಹವವರಲ್ಲಿ" (*ಪಾಠಾಂತರ- ಅಠಾಣೆ, ಸಾವೇರಿ, ತೋಡಿ, ಮಧ್ಯಮಾವತಿ ಮೂವತ್ತಾರು ರಾಗಂಗಳೇ ಮುಖ್ಯವಾಗಿ ಬಳಕೆಯಿಂದ ಪುರಾತನರಲ್ಲಿ ಪ್ರಸಿದ್ಧಿಗೊಂಡಿಪ್ಪವು).

ಹುಬ್ಬಳ್ಳಿಯ ಮೂರುಸಾವಿರಮಠದವರು ಪ್ರಕಟಿಸಿರುವ 'ವಿವೇಕ ಚಿಂತಾಮಣಿ' ಯಲ್ಲಿ ಪ್ರಸಿದ್ಧ ೩೨ರಾಗಂಗಳೆಂದೇ ಹೇಳಿ ಮೇಲಿನ ೩೨ರಾಗಗಳನ್ನು ಹೆಸರಿಸಿ, ಮತ್ತೊಂದು ಹಸ್ತಪ್ರತಿಯ ಪ್ರಕಾರ–೩೬ರಾಗಗಳ ಉಲ್ಲೇಖವಿರುವುದನ್ನು ತಿಳಿಸಿದೆ. ಆದರೆ ನಿಜಗುಣರು ಹೇಳಿರುವುದೂ ಬತ್ತೀಸರಾಗಗಳೆಂದು ರೂಢಿಯಲ್ಲಿದ್ದ ೩೨ರಾಗ ಗಳನ್ನೇ ಎಂದು ಕಾಣುತ್ತದೆ.

ಬತ್ತೀಸಾಯುಧಗಳು :

ಬತ್ತೀಸರಾಗಗಳ ಹೆಸರು ಸಾಹಿತ್ಯಕೃತಿಗಳಲ್ಲಿ ಕಂಡುಬಂದತೆಯೇ, ಬತ್ತೀಸಾ ಯುಧಗಳ ಹೆಸರೂ ಕೆಲವು ಕೃತಿಗಳಲ್ಲಿ ಕಂಡುಬರುತ್ತಿದೆ. ಕುಮಾರವಾಲ್ಮಿಕಿಯು ಮೈರಾವಣನ ಕಾಳಗದಲ್ಲಿ 'ಪರಶು, ತೋಮರ, ಕುಂತ, ಅಸಿ, ಮುದ್ಗರ, ಮುಸುಂಡಿ, ಗದೆ, ಭಲ್ಯ, ಸರಳು, ಧನು, ಕಕ್ಕಡೆ, ಭಿಂಡಿವಾಳ, ಪರಿಘ, ಅಂಕುಶ, ತಾಡಿ, ಹರಿಗೆ, ಖಂಡೆಯ, ಸಬಳ–ಮೊದಲಾದುರುತರದ ಬತ್ತೀಸ ಕೈದುಗಳೆಸುದುವು 'ಎಂದು ಹೆಸರಿಸಿದರೂ, ಕೇವಲ ಹದಿನೆಂಟು ಆಯುಧಗಳನ್ನು ಮಾತ್ರ ಹೆಸರಿಸುತ್ತಾನೆ. ಸೊಬಗಿನ ಸೋನೆಯಲ್ಲಿ (ಸೊ.ಸೋ. ೧೮ ೧೬) 'ಭಟರೆಸೆಯುತಿರ್ದರು ಬತ್ತೀಸಾಯುಧ ಗಳನಾಂತು' ಎಂಬ ಪ್ರಯೋಗ ದೊರೆಯುತ್ತದೆ.

ಬಸವಪುರಾಣದಲ್ಲೂ ೫೩–೫೪ "ನಲಿದು ಬತ್ತೀಸಾಯುಧಂಗಳಿನಘಮತಿಯಲಿ ಪೀರಗೆಲಸವನಾಚರಿಸಿ ಮುನ್ನ" ಎಂಬ ಪ್ರಯೋಗ ದೊರೆಯುತ್ತದೆ. ಇಲ್ಲೂ ಬತ್ತೀಸಾಯುಧಗಳ ಪೂರ್ಣ ಹೆಸರುಗಳು ದೊರೆಯುವುದಿಲ್ಲ. ಆದರೆ ನಿಜಗುಣರು "ಖಡ್ಗ, ಕರಾಚೂರಿ, ಕಕ್ಕಡ, ಕಡುಗತ್ತಿ, ಸೆಣೆಗತ್ತಿ, ಸಬಳ, ಈಟಿ, ಇಡರು ಗತ್ತಿ, ಉಬ್ಬಣ, ಕಬ್ಬಿಣಕೋಲು, ಚಕ್ರ, ಚಂಡು, ಪೋತಿ, ಚಲಿಹ (?), ಬಲ್ಲೆಹ, ಬಂಕು, ಬಾಣ, ನೆದ್ಧೆ (?) ನರಾದಿ ಶೂಲ, ಶಿರಾದಿ, ಚೂರಿ, ಚಕ್ಕತಾರಿ, ಕಿರಸೆ, ಪರಶು, ಪಾಶ, ಪಟ್ಟೆಯ, ಮುಟ್ಟಿ, ಅಂಕುರ್, ವಂಕಿ, ತಾಡಿ, ಜವದಾಡೆ" (ವಿ. ಚಿಂ. ಪು. ೨೧೪) ಎಂದು 'ವಿವೇಕ ಚಿಂತಾಮಣಿಯಲ್ಲಿ ಈ ೩೨ಆಯುಧಗಳ ಹೆಸರನ್ನು ಹೇಳುತ್ತಾರೆ.

ಸಮಕಾಲೀನ ಬದುಕಿಗೆ ಸ್ಪಂದಿಸಿದ ಜಿ.ಎಸ್.ಎಸ್.

● ವೈ. ಸಿ. ಪಾಟೀಲ

೧೯೫೧ರಲ್ಲಿ ಸಾಮಗಾನದ ಮೂಲಕ ಕನ್ನಡ ಕಾವ್ಯಪ್ರಪಂಚಕ್ಕೆ ಕಾಲಿಟ್ಟ ಜಿ. ಎಸ್. ಶಿವರುದ್ರಪ್ಪನವರು ಇದುವರೆಗೆ ಹೊರತಂದಿರುವ ಕವನ ಸಂಗ್ರಹಗಳು ಹತ್ತು('ತೀರ್ಥವಾಣಿ' ಮತ್ತು ಆಯ್ದ ಕವಿತೆಗಳ ಸಂಗ್ರಹ 'ನನ್ನ ನಿನ್ನ ನಡುವೆ' ಈ ಎರಡನ್ನೂ ಸೇರಿಸಿಕೊಂಡು). ನವ್ಯದ ಗಾಳಿಯನ್ನು ಸಮರ್ಥವಾಗಿ ಎದುರಿಸಿಕೊಂಡು ಸಾಹಿತ್ಯಪರಂಪರೆಯ ಮೌಲ್ಯಗಳನ್ನು ಜೀರ್ಣಿಸಿಕೊಂಡು ಇಂದಿಗೂ ತಮ್ಮ ಕಾವ್ಯದಲ್ಲಿ ಜೀವಂತಿಕೆಯನ್ನು ಉಳಿಸಿಕೊಂಡುಬಂದಿರುವ ಪ್ರತಿಭಾಶಾಲಿ ಕವಿಗಳಾಗಿದ್ದಾರೆ ಜಿ. ಎಸ್. ಶಿವರುದ್ರಪ್ಪನವರು. ಪ್ರಕೃತಿಸೌಂದರ್ಯದ ಅಗಾಧ ವೈವಿಧ್ಯಕ್ಕೆ ಮಾರುಹೋದರೂ ಆ ಮೂಲಕ ಗಳಿಸಿಕೊಂಡ ಜೀವನಸತ್ವದ ಅರಿವಿನಿಂದಾಗಿ ಬದುಕಿನ ಮಾನವೀಯಮೌಲ್ಯಗಳಿಗೆ ತಮ್ಮನ್ನು ತೆರೆದುಕೊಂಡವರು ನಮ್ಮ ಕಾವ್ಯಪ್ರಪಂಚದಲ್ಲಿ ತುಂಬ ವಿರಳ. ಇಂತಹ ವಿರಳರಲ್ಲಿ ಮೊದಲಿಗರು ಜಿ. ಎಸ್. ಶಿವರುದ್ರಪ್ಪನವರು. ಕುವೆಂಪುರವರ ಬಲಿಷ್ಠ ಪ್ರಭಾವದಿಂದ ಶಿವರುದ್ರಪ್ಪನವರೂ ಮೊದಮೊದಲು ಸಂಸ್ಕೃತ ಶಬ್ದಾಡಂಬರದ ಬಗ್ಗೆ ಮೋಹವನ್ನು ತೋರಿಸಿದರೂ ಕನ್ನಡದ ಸೊಗಡನ್ನು ಪ್ರೀತಿಯಿಂದ ಮನಸೆಳೆಯುವಂತೆ ಬಳಸುತ್ತ ಬಂದರು. ಸಿದ್ಧಶೈಲಿಯೊಂದನ್ನು ಕರಗತಮಾಡಿಕೊಳ್ಳಬೇಕಾದ ಯಾವುದೇ ಕವಿಗೆ ಇಂತಹ ಅನುಕರಣೆ ಅನಿವಾರ್ಯವಾಗುತ್ತದೆ. ನಂತರದ ದಿನಲಾದ ತಮ್ಮ ಅಭಿವ್ಯಕ್ತಿ ಮಾರ್ಗದಲ್ಲಿ ಕನ್ನಡತನದ ಘಮಲು ಆಡುಮಾತಿನ ಗೆಳೆತನವನ್ನು ಬೆಳಸಿಕೊಂಡು ಕಸ್ತೂರಿಯೊಂದಿಗೆ ಶ್ರೀಗಂಧ ಬೆರೆತಂತೆ ಸುಮಧುರವಾಗುತ್ತದೆ.

ಯಾವುದೇ ಸಂದರ್ಭದಲ್ಲಿ ಪ್ರಜ್ಞಾವಂತ ವ್ಯಕ್ತಿಗೆ ಬದುಕು ಮುಖ್ಯವಾಗುತ್ತದೆ. ನಿಜವಾದ ಕಾವ್ಯ ಬದುಕಿನಿಂದ ವಿಮುಖವಾದದ್ದಂತೂ ಅಲ್ಲ. ಇಂತಹ ಪರಿಸರಣದಲ್ಲಿ ಕಾವ್ಯ ಹೇಗೆ ಮತ್ತು ಎಷ್ಟರಮಟ್ಟಿಗೆ ವಾಸ್ತವ ಬದುಕಿನೊಂದಿಗೆ ಸಂಬಂಧ ಬೆಳಸಿಕೊಳ್ಳುತ್ತದೆಂಬ ವಿಚಾರವನ್ನು ಕುರಿತು ಆಲೋಚಿಸುವ ಅಗತ್ಯವಿದೆ. ಪ್ರಸ್ತುತ ಲೇಖನ ಜಿ. ಎಸ್. ಶಿವರುದ್ರಪ್ಪನವರು ಕಾವ್ಯದ ಹಂಬಲಿಯದಲ್ಲಿ ಸಮಕಾಲೀನ ಸ್ಥಿತಿಗೆ ಬದ್ಧರಾಗುತ್ತಾ ಸಮಾಜದ ಸಂಕೀರ್ಣತೆಗೆ ಸ್ಪಂದಿಸಿರುವ ಕ್ರಿಯೆಯನ್ನು ಹೇಳಲು ಪ್ರಯತ್ನಿಸುತ್ತದೆ.

"ಬಚ್ಚಿಟ್ಟುಕೊಂಡು ಬದುಕುವುದು ನನಗಿಷ್ಟವಿಲ್ಲ;
ಹಾಗಂತ ಎಲ್ಲವನು ಬಿಚ್ಚಿ ಹರಾಜಿಗಿಡುತ್ತೇನೆಂದು
ಇದರರ್ಥವಲ್ಲ"

['ನಿಲುವು'—ನನ್ನ ನಿನ್ನ ನಡುವೆ]

ಕವಿಯ ವ್ಯಕ್ತಿತ್ವ ಇಂತಹ ಸಾಲುಗಳಲ್ಲಿ ತಾನೇತಾನಾಗಿ ಮೈದಳೆಯುತ್ತದೆ. ಇದ್ದಷ್ಟು ಕಾಲ ತನ್ನ ಪಾಡಿಗೆ ತಾನು ಪ್ರಾಮಾಣಿಕವಾಗಿ ಬದುಕುತ್ತೇನೆ. ಕೈಲಾದಷ್ಟು ಕೃಷಿ ಮಾಡುತ್ತೇನೆ. ಈ ತೋಟಗಾರಿಕೆಯಲ್ಲಿ ಎಲ್ಲವೂ ವಟವೃಕ್ಷಗಳಾಗಿ "ಸಾವಿರ ಜನಕ್ಕೆ ನೆರಳಾದಾವೆಂಬ ಮಹದಾಸೆ ಇರದಿದ್ದರೂ ಒಂದೆರಡಾದರೂ ಬೀಜವಾಗು ವಂಥ ಹಣ್ಣು ಬಿಟ್ಟಾವೆಂಬು" ಕವಿಯ ನಂಬುಗೆ. ತನ್ನ ಅಸ್ತಿತ್ವ ಸ್ವರೂಪವನ್ನು ಉಳಿಸಿಕೊಳ್ಳಲಾರದೆ ಕ್ಷಣಕ್ಷಣಕ್ಕೂ ಬದಲಾಗುವಂತಹ ಅಮೀಬಾಯಿಡ್‌ತನವನ್ನು ಕವಿ ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸುವುದನ್ನು "ತೂಗಾಡುವ ಕಿರೀಟಗಳಿಗೆ ತಕ್ಕಂತೆ ತಲೆಯ ಆಕಾರಗಳನ್ನು ಬದಲಾಯಿಸುತ್ತಾ। ಪರದಾಡುವುದು ನನಗೆ ಅಭ್ಯಾಸವಿಲ್ಲ" ಎಂಬ ಮಾತುಗಳಲ್ಲಿ ಗುರುತಿಸಬಹುದು. ಕಾಲದ ಪ್ರಜ್ಞೆಯನ್ನು ಕ್ರಿಯಾಶೀಲ ಸೃಜನಶಕ್ತಿಯ ವಿವೇಚನೆಯಿಂದ ದುಡಿಸಿಕೊಂಡಿರುವ ಕಾರಣ '. . . . ಈ ಕವನ ಗಳಲ್ಲಿ ಆ ಊರ್ಧ್ವಗಮನಾಭಿಲಾಷೆ, ಆ ಅವಲೋಕನ್ಮುಖವಾದ ಅಭೀಪ್ಸೆ . . . . ಇವುಗಳನ್ನು ನಿಸ್ಸಂದೇಹವಾಗಿ ಕಾಣುತ್ತೇವೆ'[೧] ಎನ್ನುವುದಕ್ಕೆ ಆಧಾರಗಳು ಕಳಚಿ ಬೀಳುತ್ತವೆ. ಕಟ್ಟಿಕೊಂಡ ಆದರ್ಶಗಳೆಲ್ಲಾ ಭ್ರಮನಿರಸನಹೊಂದುತ್ತವೆಂಬುದು ಕವಿಯ ಅರಿವಿಗೆ ಬಂದಿದೆ.

"ಹಣತೆ ಹಚ್ಚುತ್ತೇನೆ ನಾನೂ
ಈ ಕತ್ತಲನು ಗೆದ್ದು ನಿಲ್ಲುತ್ತೇನೆಂಬ ಜಿದ್ದಿನಿಂದಲ್ಲ
ನಾನು ಹಚ್ಚುವ ಹಣತೆ ಶಾಶ್ವತವೆಂಬ ಭ್ರಾಂತಿ ನನಗಿಲ್ಲ"

['ಹಣತೆ'—ನನ್ನ ನಿನ್ನ ನಡುವೆ]

ದೀಪಾವಳಿಯಲ್ಲಿ ಸುಡುವ ಹಡುಗಗಟ್ಟಲೆಯ ಹೂಬತ್ತಿಗಳಿಂದ ಕತ್ತಲೆ ಕರಗುವು ದಿಲ್ಲ. ಏಕೆಂದರೆ "ನನಗೂ ಗೊತ್ತು। ಈ ಕತ್ತಲೆಗೆ ಕೊನೆಯಿರದ ಬಾಯಾರಿಕೆ". ಮತ್ತೆ ದೀಪ ಹಚ್ಚುವ ಪ್ರಯತ್ನ ವ್ಯರ್ಥವೆನಿಸಿದರೂ ಇಲ್ಲಿ ಉದಾತ್ತ ಉದ್ದೇಶವಿದೆ.

"ಕತ್ತಲನು ದಾಟುತ್ತೇನೆಂಬ ಭ್ರಮೆಯಿಂದಲ್ಲ;
ಇರುವಷ್ಟು ಹೊತ್ತು ನಿನ್ನ ಮುಖ ನಾನು ನನ್ನ ಮುಖ ನೀನು
ನೋಡಬಹುದೆಂಬ ಒಂದೇ ಒಂದು ಆಶೆಯಿಂದ" [ಅಲ್ಲೇ]

ಎನ್ನುವಂತಹ ಮಾನವೀಯತೆಯ ಅತ್ಯಂತ ಹೃದಯಸ್ಪರ್ಶಿಯಾದ ಅನುಭವ ವನ್ನು ಶಿವರುದ್ರಪ್ಪನವರ ಬಹುತೇಕ ಕವನಗಳು ಉಂಟುಮಾಡುತ್ತವೆ.

ಆದರ್ಶ ಜೀವನದ ಮುಖ್ಯ ಉದ್ದೇಶವಾಗಬೇಕು ನಿಜ. ಆದರ್ಶವೊಂದೇ ಜೀವನದ ಸತ್ಯವಲ್ಲ. "ಹೆಸರು ಗಳಿಸುವ ಬಯಕೆಯುಸುಬಿನಲಿ ಮನದಕಾಲ್ । ಕುಸಿಯುತಿದೆ; ಓ ತಂದೆ, ಓ ಗುರುವೆ ಬಾ ಇಲ್ಲಿ . . . ಆದರ್ಶ ಧ್ಯೇಯಗಳ ಗಗನ ದೆಡೆಗೆ ಹಾರಲಿಕೆ ಆದರೇಂ । ಕಾಲು ಹೂತಿಹುದಿಲ್ಲಿ ಕೆಸರಿನಲ್ಲಿ" ['ಕರೆ'—ಸಾಮಗಾನ] ತಟ್ಟನೆ ಬಸವಣ್ಣನವರ "ಕೆಸರಲ್ಲಿ ಬಿದ್ದ ಪಶುವಿನಂತೆ ದೆಸೆ-ದೆಸೆಗೆ ಬಾಯ್ಬಿಡುತ್ತಿದ್ದೆನು" ವಚನವನ್ನು ಜ್ಞಾಪಿಸುತ್ತದೆ. ಅಂತಹುದೇ ತಾಕಲಾಟಕ್ಕೆ ಕವಿ ಇಲ್ಲಿ ಒಳಗಾಗಿರುವುದನ್ನು ಗಮನಿಸಬಹುದು. ಲೌಕಿಕದಿಂದ ತಪ್ಪಿಸಿಕೊಳ್ಳಲು ಬಸವಣ್ಣ ಹಾತೊರೆದರೆ ಇಲ್ಲಿ ಕವಿಯ ಮನಸ್ಸು ತನ್ನ ಅನುಭವಗಳ (ಸಿಹಿ, ಕಹಿ, ನಗು, ಅಳುವಿನ) ಅಭಿವ್ಯಕ್ತಿ ಸಾಮರ್ಥ್ಯಕ್ಕೆ ಚಡಪಡಿಸುತ್ತಿದೆ. ಕುವೆಂಪು ಅವರು ಹೇಳಿದ ಆದರ್ಶ ಇಂತಹ ಪ್ರಾರಂಭಿಕ ಕವನಗಳಲ್ಲಿ ಕಂಡುಬರುತ್ತದೆ. "ಕಾಲಕೂಡಿ ಬರದೆ ಏನೂ ಮೂಡಿಬರುವುದಿಲ್ಲ" ('ನನ್ನ ನುಡಿ'—ಸಾಮಗಾನ) ಎಂಬ ಮಾತನ್ನು ('ಒಳದನಿ' ಸಾಮಗಾನ) ಕವನ ಸಾಕ್ಷೀಕರಿಸುತ್ತದೆ.

"ಇರಲಿ ಬಾ ಜಗದ ಜಂಜಡ
ಬರಿಯ ಮಣ್ಣಿನ ಗಡಿಬಿಡಿ
ಇಲ್ಲಿ ಸುಂದರ ಶಿವನ ದರ್ಶನ
ಭವ್ಯವಾಗಿದೆ ಈ ಗುಡಿ !" ['ಪ್ರಕೃತಿಪೂಜೆ'—ಸಾಮಗಾನ]

ಸೌಂದರ್ಯಾರಾಧನೆ- ಮಾನವೀಯ ಮೌಲ್ಯದ ವಿಡಿತ ಯಾವುದು ಮುಖ್ಯ ? ಹಾಲ್ಬಿಂಗಳು ಹೊರಗೆ ಚೆಲ್ಲಾಡುತ್ತಿದೆ. ಅವನ್ನು ಸವಿಯಬೇಕೆನ್ನುವ ಪೂರ್ಣ ಅಭಿಲಾಷೆ ಕವಿಗಿದೆ. ಆದರೆ ಇಲ್ಲಿಯೂ ಸಹ ಜೈವಿಕ (lively) ಭಾವನೆಗಳು ನುಸುಳಿಕೊಂಡಿವೆ.

"ಇಲ್ಲಿ ಊರ ಮನೆಗಳಲ್ಲಿ
ದುಡಿದು ದಣಿದ ಜೀವಯಂತ್ರ
ದಣಿವ ಕಳೆಯಲೆಂದು ಮಲಗಿ
ನಿದ್ರಿಸುತ್ತಿವೆ.
ಬದುಕಿನಲ್ಲಿ ಪಡೆಯದಿದ್ದ
ಬಯಕೆಗಳನು ಕನಸಿನಲ್ಲಿ
ಕಂಡು ಪಡೆದು ಸುಖಿಸುವಂತೆ
ತೋರುವಂತಿದೆ". ['ಹಾಲುಹೊಳೆ'—ಸಾಮಗಾನ]

ಚೈತನ ಬಗೆಗೆ ಈ ಕವಿಗೆ ಅಪಾರವಾದ ಅಭಿಮಾನವಿದೆ. ದಿನವೂ ಪ್ರಕೃತಿಯ ಮಡಿಲಲ್ಲೇ ಒಡನಾಡಿ ಬದುಕಿದರೂ ಸೌಂದರ್ಯಾರಾಧನೆ ಚೈತನಿಗೆ ಸಾಧ್ಯವಿಲ್ಲ. ಕವಿಯು ಮಾನಸಿಕ ಯಾತನೆಗಳಿಗೆ ಜಗದ ಸ್ವಾರ್ಥ ಯಾವರೀತಿಯ ಉಪಶಮನವನ್ನು

ಕೊಡುವುದಿಲ್ಲ. ಅಂತಹ ಸಂದರ್ಭದಲ್ಲಿ ಕವಿ ಪ್ರಾಕೃತಿಕದತ್ತವಾದ ಸದಾ ನಗುವ 'ಹೂವಿಗೆ' [ಸಾಮಗಾನ] ಮೊರೆಹೋಗುವುದು ಅನಿವಾರ್ಯವಾಗುತ್ತದೆ. ಪ್ರಕೃತಿಯ ರಮ್ಯಸೌಂದರ್ಯದಲ್ಲಿ ರಸವಿಹೀನತೆಯನ್ನು ಅನುಭವಿಸಿದ ಕವಿಯು 'ಮನಸ್ಸು ಶೂನ್ಯವಾಗಿದೆ' [ಸಾಮಗಾನ]. ಇದು ಮುಂದೆ 'ಕೋಗಿಲೆ ಏಕೆ'ಯಲ್ಲಿ ಸ್ಥಿರವಾಗುತ್ತದೆ.

"ಪಂಪನಿಂದ ಕುವೆಂಪುತನಕ ಅದೇ ವಂದಿಮಾಗಧ ವೃಂದ
ಸಾಕಾಗಿಹೋಗಿದೆ ನಮಗೆ ಈ ವಸಂತ ವರ್ಣನೆಯ ಪದ್ಯಬಂಧ" [ಸಾಮಗಾನ]

ಕೋಗಿಲೆಯ ಕುಹೂ ಕುಹೂ ಕೇಳಿ ರೋಸಿಹೋಗಿರುವ ಕವಿ ಕೋಗಿಲೆಗೆ ಸಂಗೀತಶಾಸ್ತ್ರದ ಸಂಸ್ಕಾರ ಕೊಡಿಸಬೇಕೆಂದು ಹೇಳುತ್ತಿರುವುದು ಗಮನಾರ್ಹವಾಗಿದೆ. ಬದಲಾವಣೆಯನ್ನು ಬಯಸದ ಹಳೆಯ ಅರ್ಥರಹಿತ ಆಚಾರಗಳನ್ನು ವಿರೋಧಿಸಿದ್ದಾರೆ.

ಈ ಜಗತ್ತು ಕಸ ತುಂಬಿದ ಒಂದು ಅರಮನೆ. ಪ್ರತಿಯೊಂದು ಯುಗದಲ್ಲೂ ಒಬ್ಬೊಬ್ಬ ಅವತಾರ ಪುರುಷ ಹುಟ್ಟಿ ಹಿಡಿದ ಕಸಪೊರಕೆ ಮನೆಯನ್ನು ಸ್ವಚ್ಛಮಾಡುತ್ತದೆ. 'ಕಸಪೊರಕೆ' (ಚೆಲುವು ಒಲವು) ಸಮಾಜ ಸುಧಾರಕ ಅಥವಾ ಅವತಾರ ಪುರುಷನನ್ನು ಸಾಂಕೇತಿಸಿ ಹೇಳುತ್ತದೆ. ಕಸ ಗುಡಿಸಿದಾಗ ಸ್ವಚ್ಛವಾಗಿರುವಂತೆ ಕಂಡರೂ ಕೆಲವಾರು ಗಂಟೆಗಳಲ್ಲಾಗಲೆ ಮಾಮೂಲಿನಂತಾಗಿರುತ್ತದೆ. ಕವಿ ಬಯಸುವಂತಹ ಸುಧಾರಕನಿಗೆ ಶುದ್ಧೀಕರಣವೇ ಗುರಿಯಾಗಬೇಕು. ಸಮಾಜದ ಕೊಳಕನ್ನು ಗುಡಿಸುವ "ಕಸಪೊರಕೆಯೆನಗೆ ಗುರು ಮೇಣೆನ್ನ ಬಾಳಗುರಿ" ಎನ್ನುವಂಥ ಸುಧಾರಕ ಅವಶ್ಯಬೇಕು. ಮಾನವನಿಗೆ ತನ್ನ ಇಷ್ಟಾರ್ಥಗಳೆಲ್ಲಾ ಸಿದ್ಧಿಸಿಬಿಟ್ಟರೆ ಅಥವಾ ಸಂಪೂರ್ಣ ಸುಖ ಎಂಬುದು ಅವನ ಪಾಲಿಗೆ ತೆರೆದ ಬಟ್ಟಲಾಗಿಬಿಟ್ಟರೆ ಇಡೀ ಜನಾಂಗ ಕೆಲವೇ ಶತಮಾನಗಳಲ್ಲಿ ಮೆದುಳನ್ನು ಕಳೆದುಕೊಳ್ಳಬಹುದು. ಆದರೆ ಮಾನವನಿಗೆ ಚಿಂತನಾ ಪರಿಜ್ಞಾನ ಅನಿವಾರ್ಯ. ಚಿಂತೆಯಿಲ್ಲದಿರುವ ಮನುಷ್ಯ ಜಗತ್ತಿನಲ್ಲಿರಲು ಸಾಧ್ಯವಿಲ್ಲ. ಆಸೆಗಳ ಕನಸು ಬೆಳೆಯುತ್ತಾ ಹೋದಂತೆ, ಮಾನವ ಚಿಂತೆಯ ಸಾಗರವಾಗುತ್ತಾನೆ. ಅಂಥ ಸಂದರ್ಭದಲ್ಲಿ ಅವನಿಗೆ ಸಮಾಧಾನದ ಮಾತು ಮಾರ್ಗಕ್ಕೆ ಹಚ್ಚಬಹುದು. "ತಲ್ಲಣಿಸದಿರು . . । ಇದಕೆ ಸಂಶಯವಿಲ್ಲ" ಎಂಬ ದಾಸವಾಣಿಗೆ ಹಿರಿತನದ ಪಟ್ಟಕಟ್ಟುವುದು 'ಬಾಗಿಲಲ್ಲಿ' (ಚೆಲುವು ಒಲವು) ಕವನದ ಅರ್ಥವಂತಿಕೆಯನ್ನು ಹೆಚ್ಚಿಸುತ್ತದೆ. ಚಿಂತೆ "ಇರುಳ ಚಿಕ್ಕಿಗಳಲಿ ಚಾಚಿ ಸಾಸಿರ ಕುಡಿಯ । ಹಗಲಿರುಳು ಹಬ್ಬುತಿರಲು . . . ಅತೃಪ್ತಿ ದಾರಿದ್ರ್ಯ ಸಂಕಟದ ಸಾಗರದಿ ಒಡೆದ ಬದುಕಿನ ಹಡಗು ಜೀಕು"ತ್ತಿರುವ ವ್ಯಕ್ತಿಗತ ನೋವನ್ನು "ಅಲ್ಪತೆಗೆ ಸಿಡಿಲ ಬಡಿ"ಯುವ ಮೂಲಕ ಕವಿಯು "ಭಿಕ್ಷಕ್ಕೆ ಬಂದವರ ಮುಂದೆ ಭಿಕ್ಷುಕನಾದೆ" ಎಂಬ ಮಾತು ನೀತಿಯಿಂದ ಕಲಿತ ಪಾಠದ ಪರಿಣಾಮವನ್ನು ಹೇಳುತ್ತದೆ.

ಸತ್ತ ಸಂಪ್ರದಾಯದ ಬಿಳಿಲುಗಳು ಬದುಕಿನೊಂದಿಗೆ ತೆಕ್ಕೆಗಟ್ಟಿಕೊಳ್ಳುತ್ತವೆ. ಇವುಗಳಲ್ಲಿ ಅರ್ಥವಿಲ್ಲ, ಪ್ರಜ್ಞೆಯಿಲ್ಲ. ಬರೀ ಪರಂಪರೆಯ ಪಳೆಯುಳಿಕೆಗಳಾಗಿ ಆಚರಣೆಯಲ್ಲಿ ಬಂದಿವೆ. ಕ್ರಿಯಾಹೀನತೆಯ ಬದುಕನ್ನು ಶಿವರುದ್ರಪ್ಪನವರು ಹಲವಾರು ಮುಖಗಳಲ್ಲಿ ತುಂಬಾ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. 'ಕಾರಣಿಕ'(ದೇವಶಿಲ್ಪ) ಹಲ್ಲಿಯ ಲೊಚಗುಟ್ಟುವಿಕೆಯಿಂದ ಪ್ರಾರಂಭವಾಗುವ ಕವನ. ಈ ಕವನ ಪ್ರತಿಮೆಗಳ ಸರಮಾಲೆಯನ್ನು ಬೆಳೆಸಿಕೊಳ್ಳುತ್ತಾ ಹೋಗಿ ಒಂದೆರಡು ಭೀಕರವೆನಿಸಬಹುದಾದ ತಿರುವುಗಳೊಂದಿಗೆ ಓಡುತ್ತಾ ಬುಡುಬುಡುಕೆಯವನ "ಶುಭವಾಗುತೈತೆ ಶುಭವಾಗುತೈತೆ ಶುಭವಾಗುತೈತೆ ನಿಮಗೆ" ಎಂಬ ಮಾತು ಕವಿಯ ಆಶಯಕ್ಕೆ ಹಿಡಿದ ಕನ್ನಡಿಯಾಗಿದೆ. "ಜೀವ ಹಾರೈಸಿರಲು ಶುಭದ ನುಡಿಗೆ" ಎನ್ನುವುದೂ ಸಹ ಇದನ್ನೇ ಧ್ವನಿಸುತ್ತದೆ. ಸಮಕಾಲೀನ ಸಾಮಾಜಿಕ ಸಂದರ್ಭದಲ್ಲಿಟ್ಟು ನೋಡಿದಾಗ ಅನೇಕ ಅರ್ಥ ಪರಿವಲಯಗಳನ್ನು ತನ್ನ ಕಕ್ಷೆಯಲ್ಲಿ ಬಚ್ಚಿಕೊಳ್ಳುತ್ತಾ ಹೋಗುವಂತಹ ಮಹತ್ವದ ಕವನ. ಪರಂಪರೆಯ ಸಂದರ್ಭದಲ್ಲಿ ನಮ್ಮ ಆಚಾರ ವಿಚಾರ ವ್ಯವಹಾರಗಳು ತಮ್ಮದೇ ಆದ ಸಾಂಪ್ರದಾಯಿಕ ಬಾಂದಳಿಯಲ್ಲಿ ಹೆಣೆದುಕೊಳ್ಳುತ್ತವೆ. ಇಲ್ಲಿ ಬರುವ ಒಂದೊಂದು ಚಿತ್ರವೂ ಅಸಹಾಯಕ ಪರಿಸ್ಥಿತಿಯಲ್ಲಿ ವ್ಯಕ್ತಿ ಸಾಮಾಜಿಕ ದುಶ್ಶಕ್ತಿಗಳ ಆಕ್ಟೋಪಸ್ ಹಿಡಿತದ ವಿಧಿನಿಯಾಮಕ ಬಲೆಗೆ ಸಿಕ್ಕಿಹೋಗುವುದು ಇಂದಿನ ವಾಸ್ತವ ಸತ್ಯವಾಗಿದೆ. ಹಲ್ಲಿಯ ಲೊಚಗುಟ್ಟುವಿಕೆಯನ್ನೇ ಶುಭಶಕುನವೆಂದು ಭಾವಿಸುವ ನಾವು "ಮೈತುಂಬ ಹಳೆ ಬಟ್ಟೆ ಜೋಲುತಿರಲು" ಕೈಯಲ್ಲಿರುವ ಬುಡುಬುಡಿಕೆಯನ್ನು ಅಲ್ಲಾಡಿಸುತ್ತ ಯಾವುದೇ ರೀತಿಯ ನಿಷ್ಕ್ರಿಯ ಕಸರತ್ತಿಗೂ ಸಿದ್ಧರಾಗಿ ಬದುಕಬೇಕಾದವರು. ಇಂಥ ಕಪಟ ಸಾಂತ್ವನಕ್ಕೆ ಮರುಳಾಗುವುದು ಸಾಮಾಜಿಕ ಅನಿಷ್ಟದ ವಿಚಿತ್ರ ಶಕ್ತಿಯ ಸಂಕೇತವನ್ನಾಗಿ ಪ್ರಯೋಗಿಸಿರುವುದರಿಂದ ಸ್ಪಂದಿತ ಸಂವೇದನೆಗಳು ಬದಲಾದ ಸಂದರ್ಭದಲ್ಲಿ ವಿಸ್ತರಿಸುತ್ತ ಹೋಗುತ್ತವೆ. "ಯಾರಿವನು ಈ ವ್ಯಕ್ತಿ । ವಿಧಿಯ ಬೇಹು ? । ಮನೆಯ ಅಪಶಕುನಕ್ಕೆ ಬಂದಂತೆ ಸಾವು" ಎಂಬ ಮಾತಿನಿಂದ ಮೇಲಿನ ಅಂಶ ಸ್ಪಷ್ಟವಾಗುತ್ತದೆ. "ಬುಡುಬುಡಿಕೆ" ತೀವ್ರವಾದ ಭಾವನೆಯನ್ನು ಸಂಕೇತಿಸುತ್ತ ಹೋಗಿ ಕಡೆಗೆ ಇಂಥ ವ್ಯಕ್ತಿ ಕೂಡ ಈ ಸಮಾಜದಲ್ಲಿ ಒಬ್ಬ ಕಾರಣಿಕನಾಗುವುದು ಸುಲಭಸಾಧ್ಯವೆನ್ನುವ ಅರ್ಥವನ್ನು ಮೂಡಿಸುತ್ತದೆ. "ಪರಂಪರೆಯ ಜೇಡ ಬಲೆ । ಎಲ್ಲಿ ನೋಡಿದರಲ್ಲಿ । ಜೋತಿರುವುದಿಲ್ಲಿ ಅಸ್ಥಿಪಂಜರದಂಥ । ಮನೆಯ ಛಾವಣಿಯಿಂದ ।" ಒಟ್ಟು ಕವನ ಪ್ರತಿಫಲಿಸುವುದು ಮಾನವನ ಇಡಿಯಾದ ದುರ್ಬಲತೆಯನ್ನು. ಜೇಡ ಆಕರ್ಷಣೆ, ಸ್ವಾರ್ಥ ಮತ್ತು ಶೋಷಣೆಯ ಸಂಕೇತ. ಮಿಗಿಲಾಗಿ ವಿಷಜಂತು. ಸೋಮಾರಿತನ, ಅಲಕ್ಷ್ಯದ ಸಂತೆದಲ್ಲಿ ಈ ಜೇಡಬಲೆ ಮೂಡಿಬಂದರೂ ಅದಷ್ಟಕ್ಕೆ ಮಾತ್ರ ಛಾಂ ಚಟುವಟಿಕೆಗಳ ಕೇಂದ್ರವಾಗಿರುತ್ತದೆ. ಇಲ್ಲಿ ಅನುಭವದ ಮತ್ತು ಅಭಿವ್ಯಕ್ತಿಯ ತೀವ್ರತೆ ಅನೇಕ ಸ್ತರಗಳಲ್ಲಿ ಗಟ್ಟಿಗೊಳ್ಳುತ್ತದೆ. ಈ ಕವನದ ಕೇಂದ್ರ ಜೀವ ಬದುಕುತ್ತಿರುವುದು

ಇಂತಹ ವಿಕಾರಗೊಂಡ ದುರ್ಬಲವಾದ ಮತ್ತು ದೌರ್ಜನ್ಯಾಯುತವಾದ ನೆಲೆಯಲ್ಲಿ ಎಂದು ಹೇಳಬಹುದು. ಅಸ್ಥಿಪಂಜರವೇ ಅಸಹ್ಯಕರವಾದ ಭೂತದಂತೆ ಅದರ ನಿರ್ಜೀವ ಕ್ರಿಯೆ ಉಂಟುಮಾಡುವುದು ದುರ್ಬಲವಲ್ಲದ ಪರಿಣಾಮ ಭೀಕರ. ಕೆಲವು ಜಾಯಿಂಟ್‌ಗಳು ಕಳಚಿಕೊಂಡರೆ ಅಸ್ಥಿಪಂಜರ ಬರೀ ಅಸ್ಥಿಗಳ ಗುಡ್ಡೆಯಾಗುತ್ತದೆ. ಈ ಕ್ರಿಯೆಗಳೆಲ್ಲ ಈ ಕವನದ ಒಟ್ಟು ವಸ್ತುವಿನ ಹಿಂದೆ ಪ್ರಬಲವಾದ ಪಾತ್ರವಹಿಸುವುದು ಗಮನಿಸಬೇಕಾದ ಅಂಶ. "ಅಸ್ಥಿಪಂಜರದ ಮನೆಯ ಛಾವಣಿಯಿಂದ" ಬಿದ್ದಿರುವ ಬೆಳಕಿನ ಒಂದು ಕಿರಣಕೂಡ ಈ ಹಿನ್ನೆಲೆಯಲ್ಲಿ ಸರಸವಾಡುತ್ತಾ ಭೀತಿಯನ್ನು ಹಡೆದು ವಿಕಾಸವಾಗಿ ನಗುತ್ತಿದೆ. ಇಲ್ಲಿ ಜಿರಳೆಯಂಥ ಆಮ್ನಿವೋರಸ್ ಆರ್ತ್ರೋಪಾಡ್ ಪ್ರಾಣಿಯನ್ನು ಜೇಡದಂತಹ ಸಾಮಾಜಿಕ ಪರಿಸರದ ಒಟ್ಟು ವ್ಯಂಗ್ಯಕ್ಕೆ ಒಳಪಡಿಸಿ ನೋಡುವ ಪ್ರಯತ್ನವಿದೆ. ಅಲ್ಲದೆ ಜೇಡದ ಆಕರ್ಷಣೆ ಜಿರಳೆ ಜೊಂಡಿಗಗಳಿಗಿರುವುದಿಲ್ಲ. ಇವುಗಳ ಚಟುವಟಿಕೆ ಜೇಡಗಳಿಗಿಂತ ಭಿನ್ನವಾದದ್ದು. ಸಾಮಾಜಿಕ ಜೀವನರಂಗವಲ್ಲಿ ಶಕುನಿ ಜನರನ್ನು ಜಿರಳೆಯಮೂಲಕ ಬಯಲಿಗೆಳೆಯುತ್ತಿದ್ದಾರೆ. ಗೆದ್ದಲು ಬಿರುಗಾಳಿಗೆ ನಡುಗುತ್ತಿರುವ ಗೋಡೆ ಯಾವಕ್ಷಣದಲ್ಲಾದರೂ ಮುರಿದು ಬೀಳಬಹುದು. ಅಶಾಶ್ವತ ಜೀವ ಮತ್ತು ಮೌಲ್ಯಗಳ ಪರಸ್ಪರ ಸಂಘರ್ಷದ ಸ್ಥಿತಿ ಒಂದೆಡೆಯಾದರೂ ಬಾಗಿಲುಕಡೆ ಬುಡುಬುಡಿಕೆಯ ಪ್ರವೇಶ ದೇವರು-ಸಂಪ್ರದಾಯ, ಶಕುನ ಇವುಗಳ ಹೆಸರಿನಲ್ಲಿ ಮೂರ್ಖರನ್ನು ನಂಬಿಸಿ ಮನಸ್ಸಿನ ಕೋಟಲೆ ತಾಕಲಾಟಗಳಿಗೆ ತಾತ್ಕಾಲಿಕ ಉಪಶಮನ ನೀಡುವ ಗತಿ ಮತ್ತೊಂದೆಡೆ.

"ಇರುಳಾಯ್ತು ಕೂ ಹರಿದು ಬರುತಿದೆ ಕೂಗು। ಕವಳ ತಾಯಿ ಕವಳ" ('ಕವಳ ತಾಯಿ ಕವಳ'–ದೀಪದ ಹೆಜ್ಜೆ) ಕವಿಯ ದೃಷ್ಟಿಧೋರಣೆ ಮತ್ತು ಸಾಮಾಜಿಕ ನಿಲುವುಗಳನ್ನು ಈ ಕವನ ಹೊರಸೂಸುತ್ತದೆ. ಭಿಕ್ಷೆಬೇಡುವುದು ಇಂದು ಕಾನೂನುಬಾಹಿರವಾದರೂ ನಿರಂತರವಾಗಿ ಈ ವೃತ್ತಿ ಬೆಳೆಯುತ್ತಲೇ ಇದೆ. ಕವಳತಾಯಿ ಬಳಗದ ದೃಷ್ಟಿಯಿಂದ ಗಮನಿಸಿದಾಗ ಕವನದ ಪ್ರಯತ್ನ ವ್ಯರ್ಥವೆನಿಸುತ್ತದೆ ನಿಜ. ಆದರೆ ಇಲ್ಲಿ ಕವಿ ಕವಳ ತಾಯಿಗಳ ಸಮಾಜೋದ್ಧಾರ ಮಾಡುತ್ತೇನೆಂಬ ಅಗ್ಗಳಿಕೆಯ ಭ್ರಮೆಯನ್ನು ಇರಿಸಿಕೊಂಡಿಲ್ಲ. ಅದು ಕವಿಯ ಉದ್ದೇಶವೂ ಅಲ್ಲ. ಬದುಕಿನ ಅನೇಕ ಸಾಮಾಜಿಕ ಲೋಪದೋಷಗಳನ್ನಷ್ಟೆ ಕಲಾತ್ಮಕವಾಗಿ ನಿರೂಪಿಸುವಲ್ಲಿ ಕವಿಯು ಯಶಸ್ವಿಯಾಗಿದ್ದಾರೆ. ನಿಸ್ಸಹಾಯತೆಯ, ಜಡತ್ವದ ಕತ್ತಲೆಯ ಬತ್ತಲೆ ಬೀದಿ, ಅದರ ಮೇಲೆ ಯೋಜನಾಪರಭಂಗಿಯ ದೀಪದ ಕಂಬ ಎರಡು ವಿರುದ್ಧ ಶಕ್ತಿಗಳ ಸಂಕೇತವಾಗುತ್ತದೆ. ಮುಂದೆ ಬರುವ ಚಿತ್ರ ತುಂಬ ಗಂಭೀರವಾಗಿದೆ:

"ಅದರಡಿಗೆ ಚಲಿಸುತಿವೆ ನೆರಳುಗಳೆರಡು ಕೈ ಕೈ ಹಿಡಿದು
ಬತ್ತಲೆ ಬೀದಿಯಲಿ ಒಂದೇ ಸಮನೆ ಕೂಗುತ್ತ
ಕವಳ ತಾಯೀ ಕವಳ"

ತೀವ್ರ ಸಂವೇದನೆಯ ಸೆಲೆಗೆ ಸಿಕ್ಕಿ ಪ್ರಖರವಾಗಿ ಮೂಡಿ ಬಂದಿರುವ 'ಕವಳತಾಯಿ'ಯ ಪ್ರತಿಮೆ ವಿಶಿಷ್ಟವಾಗುವುದು ಕನಿಷ್ಠ ಮನುಷ್ಯರೂ ಅಲ್ಲದ 'ನೆರಳು'ಗಳ ಮಟ್ಟಕ್ಕಿಳಿಸುವುದರಿಂದ. ಜಡಿಮಳೆ, ಕೊರೆಯುವ ಗಾಳಿ, ರಾತ್ರಿ ಹನ್ನೊಂದರ ಸಮಯ. ಬಾಗಿಲು ಮುಚ್ಚಿಕೊಂಡಿರುವ ಮನೆಗಳ ನಿಶ್ಶಬ್ದ ವಾತಾವರಣದಲ್ಲಿ ನೆರಳುಗಳು ಕೈ ಕೈ ಹಿಡಿದು ಚಲಿಸುತ್ತಿರುವ ಚಿತ್ರ ಕವಳತಾಯಿಗಳ ಯಥಾವತ್ತಾದ ಚಿತ್ರವನ್ನು ಕಣ್ಮುಂದೆ ತಂದು ನಿಲ್ಲಿಸುತ್ತದೆ. ಜಿ.ಎಸ್.ಎಸ್. ಅವರ ಚಿತ್ರಕಶಕ್ತಿ ಸಹ ಅಪೂರ್ವವಾದದ್ದು. ಈ ಸನ್ನಿವೇಶದ ಚಿತ್ರಣ ತುಂಬಾ ಪರಿಣಾಮಕಾರಿಯಾಗಿದೆ. ಕವನದ ಇಡೀ ಶಕ್ತಿ ಕೇಂದ್ರೀಕೃತಗೊಂಡು ವ್ಯಕ್ತವಾಗಿರುವುದು ಅಸ್ತಿತ್ವರಹಿತವಾದ ಈ ನೆರಳುಗಳ ಕ್ರಿಯೆಯಿಂದ. ಉಳ್ಳವರ ಮನೆಯ ಬಾಗಿಲುಗಳು ಉದ್ದಕ್ಕೂ ಭದ್ರವಾಗಿ ಮುಚ್ಚಿವೆ. ಬೆಚ್ಚನೆಯ ಮನೆಯಲ್ಲಿ ನಚ್ಚಗೆ ಮಲಗಿರುವ ಮಗು ಕನವರಿಸುತ್ತಿದೆ. "ಪಾರಿಜಾತದ ತೋಟ ಚಿಟ್ಟೆ ಬಳಗ। ಚಂದಮಾಮನ ಚಿಗುರೆ ಬೆನ್ನೇರಿ ಹಾರೋಣ" ಬಯಕೆಯ ಸುಖದಲ್ಲಿ ಮುಗಿಲಿನತ್ತ ತೆವಳುತ್ತಿದೆ. ಈ ಹೋಲಿಕೆಯ ಉದ್ದೇಶ ಗೌಣವಾದದ್ದೇನಲ್ಲ. ಜೀವ-ನಿರ್ಜೀವದ ಜಟಕಕುದುರೆ–ಕಾಡುಗಳ ರೂಪಕದ ಬಳಕೆಯಲ್ಲೇ ಹೊಸದೊಂದು ಸ್ಥಿತಿಗೆ ಸಹೃದಯರನ್ನು ಕರೆದೊಯ್ಯುವ ಶಕ್ತಿ ಮೂಡಿಬಂದಿದೆ. "ಕರುಳಿರಿಯುತಿದೆ ಕೂಗು ಕಿವುಡು ಬಾಗಿಲ ಹೊರಗೆ" ಎನ್ನುವ ಅಮೂಲ್ಯ ನುಡಿಸಂಪತ್ತಿನಲ್ಲಿ ಕಲ್ಲುಕೂಡ ಕರಗಿ ನೀರಾಗಿ ಹರಿಯಬಲ್ಲ ಸಾಮರ್ಥ್ಯವಿದೆ. ಮಾನವೀಯತೆಯನ್ನು ಮಿಡಿಯುವ ಮೂಲಕ ಸಾಮಾಜಿಕ ಏರುಪೇರುಗಳನ್ನು ಸೊಗಸಾಗಿ ನಿರೂಪಿಸುತ್ತಾರೆಯೇ ಹೊರತು, ಅಯ್ಯೋ ಪಾಪ ಎಂಬ ಅನುಕಂಪವನ್ನು ವ್ಯಕ್ತಪಡಿಸದೆ ಇರುವುದು ಮುಖ್ಯವಾದ ಸಂಗತಿ. ಕಾರಣ ಕವಿಯ ತೀವ್ರವಾದ ಸಂವೇದನೆ ಸಾಮಾಜಿಕ ಅಸಮಾನತೆಯ ಬಗ್ಗೆ ಅಸಮಾಧಾನ ತಳೆದಿರುವುದರ ಜೊತೆಗೆ ಕವಳತಾಯಿಗಳನ್ನು ಮತ್ತೊಮ್ಮೆ ಕನಿಕರದ ಕೂಸಾಗಿ ಮಾಡುವುದನ್ನು ಬಯಸುವುದಿಲ್ಲ.

'ಮೇಷ್ಟ್ರು' [ದೀಪದ ಹೆಜ್ಜೆ] ಹಲವಾರು ಪ್ರಶ್ನೆಮಾಲಿಕೆಯಲ್ಲಿ ನಿಗುರಿ ನಿಂತಿರುವ ಕವನ ಸಹಜವಾಗಿ ಮೂಡಿ ಬಂದಿದೆ. ಕವಳತಾಯಿಗಳಂತೋ ಅಂತೆಯೇ ಇಲ್ಲಿ ಕೂಡ ಪಾಪ! ಎಂದು ಮರುಗುವ ಕೆಲಸವನ್ನು ಕವಿ ಮಾಡುವುದಿಲ್ಲ. ಸಮಾಜದ ಭೂತ ವರ್ತಮಾನ ಭವಿಷ್ಯಕ್ಕೆ ಅಡಿಗಲ್ಲಾಗಿರುವ ಈ ಮೇಷ್ಟ್ರ ಗೋಳು ಸಂತೆಯ ಬಾಳಿಗೆ ಬಿಡುಗಡೆಯುಂಟೇ? ಕಲಿಸುವುದರಲ್ಲಾಗಲೀ ಇನ್ನಿತರ ಕರ್ತವ್ಯಗಳಲ್ಲಾಗಲೀ ಮೇಷ್ಟ್ರಿಗೆ ಆಸಕ್ತಿ ಇಲ್ಲ, ಉತ್ಸಾಹವಿಲ್ಲ, ಚೈತನ್ಯವಿಲ್ಲ. ಹೀಗಿರುವ ಮೇಷ್ಟ್ರ ಇಡೀ ವ್ಯಕ್ತಿತ್ವ, ವರ್ಚಸ್ಸು "ಸಪ್ಪೆಸಪ್ಪೆ" ಎನ್ನುವ ಮಾತಿನಲ್ಲಿ ಪ್ರತಿಧ್ವನಿಸುತ್ತದೆ. "ಜನ್ಮಜನ್ಮಾಂತರದ ಕರ್ಮವಿದ ಹಾಗೆ। ವಿಶ್ವಭೂಪಟದಂತಹ ಹಳೆಯ ಕೋಟು। ಈ ಮುರುಕು ಕಟ್ಟಡಕೆ ಹರಕು ಗೋಪುರದಂತೆ ಪೇಟ" ಎಂಬ ಸಾಲುಗಳು ಸಾಮಾಜಿಕ ಪರಿವಲಯದಲ್ಲಿ ಮೇಷ್ಟ್ರ ಸ್ಥಿತಿಗತಿಗಳನ್ನು ಮೂರ್ತೀಭವಿಸು

ತ್ತವೆ. ಮೇಷ್ಟ್ರು ಜ್ಞಾನ-ಅಜ್ಞಾನಗಳನ್ನು ಸ್ಪಷ್ಟವಾಗಿ ಸಾಕ್ಷೀಕರಿಸುತ್ತದೆ. "ಪಾಳು ಕಗ್ಗವಿಯಲ್ಲಿ ಮೊರೆಯುತಿದೆ ಕೇಳು ಅದೋ। ನೂರು ಹುಲಿಕರಡಿ" ಎನ್ನುವ ಭೀಕರ ಚಿತ್ರ. ಮೇಷ್ಟ್ರು ಸಾಮಾಜಿಕವಾಗಿ ಹೆಚ್ಚು ಪ್ರಾಮುಖ್ಯತೆ ಪಡೆಯಬೇಕು. ಆದರೆ ಈ ಪರಿಸರದಲ್ಲಿ ತೊಳಲಾಟ ಚಿಂತೆಗಳಷ್ಟೇ ಉಳಿಯುತ್ತವೆ.

ಸತ್ತ ಎತ್ತಿನ ಮಾಂಸಕ್ಕೆ ಮುತ್ತಿಕೊಂಡ ಹದ್ದುನಾಯಿಗಳೊಂದು ಕಡೆ. ಹಸಿರು ಚಪ್ಪರದ ಮಂಗಳ ವಾದ್ಯಗಳ ಮೊಳಗುವಿಕೆಯಿಂದ ತುಂಬಿರುವ ಮದುವೆ ಮನೆ. ಅಲ್ಲಿ ರಸಭೋಜನಕ್ಕೆ ಪಂಕ್ತಿ ಪಂಕ್ತಿ ಜನಗಳು ಮತ್ತೊಂದು ಕಡೆ. ಮುದಿಯ ಹುಣಿಸೆಮರ, ದೂರದ ಗುಡ್ಡ ಮೂಕಸಾಕ್ಷಿಯಾಗಿ ನಿಂತಿವೆ. ಉಕ್ಕಿನ ಕೊಕ್ಕು ಕೆಂಗಣ್ಣ ಬೆಳಕಿನ ರಣಹದ್ದುಗಳ ನಾಯಿಗಳ ಪ್ರಯೋಗಶಾಲೆಯಲ್ಲಿ ಎತ್ತಿನ ಡಿಸೆಕ್ಷನ್ ನಡೆದಿದೆ. "ಕಡೆಗೆ ಉಳಿದಿಹುದಿಷ್ಟೆ-ಕಂಕಾಲ ಮಾಲೆ!", "ದೊಡ್ಡ ಎಲುಬಿನ ಗೂಡು ಮನೆ ಮುರಿದು ಗೋಡೆಗಳುದುರಿ ಹೆಂಚೆಲ್ಲ ಹಾರಿ ನಿಂತಿಹುದು ತೊಲೆ ಕಂಬಗಳ ಬಿಗಿದ ಮಾಡು!" ['ಔತಣ' ದೀಪದ ಹೆಜ್ಜೆ]. ಯಾತ್ರಿಕನಂತೆ ಬಂದ ಜೀವ ಹೋದದ್ದೆಲ್ಲಿ ಎಂದು ಆಶ್ಚರ್ಯ ವಿಸ್ಮಯದೊಂದಿಗೆ ಕವಿ ಪ್ರಶ್ನಿಸುತ್ತಿರುವಾಗಲೆ ಅದರ ಹೆಣಕ್ಕಾಗಿ "ನನಗೆ ತನಗೆನ್ನುತಿವೆ ಗೃಧ್ರ ಶುನಕ।". ಈ ಕಿತ್ತಾಟ ಸಮಕಾಲೀನ ಬದುಕಿನ ಅವ್ಯವಸ್ಥೆಗೆ ದೃಷ್ಟಾಂತವಾಗುತ್ತದೆ. ತಿಂಗಳ ಹಿಂದೆ ಎತ್ತು ಹೆಗಲಿನಲ್ಲಿ ನೊಗ ಹೊತ್ತು ಮಣ್ಣ ಕಣಕಣವನ್ನು ಉತ್ತು ಹೊಲವನ್ನು ಹಸನು ಮಾಡಿತ್ತು. ಈಗ ಅದು "ಜೆಲ್ಲಾಪಿಲ್ಲಿಯಾಗಿ ಬಿದ್ದಿಹ ದೇಹ ಮಾತ್ರ"ವಾಗಿದೆ. ಮಾನವ ಜೀವಾಳವೂ ಇಷ್ಟೇ ಎನ್ನುವ ಸತ್ಯವನ್ನು ತಾತ್ವಿಕವಾಗಿ ನಿರೂಪಿಸಲೆತ್ನಿಸಿದಂತಿದೆ. ಮನುಷ್ಯರ ಪ್ರಾಣಿಗಳ ಸಂಭ್ರಮದ ಮಧ್ಯೆ ಹಸಿವನ್ನು ವ್ಯಂಜಿಸುವುದರ ಮೂಲಕ ಬದುಕಿನ ನಂತರದ ಸ್ಥಿತಿಗತಿಗಳ ಚಿತ್ರಣವನ್ನು 'ಔತಣ'ದಲ್ಲಿ ಕೊಡುತ್ತಾರೆ. ಉತ್ತ ಎತ್ತು ಸತ್ತರೇನು ಆ ಹೊಲದಲ್ಲಿ ಮಳೆಯ ನೀರ ಕುಡಿದು ಹಸಿರು ಜೀವ ಉದಿಸಿದೆ. ದೇಹ ಉದುರಿ ಬಿದ್ದರೂ ಚೆಲುವಿನುಸಿರು ಸದಾ ಹಸಿರಾಗಿರಲೆಳೆಸುತ್ತದೆ. ಜೀವಿಗಳಿಗೆ ಬದುಕಿನ ಬಗ್ಗೆ ಅದಮ್ಯ ಬಯಕೆ ಇದೆ. ಹಸಿವು ಪ್ರಾಣಿಗಳ ಮುಖ್ಯ ತೃಷೆ, ಮಾನವನ ದೊಡ್ಡ ಸಮಸ್ಯೆ. ಅದರ ನಿವಾರಣೆಗಾಗಿ ಆತ ಸಾಯುವ ಸ್ಥಿತಿಗೆ ಮುಂಚೆ ಏನನ್ನಾದರೂ ಮಾಡಲು ತಯಾರು. ಇದನ್ನು ದಿನ ಬೆಳಗಾದರೆ ನಾವು ಅನುಭವಿಸುತ್ತೇವೆ. ಹಸಿದ ಜನಕ್ಕೂ ಎಲ್ಲರಿಗೆ ಸಿಗಲಾದ ಶಕ್ತಿ ಇದೆ, ಕೃತಜ್ಞತಾ ಭಾವವಿದೆ, ಗಡುಸುತನವಿದೆ. ಆದರೆ ಸಮಾಜ ಅವರನ್ನು ವಂಚಿಸುತ್ತಿದೆ. ಅವರ ಬಾಳ ಪ್ರಜ್ಞೆಯನ್ನು ವಿವೇಚನಾ ಶಕ್ತಿಯನ್ನು ಕಿತ್ತುಕೊಂಡಿದೆ ಇಂಥ ಸಂದರ್ಭದಲ್ಲಿ ಕವಿ ಬದುಕನ್ನು ಒರೆಗೆ ಹಚ್ಚಲು ಪ್ರಯತ್ನಿಸುತ್ತಾರೆ. ಅಲ್ಲಿ ಬಣ್ಣ ಕಳೆದುಕೊಂಡ ನಾಟಕವನ್ನು ಬಯಲಿಗೆಳೆಯುತ್ತಾರೆ ('ಬಂತು ಬೆಳಗು'-ದೀಪದ ಹೆಜ್ಜೆ). ಸಾಮಾಜಿಕ ವಿಡಂಬನೆಯ ಹಂತದಲ್ಲಿ ಕ್ಷುಲ್ಲಕತನವನ್ನು ತೋರಿಸುವ(ನಾಯಿಯಂತಹ)

ಜನಗಳಿಗೆ ಬಿಸಿಯ ಚುರುಕನ್ನು ತಟ್ಟಿಸಬಲ್ಲ ಧಾರ್ಷ್ಟ್ಯವನ್ನು ಶಿವರುದ್ರಪ್ಪನವರ ಕಾವ್ಯದಲ್ಲಿ ಕಾಣಬಹುದು ('ನಾಯಿಗಳಿದ್ದಾವೆ ಎಚ್ಚರಿಕೆ'–ಅನಾವರಣ).

ಜೀವನ ಒಂದು ಮುಳ್ಳಿನ ಹಾದಿ. ನೆಲೆಯಿಲ್ಲದೆ ಆಸರೆ ಕಳೆದುಕೊಂಡಾಗ ಅದು ಕಂದರಗಳ ದಾರಿ.

"ನೂರು ಹದ್ದಿನ ನೆರಳನಾಟಕ
ಭಯವ ಬೀರುವ ಚೀರುಲಿ" ['ಒಂದುಕ್ಷಣ'–ದೇವಶಿಲ್ಪ]

ಎಲ್ಲ ಜೀವ ಕ್ರಿಯೆಗಳಿಗೂ ಮೂಲ ಆಕರವಾದ ಸೂರ್ಯ ನಿರಂತರನಾಗಿದ್ದಾನೆ ನಿಜ. ಒಂದು ಕಡೆ ಕತ್ತಲಾದರೆ ಮತ್ತೊಂದು ಕಡೆ ಬೆಳಕಾಗುತ್ತದೆ. ಸುಖ ದುಃಖ ಗಳೆರಡಕ್ಕೂ ಬದುಕಿನಲ್ಲಿ ಸಮಪಾಲು. ಇದನ್ನು ತಿಳಿದೂ ಸದಾ ನಮ್ಮ ಜೀವನ ನಗುತ್ತಿರಬೇಕು, ಚೆಲವು ಒಲವು ಗೆಲವುಗಳ ಬೆಳಕು ತುಂಬಿರಬೇಕೆಂದರೆ ಹೇಗೆ ಸಾಧ್ಯ? ಆದರೆ ಮನುಷ್ಯ ಸಹಜವಾದ ವಾತ್ಸಲ್ಯದ ಜೊತೆಗೆ ವೈಜ್ಞಾನಿಕ ದೃಷ್ಟಿ ಕೋನದಿಂದ ಬದುಕನ್ನು ಪ್ರಶ್ನಿಸುವ ಶಕ್ತಿಯನ್ನು ಗಳಿಸಿಕೊಳ್ಳಬೇಕು. ವಿವೇಚನಾ ಶೀಲತೆ ಇದ್ದು ಪರಂಪರಾಗತ ಸಂಪ್ರದಾಯಗಳ ಆಚರಣೆಯನ್ನು ಒಪ್ಪಿಕೊಂಡು ಎಲ್ಲೋ ಕೆಲವು ಬಾರಿ ತೀವ್ರಸ್ಪಂದನಕ್ಕೆ ಒಳಗಾದಾಗಕೂಡ ಈ ಅರ್ಥಹೀನತೆಯನ್ನು ಪ್ರಶ್ನಿಸುವ ಬದಲು ಅದನ್ನು ಬದುಕಿನ ಅಭೀಪ್ಸೆಗಳಲ್ಲೇ ಮುಳುಗಿ—

"ಹಾವಾಡಿಗನ ಮಾಟ ಕಾವ್ಯ ಪಾರಾಯಣ
ಭಾಷಣ ಹರಿಕಥೆಯ ಸವಿಯೂಟ"

ವನ್ನು ಮಾಡಿಕೊಂಡರೂ 'ಮುರುಕು ಜೋಪಡಿಯಲ್ಲಿ ಮಳೆಯ ನೀರಿಳಿವಂತೆ ಇಳಿಯುತಿವೆ ತಲೆಯೊಳಗೆ ನೂರು ಚಿಂತೆ'ಗಳ ಗರ್ಭವಾಗುತ್ತದೆ. ಈ ರೂಪಕದ ಸುತ್ತ ಪ್ರಜ್ಞೆ ಇದ್ದರೂ ವ್ಯಕ್ತಿ ನಿರ್ಲಿಪ್ತನಾಗುವ ಸ್ಥಿತಿಯನ್ನು ನಾಟಕೀಯವಾಗಿ ಬಿಡಿಸುತ್ತಾರೆ ('ಇವನು'– ದೀಪದ ಹೆಜ್ಜೆ). ಕಲುಷಿತಗೊಂಡಿರುವ ಸಮಾಜದಲ್ಲಿ "ನೊಂದವರನು ನೋಯಿಸುವುದೆ ಜಗದಲೀಲೆ" ('ಭಗ್ನ ಜೀವ'-ಒಲವುಗೆಲವು)ಎನ್ನುವ ವಾಸ್ತವ ಸತ್ಯವನ್ನು ಕವಿಯ ಮನಸ್ಸು—

"ನಮ್ಮವರು ನಮಗಿಲ್ಲ
ನಮಗೆ ನಾವೆ ಎಲ್ಲ ಕಟ್ಟಕಡೆಗೆ......
ಇದೇ ಲೋಕದ ಬಾಳು" ['ಆಟ'—ಸಾಮಗಾನ]

ಎಂಬಲ್ಲಿ ಕಂಡುಕೊಂಡಿದೆ. ನಮ್ಮವರೆನಿಸಿಕೊಂಡವರು ಬದುಕಬೇಕಾಗಿರುವ ಜೀವಕ್ಕೆ ಕೊಡಬಹುದಾದ ಕಾಣಿಕೆ ಎಂತಹುದು ಎಂಬುದನ್ನು ಮನದಟ್ಟು ಮಾಡುತ್ತಿದ್ದಾರೆ. ಆದ್ದರಿಂದಲೆ ಜಾತೀಯತೆಯ ಕ್ರೌರ್ಯವನ್ನು ಮನನೊಂದು ವಿಡಂಬಿಸುತ್ತಾರೆ.

"ಅವನೆ, ಅವನು ಲಿಂಗಾಯಿತ, ಇವನು
ಬ್ರಾಹ್ಮಣ, ಅವನೊಬ್ಬ ಒಕ್ಕಲಿಗ......
ಜೈಲಿನಲಿ ಇವನೊಬ್ಬ ಕೈದಿ......ಬೇಕಾದೀತು" ('ದುರಂತ'–ಗೋಡೆ)

ಪಾರಂಪರಿಕ ದತ್ತವಾದ ಧರ್ಮ–ಅವತಾರಗಳ ಹಿನ್ನೆಲೆಯಲ್ಲಿ ನಮ್ಮ ಸಾಮಾಜಿಕ ಸಮಸ್ಯೆಗಳ ಮಾಲಿನ್ಯವನ್ನು, ಅಸಹ್ಯಕರ ತರತಮ ಭಾವವನ್ನು ಕುರಿತು ಅಪಾರವಾದ ಕಾಳಜಿ ಕವಿಗೆ.

"ನೂರಾರು ರೀತಿಯಲಿ ಅಡ್ಡಹಾದಿಯ ಕಡಿದು
ಗುಡ್ಡವ ದಾಟಿ ಚಿನ್ನಕ್ಕೆ ಕನ್ನಕೊರೆಯುವ ಜನರು.
ಬೆವರಿಲ್ಲದೆ ಬಳಿಗೆ ಬಂದುದ ತುಡುಕಿ ಅಡಕಿ,
ಬ್ಯಾಂಕಿನಲಿ ಬೆಳೆವ ಬಡ್ಡಿಗೆ ತುಡಿವ ತಾಪಸಿಗಳು.
ಬೆಳಗಾದೊಡನೆ ನೀರಿಗೆ ಹಾಲನು ಬೆರಸಿ, ಅನ್ನಕ್ಕೆ
ಕಲ್ಲನು ಇಡುಕಿ, ಹಳಸಿದ್ದನ್ನೆ ಬಿಸಿಮಾಡಿ ಬಡಿಸಿ
ನಾಲಿಗೆಯಲ್ಲೆ ಮೂಲೋಕವನೆ ಜಾಲಿಸಿ ನಿಂತ
ಮಹಾನುಭಾವರು ಇವರು"
['ನಮ್ಮವರೆ ಇವರೆಲ್ಲರು'–ಅನಾವರಣ]

ಎನ್ನುವ ಮಾತುಗಳ ಉದ್ದೇಶವನ್ನು ಗಮನಿಸಬೇಕಾಗುತ್ತದೆ. "ಇಡೀ ಜಗತ್ತಿನಲ್ಲಿ ಇಲ್ಲ ಇಂಥ ಪುಣ್ಯದ ನಾಡು". ಒಟ್ಟು ಅವತಾರಗಳ ಸರಮಾಲೆಗೇ ಕಿಚ್ಚು ಹಚ್ಚಿ ಬಿಟ್ಟಷ್ಟು ಉತ್ಕರ್ಷವಾಗಿವೆ ಇಲ್ಲಿ ತೆರೆದುಕೊಳ್ಳುವ ಮಾತುಗಳು. "ಧರ್ಮದ ಬೀಡು ವೇದೋಪನಿಷತ್ತುಗಳ ನಾಡು" ಇವೆಲ್ಲ ಹಿಡಿಯುವಿಕೆಯ ಹಂತದಲ್ಲಿ ನಿಂತ ನಿಸ್ಸತ್ವದ ಮಾತಾಗುತ್ತವೆ. "ಯಾವ ದೇಶದಲ್ಲಿ ಎತ್ತಿದ್ದಾನೆ ಹೇಳಯ್ಯ ಭಗವಂತ ಇಷ್ಟೊಂದು ಅವತಾರಗಳ ?" ಎಂಬ ಪ್ರಶ್ನೆ ಕವನದ ನಾಟಕೀಯಗುಣಕ್ಕೆ ಹೊಸ ಅರ್ಥವನ್ನು ತುಂಬುವುದರ ಜೊತೆಗೆ ಧ್ವನಿಪೂರ್ಣವನ್ನಾಗಿಸುತ್ತದೆ. "ಈ ನಮ್ಮವರ ಉದ್ಧಾರಕ್ಕೆ ಪಂಚಯುಗ। ಯೋಜನೆ ಹಾಕಿ ಅವತರಿಸುತ್ತಲೇ ಇದ್ದಾನೆ ಆ ಪರಮಾತ್ಮ। ಪ್ರತಿಯುಗದಲ್ಲೂ" ಪರಮಾತ್ಮ ನಮಗೆ ಅಮೂರ್ತ ಕಲ್ಪನೆ. ಈ ನಮ್ಮವರದು ಮೂರ್ತಸ್ವರೂಪದ ವಾಸ್ತವತೆ. ಮೂರ್ತ–ಅಮೂರ್ತ ಸಂಕೇತಗಳನ್ನು ಘರ್ಷಣೆಗೊಡ್ಡುತ್ತಾ ಅಮೂರ್ತತ್ವಕ್ಕೆ ರಜಾಕೊಡಿಸಲು ರೆಕಮೆಂಡ ಮಾಡುವುದರೊಂದಿಗೆ ಕವನದ ಮಹತ್ವವನ್ನು ಗುರುತಿಸಬಹುದು. ಅಸದಳ ಪ್ರವಾಹದ ಭೋರ್ಗರೆತದಲ್ಲಿ ಕೊಚ್ಚಿಹೋಗುವುದನ್ನು ದಿಕ್ಕು ಬದಲಿಸಿ ಬದುಕಿಸುತ್ತದೆ ಇಲ್ಲಿಯ ಕಾವ್ಯಶಕ್ತಿ. 'ಜಾತ್ರೆ' (ಅನಾವರಣ) ಕವನವೂ ಸಹ ನಮಗೊದಗಿರುವ ಪಿಡುಗಿನ ಬಗ್ಗೆಯೇ ಚಿಂತಿಸುತ್ತದೆ. ಅಷ್ಟೇ ಅಲ್ಲದೆ ಅದಕ್ಕೆ ಕಾರಣರಾದವರನ್ನು ಹೆದರಿಸುತ್ತದೆ. "ಮಾರಿ ಮಸಣಿ ಭೂತ ಜಂತರ ಜೋಮ" ಇವರಿಗೆ ಕಡಿಯುವ ಬಲಿ, ಬೋಳು ಮಂಡೆಯ, ಬೆತ್ತಲೆ ಹೊರಳಾಡುವ ಭಕ್ತರು ಬಾಯಿಬೀಗ ಹಾಕಿಕೊಂಡಿದ್ದಾರೆ.

ಇವರೆಲ್ಲ ಆ ದೇವತೆಗೆ ತಕ್ಕ ದಂಡು. ಇಂಥ ಮೂಢಜನರ ಬುದ್ಧಿಗೆ ಕೇಲಿ ಜಡಿಯುತ್ತಾ ತನ್ನ ಸ್ವಾರ್ಥ ಸಾಧನೆಗೆ ಧರ್ಮದೇವರ ಹೆಸರಿನಲ್ಲಿ ಸಾರ್ವಜನಿಕರ ಸುಲಿಗೆ ಮಾಡುವ ಪೂಜಾರಿಯನ್ನು ಗೇಲಿ ಎಬ್ಬಿಸಿದ್ದಾರೆ.

"ಗೊತ್ತು ನೀನೆ ರಚಿಸಿದ್ದು ಈ
ನಂಬಿಕೆಯ ವ್ಯೂಹ, ನಿನಗೊ ತೀರದ ದಾಹ"

ಹೀಗೆ ಒಂದು ವರ್ಗ ಇತರ ತಲೆಬಲಿಯದ ವರ್ಗಗಳ ಮೇಲೆ ತಾನೆ ಸೃಷ್ಟಿಸಿದ ಮಡಿ-ತಂತ್ರ-ಮಂತ್ರಗಳ ಹೊರೆಯನ್ನು ಶತಮಾನಗಳಿಂದಲೂ ಹೇರಿ (ಬಲವಂತವಾಗಿ ?) ತನ್ನ ಹಿತಾಸಕ್ತಿಯನ್ನು ಮೆರೆಯಲು ಪ್ರಯತ್ನಿಸಿದ್ದು ಸ್ಪಷ್ಟವಾಗುತ್ತದೆ.

"ಇದುವರೆಗು ಬಿತ್ತಿದ್ದು ಬೆಳೆಯಾಗಿ ತೆನೆದೂಗಲಿಲ್ಲ.
ಬೀಜವೆ ಜಬ್ಬೊ, ನೆಲದಲ್ಲೆ ಹದವಿಲ್ಲವೋ
ಅಂತೂ ಬಿತ್ತಿದ್ದು ಕೆಳಗೆ ಬೇರೂರಿ, ಮೇಲಕ್ಕೆ
ಗಿಡವಾಗಿ ಪುಟದೇಳಲೇ ಇಲ್ಲ" ['ವಿಫಲ'-ತೆರೆದದಾರಿ]

ಬೃಹತ್ತಾದ ಆಸೆ ಆಕಾಂಕ್ಷೆಗಳ ಆದರ್ಶವನ್ನು ಕಟ್ಟಿಕೊಂಡು ದುಡಿದ ವ್ಯಕ್ತಿಯ ಕನಸು ನನಸಾಗದೆ ವಿಫಲನಾಗುತ್ತಾನೆ. "ಬರೀ ಕಲ್ಲು ಬಂಡೆಯ ನಡುವೆ ಇವನೂ ಒಂದು। ಕಲ್ಲಾಗಿ ಕೂತಿದ್ದಾನೆ." ಹದವಿಲ್ಲದ ಬಂಜೆಭೂಮಿಯಲ್ಲಿ ಯಾವ ಬೀಜ ತಾನೆ ಮೊಳಕೆಯೊಡೆಯಲು ಸಾಧ್ಯ.

"ಯಾವ ಬೀಜ ಮೊಳೆತೀತು ಇಲ್ಲಿ
ಈ ಬೆಂಗಾಡಿನಲ್ಲಿ
ಮಿದುವಿಲ್ಲದಲ್ಲಿ ಹದವಿಲ್ಲದಲ್ಲಿ
ಬಿಸಿಲ ರಣಹದ್ದೆರಗಿ ಸದಾ। ಬೋಳು ಬಂಡೆಯ ಮಂಡೆ ಕುಕ್ಕುವಲ್ಲಿ,"
['ಬೆಂಗಾಡು'-ತೆರೆದದಾರಿ]

ವಿಫಲನಾದಂತಹ ವ್ಯಕ್ತಿ ಉತ್ತಿದ್ದು ಬಿತ್ತಿದ್ದು ಎಲ್ಲ ಇಲ್ಲೆ. ಇಂತಹ ನಮ್ಮ ಸಮಾಜದ ಆದರ್ಶಗಳು ಬುಡ, ಬೇರು, ನೆಲದ ಆಸರೆಯಿಲ್ಲದೆ ಚಳಿಗೆ ಬಿಸಿಲುಗಳನ್ನು ತಡೆಯು ಕೊಂಡಂತಾಗುತ್ತದೆ. ಈ ಪರಿಸ್ಥಿತಿಯಿಂದ ನಮ್ಮ ಯಾವೆಲ್ಲ ಯೋಜನೆಗಳು, "ಯೋಚನೆಗಿಳಿದು। ತಳದ ಕೆಸರಲ್ಲಿ ಹೂತುಹೋಗಿದೆ ಬುದ್ಧಿ" ಎನ್ನುವ ಕವಿವಾಣಿ ನಮ್ಮ ಸಾಮಾನ್ಯ ಅರಿವಿನಿಂದಾಚೆಗೆ ಕೆಲಸ ಮಾಡಿದ ಬೌದ್ಧಿಕ ಪ್ರಜ್ಞಾವಸ್ಥೆಯನ್ನು ನಿರ್ದೇಶಿಸುತ್ತದೆ.

"ದೇಶದಾದ್ಯಂತ ಅಣೆಕಟ್ಟುಗಳ ಕಟ್ಟಿನಾವು
ಬೆಳದದ್ದೇನು ಬರೀ ಹಸಿವೆ"

ಕಲ್ಪನೆ, ಭ್ರಮೆ, ದೈನ್ಯತೆ ಇವುಗಳಡಿಯಲ್ಲಿ ಸಿಕ್ಕಿಬಿದ್ದ ನಾವು ನಮ್ಮ ಹಸಿವನ್ನು ಪರಿಹರಿಸಿಕೊಳ್ಳಲು ಅಸಮರ್ಥರಾಗಿದ್ದೇವೆಂಬ ದುಃಖವನ್ನು ನುಂಗಲಾರದ–ಉಗುಳಲಾರದ ಸ್ಥಿತಿಯಲ್ಲಿ ಅನುಭವಕ್ಕೆ ತಂದುಕೊಂಡಿದ್ದಾರೆ('ಸಾಕು ನಿಲ್ಲಿಸು ನಿನ್ನ ಸಾಮಗಾನ'—ತೆರೆದದಾರಿ). ಈ ನೋವನ್ನು ತೀವ್ರವಾಗಿ ಅನುಭವಿಸಿದ್ದರ ಪರಿಣಾಮದಿಂದಾಗಿ ಕಂಡುಕೊಂಡ ದೋಷವನ್ನು ನಿರ್ದಾಕ್ಷಿಣ್ಯವಾಗಿ ವ್ಯಕ್ತಪಡಿಸಿದ್ದಾರೆ.

> "ಎಲ್ಲೋ ಯಾವುದೋ ಕೀಲು ತಪ್ಪಿದೆ ಒಳಗೆ
> ಅದರಿಂದಲೆ ಇಷ್ಟು ಅವ್ಯವಸ್ಥೆ" ['ರಿಪೇರಿ'-ತೆರೆದದಾರಿ]

ತನ್ನತನವನ್ನೇ ಬೇಕಾದರೆ ಮಾರಾಟಕ್ಕಿಡುವಂಥ ಜನ ನಾವು. ಸ್ವಂತಿಕೆ (ಒರಿಜಿನಾಲಿಟಿ) ಏನೊಂದೂ ಇಲ್ಲದೆ ತುಕ್ಕು ಹಿಡಿದಿರುವುದು ನಮ್ಮ ಸ್ಥಿತಿಯಾಗಿದೆ. ಪ್ರಾಯಶ ನಮಗೆ ಗುಲಾಮಗಿರಿಯಿಂದಲಾದರೂ ಅಪಮಾನವಾದಂತಿಲ್ಲ.

> "ಶತಮಾನಗಳ ಕಾಲ ಕೊರಳಪಟ್ಟಿಯಲ್ಲೇ ಬೆಳೆದ ನಾಯಿಗಳು ನಾವು.....
> ಟೇಬಲಿನಿಂದುದುರುವ ಎಂಜಲಿಗಾಗಿ ನಾಲಿಗೆ ಚಾಚಿನಿಂತ ನೊಣಗಳು ನಾವು,
> ಶುದ್ಧ ಗುಲಾಮರು" ['ಗುಲಾಮರು'-ತೆರೆದದಾರಿ]

ನಮ್ಮ ಗುಲಾಮಗಿರಿಯಲ್ಲಿ ಎಲ್ಲವನ್ನು ಕಳೆದುಕೊಂಡಿದ್ದೇವೆ. ಆಜ್ಞೆ ಕಟ್ಟುಕಟ್ಟಳೆಗಳನ್ನು ಪರಿಪಾಲಿಸಲು ನಾವು ಎಂಥದ್ದು ಬೇಕಾದರೂ ಮಾಡಲಿಕ್ಕೆ ತಯಾರಿದ್ದೇವೆ. "ನಮ್ಮತನವನ್ನೆಲ್ಲಾ ಹರಾಜಿಗಿಟ್ಟು ನಿಂತಿದ್ದೇವೆ ಸ್ವಾಮಿ" ಮುಖ ತಗ್ಗಿಸುವಂತಾಗುತ್ತದೆ. ಆದರೆ ನಾವು ಬೆನ್ನನ್ನು ಬಾಗಿಸಿ ಸದಾಸಿದ್ಧರಾಗಿ ನಿಂತಿರುವ ಗುಲಾಮರು ತಾನೆ. ಸ್ವಾತಂತ್ರ್ಯ ಗಳಿಸಿಕೊಂಡರೂ ಇಲ್ಲಿನದೇ ನಮಗೇನೂ ದಕ್ಕುತ್ತಿಲ್ಲ.

> "ನಮ್ಮ ಹೆಂಗಸರನ್ನು ಸೌಂದರ್ಯಸ್ಪರ್ಧೆಗೆ ಕಳಿಸಿ,
> ನ್ಯೂಯಾರ್ಕಿನ ನ್ಯಾಯಮೂರ್ತಿಗಳೆದುರು
> ಅರೆಬತ್ತಲೆಯಲ್ಲಿ ನಿಲ್ಲಿಸಲೂ ಹಿಂಜರಿವ ಜನವಲ್ಲ ನಾವು"

ಅಬ್ಬ ! ಬಿಸಿಜ್ವಾಲೆಗಳು ಮುಖದಮೇಲೆ ರಪ್ಪಡಿಸುತ್ತವೆ. ಇಡೀ ದೇಹದ ಒಳಗು ಹೊರಗನ್ನು ಆಕ್ರಮಿಸಿಕೊಂಡು ಮನಸಾಇಚ್ಛೆ ಸುಡಲೆತ್ನಿಸುತ್ತವೆ. ನಮ್ಮ ಅಭಿಮಾನ ಶೂನ್ಯತೆಯನ್ನು ಬೇರು ಸಹಿತ ಕಿತ್ತೆಸೆದು ಆತ್ಮವಿಶ್ವಾಸವನ್ನು ಬದುಕಿನ ಬಗ್ಗೆ ಪ್ರಜ್ಞಾದೃಷ್ಟಿಯನ್ನು ಅಸಹಾಯಕ ಸ್ಥಿತಿಯಲ್ಲೂ ಉದ್ದೀಪಿಸುತ್ತವೆ.

."ಜನರ ನೈತಿಕಮಟ್ಟ ಸುಧಾರಿಸಬೇಕು" ('ಒಂದು ಬೆಳಗು'-ಸಂಕ್ರಮಣ ೬೫) ಎಂದು ಮಂತ್ರಿಗಳು ಅಪ್ಪಣೆ ಕೊಡಿಸುತ್ತಾರೆ. ಬೆಳಗಾಗುವ ಹೊತ್ತಿಗೆ ಆಕಾಶವಾಣಿ "ಅಂಗನೆಯರ ಭಂಗಮಾಡಿದ ಪರಮಾತ್ಮನ ಲೀಲೆಗಳನ್ನು" ಬಿತ್ತರಿಸುತ್ತದೆ.

ಬದುಕು ಪೂರ್ಣ ಕಲಬೆರಕೆಯಾಗಿರುವ ಘಳಿಗೆಯಲ್ಲೂ ಯಾವುದೋ ರಾಜ್ಯದಲ್ಲಿ ಕ್ರಾಂತಿ, ಮಹಿಳಾವರ್ಷದಲ್ಲೂ ಅಡಿಗೆ ಮಾಡುವುದರಿಂದ ತಪ್ಪಿಸಿಕೊಳ್ಳಲಾರದ ಮಹಿಳೆಯರ ಸ್ಥಿತಿಗತಿಗಳನ್ನು 'ಒಂದು ಬೆಳಗು' ಸುಂದರವಾಗಿ ಅಭಿವ್ಯಕ್ತಿಸುತ್ತದೆ. "ಎಂತೆಂಥವರು ಏನೇನೋ ಆದದ್ದು" "ದುಃಸ್ವಪ್ನ"ದಲ್ಲಿ(ನನ್ನ ನಿನ್ನ ನಡುವೆ) ಕಾಣುವಂತೆ ಮಾಡುತ್ತದೆ. ಸಮಕಾಲೀನ ಸಾಮಾಜಿಕ ಬದುಕಿನಲ್ಲಿ ಕರಗಿ ಕೊಚ್ಚೆಯಾಗಿ ಹರಿದ ಗೊಮ್ಮಟ, ತೊಣಚಿ ಹತ್ತಿ ಬೀದಿ ನಾಯಾಗಿ ಬಿದ್ದಿದ್ದ ಇಂದ್ರನೈರಾವತ, ಹೆಡೆಮುಡಿಸಿಕೊಂಡ ಕೊಳಕು ಮಂಡಲ ಜಲಕ್ರೀಡೆಯಾಡಿದ್ದು, ರಾಜಕೀಯ ವ್ಯವಸ್ಥೆಯ ಕಸಪೊರಕೆಯಾದ ವಿದ್ಯಾಭ್ಯಾಸ, ಜಗದ್ಗುರುಗಳಾದ ಸಾಹಿತಿಗಳು, ಕಾವಿಯೊಳಗೆ ಕೋವಿಯೆಬ್ಬಿಸಿದವರೆಲ್ಲರನ್ನು ಉನ್ನತಸ್ಥಾನದಲ್ಲಿ ಕಂಗೊಳಿಸುವ ಇಲಿ ಹೆಗ್ಗಣಗಳ ಒಟ್ಟು ವ್ಯಂಗ್ಯಕ್ಕೆ ಒಳಪಡಿಸಿರುವುದು ಅರ್ಥಪೂರ್ಣವಾಗಿದೆ. ಇಂತಹ ಸಾಮಾಜಿಕ ಅವ್ಯವಸ್ಥೆಯಲ್ಲಿ ಬದುಕು ಅಸಹನೀಯವಾಗುತ್ತದೆ. ಯಾಕೆಂದರೆ "ಕೊರಳ ಪಟ್ಟೆಯ ತಾಳಿ ಕಟ್ಟಿಸಿಕೊಂಡ ನಾಯಿ"ಗಳನ್ನು ಹಿಡಿಯುವಂತಿಲ್ಲ. ಚರಂಡಿಯ ದುರ್ವಾಸನೆಯಿಂದ ಹೇಗಾದರೂ ತಪ್ಪಿಸಿಕೊಳ್ಳಬಹುದು. ಆದರೆ ಈ ನಾಯಿಗಳು "ಬೊಗಳಿ ಬೊಗಳಿ ಸುಸ್ತಾಗಿ ಸುಮ್ಮನಾಗುವತನಕ" ನಾವು ಕಿವಿ ಮುಚ್ಚಿಕೊಂಡಿರಬೇಕು. ಸಾಮಾಜಿಕ ಬದುಕಿನ ಬಗ್ಗೆ ಇಲ್ಲಿ ನಡೆದಿರುವ ಚಿಂತನೆ ಅಸಾಧಾರಣವಾದದ್ದು. "ನರಿಕೂಗುತ್ತಿದೆ ಗರಿಯಾಡುತ್ತಿದೆ ಲೋಕದಲ್ಲಿ" ('ಒಂದು ಚಿತ್ರಕ್ಕೆ'-ಸಾಮಗಾನ).

ಶಿವರುದ್ರಪ್ಪನವರು ನಮ್ಮ ಕಾವ್ಯ ಪರಂಪರೆಯನ್ನು ತುಂಬ ಕುತೂಹಲದಿಂದ ವೀಕ್ಷಿಸುತ್ತ ಬಂದಿದ್ದಾರೆ. ಅವರ ಕಾವ್ಯಮಾಲೆ ಪ್ರಕೃತಿ, ಕಾಲ, ಮಾನವ-ಬದುಕು-ಸಮಾಜ ಇವೆಲ್ಲವನ್ನು ಅಷ್ಟೇ ಆಸಕ್ತಿಯಿಂದ ಅನುಭವಿಸಿ ಪರೀಕ್ಷಿಸಿ ಅಭಿವ್ಯಕ್ತಗೊಳಿಸಿದೆ. ಇಲ್ಲಸಲ್ಲದ ಆರೋಪಗಳನ್ನು ನವ್ಯ ನವ್ಯೋದಯದ ಮೇಲೆ ಹೊರಿಸಿತು. ಹಾಗೆ ನೋಡಿದರೆ ಯಾವುದೇ ಪಂಥ ಕೂಡ ಬದುಕಿಗೆ ಸಮೀಪವಾಗಲೇ ಇಲ್ಲ. ಗುಂಪುಗಾರಿಕೆ ಪ್ರಜ್ಞೆಗಳ ಹಾರಾಟ ಈ ಸಮಯಕ್ಕೆ ಮೊದಲಾಯಿತು. ಸಾಹಿತ್ಯಿಕವಾಗಿ ಗೊಂದಲಮಯ ವಾತಾವರಣ ಸೃಷ್ಟಿಯಾಯಿತು. ಸಮರ್ಥನಾದ ಪ್ರತಿಭಾಶಾಲಿ ಕವಿ ತುಂಬಾ ಎಚ್ಚರಿಕೆಯನ್ನು ವಹಿಸಿ ಮುಂಜಾಗರೂಕತಾ ಕ್ರಮದಿಂದ ಈ ಸಂದರ್ಭದಲ್ಲಿ ತನ್ನನ್ನು ನಿರ್ಧರಿಸಿಕೊಳ್ಳಬೇಕಾಗುತ್ತದೆ. ಜಿ. ಎಸ್. ಶಿವರುದ್ರಪ್ಪನವರು ಪ್ರಾಮಾಣಿಕವಾಗಿ ಇಂತಹ ಕಾರ್ಯವನ್ನು ನಿಯೋಜಿಸಿಕೊಂಡಿದ್ದರಿಂದ ಸತ್ವಯುತವಾದ ದಕ್ಷತೆಯನ್ನು ಪಡೆದುಕೊಂಡಿದ್ದಾರೆ. "ಯಾರೊಬ್ಬನೂ ಇನ್ನೊಬ್ಬನ ದಾರಿಯ ಬಗ್ಗೆ ಕೊಂಕಿಸುವ ಅಗತ್ಯವಿಲ್ಲ. ಅವನವನು ತುಳಿದ ದಾರಿ ಕವಿತೆಯ ನಿಜವಾದ ದಾರಿಯಾಗಿದ್ದರಷ್ಟೇ ಸಾಕು" ಎಂದು 'ತೆರೆದ ದಾರಿಯ' ಎಂಬ ಮಾತಿನಲ್ಲಿ ಶಿವರುದ್ರಪ್ಪನವರು ವ್ಯಕ್ತಪಡಿಸಿರುವ ಭಾವನೆಯನ್ನು ಪರಿಶೀಲಿಸಬೇಕಾಗುತ್ತದೆ.

ಯಾಕೆಂದರೆ ಕವಿಯೊಬ್ಬ ಏಕಾಕಿಯಾಗಿ ನಿಂತುಕೊಂಡು ಧೈರ್ಯವಾಗಿ ನನಗೆ ಯಾವ ಗುಂಪಿನ ಜೈಕಾರದ ಅವಶ್ಯಕತೆಯೂ ಬೇಕಾಗಿಲ್ಲ ಎಂದು ಹೇಳುವಂತಹುದು ಮಹತ್ವದ ಸಂಗತಿಯಾಗುತ್ತದೆ. ಗುಂಪುಗಳು—ನಾಯಕರು—ಹಿಂಬಾಲಕರು ಇರುವವರು ಇಂದು ನಮ್ಮ ಗಮನಕ್ಕೆ ಬಿದ್ದಿರುವಂತೆ ಹೆಸರು ಪ್ರಚಾರವನ್ನೋ ಮತ್ತೊಂದನ್ನೋ ಗಳಿಸಿಕೊಳ್ಳಬಹುದು.

ಈ ಲೇಖನವನ್ನು ಮುಗಿಸುವ ಮುಂಚೆ ೧೯೫೦ರ ನಂತರದ ಕನ್ನಡ ಸಾಹಿತ್ಯ ರಂಗದ ಕಾವ್ಯಸಂದರ್ಭದಲ್ಲಿ ಶಿವರುದ್ರಪ್ಪನವರ ಕೆಲವು ನಿಲುವುಗಳ ಬಗ್ಗೆ ವಿವೇಚಿಸಬೇಕಾಗುತ್ತದೆ. 'ಒರೆಗಲ್ಲು' ಈ ದೃಷ್ಟಿಯಿಂದ ಪ್ರಾಮುಖ್ಯತೆ ಪಡೆಯುತ್ತದೆ. ಮೂರು–ನಾಲ್ಕು ಮಾತ್ರೆಗಳೆಲ್ಲಾ ಲಯಬದ್ಧವಾಗಿ ಪ್ರಾರಂಭವಾಗುವ ಈ ಕವನ ಮೊದಲ ನಾಲ್ಕು ಪಾದಗಳ ೪–೫ನೆಯ ದಶಕದ ಸಹಜ ಆವೇಶಭರಿತ ಸ್ಥಿತಿ ಇದ್ದಕ್ಕಿದ್ದಂತೆ ಆಡುಮಾತಿನಲ್ಲಿ ಹೇಳಿಕೊಳ್ಳತೊಡಗುತ್ತದೆ. ಕತ್ತಿ, ಕಠಾರಿ, ಭಲ್ಲೆ, ಕುದುರೆ ದಂಡುದಾಳಿಗಳ ರಣಭೇರಿಯನ್ನು ಕಟ್ಟಿಕೊಂಡು ಹೊರಟ ಜನರ ಸೇನಾಧಿಪತಿಗೆ "ಲಗ್ಗೆನುಗ್ಗುವ ಸಮಯ ಬಂತೆಂದು ಹೇಗೋ ನುಗ್ಗಿ ಕಲ್ಲಹಾಕದಿರಯ್ಯ, ನಿನ್ನನ್ನು ನಂಬಿ ಹಿಂಬಾಲಿಸಿದ ಈ ಬಡಪಾಯಿಗಳ ಹೊಟ್ಟೆಗೆ" ಕವಿ ಸಮಾಧಾನದ ಮಾತುಗಳನ್ನು ಹೇಳುತ್ತಾರೆ. ಲಗ್ಗೆನುಗ್ಗುವ ಮನಸ್ಸು ಕವಿಗೂ ಇದೆ. ಆದರೆ ನಮ್ಮ ಬದುಕಿನ ಸಂದರ್ಭವನ್ನು ಧಿಕ್ಕರಿಸಿ ಬೇರಾವುದೋ ಆಸರೆಯ ಜೊತೆ ಬೆಳೆಸಿಕೊಂಡ ಸಂಬಂಧ ಊರ್ಜಿತವಾಗಲಾರದು. ನಮ್ಮ ಸಂಸ್ಕೃತಿ ಬೇರೊಂದು ಸಂಸ್ಕೃತಿಗಿಂತ ತೀರ ಭಿನ್ನವಾದದ್ದರಿಂದ ಅದನ್ನು ನಾವು ಅರಗಿಸಿಕೊಳ್ಳಲೂ ಸಾಧ್ಯವಿಲ್ಲ. ನಮ್ಮ ಕಾವ್ಯಪರಂಪರೆಯಾಗಲಿ ಅಷ್ಟೆ. ಆಂಗ್ಲರಿಂದ ಎರವಲು ತಂದ ಪ್ರಜ್ಞೆಗಳು, ನಮ್ಮ ಕಾವ್ಯದ ಇಲ್ಲವೆ ಬದುಕಿಗೆ ಯಾವುದೇ ಅರ್ಥಪೂರ್ಣತೆಯನ್ನು ಕೊಡಲಾರವು. ನಮ್ಮ ಕಾವ್ಯ ಮತ್ತು ಬದುಕು ಪರಿಪೂರ್ಣವಾಗಬೇಕಾದರೆ ಇಲ್ಲಿನ ಸಾಂಸ್ಕೃತಿಕ ಹಿನ್ನೆಲೆಯನ್ನು ದೃಷ್ಟಿಯಾಗಿಟ್ಟುಕೊಳ್ಳಬೇಕೇ ಹೊರತು "ಕತ್ತಿ ಖಡ್ಗಗಳೇಕೆ? ಬೇಕಾದುದೀಗ ನಿಯತ್ತು ಹಾಗೆಯೇ ತಾಕತ್ತು" ಕವಿ ಎಲ್ಲಿಯೂ ಸ್ಥಾವರತ್ವವನ್ನು ಪ್ರತಿಬಿಂಬಿಸಿಲ್ಲ. ಬದಲಾವಣೆಯನ್ನು ಸ್ವಾಗತಿಸುವುದು ಖಚಿತವಾಗಿದೆ. ಅದು ನಮ್ಮ ಬದುಕಿಗೆ ಪೂರಕವಾಗಿರಬೇಕು. ಪರಿವರ್ತನೆಯಾದರೂ ಅದು ಸಾಮಾನ್ಯ ಜನತೆಗೆ ಮುಟ್ಟದೆ ಹೋದರೆ ಆದ ಪ್ರಯೋಜನವೇನು? ನವೋದಯ ಜೀವನದಿಂದ ದೂರವಾದದ್ದೆಂದು ಪರಕೀಯ ಪ್ರಜ್ಞೆಯ ಒಳತೋಟಿಗೆ ಸಿಕ್ಕಿದ ನವ್ಯಪಂಥದ ಅಧಿಪತಿ ತಲೆ ತಗ್ಗಿಸಿ ಸಿಟ್ಟುಸಿರುಬಿಟ್ಟು ಕೇಳುವ "ನೀನು ಯಾರು?" ಎಂಬ ಪ್ರಶ್ನೆಗೆ ಕವಿ ಕೊಡುವ ಉತ್ತರ ಸೊಗಡಿನಿಂದ ತುಂಬಿದೆ.

"ನಾನೆ? ನಾನೊಂದು ಹಳೆಯ ಒರೆಗಲ್ಲು
ದಂಡು ದಾಳಿಯ ನೆತ್ತಿ ಹೊರಟ ಓ ವೀರ
ಮೊದಲಿದನು ಒಪ್ಪಿಸು, ಗೆಲ್ಲು"

ಎಂಬ ಆಹ್ವಾನವಿದೆ. ನಮಗೂ ಒಂದು ಕಾಯಿದೆ ಕಟ್ಟಲೆಯ ಬಾಂದುಗವಿದೆ. ಅದರಲ್ಲಿ ಲೋಪದೋಷಗಳಿದ್ದರೆ ಸರಿಪಡಿಸುವ ಪ್ರಯತ್ನ ಮಾಡಬೇಕೇ ವಿನಹ ನಮ್ಮ ಪರಂಪರಾಗತ ಬದುಕಿನ ಸಾಂಸ್ಕೃತಿಕ ಸಂಪತ್ತಿನಲ್ಲಿ ಏನೇನೂ ಇಲ್ಲವೆಂದು ತ್ಯಜಿಸಿ ಪಾಶ್ಚಾತ್ಯ ಆಕರ್ಷಣೆಗೆ ಒಳಗಾಗುವುದು ಪರಕೀಯತೆಯನ್ನು ಹೇರಬಲ್ಲುದೇ ಹೊರತು ನಮ್ಮ ಭಾರತೀಯ ಬಾಳನ್ನಲ್ಲ ಎಂಬುದು ಇಲ್ಲಿಯ ಆಶಯ. ಇಂದು ಸಾಹಿತ್ಯದ ಒಂದು ಅವಿಭಾಜ್ಯ ಅಂಗವಾಗಿ ವಿಮರ್ಶೆ ಬೆಳೆಯುತ್ತಿದೆ. ನಮ್ಮ ವಿಮರ್ಶಕರನ್ನು ಪ್ರಬಲ ಶಕ್ತಿಗಳು ನಿಯಂತ್ರಿಸಿದರೆ ಕೆಲವರು ಗೋಸುಂಬೆತನಕ್ಕೆ ಒಳಗಾಗುತ್ತಾರೆ. ಕೇವಲ ದೋಷಗಳನ್ನು ಹುಡುಕಿ ಟೀಕಿಸುವುದಕ್ಕಿಂತ ಹೆಚ್ಚಿನದೇನನ್ನೂ ಅವರು ಅರಿತಂತಿಲ್ಲ. "ಎಂಥ ಗೊಮ್ಮಟ ವಿಗ್ರಹವಲ್ಲೂ ! ಬಿರುಕು ತೋರಿಸುವ ವಿಮರ್ಶಕ ವರೇಣ್ಯ ! ನಿನ್ನ ಸುತ್ತಲೂ ಮೊಳೆಯುತಿದೆ ನೀನೇ ! ನಟ್ಟು ನೀರೆರೆದು ಬೆಳೆಸಿದ ಕಂಟಕಾರಣ್ಯ" ('ದೋಷೋದ್ಧಾರಕ'—ತೆರೆದದಾರಿ). ವಿಮರ್ಶಕರ ಗುಂಪುಗಳ ಸುತ್ತ ಕಾಡೇ ಬೆಳೆಯುತ್ತಿದೆ. ಕಾರಣ ವಿಮರ್ಶಕನ "ತಲೆ ಹನ್ನೆರಡು ಸಾವಿರದ ಐನೂರು ಅಡಿ ಎತ್ತರದ ಬಂಡೆ'. ಹೀಗಾಗುವ ಕಾರ್ಯಗಳಿಂದ ಯಾವುದೇ ಪ್ರಗತಿ ಸಾಧ್ಯವಿಲ್ಲ. ಮೊಳೆವ ಪೈರಿನ ಹಸಿರು ಹೊಲದ ಮೇಲೆ ಬೆಂಕಿಯ ಮಳೆಗರೆದು ಹಾಳುಮಾಡುವುದನ್ನಾಗಲಿ, ಸಿಡಿಮದ್ದಿನುಗ್ರಾಣದಲ್ಲಿ ಪರಸ್ಪರ ಬೆಂಕಿಕಡ್ಡಿ ಗೀಚುವುದನ್ನಾಗಲಿ ಕವಿ ಬಯಸುವುದಿಲ್ಲ. ಇರುವಷ್ಟು ದಿನ ಸಂದಿಗ್ಧದಲ್ಲಿ ಬದುಕಿದರೂ ಸಾಧ್ಯವಾದಷ್ಟು ನೀರು ಹಾಕಿ ಒಟ್ಟಾಗಿ ಇಬ್ಬರೂ ಸೊಗಸಾದ ಫಲಭರಿತವಾದ ತುಂಬುತೆನೆಗಳು ಬೆಳೆ ಬೆಳೆದು ನಮ್ಮ ಅಂಗಳದಲ್ಲೇ ಬಣವೆ ಹಾಕೋಣ ಎಂಬ ಅಭಿಲಾಷೆ ಶಿವರುದ್ರಪ್ಪನವರದು. "ತೂರಿಕೊಳ್ಳಲಿ ನಾಳೆ ಇದರ ಜಳ್ಳು ಕಾಳುಗಳನ್ನು ಈ ನಮ್ಮ ಮಕ್ಕಳೇ" ('ಒಪ್ಪಂದ'—ತೆರೆದದಾರಿ) ಎನ್ನುವಂತಹ ಕಾಂಟ್ರಾಕ್ಟ್ ಪದ್ಧತಿಯನ್ನು ಉತ್ತೇಜಿಸಿದ್ದಾರೆ. ಯಾವುದು ಗಟ್ಟಿ-ಯಾವುದು ಜಳ್ಳು ಎಂಬುದನ್ನು ಸಮಕಾಲೀನ ವಿಮರ್ಶೆ ಪ್ರಾಮಾಣಿಕವಾಗಿ ನಿರ್ಧರಿಸುವುದು ಸಾಧ್ಯವಿಲ್ಲದ ಮಾತು.

ಸಾಹಿತ್ಯದ ಸಂದರ್ಭದಲ್ಲಿ ಇಪ್ಪತ್ತೈದು ವರ್ಷಗಳಿಂದಲೂ ನಿರಂತರವಾದ ಕ್ರಿಯಾಶೀಲ ಚಟುವಟಿಕೆಗಳಲ್ಲಿ ತೊಡಗಿರುವ ಶಿವರುದ್ರಪ್ಪನವರು ಸಾಧಿಸಿರುವುದು ಅಪಾರವಾದದ್ದು. ಯುವಪೀಳಿಗೆಯ ಬರಹಗಾರರೆಲ್ಲ ಒಂದಲ್ಲ ಒಂದು ವಿಧದಲ್ಲಿ ಜಿ.ಎಸ್.ಎಸ್.ರವರ ಪ್ರಭಾವಲಯಕ್ಕೆ ಒಳಗಾಗಿದ್ದಾರೆ. ನವ್ಯಕ್ಕಿಂತ ಮುಂಚೆಯೇ ಸತ್ವಶಾಲಿಸಾಹಿತಿ ಪಿ. ಲಂಕೇಶರಿಗೆ ದಾರಿ ತೋರಿಸಿಕೊಟ್ಟವರು ಶಿವರುದ್ರಪ್ಪನವರು. "ನನ್ನ ದಾರಿ ಕಂಡುಕೊಳ್ಳುವುದು ಆಗ ಸಾಧ್ಯವಿರಲಿಲ್ಲ. ಅಂತಹ ಸಮಯದಲ್ಲಿ ಶಿವರುದ್ರಪ್ಪನವರ ಜೊತೆ ಚರ್ಚೆ ಮಾಡಿದ್ದು ಅನುಕೂಲವಾಯಿತು. ನಾನು ಅವರ ಪ್ರಭಾವಕ್ಕೆ ಒಳಗಾದೆ"[9] ಎಂದು ಲಂಕೇಶರು ಹೇಳಿದ್ದಾರೆ. ನವ್ಯ ಕವಿ ಎಸ್. ಎಸ್. ಲಕ್ಷ್ಮೀನಾರಾಯಣ ಭಟ್ಟರ ಕಾವ್ಯರಚನೆಗೆ ಪ್ರೇರಕ ಶಕ್ತಿ

ಯಾದವರು ಜಿ. ಎಸ್. ಶಿವರುದ್ರಪ್ಪನವರು ಎಂಬುದು ಸ್ಪಷ್ಟ[೩]. ಇತ್ತೀಚಿನ ಹಲವರು ಉದಯೋನ್ಮುಖರ ಕೃತಿಗಳನ್ನು ಗಮನಿಸಿದರೆ ಶಿವರುದ್ರಪ್ಪನವರ 'ಗೋಡೆ', 'ನನ್ನ ನಿನ್ನ ನಡುವೆ' ಮುಂತಾದವುಗಳ ಪ್ರಭಾವಕ್ಕೆ ತುತ್ತಾಗಿರುವುದನ್ನು ಗಮನಿಸಬಹುದು. ತೀಕ್ಷ್ಣವಾದ ಅನುಭವಗಳ ಸುಸಂಘಟಿತ ಸಂವೇದನೆಗಳನ್ನು ಕಾವ್ಯದ ಸೃಜನಶೀಲ ಅಭಿವ್ಯಕ್ತಿಗೆ ಸಮರ್ಥವಾಗಿ ಬಳಸಿಕೊಳ್ಳುವಲ್ಲಿ ಶಿವರುದ್ರಪ್ಪನವರು ಯಶಸ್ವಿಯಾಗಿದ್ದಾರೆನ್ನುವುದನ್ನು ಗುರುತಿಸುವುದಕ್ಕೆ ಇಲ್ಲಿ ಪ್ರಯತ್ನಿಸಿದ್ದೇನೆ. ಶಿವರುದ್ರಪ್ಪನವರು ಬೇಂದ್ರೆ, ಕುವೆಂಪು ನಂತರದ ಜನಮನದ ಕವಿಗಳಾಗಿದ್ದಾರೆ. ಪ್ರೇಮ-ಪ್ರಕೃತಿ-ಬದುಕು-ಸಮಾಜ-ದೇಶ-ಕಾಲ-ಮಾನವ (ಸಹೃದಯ) ಮತ್ತು ಕವಿ ಸಮಸ್ಯೆಯ ಈ ಎಲ್ಲ ಪ್ರಕ್ರಿಯೆಗಳು ಜಿ. ಎಸ್. ಶಿವರುದ್ರಪ್ಪನವರ ಕಾವ್ಯದಲ್ಲಿ ಹೊಸ ಬದುಕಿನ ಸಂವೇದನೆಗಳೊಂದಿಗೆ ಸುಂದರ ರಮಣೀಯಕವಾಗಿ ಅಭಿವ್ಯಕ್ತಗೊಂಡಿವೆ.

ಅಡಿಟಿಪ್ಪಣಿಗಳು :

೧. ಕುವೆಂಪು ಸಾಮಗಾನಕ್ಕೆ ಬರೆದ ಮುನ್ನುಡಿಯಲ್ಲಿ.
೨. ಕವಿತಾ ೧-ಪುಟ ೨೮.
೩. ವೃತ್ತ-ಕೃತಜ್ಞತೆ.

ಒಕ್ಕಲುತನ ವೃತ್ತಿಪದಕೋಶ-೧

● ವಿ. ಶಿವಾನಂದ

ವೃತ್ತಿಪದಗಳ ಅಧ್ಯಯನದ ಮಹತ್ವ :

ಕನ್ನಡದಲ್ಲಿ ವೃತ್ತಿಪರಿಭಾಷಾ ಸಂಗ್ರಹಕಾರ್ಯ ಮತ್ತು ಅದರ ಭಾಷಾ ವೈಜ್ಞಾನಿಕ ವಿಶ್ಲೇಷಣೆಗಳು ಸಾಮಾಜಿಕ ಭಾಷಾಚರಿತ್ರೆಯ(Socio-linguistics) ದೃಷ್ಟಿಯಿಂದ ತುಂಬ ಉಪಯುಕ್ತವಾದುವು. ಇಲ್ಲಿ ನಮ್ಮ ಗ್ರಾಮೀಣ ಜನತೆಯ ವಿಪುಲ ಭಾಷಾಸಂಪತ್ತು, ಆ ಜನಗಳ ವಾಗ್ಭಾಂಡಾರ (Vocabulory) ಮೊದಲಾದವುಗಳ ಹೊಕ್ಕು-ಬಳಕೆಯ ಹತ್ತಾರು ಮುಖಗಳ ಪರಿಚಯ ಭಾಷಾ ವ್ಯಾಸಂಗಿಗೆ ಒದಗಿಬರುತ್ತದೆ. ಸಾಮಾನ್ಯವಾಗಿ ವೃತ್ತಿ ಪರಿಭಾಷೆಯ ಮೇಲೂ ಆಯಾ ಪ್ರದೇಶದ ಉಪಭಾಷಾ ಪ್ರಭಾವ ಇದ್ದೇ ಇರುತ್ತದೆ. ಇದರ ಪರಿಣಾಮವಾಗಿ ಒಂದೊಂದು ವೃತ್ತಿಯ ಜನರಾಡುವ ಭಾಷೆಯಲ್ಲೂ ಸಹ ಅದರ ವಿವಿಧ ಘಟ್ಟಗಳಾದ ಪದಗಳ ಉಚ್ಚಾರಣೆ ರೂಪ ಪ್ರಕ್ರಿಯೆ, ಅರ್ಥ ಪರಂಪರೆಯಲ್ಲಿ ನಾವು ಪ್ರಾದೇಶಿಕ ಪ್ರಭೇದಗಳನ್ನು (Speech Variations) ಕಾಣುತ್ತೇವೆ. ಸ್ಥೂಲವಾಗಿ ಹೇಳುವದಾದರೆ ಉತ್ತರಕರ್ನಾಟಕದ ಭಾಷೆ ಹಳೆಮೈಸೂರಿನ ಕನ್ನಡಭಾಷೆಗೆ ಭಿನ್ನ. ಉತ್ತರಕರ್ನಾಟಕದಲ್ಲೇ ಪ್ರತಿಜಿಲ್ಲೆಗೊಂದು ಉಪಭಾಷೆ ಪ್ರಚಲಿತವಿಲ್ಲದಿಲ್ಲ, ಆದರೆ ಈ ಜಿಲ್ಲಾವಾರು ಉಪಭಾಷೆಗಳ ಅಂತರ ವೃತ್ತಿಪರಿಭಾಷೆಯಲ್ಲಿ ಅಷ್ಟೊಂದು ಪ್ರಭಾವ ಬೀರಿರಲಾರದು. ಈ ದೃಷ್ಟಿಯಿಂದ ಉತ್ತರಕರ್ನಾಟಕದ ಒಕ್ಕಲಿಗ, ಕಮ್ಮಾರ, ಕುಂಬಾರ, ನೇಕಾರ, ಮಡಿವಾಳ, ಗಾಣಿಗ ಮೊದಲಾದವರ ಭಾಷೆ ಹೆಚ್ಚು ಕಡಿಮೆ ಒಂದು ವಿಧವೆಂದು ಹೇಳಬಹುದು. ಆದರೆ ಉಚ್ಚಾರಣಾ ಭೇದ ಜೀವಂತಭಾಷೆಯಲ್ಲಿ ನಿಸರ್ಗಸಹಜವಾದುದು ಅದೊಂದನ್ನು ಬಿಟ್ಟರೆ ಒಂದೊಂದು ವೃತ್ತಿಯ ಉಪಕರಣದ ಹೆಸರುಗಳು (Names of the occupational implements) ಮತ್ತು ಅವು ಬಳಕೆಯಾಗುವ ಸಾಂದರ್ಭಿಕತೆಯಲ್ಲಿ ಹೆಚ್ಚು ವ್ಯತ್ಯಾಸಗಳು ತಲೆದೋರಲಾರವು ಎಲ್ಲಿ ವ್ಯತ್ಯಾಸ ಅಷ್ಟೊಂದು ಪ್ರಮುಖ ಅಂಶವಾಗುತ್ತದೆಯೋ ಅಲ್ಲಿ ಉಪಭಾಷೆಗಳ ಪ್ರಭೇದಗಳನ್ನಾಗಲಿ (Sub-dialectal Variations) ಪರಸ್ಪರ ಪರಿಭಾಷಾ ಪದಗಳ ಸೀಮಾರೇಖೆಗಳನ್ನಾಗಲಿ (Bundle of isoglasses) ನಾವು ಗುರುತಿಸುವದು ಸುಲಭಸಾಧ್ಯವಾಗುತ್ತದೆ. ಒಂದೇ ವೃತ್ತಿಯನ್ನವಲಂಬಿಸಿದ ಜನ ಒಂದು ಬುಡಕಟ್ಟನ್ನು ನಾಗರಿಕತೆ, ಸಂಸ್ಕೃತಿಯ ಚೌಕ

ಟ್ಟನ್ನು ಹೊಂದಿದ್ದರಂತೂ ಈ ವೃತ್ತಿಪದಗಳು ಆ ಜನಾಂಗದ ಭಾಷಾಕುಟುಂಬದ ಕೆಳಗೆ ಬರುವ ಭಿನ್ನ ಭಿನ್ನ ಭಾಷೆಗಳಲ್ಲೂ ಸೋದರ ಪದಗಳಾಗಿ (Cognate terms) ಪ್ರಸಾರಗೊಳ್ಳುತ್ತಿರುತ್ತವೆ. ಇದರಿಂದಾಗಿ ವೃತ್ತಿಪದಗಳ ಅಭ್ಯಾಸ ಜನಾಂಗಿಕ ಭಾಷಾದೃಷ್ಟಿಯಿಂದಲೂ ಸಹ ಹೆಚ್ಚು ಮಹತ್ವದ್ದಾಗುತ್ತದೆ.

ಒಕ್ಕಲುತನ ಪದಗಳ ಸಂಗ್ರಹಣೆ:

ಒಕ್ಕಲುತನ ನಮ್ಮ ಹಳ್ಳಿಗರ ಮುಖ್ಯ ಉದ್ಯೋಗ. ಕನ್ನಡ ಕಾವ್ಯ, ಶಾಸನ ಗಳಲ್ಲಿ ಈ ವೃತ್ತಿಗೆ ಸಂಬಂಧಿಸಿ ಹೇರಳ ಪದಗಳು ದೊರೆಯುತ್ತವೆ. ಅದೆಷ್ಟೋ ದೇಸೀ ನುಡಿಗಟ್ಟು, ನಾಣ್ಣುಡಿ, ಜಾನಪದ ಹಾಡುಗಳಲ್ಲೂ ಸಹ ಒಕ್ಕಲುತನ ಭಾಷೆ ಮಡುಗಟ್ಟಿ ನಿಂತಿದೆ ಆದರೆ ಗ್ರಂಥಸ್ಥವಲ್ಲದ, ಜನತೆಯ ಆಡುನುಡಿಯಲ್ಲೇ ಉಳಿ ದಿರುವ ಸಹಸ್ರಾರು ಶಬ್ದಗಳು ಒಕ್ಕಲುತನ ವೃತ್ತಿಯಲ್ಲಿ ನಿತ್ಯವೂ ಬಳಕೆಯಾಗುತ್ತವೆ. ಇವನ್ನು ನಾವು ಕೋಶಗಳಲ್ಲಿ ಕಾಣಲಾರೆವು. ಒಂದು ವೇಳೆ ಕೋಶಕಾರ ಕೆಲವನ್ನು ಸಂಗ್ರಹಿಸಿದ್ದರೂ ಅದರ ಉಚ್ಚಾರಣೆಯ ಸಹಜ ರೂಪವನ್ನು ಮರೆಮಾಡಿ ಅದರ ಶಿಷ್ಟರೂಪವನ್ನಷ್ಟೇ ಕೊಡುವುದುಂಟು. ಆಡುನುಡಿಯನ್ನು ಗಮನದಲ್ಲಿಟ್ಟು ಈ ರೂಪಗಳನ್ನು ಸಂಗ್ರಹಿಸಿದರೆ ಒಕ್ಕಲಿಗರ ಭಾಷಾನಿರ್ಮಾಣಶಕ್ತಿಯ ಸಹಜ ಕಲ್ಪನೆ ನಮಗಾಗುತ್ತದೆ. ಅಂತಹ ಒಂದು ಪ್ರಯತ್ನ ಇಲ್ಲಿದೆ. ಮುಖ್ಯವಾಗಿ ಈ ಕೆಳಗಿನ ವಿಷಯಗಳಲ್ಲಿ (Subject Matter) ಒಕ್ಕಲುತನ ಪದಗಳ ಪರಿವೀಕ್ಷಣೆಯನ್ನು ಕೈಕೊಂಡಿದೆ.

೧. ಭೂಮಿಯ ಪ್ರಕಾರಗಳು
೨. ದಿಕ್ಕು, ಗಾಳಿ-ಮಳೆಗಳು
೩. ಎತ್ತು, ಎತ್ತಿನ ಅಲಂಕಾರ
೪. ಎತ್ತುಗಳ ಕೊಟ್ಟಿಗೆ
೫. ಒಕ್ಕಲುತನ ಉಪಕರಣಗಳು
೬. ಬೆಳೆಗಳು
೭. ಬೆಳೆಯ ರೋಗಗಳು
೮. ಮೇವು
೯. ರಾಶಿ
೧೦. ಚಕ್ಕಡಿ
೧೧. ದವಸ ಧಾನ್ಯಗಳು
೧೨. ಧಾನ್ಯ ಸಂಗ್ರಹ
೧೩. ಧಾನ್ಯದ ಅಳತೆ
೧೪. ಒಕ್ಕಲುತನ ಜೀವನ, ನಂಬುಗೆಗಳು
೧೫. ವಿಶಿಷ್ಟ ಕ್ರಿಯಾಪದಗಳು
೧೬. ಒಕ್ಕಲಿಗನ ಉಣಿಸು ತಿನಿಸುಗಳು
೧೭. ಆಟ ವಿನೋದಗಳು

ಮೇಲಿನ ಒಟ್ಟು ೧೭ ವಿಷಯಕ್ಕೆ ಸಂಬಂಧಿಸಿದಂತೆ ಅಕ್ಷರಾನುಕ್ರಮಣಿಕೆಯಲ್ಲಿ ಇಲ್ಲಿನ ಪದಗಳನ್ನು ಸಂಗ್ರಹಿಸಲಾಗಿದೆ. ನೀರಾವರಿ ಮತ್ತು ತೋಟಪಟ್ಟಿಗಳ ವಿಷಯ ಸಂಗ್ರಹವನ್ನಿಲ್ಲಿ ಸದ್ಯಕ್ಕೆ ಸೇರಿಸಹೋಗಿಲ್ಲ. ಇಲ್ಲಿ ಆಯ್ಕೆಯಾದ ಪ್ರಧಾನ ಪದ ಗಳನ್ನು ಕಲಬುರ್ಗಿ ಜಿಲ್ಲೆಯಲ್ಲಿ ಸರ್ವೇ ಮಾಡಲಾಗಿದ್ದರೂ ಬೀದರ, ಬಳ್ಳಾರಿ,

ವಿಜಾಪುರ, ಬೆಳಗಾಂವಿ, ಧಾರವಾಡ ಜಿಲ್ಲೆಯ ಭಾಷಾ ಪರಿಸರದಲ್ಲಿ ಅರ್ಥವಾಗುವಂತಹವು. ಇವನ್ನು ಅಲ್ಲಲ್ಲಿ ಬೀ. ಕ., ಬ. ಕ., ಬಿ. ಕ., ಧಾ. ಕ. ಎಂದು ಸಂಕ್ಷೇಪ ರೂಪಗಳಲ್ಲಿ ಸೂಚಿಸಿದೆ.

ಇಲ್ಲಿ ಒಟ್ಟು ೪೦೦ ಮೂಲ ಪದಗಳು ೧೦೦ ಪರ್ಯಾಯ ಪದಗಳು– ಹೀಗೆ ೫೦೦ ಪದಗಳನ್ನು ಸಂಗ್ರಹಿಸಲಾಗಿದೆ. ವ್ಯಾಪಕವಾದ ಸಮೀಕ್ಷಣ ಕಾರ್ಯವನ್ನು ಕೈಕೊಂಡಲ್ಲಿ ಇವುಗಳ ಸಂಖ್ಯೆ ಇನ್ನೂ ಹೆಚ್ಚಾಗಬಲ್ಲುದು. ನನ್ನ ಆ ಅಧಿಕೃತ ಪ್ರಯತ್ನಕ್ಕೆ ಇದೊಂದು ಪ್ರವೇಶಿಕೆ.

ಸಂಕ್ಷೇಪಗಳ ವಿವರಣೆ:

ಉ—ಉಚ್ಚಾರಣ ಭೇದ	ಕ. ಕ.—ಕಲಬುರ್ಗಿ ಕನ್ನಡ
ಪರ್ಯಾ—ಪರ್ಯಾಯ ಪದ	ಕ.ಅ.ಕ.–ಕಲಬುರ್ಗಿ ಅಳಂದ ಕನ್ನಡ
	ಕ.ಚಿ.ಕ.–ಕಲಬುರ್ಗಿ ಚಿಂಚೋಳಿ ಕನ್ನಡ
ಪ್ರ—ಪ್ರಭೇದಗಳು	ಕ.ಯಾ.ಕ.–ಕಲಬುರ್ಗಿ ಯಾದಗಿರಿ ಕನ್ನಡ
ಮ—ಮರಾಠಿ	ಬಿ.ಕ.—ಬಿಜಾಪುರ ಕನ್ನಡ
	ಬೀ.ಕ.—ಬೀದರ ಕನ್ನಡ
ಹಿಂ—ಹಿಂದುಸ್ಥಾನಿ	ಬ.ಕ.—ಬಳ್ಳಾರಿ ಕನ್ನಡ
ಸಂ—ಸಂಸ್ಕೃತ	ಬೆ.ಕ.–ಬೆಳಗಾಂ ಕನ್ನಡ
ತೆ—ತೆಲುಗು	

ಇಷ್ಟು ವಿವರಣೆಯೊಂದಿಗೆ ಕೆಳಗಿನಂತೆ ಪದಕೋಶವನ್ನು ವಿವರಿಸಬಹುದು.

೧. ಭೂಮಿಯ ಪ್ರಕಾರಗಳು :

ಅಣಿ	ಗುಡ್ಡದ ಭಾಗ ರಟಗಲ್ಲ ಅಣಿ, ಕೋರವಾರ ಅಣಿ ಮುಂ. (ಕ.ಕ).
ಆರಣಿ	ನೀರು ತಡೆಯಲು ಹೊಲಕ್ಕೆ ಹಾಕಿದ ಒಡ್ಡು. **ಉ.** ಅಣ್ಣಿ.
ಎರಿ	ಕಪ್ಪು ಭೂಮಿ. **ಉ** ಯರಿ. **ಪ್ರ.** ಗುಂಡೇರಿ, ಸಜ್ಜೇರಿ, ಸಣ್ಣೇರಿ.
ಒಡ್ಡು	೧. ನೀರು-ಮಣ್ಣು ಸಂಗ್ರಹವಾಗಲು ಹೊಲ, ತೋಟ, ಗಟ್ಟಿಗಳಲ್ಲಿ ಹಾಕಿದ ಎತ್ತರದ ಮಣ್ಣಿನ ದಿನ್ನೆ. ಒಡ್ಡು (ಕ್ರಿ). ೨. ಪ್ರತಿಭಟಿಸು. ಕಣದಲ್ಲಿ ತುಳಿಸಲು ಹಾಕಿದ ಧಾನ್ಯದ ತೆನೆ **ಉ,** ಒಡ್ಡ– ವಡ್ಡ.
ಕೆಂದಕ	ಇಳುವರಿ ಭೂಮಿ.

ಕಟಕ	ಪವರುಗಲ್ಲಿನ ಬಿರುಸು ಭೂಮಿ. **ಉ**, ಖಟಕ. **ಪರ್ಯಾ**, ಮರಬ
ಕರಲು	ಬಿರುಸು ಎರೆ ಭೂಮಿ. **ಉ**, ಕರ್ಲ ಕಲಗ. **ಪರ್ಯಾ** ತರಲ. **ಪ್ರ** ಎಣ್ಣೆಗರಲ.
ಕ್ಯಾಸರಿ	ಕೇಸರಿ ಬಣ್ಣದ ಭೂಮಿ. **ಪ್ರ**, ಗಂಡಗ್ಯಾಸರಿ (ಕ.ಚಿಂ.ಕ.).
ಕೆಂಗಲ್ಲು	ಕೆಂಪು ಹರಳಿನ ಭೂಮಿ. **ಪರ್ಯಾ**, ಗಾರುಗಲ್ಲಿನ ಭೂಮಿ. (ಕ.ಚಿಂ.ಕ.).
ಕೊರಕುಳಿ	ಗುಡ್ಡದ ಓರೆಭಾಗ, ನೀರು ಹರಿಯುವುದರಿಂದ ಉಂಟಾದ ತಗ್ಗು. **ಉ**, ಕೊರಕಲಿ.
ಗಂಡಹುಂಪಳಿ	ಮಿದುವಾದ ಮುಖ್ಯ ಎರೆನೆಲ.
ಗಡ್ಡಿ	೧. ಎತ್ತರಭೂಮಿ. ಕೃಷ್ಣಾದಂಡೆಯ ಗಡ್ಡಿ, ಸಗರಗಡ್ಡಿ, ಮುಂ. ಪೇಟೆ ೨. ಕಟ್ಟಿಗೆಯಿಲ್ಲದೆಯೆ ಮಾಡುವ ದೊಡ್ಡ ರಾಶಿಯ ಹಂತಿ. (ಕ.ಕ.)
ಘಟ್ಟ	ಹೊಲದ ಬಾಂದು. **ಉ**, ಗಟ್ಟ.
ಚಲ್ಲಿ	ಒಂದು ಪ್ರಕಾರದ ಭೂಮಿ. (ಕ.ಯಾ.ಕ.)
ಚಿಕಣಿ	ಬಿರುಸು ಭೂಮಿ.
ಜವಳ	ನೀರು ಹಿಡಿಯುವ ಭೂಮಿ. **ಪರ್ಯಾ**, ಜೌಗು.
ಜೇಡಿನೆಲ	ಜಿಗುಟುಮಣ್ಣಿನ ಭೂಮಿ.
ಡ್ಯಾಣ	ಹೊಲದ ಸುತ್ತು ಹಾಕಿದ ಕಲ್ಲಿನ ಕಟಕಟೆ. **ಪರ್ಯಾ**, ಮೇರಿ. **ಉ**, ಮ್ಯಾರಿ. (ಕ.ಶೀ.ಕ.)
ಡೋಣಿ	ಡೋಣಿನದಿ.
ಡೋಣಿಸಾಲು	ಡೋಣಿ ನದಿತೀರದ ಭೂಮಿ. **ನಾ**. ಡೋಣಿ ಬೆಳೆದರೆ ಓಣೆಲ್ಲ ಜ್ವಾಳ.
ತೆಗ್ಗು	ಕಸುವುಳ್ಳ ಒಡ್ಡಿನ ನೆಲ. (ಕ.ಕ.)
ಪಡುಭೂಮಿ	ಬೀಳುಬಿದ್ದ ಭೂಮಿ. **ಉ**, ಪಡ, ಪಡಕಿ, ಪಡಾ, ಫಡ. ಆಕಾರವುಳ್ಳ, ಸೀಮಿತನೆಲ, ಮೆಣಸಿಫಡ, ಬಾಳಿಫಡ ಮುಂ.
ಬಡಹುಂಪಳಿ	ಸಾಧಾರಣ ಮಿದುನೆಲ. (ಕ.ಕ.)
ಬದುವು	ಹೊಲದ ಮೇರೆ.
ಮರಡಿ	ಕೆಂಪು ಮಿಶ್ರ ಮುಂಗಾರಿ ಬೆಳೆವ ನೆಲ. **ಉ**, ಮಡ್ಡಿ (ಬಿ.ಕ.)
ಮಸಬು	ಕೆಂಪು ಮಣ್ಣಿನ ಭೂಮಿ. **ಪರ್ಯಾ**, ಮಸಾರಿ.

ಮೋಲಡವಿ — ನೀರಾವರಿಯಲ್ಲದ ಭೂಮಿ (Wet land).
ರೇತಿ — ಉಸುಕಿನ ಭೂಮಿ(ಕ.ಯಾ.ಕ.). ಪರ್ಯಾ. ಮಂಡುಭೂಮಿ
ಹಣಾದಿ — >ಸಾಂದಿ >ಹಾಂನ್ದಿ >ಹಣಾದಿ. ಹೊಲದ ಎಕ್ಕಲದಲ್ಲಿರುವ ಇಕ್ಕಟ್ಟಾದ ದಾರಿ. ಉ, ಅಣಾದಿ. (ಕ.ಅ.ಕ.).
ಹಾಳು — ಬೂದಿ ಮಣ್ಣಿನ ಭೂಮಿ.
ಹುಂಬಳಿ — ಹುಂಪಡಿ, ಮೃದುಭೂಮಿ.
ಹೊಡ್ಡು — ಎತ್ತರದ ಭೂಮಿ.
ಹೊಳಿಸಾಲು — ನದೀತೀರದ ಭೂಮಿ.
ಸವಳು — ಉಪ್ಪುಭೂಮಿ. ಉ, ಸೌಳ.
ಸಿದ್ದಿಗಲ್ಲ ಭೂಮಿ — ಕೆಂಪುಪದರು ಶಿಲೆಯ ಭೂಮಿ. (ಕಶೇ.ಕ)

೨. ದಿಕ್ಕು-ಗಾಳಿ-ಮಳೆಗಳು :

ಅನುರಾಧಾ — ಮಳೆನಕ್ಷತ್ರ. ಉ, ಅನುರೋಗಿ, ಅನುಶ್ಯಾಗಿ.
ಆಶ್ಲೇಷಾ — ,, ಉ. ಆಸ್ಲೇಸಿ, ಅಸಲೇರಿ.
ಆಷಾಢ ಗಾಳಿ — ಪಶ್ಚಿಮದಿಕ್ಕಿನ ಹೆಚ್ಚುವೇಗದ ಒಣಗಾಳಿ
ಉತ್ತರಿ — ಮಳೆನಕ್ಷತ್ರ. ಉ, ಉತ್ರಿ.
ಉದಯವಾಲ — ಪೂರ್ವದಿಕ್ಕು.
ಇಳಿಹೊತ್ತು — ಇಱಿಯುಂ ಪೋೞ್ತು (ಹ.ಗ). ಮಧ್ಯಾಹ್ನ ತಗ್ಗಿದ ಹೊತ್ತು. ಉ, ಇಳೊತ್ತು, ಇಳೋತು. ಪರ್ಯಾ, ಒಂಬತ್ತಾಸು, ಒಂಬಸಾತಿ.
ಕೃತ್ತಿಕಾ — ಮಳೆನಕ್ಷತ್ರ. ಉ, ಕಾರ್ತಿ.
ಕುಂಬಾರಗಾಳಿ — ಪಶ್ಚಿಮ-ಉತ್ತರ ನಡುವಿನ ಗಾಳಿ,
ಗಂಗಿಗಾಳಿ — ಉತ್ತರದಿಕ್ಕಿನ ಗಾಳಿ.
ಗಂಗಿವಾಲ — ಉತ್ತರದಿಕ್ಕು.
ಚಳಿಗಾಲ — ಚಳಿಯ ಹೊತ್ತು.
ಚಿತ್ತಿ — ಮಳೆಯ ನಕ್ಷತ್ರ.
ದನುರಾಧಾ — ಉ, ಧನರೋಗಿ. ಪರ್ಯಾ, ಮನರೋಗಿ.
ನಸಕು — ಬೆಳಕಾಗುವ ಮುನ್ನಾವೇಳೆ. ಉ, ನಸ್ಕು, ಚುಮುಚುಮು ನಸ್ಕ

ನ್ಯಾರಿವೇಳೆ	ಬೆಳಕಾದ ಮೇಲೆ ಮಧ್ಯಾಹ್ನದ ಮುನ್ನಾವೇಳೆ. **ಪರ್ಯಾ,** ನೆಯ್ಯರಿಹೊತ್ತು.
ಪುಷ್ಯ	ಮಳೆ ನಕ್ಷತ್ರ. **ಉ,** ಪುಸ್ಯ, ಪುಸ್ಯಾನ, **ಪ್ರ,** ಹಿರಿಪುಷ್ಯ, ಚಿಕ್ಕಪುಷ್ಯ.
ಬಸವಣ್ಣಗಾಳಿ	ದಕ್ಷಿಣದಿಕ್ಕಿನ ಗಾಳಿ, **ಉ,** ಬಸಣಗಾಳಿ. **ಪರ್ಯಾ,**ಸುಳಿಗಾಳಿ.
ಬೇಸಗೆ	ಬಿಸಿಲುಕಾಲ. **ಉ,** ಬ್ಯಾಸಿಗೆ, ಬ್ಯಾಸಗೆ, ಬ್ಯಾಸಿಗಿ, ಬ್ಯಾಸ್ಗಿ.
ಮಳೆಗಾಲ	ಮಳೆಬೀಳುವ ಕಾಲ. **ಉ,** ಮಳ್ಗಾಲ. **ಪ್ರ,** ಮುಂಗಾರಿ ಮಳಿ, ಹಿಂಗಾರಿಮಳಿ.
ಮಂಘ	ಮಳೆನಕ್ಷತ್ರ. **ಉ,** ಮಗಿ.
ಮೃಗ	ಕಾರಹುಣ್ಣಿಮೆ ಕಾಲಕ್ಕೆ ಬರುವ ಮೊದಲಿನ ಮಳೆ. **ಉ,** ಮಿರಗ.
ಮುಂಜಾನೆ (ಮುಂದು+ಜಾವ,ಮುನ್+ ಜಾವ+ನೆ)	ಬೆಳಗಿನಹೊತ್ತು. **ಪರ್ಯಾ,** ಹರ್‍ಯಾಗ (ಬಿ. ಕ., ಬೆ. ಕ.).
ಮೂಡಲು (ಮೂಡಲ್, ಹ. ಕ.)	ಪೂರ್ವದಿಕ್ಕು. ಮೂಡು(ಕ್ರಿ),ಸೂರ್ಯಮೂಡುವ ದಿಕ್ಕು **ಉ,** ಮೂಡ್ಲ.
ಮೂಡಲುಹರಿ	ಬೆಳಕಾಗು.
ಮೂರುಸಂಜೆ	ಸಂಜೆಗೆ ಮೊದಲಿನ ವೇಳೆ. **ಉ,** ಮೂರುಚೆಂಜಿ.
ಮೂಲಿಗಾಳಿ	ಪೂರ್ವ-ಉತ್ತರದ ನಡುವಿನ ಗಾಳಿ. **ಪರ್ಯಾ,** ಹಣಮನ ದಿಕ್ಕಿನ ಗಾಳಿ.
ರಾಖಿವಾಲ	ದಕ್ಷಿಣ ದಿಕ್ಕಿನ ಗಾಳಿ.
ರಾತ್ರಿ	ಇರುಳು ಒಂಬತ್ತು ಗಂಟೆಯಿಂದ ನಾಲ್ಕು ಗಂಟೆಯ ನಡುವಿನ ಅವಧಿ
ವಿಶಾಖಾ	ಮಳೆನಕ್ಷತ್ರ. **ಉ,** ವಿಶಾಖಿ, ಇಸಾಕಿ.
ಸಂಜೆ	ಹೊತ್ತು ಮುಳುಗುವ ವೇಳೆ. **ಉ,** ಚೆಂಜಿ, ಛಂಜಿ(ಸ>ಚ>ಛ ವರ್ಣವ್ಯತ್ಯಾಸ).
ಸಮರಾತ್ರಿ	ಮಧ್ಯರಾತ್ರಿ. **ಉ,** ಸಂವರಾತ್ರಿ, ಸವ್ರಾತ್ರಿ, ಸಬ್ರಾತ್ರಿ.
ಸ್ವಾತಿ	ಮಳೆನಕ್ಷತ್ರ. **ಉ,** ಸಾತಿ.
ಹರಿಶ್ಚಂದ್ರನ ಗಾಳಿ	ದಕ್ಷಿಣದಿಕ್ಕಿನ ಗಾಳಿ. **ಉ,** ಹರಿಚಂದ್ರ್ಯಾನಗಾಳಿ. **ಪರ್ಯಾ;** ಮುಸಟ್ಗಿ ಗಾಳಿ

ಹಸ್ತಾ	ಮಳೆನಕ್ಷತ್ರ. ಉ. ಹಸ್ತಿ. ಅಸ್ತಿ (ಕ.ಮಾ.ಕ., ಕ.ಸು.ಕ).
ಹುಬ್ಬಿ	ಮಳೆನಕ್ಷತ್ರ. ಉ ಉಬ್ಬಿ (ಕ ಸು.ಕ.) (ಹ>ಅ ಹಕಾರ ಲೋಪ).

ಎತ್ತು, ಎತ್ತಿನ ಅಲಂಕಾರ :

ಇರಕ	ಎದುರಿಗೆ ಬಂದರೆ ಹಾಯುವ ಎತ್ತು.
ಎತ್ತಿನ ಬಣ್ಣಗಳು	ಅಚ್ಚಬಿಳಿ. ಅಚ್ಚಕರಿ. ಕೆಂದ, ಹಂಡಬಂಡ. ಗೌಡಲ, ಮೂರ್ಧಂಡ, ಸಾಪಗೆಂಪು. ಚಿಂಚ. ಕಪ್ರ. ಮಾಸಕ. ಮುಂ.
ಎತ್ತು (ಎಬಿ³+ತು>ಎಬ್ತು ಎರ್ತು, ಎತ್ತು)	ಒಕ್ಕಲಿಗನು ಉಪಯೋಗಿಸುವ ಪ್ರಾಣಿ. ಉ. ಯತ್ತು **ಪರ್ಯಾ**, ಬಸವಣ್ಣ.
ಕವಡಿಸರ	ಎತ್ತಿನ ಆಭರಣಂ
ಕಾಲಗೆಜ್ಜಿ	ಎತ್ತಿನ ಕಾಲಿಗೆ ಕಟ್ಟುವ ಗೆಜ್ಜೆ
ಕೊಂಭೆಣಸು	ಎತ್ತಿನ ಕೋಡಿನ ಆಭರಣ, ಉ ಕೆಂಬಣಸ. **ಪರ್ಯಾ** ಕೋಡಣಸು (ಬ. ಕ).
ಕೊಳಂಗಡ	ಎತ್ತಿನ ಕೊರಳಿಗೆ ಕಟ್ಟುವ ಹಗ್ಗ. (ಬ. ಕ).
ಕೋಡು	ಎತ್ತಿನ ತಲೆಯ ಚೂಪಾದ ಭಾಗ, ಉ, ಬೋಡ.
ಕಂಡೆ (<ಕಂಠ)	ಎತ್ತಿನ ಕೊರಳಪಟ್ಟಿ. ಉ ಖಂಡಾ, ಖಂಡೆ, ಕಾಂಡಾ.
ಕಿಲಾರಿ	ಎತ್ತಿನ ಒಂದು ಜಾತಿ. ಉ ಖಿಲಾರಿ (ಬಿ.ಕ).
ಗಂಟೆ	ಎತ್ತಿನ ಕೊರಳ ಆಭರಣ.
ಗುಮುರಿ	ಎತ್ತಿನ ಗೆಜ್ಜೆಗಳಲ್ಲಿನ ಗುಂಡಾದ ದೊಡ್ಡ ಗಂಟೆ.
ಗೆಜ್ಜೆಸರ	ಎತ್ತಿನ ಕೊರಳ ಆಭರಣ.
ಜವಾರಿ	ಎತ್ತಿನ ಒಂದು ಜಾತಿ (ಬೀ.ಕ). (ಕ.ಕ).
ಜೋಲು	ಎತ್ತಿನ ಮೈಮೇಲೆ ಮೆರವಣಿಗೆ ಕಾಲದಲ್ಲಿ ಹಾಕುವ ಬಣ್ಣದ ಬಟ್ಟೆ. ಉ,ಝೂಲು.
ಜತ್ತಿಗಿ	ಎತ್ತನ್ನು ಹೂಡುವಾಗ ಉಪಯೋಗಿಸುವ ಕೊರಳಪಟ್ಟಿ. ಉ, ಜೊತ್ತಿಗಿ, ಜತಿಗಿ, ಜಂತಿಗೆ.
ತಾಯಿತ	ಎತ್ತಿಗೆ ದೃಷ್ಟಿಯಾಗಬಾರದೆಂದು ಕೊರಳಿಗೆ ಕಟ್ಟುವುದು ಉ, ತಾಯ್ತ.
ದೇವಣಿ	ಎತ್ತಿನ ಒಂದು ಜಾತಿ (ಬೀ.ಕ.) **ಪರ್ಯಾ**, ವಕಾಳಿ.

ಬಾಯಿಜಾಳಿಗೆ — ಜೆಳೆ ತಿನ್ನಬಾರದೆಂದು ಎತ್ತಿನ ಬಾಯಿಗೆ ಕಟ್ಟಿದ ಜಾಳಿಗೆ. **ಪರ್ಯಾ**, ಚುಕ್ಕು, ಚಿಕ್ಕು (ಕ.ಕ). ಮುಸ್ಕಿ (ಬಿ.ಕ). ಕುಕ್ಕಿ (ಬ.ಕ).

ಮೊಗಾಡು (ಮೊಗವಾಡ) — ಎತ್ತಿನ ಬಾಯಿಗೆ ಏರಿಸಿ ಕಟ್ಟಿದ ಹಗ್ಗ. **ಉ.** ಮುಗಾಡ, ಮುಗ್ಗಾಡ.

ಮುಗದಾಣಿ — ಎತ್ತಿನ ಮೂಗಿನಲ್ಲಿ ಕಟ್ಟಿದ ಎಳೆ. **ಉ,** ಮುಗದಾಣಿ. **ಪರ್ಯಾ,** ಮೂಗುತಿ ದಾರ.

ಸರಪಳಿ — ಅಲಂಕಾರಕ್ಕಾಗಿ ಎತ್ತಿನ ಕೊರಳಲ್ಲಿ ಕಟ್ಟಿದ ಹಿತ್ತಾಳಿ ಸರಪಳಿ.

ಹಣೆಪಟ್ಟಿ — ಅಲಂಕಾರಕ್ಕಾಗಿ ಕೋಡಿಗೆ ಸುತ್ತಿ ಎತ್ತಿನ ಹಣೆಯಮೇಲೆ ಇಳಿಬಿಟ್ಟ ಬಣ್ಣದ ಹಗ್ಗ. **ಪರ್ಯಾ,** ಹಣಿಪಟ್ಟಿ.

ಹವಳಸರ — ಕೊರಳಲ್ಲಿ ಕಟ್ಟಿದ ಹವಳದ ಸರ.

ಹುರಿಗೆಜ್ಜೆ — ಕೊರಳಿಗೆ ಕಟ್ಟಿದ ಗೆಜ್ಜೆ.

ಎತ್ತಿನ ಆಶ್ರಯ:

ಕಣ್ಣಿ — ಎತ್ತು ಕಟ್ಟುವ ಹಗ್ಗ.

ಕೊಟ್ಟಿಗೆ — ಎತ್ತುಗಳನ್ನು ಕಟ್ಟುವಸ್ಥಳ. **ಉ,** ಕೊಟಿಗಿ. **ಪರ್ಯಾ,** ಥಾಭೆ (ಬಿ. ಕು). ಹಟ್ಟಿ.

ಕಲಗಚ್ಚು (ಕಲ್ಲು + ಕಚ್ಚು) — ಎತ್ತಿಗೆ ನೀರು ಕುಡಿಸಲು ಇಟ್ಟ ಹೌಜು. **ಉ,** ಕಲಗಂಚಿ **ಪರ್ಯಾ,** ಮಂಥಣಿ, ಮಂತಣಿ (ಕ. ಕ) ಕುಡ್ತಿ (ಕ. ಕ)

ಗ್ಯಾದಲಿ — ಎತ್ತುಗಳು ಮೇವು ತಿನ್ನಲು ಮಾಡಿರುವ ಸ್ಥಳ.

ಗೂಟ — ಎತ್ತನ್ನು ಕಟ್ಟಲು ನೆಲದಲ್ಲಿ ನೆಟ್ಟ ಕೊರಡು. **ಉ,** ಗೂಂಟ.

ದಾವಣಿ — ಎತ್ತುಗಳ ಕೊಟ್ಟಿಗೆ. **ಉ,** ದಾವಣೆ. **ಪರ್ಯಾ,** ಗ್ಯಾದಲಿ.

ದಾಂವು — ಸಾಲಾಗಿ ಎತ್ತುಗಳನ್ನು ಕಟ್ಟುವ ಹಗ್ಗ.

ಜೋಂಗಡಿ — ಎತ್ತು ಜೋರಲು ಬೀಳಬಾರದೆಂದು ಜೋಡಿಸಿದ ಎರಡು ಕಣ್ಣಿಗಳ ನಡುವಿನ ತಿರುಗುಣಿಕೆ.

ಮಂತಣಿ (ಮಂಥಣಿ ಸಂ.) — ಎತ್ತು ನೀರು ಕುಡಿಯಲು ಕಟ್ಟಿದ ಕಲ್ಲಿನ ಹೌಜು. **ಪರ್ಯಾ,** ಕಲಗಚ್ಚು, ಕುಡ್ತಿ. ಡೋಣಿ (ಕ. ಕ., ಬಿ. ಕ).

ಒಕ್ಕಲುತನ ಉಪಕರಣಗಳು :

ಈಸು — ಗಾಡಿ, ಕೂರಿಗೆ, ಕುಂಟೆಗಳಿಗ ಉಪಯೋಗಿಸುವ ಎರಡು ಗಟ್ಟಿಕೋಲುಗಳು. ಉ. ಈಚು (ಬ. ಕ).

ಉಡಿಚೀಲ	ಬಿತ್ತುವಾಗ ಉಡಿಗೆ ಕಟ್ಟಿಕೊಳ್ಳುವ ಬಿತ್ತನೆ ಚೀಲ. **ಉ,** ಉಡಚೀಲ.
ಎಡೆ	ಬೆಳೆಗಳಲ್ಲಿ ಕಳೆತೆಗೆಯಲು ಮತ್ತು ಮಣ್ಣು ಏರಿಸಲು ಹೂಡುವ ಉಪಕರಣ.
ಎಡಿಕುಂಟೆ	ನಡುವೆ ೧೦" ಅಗಲಿರುವ ಹರಗುವ ಉಪಕರಣ. ಪೈರನ್ನು ನಡುವೆ ಮಾಡಿಕೊಂಡು ಹರಗುವದು. **ಪ್ರ,** ಮನಿಸಾಲ ಕುಂಟೆ (ಎರಡು ತಾಳಿನದು).
ಎಡಿಕುಡ	ಕಬ್ಬಿಣದ ಪಟ್ಟಿ. **ಪರ್ಯಾ,** ಸಿಂಪ (ಬೀ. ಕ).
ಎಡಿಚಕ್ಕಿ	ಬೆಳೆಗೆ ಮಣ್ಣು ಏರಿಸುವ ಉಪಕರಣ.
ಎಡಿದಿಂಡು	ಏಳು ಬೆರಳಂತರದ ದಿಂಡು. **ಪರ್ಯಾ,** ಕೈಯೆಡಿ.
ಕತ್ತಿಯೆಡಿ	ಎರಡು ಪಲಗಿನ ಎಡೆ.
ಕ್ವಾತಾಳ	ದೊಡ್ಡತಾಳ.
ಕುಂಟೆ	ಹರಗುವ ಸಾಧನ. **ಪರ್ಯಾ,** ಗಳೆ, ರಂಟೆ.
ಕುಂಟೆದಿಂಡ	ಭೂಮಿಯನ್ನು ಹದಗೊಳಿಸುವ ಉಪಕರಣ. **ಪ್ರ,** ೨೩ ಗೇಣಿನಿಂದ ೪ಗೇಣಿನವರೆಗೆ.
ಕುಂಟೆಬಳಿ	ತಾಳಗಳು ಒಡೆಯಬಾರದೆಂದು ಹಾಕಿದ ಕಬ್ಬಿಣದ ಪಟ್ಟಿ.
ಕುಡ (ಕುಲಿ, ಹ.ಗ)	ತಾಳಗಳಿಗೆ ಹಾಕುವ ಕಬ್ಬಿಣ ಪಟ್ಟಿ. ಚೋಟಿ, ಮೂರು ಚೋಟಿ, ಗೇಣು, ನಾಬಳ್ಳುಗಳಿಂದ ನಾಲ್ಕುಗೇಣಿನವರೆಗೆ ಇವುಗಳ ಉದ್ದವಿರುತ್ತದೆ. **ಪರ್ಯಾ,** ಪಲಗ (ಬೀ.ಕ.)
ಕುಡಗೋಲು (ಕೊಂಕು+ ಕೋಲ್ ಹ.ಗ.)	ಕೊಯ್ಯುವ ಉಪಕರಣ. **ಉ,** ಕುಡಿಗಿಲ, ಕುಡಿಗೀಲ **ಪರ್ಯಾ,** ಕುರ್ಪಿ. (ಬೀ. ಕ.).
ಕುರಗೊಡ್ಡ	ನೊಗ ಮತ್ತು ದಿಂಡನ್ನು ಜೋಡಿಸುವ ಹಗ್ಗಗಳ ನಡುವಿನ ಕೊರಡು. ಒಂದು ಪ್ರಕಾರದ ಹಗ್ಗ.
ಕುರುಪಿ(ಕುಱ್+ಪಿ ಹ.ಗ)	ಕೆತ್ತನೆಯ ಉಪಕರಣ. **ಉ,** ಕುರಿಪಿ, ಕುರ್ಪಿ, ಖುರ್ಪಿ, ಕುರ್ಚಿಗಿ (ಬ. ಕ.)
ಕೂರಿಗೆ (ಕೂಱ್+ಗೆ ಹ.ಗ.)	ಬಿತ್ತುವ ದಿಂಡು. **ಪ್ರ,** ಮುಗ್ಗೂರಿಗೆ, ಚೌಲಾಳ ಕೂರಿಗೆ, ಎರಡು ತಾಳಿನ ಕೂರಿಗೆ, ಒಂದೇ ದಿಂಡಿಗೆ ಜೋಡು ಮಂಡಿಗಳಿರುವ ಕೂರಿಗೆ.
ಕೊಂಡಿ	ಮಂಡಿಯನ್ನು ಹಗ್ಗದಿಂದ ಬಿಗಿಯಲು ನಡುವೆ ಉಪಯೋಗಿಸುವ ಉಕ್ಕಿನ ವಂಕಿ.
ಕೊಯ್ತ	ಕರಿಕೆ ಕತ್ತರಿಸುವ ಉಪಕರಣ. **ಪರ್ಯಾ,** ಈಳಿಗೆ, ಕಡತಾ.

ಕೋಲ	ಪೊಳ್ಳು ಬಿದಿರು. **ಪ್ರ,** ಶೇಂಗಾದ ಕೋಲು, **ಜೋಳದ ಕೋಲು, ಪರ್ಯಾ,** ಬುಕ್ಕ.
ಖಡಕಿಲ ನೊಗ	ಆರುಗೇಣಿನ ನೊಗ. **ಪರ್ಯಾ.** ಗಣಿಕಿ ನೊಗ
ಖೋಡ	ಮುಂಡಿಕೋಲಿನ ತುದಿ.
ಗಳೆ	ಭೂಮಿ ಹದಮಾಡುವ ಕೆಲಸ, ಒಕ್ಕಲುತನ ವೃತ್ತಿ, ಎತ್ತುಗಳ ಜೋಡಿ. **ಪರ್ಯಾ,** ಕುಂಟಿ, ರೆಂಟಿ.
ಗಳೇದ ಸೋಲ	ದಿಂಡು, ನೊಗಕ್ಕೆ ಕಟ್ಟಿದ ಹಗ್ಗ.
ಗುದ್ದಲಿ (ಕುದ್ದಾಲ ಸಂ.)	ಮಣ್ಣು ಅಗೆಯುವ ಚೂಪಾದ ಉಪಕರಣ. **ಉ .** ಗುದಳಿ (ಬೀ. ಕ.).
ಚಾಟಮಣಿ	ಬಣಿವೆಯ ಕಣಿಕೆ ಸರಿಪಡಿಸುವ ಉಪಕರಣ. **ಪರ್ಯಾ,** ಬಡಮಣಿ.
ಜಮದಿಂಡ	ದೊಡ್ಡ ದಿಂಡು.
ಟಿಕಾವು	ಎರಡೂ ಕಡೆಗೆ ಮೊನಚಾಗಿರುವ ಗುದ್ದಲಿ. **ಉ ,**ಟಿಕಾಂವ.
ಡಿಬ್ಬಿದಿಂಡು	ಬೆಳೆಯ ಸಾಲಿಗೆ ಮಣ್ಣನ್ನೇರಿಸುವ ಉಪಕರಣ.
ತಾಳ	ಕೂರಿಗೆ, ಕುಂಟಿ, ಎಡೆದಿಂಡುಗಳಿಗೆ ಜೋಡಿಸಿದ ಕೆತ್ತನೆಯ ಕಟ್ಟಿಗೆ.
ದೊಡ್ಡಪ್ಕ್ವಾತಾಳ	ಹೆಂಟೆಯೊಡೆಯಲು ಉಪಯೋಗಿಸುವ ಕೂರಿಗೆದಿಂಡು **ಪರ್ಯಾ,** ಫಣಿದಿಂಡ.
ನೇಗಿಲು	ಭೂಮಿಯನ್ನು ಊಳುವ ಉಪಕರಣ. **ಉ,** ನೇಗಲ, ನೇಗೂಲ.
ನಾಂಜಿಲ್ (ತ)	ನೇಗ್ಲ. **ಪ್ರ.** ಕಟ್ಟಿಗೆ ನೇಗಿಲ, ಕಬ್ಬಿಣ ನೇಗಿಲ, ಗಾಲಿ
ಲಾಂಗೂಲ (ಸಂ)	ನೇಗಿಲ ಬಲರಾಮ ನೇಗಿಲ. **ಪರ್ಯಾ,** ಮಡಿಕಿ, ಇದು
ನಾಗಲಿ (ತೆ)	ಎರಡರಿಂದ ಎಂಟಿತ್ತುಗಳು ಎಳೆಯಲು ಬರುವ ಉಪಕರಣ.
ನೊಗ	ದಿಂಡು, ಗಾಡಿಗಳನ್ನೆಳೆಯಲು ಎತ್ತಿನ ಹೆಗಲ ಮೇಲಿರುವ ಕಟ್ಟಿಗೆಯ ಗಂಡುಕೊರಡು. ಉ . ನಗ. **ಪ್ರ,** ಆರು ಗೇಣಿನಿಂದ ಹತ್ತುಗೇಣಿನವರೆಗೆ ಎಡೆಗೆ, ಹತ್ತು ಗೇಣಿನದು ಗಳೆಗೆ, ಹನ್ನೆರಡು ಗೇಣಿನದು ಸಾಲು ಬಿಡಲು ಇದು ಉಪಯೋಗವಾಗುತ್ತದೆ.
ನೊಗಸುತ್ತ	**ಪರ್ಯಾ.** ಲಗ್ಗೋಣಿ.
ಫಳಿ	ನೆಲ ಸಮಮಾಡುವ ಉಪಕರಣ. **ಪರ್ಯಾ,** ಓಡು(ಬ.ಕ.)

ಪಾಸು	ಬೀಜವನ್ನು ಎಲ್ಲ ಕೋಲುಗಳಲ್ಲಿ ಸಮಾನವಾಗಿ ಬಿಡುವ ರಂಧ್ರದ ಕೊರಡು. **ಪರ್ಯಾ,** ಮುಂಡಿ.
ಪಾಳ	ನೇಗಿಲ ತುದಿಗೆ ಜೋಡಿಸುವ ಚಪ್ಪಟೆಯಾದ ಮತ್ತು ಚೂಪಾದ ಕಬ್ಬಿಣ ಪಟ್ಟಿ.
ಪಿಳ್ಳೆದಿಂಡು	ದಿಂಡಿನ ಒಂದು ಪ್ರಕಾರ.
ಫೂಟಿನ ದಿಂಡು	ಗೋದಿ ಬಿತ್ತುವ ಉಪಕರಣ.
ಬಡಮಣಿ	ಬಣಿವೆ ಒಟ್ಟಲು ಬೇಕಾಗುವ ಉಪಕರಣ. **ಪರ್ಯಾ,** ಚಾಟಮಣಿ.
ಬಾರಕೋಲು	ಎತ್ತಿಗೆ ಹೊಡೆಯುವ ಬಾರಿನ ಕಟ್ಟಿಗೆ.
ಬ್ಯಾಕಟಿಗೆ	ಎಡೆದಿಂಡಿನ ಮೇಳಿ ಭಾರ ಹಾಕಲು ಉಪಯೋಗಿಸುವ ರಿಕ್ಕಿನ ಕಟ್ಟಿಗೆ. ಉ, ಬೆಕ್ಕಟಿಗೆ (ಕ.ಕ). **ಪರ್ಯಾ,** ನೆರ ಕೋಲು,ಬ್ಯಾ ಕೋಲು.
ಬುಕ್ಕ	ಬಿತ್ತುವ ಪೊಳ್ಳಾದ ಬಿದಿರುಕೋಲು. ಉ, ಬುಕ್ಕಾ. **ಪರ್ಯಾ,** ಬಕ್ಕಸುಕೋಲು (ಬ. ಕ.).
ಬೆಡಗ	ನೀರುಣಿಸಲು, ಕೊನೆ ಕಡಿಯುಲು ಉಪಯೋಗಿಸುವ ಉಪ ಕರಣ. **ಪರ್ಯಾ,** ಬಾಗುದ್ದಲಿ (ಬ. ಕ).
ಮುಂಡಿದಾರ	ಮುಂಡಿ, ಮುಂಡಿಕೋಲು ಮತ್ತು ಮುಂಡಿಯು ದಿಂಡಿಗೆ ಬಿಗಿಯುವ ದಾರ.
ಮುಂಡಿಬಾರು	ಮುಂಡಿಯು ಕೋಲುಗಳನ್ನು ದಿಂಡಿಗೆ ಬಿಗಿಯಾಗಿ ಕಟ್ಟಲು ಉಪಯೋಗಿಸುವ ತೊಗಲ ಪಟ್ಟಿ.
ಮಿಣಿ	ತೊಗಲಿನ ಕೊರಳಪಟ್ಟಿ.
ಮೇಳಿ	ದಿಂಡು ಎತ್ತಿಡಲು ಉಪಯೋಗಿಸುವ ಕಟ್ಟಿಗೆ. **ಪರ್ಯಾ,** ಹಿಡಿಕಿ, ರುಮ್ಮ (ಕ. ಅ. ಕ) **ಪ್ರ,** ಕುಂಟಿ, ಕೂರಿಗೆ ಮೇಳಿ, ನೇಗಿಲ ಮೇಳಿ.
ಲಗ್ಗೋಣಿ	ಕುರುಗೊಡ್ಡಿನಲ್ಲಿ ಸೇರಿರುವ ಹಗ್ಗ.
ಶೆಲ್ಲೆ	ದಿಂಡಿನ ಕೊನೆಯು ಭಾಗಗಳು. ಉ ಸೆಲ್ಲೆ. **ಪರ್ಯಾ,** ಸೆರಗು.
ಸಲಿಕಿ (ಶಲಾಕಾ, ಸಂ.)	ಮಣ್ಣು ಎಳೆಯುವ ಉಪಕರಣ.
ಸಾಲುದಿಂಡು	ಸಾಲು ಬಿಡುವ ಉಪಕರಣ.
ಹಗ್ಗ (ಪ್ರಗ್ರಹ, ಸಂ.)	ಕಟ್ಟಲು ಉಪಯೋಗವಾಗುವ ಹೊಸೆದ ನಾರು. **ಪರ್ಯಾ,** ನುಲಿ. **ಪ್ರ,** ಆಟಗ್ಗ, ಒಂಬತ್ತುಹುರಿ ಹಗ್ಗ, ಸರ್ತಗ್ಗ, ಪಶುವಿನ ಹಗ್ಗ, ಹಳಗಿನ ಹಗ್ಗ, ಸೊಂಡಿ ಹಗ್ಗ, ಹಣೆಗ್ಗ.

ಹಗ್ಗ ಕಣ್ಣಿ	ಒಕ್ಕಲುತನಕ್ಕೆ ಉಪಯೋಗಿಸುವ ಒಟ್ಟು ಹಗ್ಗಗಳು.
ಹೊಂಬಲ	ಕೂರಿಗೆ ತಾಳಿನ ತುದಿಗಿರುವ ಚೂಪಾದ ಕಬ್ಬಿಣ ಪಟ್ಟಿ.

ಬೆಳೆಯು ಹಂತಗಳು:

ಕಬ್ಬು	ಸಿಹಿದಂಟು. ಬೇರು–ಗಣಿಕೆ–ರವದಿ–ಬೀಜದ ಮೊಳಿಕೆ–ಹೂವು–ಗರಿ/ವಾಡೆ.
ಕುಳೆ	ಪೀಕನ್ನು ಕೊಯ್ದಾಗ ಅದರ ಬುಡದಲ್ಲಿ ನಾಟಿಕೆಯಾಗುವುದು.
ಗೋದಿ	ಬೇರು–ಹುಲ್ಲು–ಎಲೆ–ತೆನಿ–ಕಾಳು.
ಜೋಳ	ಬುಡಚಿ–ಕಂಡಿಕಿ–ರವದಿ/ಸೊಪ್ಪಿ, ದಂಟು-ಬಾಟಿ-ಬೆಂಡು, ಸುಳಿ–ಹೊಡಿ–ತೆನಿ–ಕಾಳು–ಕಣಿಕಿ.
ಮುರಿಗಡ್ಡಿ	ಕೊಯ್ಲಿಗೆ ಬಾರದಿರುವುದು.
ಶೇಂಗಾ	ಬೀಜ–ಬಳ್ಳಿ–ಹೂವು–ಹಾಲ್ಗಾಯಿ–ಕಾಳು – ಸೊಟ್ಟ–ಫಲಕ.

ಬೆಳೆಯು ರೋಗಗಳು:

ಇಟ್ಟಂಗಿ	ಗೋದಿಗೆ ಬೀಳುವ ರೋಗದ ಹೆಸರು.
ರ್‍ವಾತಿ	ಜೋಳದ ರೋಗ.
ಸುಳಿ	ಜೋಳ, ಕಬ್ಬುಗಳ ಮೇಲಿನ ರೋಗ.
ಜಿಗಿ	ಸಜ್ಜೆ, ಹತ್ತಿ, ಜೋಳದ ರೋಗ.
ಕರಿಜಿಗಿ	ಜೋಳದ ರೋಗ.
ಕಿಡಗ	,, ,,
ಹಿಸಾಳಿ	,, ,,
ಬಾಂಡ	ಕಬ್ಬು ಮತ್ತು ಜೋಳದ ರೋಗ.
ಮುಂಜು	ಇಬ್ಬನಿ. ಪ್ರ, ನೀರಮುಂಜು, ಹೊಗಿಮುಂಜು, ಎಲಿಮುಂಜು.

ಮೇವು-ಹುಲ್ಲು:

ಅಡಗಸ	ಬೆಳೆಯಲ್ಲಿ ಏಳುವ ಕಸ.
ಅಲಗ	ಕೆರೆಯಲ್ಲಿನ ಹುಲ್ಲು.
ಅಲಬ	ದನಗಳು ತಿನ್ನುವ ಅತಿ ಸಿಹಿ ಹುಲ್ಲು. ಪ್ರ. ನೆಲ ಅಲಬು, ಖಡಿ ಅಲಬು.
ಅಡಿ	ಕೊನಿಕಂಟಿ.

ಆಪ	ನೀರಿನಲ್ಲಿರುವ ಹುಲ್ಲು.
ಇಗಳಿ	ಹಸಿರು ತುಂಬಿದ ಎಲಿ. **ಪರ್ಯಾ**, ಹಿಡಿಗೊನಿ.
ಉತ್ತರಾಣಿ	ಸೊಡ್ಡಿನ ಕಂಟಿ.
ಊಬ	ಸಜ್ಜೆಯ ಹಿಟ್ಟು.
ಎತ್ತನಾಲಿಗ್ಯಾ	ಒಂದು ಜಾತಿಯ ಹುಲ್ಲು.
ಕಡಜೋಳ	ಮೇವು ಜೋಳ.
ಕಡ್ಡ	ಕಡ್ಡಿನ ಬೆಳ್ಳಿ.
ಕಣಿಗ್ಯಾ	ಒಂದು ಜಾತಿಯ ಹುಲ್ಲು.
ಕಣಕಿ	ಒಣಗಿದ ಜೋಳದ ದಂಟು. **ಉ** ಕಳಿಕಿ (ಬಿ.ಕ.) **ಪರ್ಯಾ**. ಸೊಪ್ಪಿ. **ಪ್ರ**, ತೆನಿಗಣಕಿ, ಮುರಿಗಣಕಿ.
ಕರಕಿ	ಹಚ್ಚಗಾದ ಕಿರಿಯ ಹುಲ್ಲು **ಉ** ಕರ್ಕಿ.
ಕಸ	**ಪರ್ಯಾ**, ಸದಿ.
ಕುಕ್ಕ	ಬೆಳ್ಳಸಿಯ ತೆನಿಯಾಗುವ ಮುಂಗಾರಿ ಹೊಲದ ಕಂಟಿ.
ಕುರುಬಗ್ಯಾ	ಒಂದು ಜಾತಿಯ ಹುಲ್ಲು.
ಚಿಪಾಟಿ	ರವದಿಯಿಲ್ಲದ ಕಣಕೆಯ ದಂಟು ಅಥವಾ ದೇಟು **ಉ**, ಚಿಪ್ಪಾಡಿ.
ಗಣಜಲು	ಒಂದು ಜಾತಿಯ ಹುಲ್ಲು.
ಗಜಿಗ್ಯಾ	ಬಾಂದಿನ ಹುಲ್ಲು.
ಗಿಡಗಸ	ಎಲೆಮೇವು.
ಗಿಲಸಡಿ	**ಪರ್ಯಾ**, ಗಿಲಾರಸಡಿ.
ಗೆಜ್ಜಿ ಹುಲ್ಲು	ಒಂದು ಜಾತಿಯ ಹುಲ್ಲು.
ಗೊಳಗೊಳಕ್ಯಾ	ಮುಂಗಾರಿ ಹೊಲದಲ್ಲಿನ ಮೇವು.
ಚೊಗಚಿ	ಎಲೆ ತೋಟದ ಚೊಗಚಿ ಗಿಡದ ತಪ್ಪಲು.
ಛಡಿ	ಎಲೆ ತೋಟದ ಬೇಲಿಗಿರುವ ಗಿಡದ ಹುಲ್ಲು.
ಜೇಕ	ಹಳ್ಳದಲ್ಲಿರುವ ನುಣುಪಾದ ಹುಲ್ಲು.
ದಾಂಗಡಿಗ್ಯಾ	ಹಸಿರುಬಳ್ಳಿ.
ನುಗ್ಗಿ	ಎಲೆತೋಟದ ನುಗ್ಗಿ ಗಿಡದ ಹುಲ್ಲು.
ನೆಲ್ಲಗಡ್ಡಿ	ಕಬ್ಬಿನಂತಿರುವ ಎಲೆ ಮೇವು.
ನೆಲ್ಲಹುಲ್ಲು	ಭತ್ತದ ಹುಲ್ಲು.
ಬಳ್ಳಿ	ಹರಹಿದ ಸವತೆಕಡ್ಡಿನ ಬೆಳ್ಳಿ.
ಬಾಟಿ	ಪಸಿ ಜೋಳದ ಮೇವು, ಕಾಳು ಆಗದೇ ಉಳಿಯುವ ಜೋಳದ ದಂಟು.

ಮಳಮುಂಡಿ	ಎಲೆ, ಬೀಜಗಳುಳ್ಳ ಮುಂಗಾರಿ ಹುಲ್ಲು.
ಮಾರುಡಿಗ್ಯಾ	ಮೆತ್ತನೆಯ ಹುಲ್ಲು. ಉ ಮಾರುಳಿಗ್ಯಾ.
ಮುಟ್ಟಬಳ್ಳಿ	ಮೇವಿನ ಒಂದು ಪ್ರಕಾರ.
ಮುಂಡಗಸ	,, ,,
ರವದಿ	ಬೆಳೆ ಮೇಲಿನ ಸೊಪ್ಪಿ.
ಸರಾಯಿಹುಲ್ಲು	ಒಂದು ಜಾತಿಯ ಹುಲ್ಲು.
ಸಿಂಪಿಗ್ಯಾ	ಮೆತ್ತನೆಯ ಹುಲ್ಲು.
ಸಿಗರಿಗ್ಯಾ	,, ,,
ಹಣಜಿಲ	ಮೈಗೆ ಹತ್ತುವ ಹುಲ್ಲು.
ಹತ್ತರಕ್ಯಾ	ಮೆತ್ತನೆಯ ಹತ್ತರಕಿ ಹುಲ್ಲು.
ಹರಗ್ಯಾ	ತಪ್ಪಲು ಮೇವು.
ಹಸರಾಣಿ	ಮೆತ್ತನೆಯ ಹುಲ್ಲು.
ಹಾಲ್ಗವರಿ	ಹಾಲು ತುಂಬಿದ ಅವರೆ ಬಳ್ಳಿ.
ಹುಳಿಗ್ಯಾ	ಒಂದು ರೀತಿಯ ಹುಲ್ಲು.
ಹೂಗಸ	ಹೂವಾಗುವ ಹುಲ್ಲು, ಪರ್ಯಾ, ಚಂಡಿಕಾ.
ಹೊಟ್ಟು	ಕಾಳುಗಳಮೇಲಿನ ಸೊಪ್ಪೆ. ಪ್ರ, ಹೊಟ್ಟನಗಡ್ಡಿ, ಹೊಟ್ಟನ ಹರಿ.

ರಾಶಿ :

ಅಗಟಿಗಿ ಕಣ	ದೊಡ್ಡಕಣ, ಮೇಟಿಯಿಲ್ಲದೆ ನಡೆಯುವ ದೊಡ್ಡರಾಶಿ. ಪರ್ಯಾ, ಬಿಡ್ಡಂತಿ.
ಇಂಡಿ	ಮುಂಡಗಣಿಕೆಯಿಂದ ಕಣದ ಸುತ್ತಲು ಹಾಕಿದ ಕಟ್ಟು ಉ ಇಂಡಿಗಿ. ಪರ್ಯಾ, ಕಡೆದಿಂಡು, ಬಿಂಡಿ.
ಇಕ್ತಲು ಬಣವೆ	ಹೆಂಟಿ ಹಾಕದಿರುವ ದೊಡ್ಡ ಬಣವೆ
ಇಕ್ಲಿ	ತೆನೆಯನ್ನು ಕೊಯ್ದುಕೊಂಡು ಒಟ್ಟಿದ ಜೋಳದ ದಂಟುಗಳ ಗೂಡು(ಬ.ಕ.).
ಓದಿಗೆ	ಎಳ್ಳು ಗೂಡನ್ನು ನೆಟ್ಟಗೆ ನಿಲ್ಲಿಸಿರುವದು. ಗೂಡು.
ಕಂಕಿ	ಕಾಳಿಲ್ಲದ ತೆನೆ.
ಕಂಕಿಪಾಂಡ್ಯಾ	ಕಾಳುದುರಿದ ತೆನೆಗಳನ್ನು ಸಂಗ್ರಹಿಸುವ ಕಂಕಿಮುನಿ, ಹಂತಿಯ ಒಂದು ಭಾಗ.
ಕಣ	ರಾಶಿಮಾಡುವ ಸ್ಥಳ, ವರ್ತುಲಾಕಾರದ್ದು ಉ ಕಳ, ಖಳ, ಕಣ. ಪ್ರ, ಕಡಿಗಣ(ವಿ),ಮೆಟ್ಟಗಣ(ವಿ),ದೊಡ್ಡಖಣ(ವಿ), ಖಣತಟ್ಟು.

ಗ್ವಾರಿ	ರಾಶಿಕಾಲದಲ್ಲಿ ಉಪಯೋಗಿಸುವ ಒಂದು ಉಪಕರಣ (ಅರ್ಧ ಚಂದ್ರಾಕೃತಿಯ ಹಲಗೆಯದು).
ಗೂಡು	ನೆಟ್ಟಗೆ ನಿಲ್ಲಿಸಿರುವ ತೆನಿಗಣಿಕೆಯ ಗುಂಪು. ಪ್ರ, ಕಾಗಿ ಗೂಡು.
ಜಂತಗುಂಟೆ	ತೆನೆ ಜಗ್ಗಲು ಇರುವ ಉಪಕರಣ.
ತೂರುಪುಟ್ಟಿ	ಕಣದಲ್ಲಿ ಕಾಳು ತೂರುವಬುಟ್ಟಿ. ಪರ್ಯಾ, ಸಬುಟ್ಟಿ, ತಟ್ಟಿ ಕಬ್ಬಿಣಪುಟ್ಟಿ.
ತೆನೆ	ಕಾಳುಗಳುಳ್ಳದು, ಉ ತೆನಿ ಪ್ರ, ನೆಟ್ಟನೆಯ ತೆನೆ, ಮುರಿ ಗಣಿಕಿತೆನೆ.
ಪೆಂಡಿ	ಸಣ್ಣ ಹುಲ್ಲಿನ ಇಲ್ಲವೆ ಜೋಳದ ದಂಟುಗಳ ಹೊರೆ, ಪ್ರ, ತಲಿಪೆಂಡಿ.
ಬಣವಿ	ಕಣಿಕೆಯನ್ನು ಒಟ್ಟದ ಭಾಗ. ಕೀಲ- ಬಣಿವೆ ಗಟ್ಟಿಯಾಗಲು ಜರಿಯದಂತೆ ಹಾಕಿದ ಸೂಡುಗಳು ಬಿರಿ- ನಡುವೆ ಪೊಳ್ಳಾಗದಂತೆ ಹಾಕಿಕೊಂಡ ಸೂಡುಗಳು ಥರ- ಸೂಡುಗಳನ್ನು ಒಟ್ಟದ ಕ್ರಮ. ಪ್ರ, ಇಕ್ಕಲು ಬಣವಿ, ಕೀಲು ಬಣವಿ, ಮರಗ ಬಣವಿ.
ಬರಲು	ಕಣ ಬಳಿಯಲು ಉಪಯೋಗಿಸುವ ಬಾರಿಗೆ. ಬಂದರಿಕೆ ತಪ್ಪಲಿನದು (ಬ.ಕ.).
ಮಂಡಲು	ಗೋದಿಯ ಸೂಡನ್ನು ತೆನೆಕೆಳಗೆಮಾಡಿ ಒಡ್ಡಿ ಮೇಲೆ ಮಾಡಿ ನಿಲ್ಲಿಸಿದ ಕುಂಪಿ (ಬ.ಕ.).
ಮಡ್ಡು	ಗೋದಿ ಹುಲ್ಲನ್ನು ತುಳಿಸಿ ಒಟ್ಟಿದ ಕುಂಪಿ(ಬ.ಕ).
ಮದನ	ತೂರದಿರುವ ರಾಶಿ (ಕ.ಕ.).
ಮಳ್ಹಂತಿ	ಕಂಕಿರಾಶಿ (ಬೀ.ಕ.)
ಮಿರಗ	ತೆನಿಗಣಿಕೆಯ ಒಕ್ಕಲು (ಬೀ.ಕ.).
ಮೆಟ್ಟನಾಲಿಗೆ	ರಾಶಿ ತೂರಲು ಮೇಲೇರಿ ನಿಲ್ಲುವ ಮೂರು ಕಾಲಿನಮಣಿ ಪರ್ಯಾ, ಮ್ಯಾಟ (ಬ.ಕ.).
ಮೆದಿ	ಹರಗಿದ ಬಳ್ಳಿ ಅಥವಾ ಕಿತ್ತಿದ ಜೋಳವನ್ನು ಅಲ್ಲಲ್ಲಿ ಇಟ್ಟ ಗುಂಪಿ.
ಮೇಟಿ	ಕಣದ ನಡುವೆ ನೆಟ್ಟ ಬನ್ನಿಯಮರದ ಆಧಾರ ಸ್ಥಂಭ.
ರಾಗೋಲ	ಹಂತಿಯಲ್ಲಿ ತೆನೆ ಜಗ್ಗಲು ಮಾಡಿದ ಸಾಲ್ಕಾರು ಹಲ್ಲಿನ ದಿಂಡು, ಪರ್ಯಾ. ಜಂತಗುಂಟಿ (ಬ. ಕ.) ರುಮ್ಮನ ಭಾಕ (ಬೀ.ಕ.).

ರಾಶಿ	ಹಂತಿ ತುಳಿಸಿ ಕಾಳನ್ನು ತೂರಿದ ಭಾಗ. ಪ್ರ, ಹಿರಾಶಿ (ಕ.ಅ.ಕ.).
ಸುಂಕ	ನೈಗೆ ಕಡಿಯುವ ನಾಜೂಕಾದ ಹೊಟ್ಟು.
ಸೂಡು	ದಂಟಿನ ಒಕ್ಕಲು ಉ ಸಿವುಡು. ಪರ್ಯಾ, ಪೆಂಡಿ, ಮೆದಿ.
ಸೊಡ್ತು	ತೊಗರಿ ಕಟ್ಟಿಗೆ ಇಲ್ಲವೆ ಉತ್ತರಾಣಿ ಕಡ್ಡಿಯ ಬಾರಿಗೆ ಪರ್ಯಾ. ಬರಲು, (ಬ.ಕ.) ಸೆಳ್ಳು (ಬೀ.ಕ.).
ಹಂತಿ (ಪಂಕ್ತಿ, ಸಂ.)	ಮೇಟಿಯ ಸುತ್ತ ತಿರುಗುವ ಎತ್ತುಗಳ ಸಾಲು. ಪ್ರ ಬಿದ್ಹಂತಿ (ದೊಡ್ಡರಾಶಿ) ಮಳ್ಹಂತಿ ಸಣ್ಣರಾಶಿ (ಕ.ಅ.ಕ.) ಕಂಕಿಹಂತಿ.
ಹಂತಿಕಣ್ಣಿ	ಹಂತಿ ತಿರುಗಲು ಎತ್ತುಗಳಿಗೆ ಕಟ್ಟುವ ಹಗ್ಗ.

ಚಕ್ಕಡಿ:

ಅಚ್ಚು (ಅಕ್ಷ ಸಂ.)	ಎರಡೂಗಾಲಿಗಳನ್ನು ಹೊಂದಿಸುವ ಕಬ್ಬಿಣದ ಗಟ್ಟಿ ಸಲಾಕೆ. ಪರ್ಯಾ. ಹಾರಿ (ಬಿ.ಕ.) ದುರಿ (ಬೀ.ಕ.).
ಅಡಪಟ್ಟಿ	ತೊಟ್ಟಿಲಲ್ಲಿ ಹಾಕಿರುವ ಹಲಗೆ ಮಣೆ.
ಆಡಿಗೆ	ಗಾಡಿಯ ಎಡ-ಬಲ ಭಾಗದ ದೊಡ್ಡ ಪಟ್ಟಿ (ಬಿ.ಕ.).
ಆರ್ಯಾ	ಚಕ್ರದ ಹಲ್ಲು (ಬ.ಕ.) (ಕ.ಕ.).
ಈಸು	ತೊಟ್ಟಿಲು-ನೊಗಕ್ಕೆ ಸೇರಿಸಿರುವ ಬಿದಿರು ಕಟ್ಟಿಗೆಗಳು ಉ ಈಚು (ಬಿ.ಕ.). ಪರ್ಯಾ, ಏರಕೋಲು (ಕ.ಅ.ಕ.) (ಬೀ.ಕ.) ಪ್ರ, ಒಂಟೀಸು. ಜೋಡಿಸು.
ಎರಿಬಿರಿ	ಈಸು ಮತ್ತು ಬಿರಿ ಕಟ್ಟಿಗೆಯನ್ನು ಬಿಗಿಯುವ ತಂತಿ.
ಒಗ್ಗಾಲಿ	ಉರುಳಿದ ಬಂಡಿ.
ಓಟಿ	ಅಚ್ಚಿನ ಮೇಲ್ಭಾಗದಲ್ಲಿರುವ ಕಟ್ಟಿಗೆ (ಬ.ಕ.).
ಕಟಗೀಲು	ನೊಗಕ್ಕೆ ಸೇರಿಸಿರುವ ಗುಣಿಗಳು ಉ.ಕಳಗೀಲು(ಬಿ.ಕ.).
ಕಣಗ	ಆಡಿಗೆಯ ಮೇಲ್ಭಾಗದಲ್ಲಿರುವದು. (ಕ.ಕ.) (ಬ.ಕ.) ಉ ಕಳಗ.
ಕೀಲು	ಗಾಲಿಗಳು ಬೀಳದಂತೆ ಆಧಾರವಾಗಿರುವ ಕಬ್ಬಿಣದ ಮೊಳೆ. ಪರ್ಯಾ. ಚಳಮಳೆ (ಬೀ.ಕ.) ಶಾಯಿಮಳೆ (ಕ. ಅ. ಕ.) ಕಡಾಣಿ (ಕ.ಯಾ.ಕ) ವತಗೀಲು (ಬಿ.ಕ.).
ಗಾಡಿ	ಎತ್ತುಗಳ ವಾಹನ. ಪರ್ಯಾ. ಬಂಡಿ(ಬಿ.ಕ.ಕ.ಕ.ಧಾ.ಕ.) ಚಕ್ಕಡಿ. (ಬೆ.ಕ.) ಪ್ರ. ಎಕ್ಕಾಗಾಡಿ, ಜೋಡೆತ್ತಿನಗಾಡಿ; ಸವಾರಿಗಾಡಿ, ಒಡ್ಡರಬಂಡಿ.

ಗಾಲಿ	ಗಾಲಿಯನ್ನು ಉರುಳಿಸುವ ಗೋಲಾಕಾರದ ಸಾಧನ. **ಪರ್ಯಾ,** ಚಕ್ರ.
ಚಾಕ	ಗಾಲಿ ಉರುಳುವ ದಾರಿ, ಗಾಲಿಯ ಮೇಲಿನ ಕಬ್ಬಿಣದಪಟ್ಟಿ
ಜತ್ತಿಗಿ	ಎತ್ತುಗಳನ್ನು ಬಂಡಿಗೆ ಕಟ್ಟುವಾಗ ಉಪಯೋಗಿಸುವ ಕೊರಳಪಟ್ಟಿ.
ಡಂಬು	ಕಳಗಗಳ ಮೇಲಿರುವ ಭಾಗ. **ಪರ್ಯಾ,** ಏಣಿ.
ತೊಟ್ಟಿಲು(ತೊಟ್ಟೆಮು ತೆ.)	ಗಾಡಿಯಲ್ಲಿ ಕೂಡುವ ಸ್ಥಳ. **ಉ,** ತೊಟ್ಲ. **ಪರ್ಯಾ,** ಸಾಟಾ.
ದಾಂವಪಟ್ಟಿ	ಗಾಲಿಯ ಮೇಲಿನ ಕಬ್ಬಿಣದ ಪಟ್ಟಿ. **ಪರ್ಯಾ,** ಹಳಿ, ಚಾಕ.
ನೊಗ	ಈಸಿನ ತುದಿಗೆ ಕಟ್ಟಿರುವ ಗಂಡು ಕಟ್ಟಿಗೆ. **ಉ,** ನಗ.
ಪಟ್ಟಿ	ತೊಟ್ಟಿಲಿನ ಎರಡೂ ಭಾಗದ ಉದ್ದವಾದ ಗಳಗಳು.
ಪುಟಿ	ಗಾಲಿಯ ಹಲ್ಲುಗಳ ಮುಂದೆ ಕೂಡಿಸಿರುವ ಕಟ್ಟಿಗೆಯ ಪಟ್ಟಿಗಳು. ಇವುಗಳ ಸಂಖ್ಯೆ ಆರು.
ಬದ್ದಿ	ತೊಟ್ಟಿಲಿನ ಕೆಳಭಾಗದ ಉದ್ದನೆಯ ಎರಡು ಕಟ್ಟಿಗೆಗಳು.
ಬಿರಿಕಟಿಗಿ	ಈಸಿನ ಮೇಲುಭಾಗದಲ್ಲಿ ಕೂಡಿಸಿರುವ ಸಣ್ಣಕೋಲು.
ಮೋಕು	ಈಸು ನೆಲಕ್ಕೆ ಹತ್ತದಂತೆ ಆನಿಸಿರುವ ಮುಂಭಾಗದ ಆಧಾರ ಕಟ್ಟಿಗೆ.
ಲಾಳಿಕಿ	ಗಾಲಿಗಳಿಗೆ ಎಣ್ಣೆ ಹಾಕಲು ಉಪಯೋಗಿಸುವ ನಳಿಕೆ. **ಉ,** ನಳಿಕಿ, ಲಳಗಿ.
ವಂಕಿ	ಗಾಲಿಯ ಒಳಬಳಿ. **ಪರ್ಯಾ,** ಬಾಯಬಳಿ.
ಸಿಪಾಯಿ ಕಟ್ಟಿಗೆ	ಗಾಡಿ ಹೊಡೆಯುವ ವ್ಯಕ್ತಿ ಕೂಡುವ ಸ್ಥಳ.
ಹಲ್ಲು	ಗಡ್ಡಿ ಮತ್ತು ಪುಟಿಗಳನ್ನು ಜೋಡಿಸುವ ಹನ್ನೆರಡು ಆಯತಾಕಾರದ ಕೊರೆದ ಚಕ್ರದ ಹಲ್ಲುಗಳು.
ಹಂದಿಗೊಡ್ಡ	ತೊಟ್ಟಿಲು ಕೆಳಗಿರುವ ದೊಡ್ಡ ತೊಲೆಯಾಕಾರದ ಕಟ್ಟಿಗೆ. **ಪರ್ಯಾ,** ಓಡ್ಯಾ (ಬ.ಕ.).
ಹಿಂಗಲ	ಈಸುಗಳ ಹಿಂಭಾಗದ ತುದಿ. ಇದು ಹಂದಿಗೊಡ್ಡದಲ್ಲಿ ಕಾಣಿಸಿರುತ್ತದೆ.
ಹಿಂಜೋಲಿ	ಗಾಡಿಯ ಜೋಲಿ ಹಿಂದಕ್ಕಾಗುವದು. **ಪರ್ಯಾ,** ಹಿಂಬಂಡಿ.
ಹೆಂಡಿಕಟಗಿ	ತೊಟ್ಟಿಲು ಮುಂಭಾಗದಲ್ಲಿ ಎಡ-ಬಲಕ್ಕೆ ಕಾಣಿಸುವ ಎರಡು ಕಟ್ಟಿಗೆಗಳು. **ಪರ್ಯಾ,** ಕುಂಡಿಕಟಗಿ, ಧಕ್ಕಿಕಟಗೆ. (ಬೀ. ಕ.) (ಕ. ಅ. ಕ.) ಎತ್ತುಗಳ ಹೇಂಡಿ ಇವುಗಳ ಮೇಲೆ ಒಮ್ಮೊಮ್ಮೆ ಬೀಳುವದು. ಇವರ ಮೇಲೆ ಕಾಲಿಟ್ಟು ಗಾಡಿ ಹತ್ತುವುದೂ ಉಂಟು.

ಚುಂಗಡಿ ಅರ್ಧಮರ್ಧ ತುಂಬಿದ ಚೀಲು.
ಬಳ್ತ ಕಲ್ಲಿನಿಂದ ಕಟ್ಟಿ ಹಾಳುಮಣ್ಣು ಗಿಲಾಯಿಮಾಡಿದ ಗುಮ್ಮಿಯ ಒಂದು ಪ್ರಕಾರ (ಕ.ಕ.).
ಬುಟ್ಟಿ ಧಾನ್ಯ ತುಂಬಲು ಬರುವ ಪುಟ್ಟಿ. **ಪ್ರ,** ಗುಮ್ಮಿಬುಟ್ಟಿ, ತೂರು ಪುಟ್ಟಿ, ತಾಸಪುಟ್ಟಿ, ಹೆಂಡಿಪುಟ್ಟಿ, ಡೊಳ್ಳೊಡಗಿ, ಹೆಡಿಗಿ, ಸೋನೇದ ಬುಟ್ಟಿ.
ವಾಡೆ ಮನೆಯ ಪಾವಟಿಗೆ ಬಳಿಯಲ್ಲಿ ಕಟ್ಟಿಸಿದ್ದು.
ಹಗೆ ಮನೆಯ ಅಂಗಳದಲ್ಲಿ ತೆಗಿಸಿದ ನೆಲಮನೆ. **ಪರ್ಯಾ,** ಅಂಬಾರಿ.

ಧಾನ್ಯದ ಅಳತೆ :

ಅದ್ದನ ಅರ್ಧ ಸೊಲಿಗಿ **ಉ,** ಅದ್ನ (ಬಿ. ಕ.).
ಅರಗಳ (ಆರು + ಕೊಳಗ)
ಇಕ್ಕಳ ಎರಡು ಕೊಳಗ.
ಇಮ್ಮಾನ ಎಂಟು ಸೇರು ಧಾನ್ಯ (ಕ.ಕ.).
ಒಮ್ಮಾನ ನಾಲ್ಕು ಸೇರು. (ಕ.ಕ.) ನಾಲ್ಕು ಸೊಲಿಗಿ. (ಬಿ.ಕ.).
ಕೊಳಗ ಧಾನ್ಯದ ಅಳತೆ. **ಉ,** ಕಳ. **ಪ್ರ,** ಒಕ್ಕಳ, ಇಕ್ಕಳ, ಮೂಗಳ, ನಾಗಳ, ಐಗಳ, ಅರಗಳ, ಏಳಗಳ, ಎಂಟ ಕೊಳಗ, ಒಂಬತ್ತು ಕೊಳಗ, ಹತ್ತು ಕೊಳಗ, ಇಪ್ಪತ್ತು ಕೊಳಗ, ೧ಚೀಲ.
ಖಂಡುಗ ಇಪ್ಪತ್ತು ಕೊಳಗ ಅಥವಾ ಹದಿನಾಲ್ಕು ಚೀಲ ಧಾನ್ಯ (ಕ.ಕ.). **ಉ,** ಖಂಡ್ಗ.
ಗಿದ್ದನ ಸೊಲಿಗೆಯ ¼ ಭಾಗ. **ಉ,** ಗಿದ್ನ.
ಮಾನ ನಾಲ್ಕು ಸೇರು. ಪರ್ಯಾ, ಒಮ್ಮಾನ.
ಮೂರುಮಾನ ಹನ್ನೆರಡು ಸೇರು.
ವಕ್ಕಳು ಅರುವತ್ನಾಲ್ಕು ಸೇರು.
ಸೊಲಿಗಿ ಎರಡು ಸೇರು (ಬಿ.ಕ.). **ಪರ್ಯಾ,** ಅರಣಿಗಿ (ಕ.ಕ.).

ಒಕ್ಕಲಿಗನ ನಿವಾಸ:

ಕೇರ ಲಕ್ಕಿಯ ಪರಕೆಯಿಂದ ಬಿಗಿದುಕಟ್ಟಿದ ಚಪ್ಪರ.
ಕೊಂಪಿ ಗುಡಿಸಲು.
ಚಪ್ಪರ ಹುಲ್ಲು ಇಲ್ಲವೆ ಪತ್ರಾಳಿಗಳಿಂದ ಹಾಕಿದ ಮನೆ.

ಗುಡಿಸಲು	ಸೊಪ್ಪೆಯಿಂದ ಒಟ್ಟಿದ ಗೂಡಿನಾಕಾರದ ನಿವಾಸ. **ಉ,** ಗುಡಸ್ಲ, ಗುಡಸಿ.
ಗೂಡಿ	ಗುಡಿಸಲು. **ಉ,** ಜೂಡಿ. **ಪ್ರ,** ಕಾಗಿ ಗುಡಸಲ, ಕುದರಿ ಮೋತಿ ಗುಡಿಸಲು.

ದವಸಧಾನ್ಯದ ಹಲವು ಪ್ರಭೇದಗಳು:

ಎಳ್ಳು	ಎಣ್ಣೆ ಹೊರಡುವ ಜಿಡ್ಡು ಧಾನ್ಯ. **ಪ್ರ,** ಚಿಟ್ಟೆಳ್ಳು, ದೊಡ್ಡೆಳ್ಳು, ಕರಿಯೆಳ್ಳು, ಬಿಳಿಯೆಳ್ಳು, ಕಾರೆಳ್ಳು> ಕಾರ‍್ಯಾಳ (ಬಿ.ಕ.).
ಗೋದಿ	ಆಹಾರಧಾನ್ಯ. **ಪ್ರ,** ಬಿಳಿಗೋದಿ, ಕೆಂಪುಗೋದಿ, ಜವಾರಿ ಗೋದಿ, ನೀರಗೋದಿ, ಬನ್ಸಿಗೋದಿ (ಕ.ಕ.), ಕರಿಜುಟ್ಟದ ಗೋದಿ, ಬೋಳಗೋದಿ, ಬುಡ್ಡಿಗೋದಿ, ಜಂವಿಗೋದಿ, ಕಿಣಗಿ ಗೋದಿ ಮುಂ.
ಜಂವಿ	ಗೋದಿಯ ಒಂದು ಪ್ರಕಾರ. **ಪರ್ಯಾ,** ಕವಡಕ (ಕ. ಕ.) ಕಪಲಿಗೋದಿ (ಕ.ಕ.).
ಜೋಳ	ಉತ್ತರ ಕರ್ನಾಟಕದ ಮುಖ್ಯ ಆಹಾರಧಾನ್ಯ. **ಉ.** ಜ್ವಾಳ. **ಪ್ರ,** ಕೆಂಜೋಳ, ಬಿಳಿಜೋಳ, ಮೆಕ್ಕೆಜೋಳ, ಗಿಡಗಂಪಜೋಳ, ಗಡ್ಡಿಗುಂಡಜೋಳ, ಕಾಟಜೋಳ, ಮಾನದಂಡಿಗಿ ಜೋಳ, ಮೂರುಗೇಣಿನ ಜೋಳ, ಕೋಡ ಮುರಿಕಿ ಜೋಳ, ಹಳಿಜೋಳ, ಹೋಳಿಗಿಜೋಳ, ಸಕ್ರಿ ಮುಕ್ರಿಜೋಳ, ಹಸರ ಜೋಳ, ಮುಂಗಾರಿ ಜೋಳ, ಹಿಂಗಾರಿಜೋಳ, ಹೈಬ್ರಿಡ್‌ಜೋಳ. **ಉ,** ಹೈಬ್ರೇಡಿ> ಹೇಮರಡ್ಡಿ ಜೋಳ.
ಬೀಜ	ಬಿತ್ತಲು ಕಾಯ್ದಿಟ್ಟ ಕಾಳು.
ಭತ್ತ	ನೀರಿನಿಂದ ಬೆಳೆಯುವ ಪೈರು. **ಪರ್ಯಾ,** ಕವಳಿ, ಕಳಿವಿ, ನೆಲ್ಲು. **ಪ್ರ,** ಕೆಂಪಕವಳಿ, ನಕಾರಿಕವಳಿ, ಬಿಳಿಕವಳಿ, ಮೋಲಡಿ ಕವಳಿ, ಕರಿಕವಳಿ.
ಮೂಕಣಿ	ಕಾಳಿನಧಾನ್ಯ. **ಪರ್ಯಾ,** ಮೆಟಿಕಿ (ಕ.ಕ.).
ಶೇಂಗಾ	ನೆಲದಲ್ಲಿ ಬೆಳೆಯುವ ಪೈರು. **ಪರ್ಯಾ,** ನೆಲಗಡಲೆ(ಮೈ.ಕ.). **ಪ್ರ,** ಚಿಟ್ಟಶೇಂಗಾ, ಗೆಜ್ಜಿಶೇಂಗಾ, ಡಬ್ಬುಶೇಂಗಾ, ಹಬ್ಬು ಶೇಂಗಾ.

ಹತ್ತಿ	ಅರಳೆಯ ಗಿಡ. ಪ್ರ, ಲಕ್ಷ್ಮೀಹತ್ತಿ, ಜವಾರಿಹತ್ತಿ, ಜಯಧರಹತ್ತಿ, ಜಯಪುರಹತ್ತಿ, ಹಂಪಿಹತ್ತಿ, ಅಪಲಂಡಹತ್ತಿ, (ಬಿ.ಕ.) ವರಲಕ್ಷ್ಮೀ ಹತ್ತಿ, ಕಮರ್ಸಿಯಲ್ ಹತ್ತಿ.
ಹುರುಳಿ	ಹುಲುಲಿ (ಕ.ಕ.).

ಧಾನ್ಯ ಸಂಗ್ರಹಣೆ:

ಕಂಬಳಿಮುಟ್ಟ	ಕಂಬಳಿಯಲ್ಲಿ ಕಟ್ಟಿದ ಧಾನ್ಯದ ಗಂಟು.
ಕುಂಚಿಗಿ	ಕುಂಚಿಗೆ ಆಕಾರದ ತೆನೆ, ಧಾನ್ಯಗಳನ್ನು ತರುವ ಗಂಟು.
ಕೇಲ	ಧಾನ್ಯಸಂಗ್ರಹಕ್ಕಾಗಿ ಮನೆಯಲ್ಲಿರುವ ಕಲ್ಲಿನ ಹೌಜು.
ಗಾದಿಗೆ	ಉಳ್ಳಿಗಡ್ಡಿಯ ಸಂಗ್ರಹಕ್ಕಾಗಿ ಮಾಡಿದ ಗೂಡು(ಟೊಪ್ಪಿಗೆ ಆಕಾರದ್ದು). ಪರ್ಯಾ, ಹಿಲಾರ, ಕಡಲ(ಬಿ.ಕ.).
ಗುಮ್ಮಿ	ಗುಂಭಾಗಿ ಹೆಣೆದ ಪುಟ್ಟಿ.
ಚೀಲ	ಧಾನ್ಯತುಂಬುವ ತಟ್ಟಿನ ಚೀಲ. ಪ್ರ, ಗೋಣಿ ಚೀಲ, ಸೊಂಡಿಚೀಲ, ಕೋರಿಚೀಲ.
ಮಂಚಿಗಿ	ಹೊಲದಲ್ಲಿ ಹಕ್ಕಿಗಳನ್ನು ಹೊಡೆಯಲು ಹಾಕಿದ ಅಟ್ಟ. ಪರ್ಯಾ, ಅಂಟ.

ಒಕ್ಕಲಿಗನ ಸಾಮಗ್ರಿ:

ಕವಣಿ	ಹೊಲದಲ್ಲಿ ಹಕ್ಕಿ ಹೊಡೆಯುವ ಸಾಧನ.
ಚಿಲಮಿ	ತಂಬಾಕು ಸೇದುವ ಕೊಳವೆ.
ತತ್ರಾಣಿ	ನೀರುಕುಡಿಯುವ ಮಣ್ಣಿನ ಪಾತ್ರೆ.

ವೇಷಭೂಷಣಗಳು:

ಅಂಗಿ	ಮೈಯಲ್ಲಿ ಹಾಕಿಕೊಳ್ಳುವ ವಸ್ತ್ರ.
ಕೆರವು	ಕಾಲಲ್ಲಿ ಹಾಕುವ ಚಪ್ಪಲಿ. ಪರ್ಯಾ, ಮೆಟ್ಟು, ಗಡ್ಡಿಗಾಲ ಮುರಿ (ಬಿ.ಕ.).
ಧೋತರ	ಉಟ್ಟುಕೊಳ್ಳುವ ವಸ್ತ್ರ.
ಮುಂಡಿಚಾಟು	ಅಂಗಿಯ ಒಳಗೆ ಹಾಕಿಕೊಳ್ಳುವ ಬನೀನು.
ಮುಡ್ಡಿ	ಗಂಡುಗಚ್ಚಿ. ಉ, ಮುಡ್ಡಾ (ಕ. ಶೇ. ಕ.), ಅಂಡಗಚ್ಚಿ (ಬಿ. ಕ.).
ಪಟಗ	ತಲೆಯಮೇಲೆ ಸುತ್ತುವ ಉದ್ದಾದ ವಸ್ತ್ರ.

ರುಮಾಲು	ನಾಲ್ಕುಮೂಲೆಯ ತಲೆಯ ಸುತ್ತಿನ ವಸ್ತ್ರ.
ಶಮನ	ಪಟಕಾದ ಚುಂಗು.

ಒಕ್ಕಲಿಗನ ಉಣಿಸು-ತಿನಿಸುಗಳು:

ಊಟ :

ಅಂಬಲಿ (ಆಮ್ಲ ಸಂ.)	ಹುಳಿಯಾಗಿರುವ ತಂಪನೆಯ ಪದಾರ್ಥ. **ಉ,** ಅಂಬ್ಲಿ **ಪ್ರ,** ಕಟಂಬಲಿ.
ಆಮ್ರ	ಸಾರು. **ಉ,** ಆಂಬ್ರ.
ಉಪ್ಪಿನಕಾಯಿ	ಹುಳಿಯಾದ ಲಿಂಬೆ, ಮಾವುಗಳ ಹೋಳು.
ಕರಚಿಕಾಯಿ	ಸಿಹಿಖಾದ್ಯ.
ಕಾರಬೇಳೆ	ಸಾರಿನ ಸಾಮಾನ್ಯ ಪ್ರಭೇದ. **ಉ,** ಕಾರಬ್ಯಾಳಿ.
ಕಿಚಡಿ	ಕುಟ್ಟಿಮಾಡಿದ ಜೋಳದ ಅನ್ನ.
ಚಟ್ನಿ	ಕುಟ್ಟಿದ ಖಾರುಳ್ಳ ಪದಾರ್ಥ. **ಉ,** ಚಟ್ಟಿ.
ತಂಗಳ (ತಣ್ಣಿತ್ತು + ಕೂಳ್)	ಆರಿದ ಅಡಿಗೆ.
ನ್ಯಾರಿ	ಬೆಳಗಿನ ಊಟ. **ಉ,** ನೆಯ್ಯರಿ.
ನುಚ್ಚು	ಜೋಳದ ಬೋನ.
ಪುಂಡಿಪಲ್ಲೆ	ಹುಳಿಯಾದ ತೊಪ್ಪಲ ಪಲ್ಲೆ. ಅಟ್ಟಿಮಾಡಿದ್ದು.
ಬಾನ	ಅನ್ನ. **ಪ್ರ,** ಹುಳಿಬಾನ.
ಭಜಿ	ಬದನೆ, ಅವರಿಕಾಳು, ಗಜ್ಜರಿಗಳನ್ನು ಸೇರಿಸಿ ಮಾಡಿದ ಪದಾರ್ಥ.
ಭರತ	ಬದನೆಕಾಯಿಯನ್ನು ಸುಟ್ಟುಮಾಡಿದ ಪದಾರ್ಥ, ಎಳ್ಳಾ ಮಾಸೆಗೆ ಮಾಡುವ ಒಂದು ಪದಾರ್ಥ.
ರೊಟ್ಟಿ	ಬೇಯಿಸಿದ ಜೋಳದ ಹಿಟ್ಟಿನ ತಿನಿಸು. **ಪ್ರ**. ಮುಟಗಿ, ಕೈರೊಟ್ಟಿ, ದುಮುಟಿ.
ವಣಿಗಿ	ರೊಟ್ಟಿಯ ಜೊತೆಗೆ ತಿನ್ನುವ ಪದಾರ್ಥ.
ಹಿಂಡಿಪಲ್ಲೆ	ಕಾಳಿನಪಲ್ಲೆ.
ಹುಳಾನುಚ್ಚು	ಹುಳಿ ಸೇರಿಸಿದ ನುಚ್ಚು.
ಹೋಳಿಗೆ	ಸಿಹಿಪದಾರ್ಥ.

ತಿನಿಸುಗಳು :

ಉಮ್ಮಿಗಿ	ಗೋದಿಯ ಹಾಲ್ದೆನೆಯ ಸುಟ್ಟ ಕಾಳುಗಳು.
ಡಬಗಾಯಿ	ಗಡಗಿಯನ್ನು ಮಣ್ಣಲ್ಲಿ ಹೂಳಿ ಕುದಿಸಿದ ಗೆಣಸು.

ಪುಟ್ಟಿಕಾಯಿ	ಹಣ್ಣು ಸವತೆ.
ಬೆಳಸಿ	ಹಾಲ್ದುಂಬಿದ ಜೋಳದ ಹಸಿಯ ಕಾಳು.
ಮೆಕ್ಕೆತೆನೆ	ಮೆಕ್ಕೆಜೋಳದ ಹಾಲ್ಗಾಳುಗಳುಳ್ಳ ತೆನೆ. **ಉ,** ಮೆಕ್ಕಿ ಲಂಡ.
ಸೀತ್ನಿ (ಸಿಹಿತೆನೆ)	ಜೋಳದ ತೆನೆಯ ಸುಟ್ಟಕಾಳು.

ಪಾನೀಯಗಳು :

ಮಜ್ಜಿಗೆ	ಮೊಸರಿನಿಂದ ಮಾಡಿದ ತಂಪು ಪಾನೀಯ.
ಮೊಸರು	**ಪ್ರ.** ಆಕಳಮೊಸರು, ಎಮ್ಮೆಮೊಸರು, ಕೆನಿಮೊಸರು, **ಉ,** ಮುಸರು.

ಆಟ-ವಿನೋದಗಳು:

ಕುಸ್ತಿ	ಮಲ್ಲಯುದ್ಧ.
ಡಪ್ಪಿನಾಟ	ಡಪ್ಪು ಬಾರಿಸುತ್ತ ಆಡುವ ಆಟ.
ದೊಡ್ಡಾಟ	ಹಿಮ್ಮೇಳದೊಡನೆ ಆಡುವ ರಾಮಾಯಣ-ಮಹಾಭಾರತ ದೊಳಗಿನ ಕಥೆ. **ಪರ್‍ಯಾ,** ಬಯಲಾಟ.
ನಂದಿಕೋಲ ಕುಣಿತ	ನಂದಿಕೋಲನ್ನು ಕೈಯಲ್ಲಿ ಹಿಡಿದಾಡಿಸುವ ಆಟ.
ಬೈಲಭಜನಿ	ಭಜನಾ ಮೇಳ.
ಮೊಹರಂ	ಮೊಹರಂ ಹಬ್ಬದ ಕುಣಿತ.
ಹಾಡಕ್ಕಿ (ಹಾಡಿಕೆ)	ಲಾವಣಿ, ಗೀಗೀ ಮುಂತಾದ ಹಾಡುಗಳನ್ನು ಕೇಳುವದು.

ಪೂಜೆ-ಉತ್ಸವ-ನಂಬುಗೆಗಳು:

ಕರಬಂಟ	ಕಣದಲ್ಲಿ ಕಂಕಿಯನ್ನು ಸುಟ್ಟು ಮಾಡಿದ ಕರಿಯ ಬಣ್ಣದ ಮೂರ್ತಿ.
ಚರಗ	ಎಳ್ಳಾಮಾಸ್ಯೆದಿನ ರೈತನು ಕಡಬು, ಕಿಚಡಿ, ಭರತ ಗಳನ್ನು ಕೂಡಿಸಿ ಹೊಲದ ನಾಲ್ಕುಮೂಲೆಗೆ ಚೆಲ್ಲು ವುದು.
ಪಾಂಡವರು	ಬೆಳೆಯನ್ನು ಪೂಜಿಸುವ ದಿನ ಐದು ಕಲ್ಲುಗಳನ್ನು ಪೂಜಿಸುವದು.
ಫಲಿ	ಹುಲುಸುಧಾನ್ಯ, ಪಾಂಡವರನ್ನು ಪೂಜಿಸಿ ಫಲಿ ಬೇಡು ವದು.

ಬೂದುಗ	ಕಣದಲ್ಲಿ ಸೆಗಣಿಯಿಂದ ಮಾಡಿದ ಪಿರಾಮಿಡ್ ಆಕೃತಿಯ ಗೊಂಬೆ. ಇದರ ತಲೆಮೇಲೆ ಎತ್ತಿನ ಬಾಲದ ಕೂದಲನ್ನು ಚುಚ್ಚಿರುವರು. **ಪರ್ಯಾ**. ಚಂಡಿಕಿರಾಮ (ಕ. ಅ. ಕ.).
ಬೆಚ್ಚ	ಹೊಲದಲ್ಲಿ ಹಕ್ಕಿ-ಪಕ್ಕಿಗಳನ್ನು ಹೆದರಿಸಲು ಬೆಳೆಯಲ್ಲಿ ನಿಲ್ಲಿಸಿದ ಬೆದರುಬೊಂಬೆ. **ಪರ್ಯಾ**, ಬೆದರು.
ಬೇವು	ಯುಗಾದಿ ದಿನದಂದು ಕುಡಿಯುವ ಪಾನೀಯ. **ಉ**, ಬೇವು. **ಪರ್ಯಾ**. ಬೇವಿನೆಚ್ಚ.
ಸೋನೇದ ಬುಟ್ಟಿ	ಎಳ್ಳಾಮಾಸ್ಯೆಯದಿನ ಹೊಲದಿಂದ ಕಿತ್ತಿದ ಮೊದಲ ದಂಟುಗಳನ್ನು ಹೊತ್ತುತರುವ ಬುಟ್ಟಿ.
ಹರಿಗ್ಯೋ	ಕವಣೆ ಬೀಸುವಾಗ ಮಾಡುವ ಧ್ವನಿ. **ಪರ್ಯಾ**, ಹಾಲಿಡ್ಯೋ, ಲರಿಡೋ.
ಹರಗ್ಯೋ-ಮರಗ್ಯೋ	ಚೆರಗ ಚೆಲ್ಲುವಾಗ ಮಾಡುವ ಧ್ವನಿ. **ಪರ್ಯಾ**, ಚಜ್ಜಿ ರೊಟ್ಟಿ ಚವಳಿಕಾಯಿ ಚೇಂಗಭಲೋ, ಕಿಚಡಿಭಲೋ.
ಹುಲಿಗ್ಯೋ	ಹಂತಿ ಹೊಡೆಯುವಾಗಲೂ, ಧಾನ್ಯವನ್ನು ಅಳೆಯುವಾಗ ಮೊದಲನೆಯ ಮತ್ತು ಬೆಸದ ಸಂಖ್ಯೆಯನ್ನು ಎಣಿಸುವಾಗಲೂ ಉಚ್ಚರಿಸುವ ಪದ.

ಬೇಸಾಯದಲ್ಲಿ ಬಳಕೆಯಾಗುವ ವಿಶಿಷ್ಟ ಕ್ರಿಯಾಪದಗಳು:

ಅಂಗಲ	ಬೆಳೆ ಹೆಚ್ಚು ಅಂತರವಾಗುವದು.
ಅಗತಿಮಾಡು	ನೆಲವನ್ನು ಅಗಿಯುವದು.
ಎಡಿಹೊಡಿ	ಎಡೆ ಆಡಿಸುವದು.
ಒಡ್ಡುಹಾಕು	ಹೊಲದ ನೆಲ ಸಮವಾಗುವಂತೆ ಮಾಡುವ ವಿಧಾನ.
ಕಡದ (ಕೃ. ನಾ.)	ಗಳೆ ಭೂಮಿಗೆ ಖಡಿಯಾಗಿ ಚಲಿಸುವದು.
ಕರಿಹರಿ	ಕಾರಹುಣ್ಣಿಮೆ ದಿನ ಎತ್ತು ಬೇವಿನ ದಂಡೆಯನ್ನು ಹರಿಯುವದು.
ಕಳಂಚಿಗಿ ಮಾಡು	ಒಕ್ಕಲುತನ ಸಾಮಾನುಗಳನ್ನು ಕದಿ (ಬೀ. ಕ.).
ಕಾಲಗೈ	ಬೆಳೆಯಲ್ಲಿ ಬದಲಾವಣೆ ಮಾಡುವದು.
ಕೆಸರು ಕಡಿ	ಕೆಸರನ್ನು ಸಲಿಕೆಯಿಂದ ಕಿತ್ತುವದು, ನೆಲದಲ್ಲಿ ಹೂಳಿದ ಗೊಬ್ಬರವನ್ನು ಅಗಿಯುವದು.
ಕಸತೆಗಿ	ಬೆಳೆಯಲ್ಲಿನ ಉಪದ್ರವ ಸಸ್ಯವನ್ನು ಕಿತ್ತಿಹಾಕುವದು. **ಪರ್ಯಾ**, ಸದಿತಗಿ, ಕಾಶಿ ಆಯುವದು (ಕ. ಕ.).

ಕುಳಿಕಡಿ	ಬೆಳೆ ಫಲವತ್ತಾಗಿರುವದಕ್ಕೆ ಮೊದಲು ಬೆಳೆದುದನ್ನು ಚಿವುಟುವದು.
ಕೊನಿಕಡಿ	ಹೊಲದಲ್ಲಿ ಬೆಳೆದ ಕಂಟಿಯುನ್ನು ಸವರುವದು.
ಖಡ್ಡಾಗು	ಗಳೆ ಕಾರಣಾಂತರಗಳಿಂದ ನಿಲ್ಲುವದು(ಬೀ. ಕ.) (ಕ. ಚಿ. ಕ.).
ಖಣಕಡಿ	ರಾಶಿಗಾಗಿ ಕಣವನ್ನು ತಯಾರಿಸುವದು.
ಖಾತಹೊಡಿ	ಹೊಲಕ್ಕೆ ಗೊಬ್ಬರ ಸಾಗಿಸುವದು.
ಗಳೆಹೊಡಿ	ಭೂಮಿ ಹದಗೊಳಿಸು.
ಗಾಡಿಹತ್ತು	ಬಂಡಿಯ ಮೇಲೆ ಕೂಡು. ಪರ್ಯಾ, ಹೆಬ್ಬು, ಏರು.
ಗೂಡಮುರಿ	ಒಟ್ಟಿದ ಗೂಡಿನ ತೆನೆಗಳನ್ನು ಮುರಿಯುವದು.
ಗೂಡಹಾಕು	ಕಿತ್ತಿದ ದಂಟುಗಳನ್ನು ಗೂಡಿನಂತೆ ಒಟ್ಟುವದು.
ತೂರು	ಗಾಳಿ ಬೀಸಿದಾಗ ಕಾಳನ್ನು ರಾಶಿಯಲ್ಲಿ ತೂರುವದು.
ತೆಗ್ಗಹಾಕು	ಹೊಲದಲ್ಲಿ ಒಡ್ಡುಹಾಕಲು ಕುಣಿ ತೋಡುವದು. ಪರ್ಯಾ, ಅರಣಿ ಹಾಕುವದು.
ದಟ್ಟಾಗು	ಬೆಳೆ ಹೆಚ್ಚು ಹತ್ತಿರವಾಗುವದು.
ದಿಂಡತುಂಬು	ಗಳೇದ ಸಾಮಾನುಗಳನ್ನು ಬಡಿಗನಿಂದ ಸರಿಪಡಿಸಿಕೊಳ್ಳುವಿಕೆ.
ನಟ್ಟಕಡಿ	ಆಳವಾಗಿ ಬೇರುಬಿಟ್ಟುದನ್ನು ಕಿತ್ತುವದು.
ನೀರುತೋರಿಸು	ದನಕರುಗಳಿಗೆ ನೀರು ಕುಡಿಸುವದು.
ಬಣವಿ ಒಟ್ಟು	ತೊಂಡಗಣಿಕೆಯುನ್ನು ಮಳೆ ಗಾಳಿಯಿಂದ ಜೋಪಾನವಾಗಿರಿಸಲು ಒಟ್ಟುವದು.
ಬಳದ	ಗಳೆ ಭೂಮಿಗೆ ಎಳೆಯುತ್ತ ಸಾಗುವದು.
ಬಿತ್ತು	ಬೀಜವನ್ನು ಹೊಲದಲ್ಲಿ ನಾಟಿಸುವದು.
ಮುಂಕಟ	ಬಿತ್ತನೆಯುನ್ನು ಹೆಚ್ಚು ಮೊದಲು ಮಾಡುವದು.
ಮೇದರ್ಸ	ಬೆಳೆಯಲ್ಲಿ ಹೆಚ್ಚು ಅಂಗಲಾಗುವದು. ಪರ್ಯಾ, ಹಳಕ.
ರವದಿ ಸುಲಿ	ದಂಟುಗಳ ಮೇಲಿನ ಸೊಪ್ಪೆ ಕಿತ್ತುವಮ.
ಸಾಲು ಕೂಡಿಸು	ಬಿತ್ತಿದ ಸಾಲುಗಳನ್ನು ಕುಂಟೆದಿಂಡಿನಿಂದ ಬಳಸಾಲು ಮಾಡುವದು.
ಸೂಡುಕಟ್ಟು	ತೆನಿಗಣಿಕೆಯುನ್ನು ಹಿಡಿಹಿಡಿಯಾಗಿ ಕಟ್ಟುವದು.
ಸೊಡ್ಡಹೊಡಿ	ತೂರುವಾಗ ಕಾಳುಗಳ ಮೇಲಿನ ಸುಂಕ ಹರಳು ಮಣ್ಣುಗಳನ್ನು ಸೊಡ್ಡಿನಿಂದ ಸ್ವಚ್ಛಮಾಡುವದು.

ಹಂತಿಹೊಡಿ	ಕಣದಲ್ಲಿ ಎತ್ತುಗಳನ್ನು ಸಾಲಾಗಿ ಕಟ್ಟಿ ಹಂತಿ ತುಳಿಸುವದು.
ಹರಗು	ಭೂಮಿಯನ್ನು ಹದಮಾಡುವಿಕೆ.
ಹರಿಹಾಕು	ಬೆಳೆಯನ್ನು ಕೊಯ್ದ ಮೇಲೆ ಅದನ್ನು ಒಣಗಲು ಹಾಕುವದು.
ಹಿಂಕಟ	ಬಿತ್ತುವಿಕೆಯನ್ನು ತಡಮಾಡುವದು. ಉ, ಹಿಂಗಟ, ಹಿಂಕಟ್ಟ.
ಹೆಂಟೆವೊಡೆ	ನೆಲ ಊಳುವಾಗ ಎದ್ದ ಹೆಂಟೆಗಳನ್ನೊಡೆಯುವದು.
ಹೊರು	ಹೊರೆ, ಪೆಂಡಿ, ಚೀಲಗಳನ್ನು ಹೊರುವದು.

ಯರಗಲ್ಲು: ಕಲ್ಯಾಣಿ ಚಾಲುಕ್ಯ ಶಿಲ್ಪಕೇಂದ್ರ

● **ಅ. ಸುಂದರ**

ಯರಗಲ್ಲು, ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನಲ್ಲಿ ಒಂದು ಸಣ್ಣಹಳ್ಳಿ. ಸಿಂದಗಿಗೆ ಸಮೀಪದಲ್ಲಿಯೇ(ಸುಮಾರು ೧೧ ಕಿ. ಮೀ. ಅಂತರದಲ್ಲಿ)ಇದ್ದು ರೂಢಿಯಲ್ಲಿ ಇದನ್ನು ಯರಗಲ್ ಬುಜರುಕ್ ಎಂದು ಕರೆಯುತ್ತಾರೆ. ಅಂದರೆ ಹಿರೇಯರಗಲ್ ಎಂದರ್ಥ.* ಇಲ್ಲಿ ಎರಡು ಪ್ರಾಚೀನ ದೇವಾಲಯಗಳಿವೆ. ಒಂದು ರಾಮಲಿಂಗೇಶ್ವರ ದೇವಾಲಯ, ಮತ್ತೊಂದು ಜೈನ ಬಸದಿ. ಇವಲ್ಲದೆ ಇತ್ತೀಚೆಗೆ ಕಟ್ಟಲಾದ ದೇವಾಲಯಗಳಲ್ಲಿ ಪ್ರಾಚೀನಮೂರ್ತಿಗಳಿವೆ. ಅವುಗಳು ಬನಶಂಕರಿ, ಕಾಳೀ ಮತ್ತು ಹನುಮಂತನ ದೇವಾಲಯಗಳು. ರಾಮಲಿಂಗೇಶ್ವರದೇವಾಲಯದಲ್ಲಿ ಮೂರು ಕನ್ನಡ ಶಾಸನಗಳಿವೆ. ಇವಲ್ಲದೆ ಒಂದು ವೀರಗಲ್ಲಿನ ಮೇಲೂ ಶಾಸನವಿದೆ. ಇವುಗಳಲ್ಲೆಲ್ಲ ರಾಮಲಿಂಗೇಶ್ವರದೇವಾಲಯ ಮತ್ತು ಜೈನ ಬಸದಿ ದುಸ್ಥಿತಿಯಲ್ಲಿದ್ದರೂ ಇಲ್ಲವೆ ಜೀರ್ಣೋದ್ಧಾರವಾಗಿದ್ದರೂ ಗಮನಾರ್ಹವಾಗಿವೆ. ರಾಮಲಿಂಗೇಶ್ವರ ದೇವಾಲಯವು ವಿಸ್ತಾರದಲ್ಲಿ ಬಹುದೊಡ್ಡದಿದ್ದು ಅಪರೂಪವಾಗಿದೆ. ಜೈನ ಬಸದಿಯಲ್ಲಿ ಸುಂದರವಾದ ಹಲವಾರು ಜೈನಮೂರ್ತಿಗಳಿವೆ.

೧. ರಾಮಲಿಂಗೇಶ್ವರ ದೇವಾಲಯ:

ರಾಮಲಿಂಗೇಶ್ವರದೇವಾಲಯವು ಊರಿನ ದಕ್ಷಿಣ ದಿಕ್ಕಿಗೆ ಸುಮಾರು ೬ ಕಿ. ಮೀ. ದೂರದಲ್ಲಿದೆ. ಇವರ ಪೂರ್ವ ಮತ್ತು ದಕ್ಷಿಣ ಬದಿಗಳಲ್ಲಿ ಬಹು ವಿಶಾಲವಾದ ಕಟ್ಟಿದ ಮೆಟ್ಟಿಲುಳ್ಳ ಒಂದು ಕೆರೆ ಇದೆ. ದೇವಾಲಯದ ಒಟ್ಟು ವಿಸ್ತಾರ ಸುಮಾರು ೨೩ ಮಿ. ಉದ್ದ ಮತ್ತು ೧೦ ಮಿ. ಅಗಲ. ಕೆರೆಯು ದೇವಾಲಯದ ಪೂರ್ವ ಮತ್ತು ದಕ್ಷಿಣ ಬದಿಯಲ್ಲಿದ್ದು ಅದು ಕ್ರಮವಾಗಿ ೪೩.೨೦ × ೧೩.೮೦ ಮತ್ತು ೩೩.೩೦ × ೧೩.೮೦ ಮಿ. ಉದ್ದಗಲವಾಗಿದೆ.

ಈ ದೇವಾಲಯು ನಿಜವಾಗಿಯೂ ಎರಡು ದೇವಾಲಯಗಳ ಸಮೂಹ. ಒಂದು ತ್ರಿಕೂಟಾಚಲ ಮತ್ತೊಂದು ದ್ವಿಕೂಟಾಚಲ ಕ್ರಮದಲ್ಲಿವೆ. ಒಟ್ಟಿನಲ್ಲಿ ಇದು ಪಂಚಕೂಟ ಕ್ರಮದ್ದಾಗಿದೆ. ಆದ್ದರಿಂದ ಕೆರೆಯೂ ಸೇರಿ ಈ ದೇವಾಲಯದ ವೈಶಾಲ್ಯತೆ ಒಡೆದೆದ್ದು ಕಾಣುತ್ತದೆ. **ಈ ಕಾಲದ ದೇವಾಲಯದ ವಾಸ್ತುಶಿಲ್ಪದಲ್ಲಿ ಈ ರೀತಿಯದು ಅಪರೂಪ.** ಆದರೆ ಹೊರಗೋಡೆಯ ಮೇಲೆ ಯಾವುದೇ

---

* ಇದರ ಪ್ರಾಚೀನ ಹೆಸರು 'ಎರಂಗಲ್' ಎಂದು ಶಾಸನಗಳಿಂದ ತಿಳಿದು ಬರುತ್ತದೆ.

ಅಲಂಕರಣವಿಲ್ಲದೆ ತೀರ ಸರಳವಾಗಿದೆ. ಸಾಮಾನ್ಯವಾಗಿ ಈ ಜಿಲ್ಲೆಯ ಇಂಡಿ ಮತ್ತು ಸಿಂದಗಿ ತಾಲೂಕುಗಳಲ್ಲಿಯ ೧೧–೧೨ನೇ ಶತಮಾನದ ಶಿಲಾದೇವಾಲಯಗಳಲ್ಲಿ ಮೂರ್ತಿಶಿಲ್ಪಗಳು ಇಲ್ಲವೆ ಕುಸುರಿನ ಕೆತ್ತನೆಗಳು ತೀರ ಅಪರೂಪ. ನಿಂಬಾಳ (ಇಂಡಿ ತಾ.)ದ ಶಂಕರಲಿಂಗ ಮತ್ತು ಚಟ್ಟರಕಿ (ಸಿಂದಗಿ ತಾ.) ದತ್ತಾತ್ರೇಯ ದೇವಾಲಯಗಳು ಇದಕ್ಕೆ ಹೊರತಾಗಿವೆ.

ದ್ವಿಕೂಟಾಚಲ ಮತ್ತು ತ್ರಿಕೂಟಾಚಲ ದೇವಾಲಯಗಳು ಅವುಗಳ ಮಧ್ಯದಲ್ಲಿಯ ಸುಮಾರು ೧೫ ಮಿ. ಉದ್ದದ ಕಟ್ಟೆಯಿಂದ ಸೇರಿಸಲ್ಪಟ್ಟಿವೆ. ದ್ವಿಕೂಟಾಚಲವು ಪೂರ್ವ–ಪಶ್ಚಿಮಾಭಿಮುಖವಾಗಿದೆ. ಎದುರುಬದರಿನಲ್ಲಿ ಗರ್ಭಗೃಹ. ಅದಕ್ಕೆ ಹೊಂದಿದ ಹಾಗೆ ಮುಂದೆ ಅಂತರಾಳವಿದ್ದು ಮಧ್ಯದಲ್ಲಿ ಇವುಗಳನ್ನು ಸೇರಿಸುವ ಸಭಾಮಂಡಪವಿದೆ. ಇದರ ಉತ್ತರ ಮತ್ತು ದಕ್ಷಿಣ ಬದಿಗಳಲ್ಲಿ ಮುಖಮಂಡಪಗಳಿವೆ. ದಕ್ಷಿಣ ಮುಖಮಂಡಪವನ್ನು ತ್ರಿಕೂಟಾಚಲದ ಮುಖಮಂಡಪವನ್ನು ಕಟ್ಟೆಯು ಸೇರಿಸಿದ್ದು ಅದು ಇವೆರಡೂ ದೇವಾಲಯಗಳಿಗೆ ಹೋಗಿ ಬರಲು ಹಾದಿಯಾಗಿದೆ. ಆದ್ದರಿಂದ ದ್ವಿಕೂಟಾಚಲದೇವಾಲಯಕ್ಕೆ ಉತ್ತರದ ಮುಖಮಂಡಪದಿಂದ ಪ್ರವೇಶದ್ವಾರವಿದೆ. ಮುಖಮಂಡಪಗಳ ಮುಂಭಾಗದಲ್ಲಿ ಎರಡು ಕಂಬಗಳು ಮತ್ತು ಕಕ್ಷಾಸನಗಳಿವೆ. ಕಕ್ಷಾಸನದ ಹೊರಮೈಯಲ್ಲಿ ಬಿಗಿತದ ಶೈಲಿಯಲ್ಲಿ ಕಮಲ ಹೂಗಳಸಾಲು ಚಿತ್ರವಿದ್ದು ಆಗ್ನೇಯದಿಕ್ಕಿನ ಮೂಲೆಯಲ್ಲಿ ಮಾತ್ರ ಒಂದು ಚಿಲುವಾದ ವೀರಭದ್ರನ ಉಬ್ಬು ಶಿಲ್ಪವಿದೆ. ಸಭಾಮಂಡಪದ ಗೋಡೆಗಳಲ್ಲಿ ಎಂಟು ಅರ್ಧಗಂಬಗಳು, ಮೂಲೆಗಳಲ್ಲಿ ನಾಲ್ಕು ಕಂಬಗಳಿವೆ. ನಾಲ್ಕು ಮಧ್ಯಗಂಬಗಳಲ್ಲಿ ಸಮಕಾಲೀನ ಶೈಲಿಯ ಪದ್ಧತಿಯಂತೆ ಅಡ್ಡ ಮಡಿಕೆಯುಳ್ಳ ಪೀಠ, ಕಾಂಡ, ಪದ್ಮಬಂಧ, ಕಲಶ, ತಾಡಿ, ಕುಂಭ, ಇದಜೆ ಮತ್ತು ಫಲಕಗಳಿವೆ. ಪಶ್ಚಿಮಭಾಗದ ಅಂತರಾಳ ಮುಂಭಾಗದಲ್ಲಿಯೂ ಬಾಗಿಲು ಚೌಕಟ್ಟಿದ್ದು ಅದರ ಎರಡು ಬದಿಗಳಲ್ಲಿ ಜಾಲಂಧ್ರಗಳಿವೆ. ಚೌಕಟ್ಟಿನ ಶಾಖೆಗಳು ತೀರ ಸರಳವಾಗಿವೆ. ಗರ್ಭಗುಡಿಯ ಚೌಕಟ್ಟಿನ ಶಾಖೆಗಳ ಒಂದರಲ್ಲಿ ದುಂಡುದುಂಡಾಗಿ ಸುತ್ತಿಕೊಂಡಿರುವ ಬಳ್ಳಿಯ ಚಿತ್ರವಿದೆ. ಗರ್ಭಗುಡಿಯಲ್ಲೂ ಮೂಲೆಗಳಲ್ಲಿ ಕಂಬಗಳಿವೆ. ಉತ್ತರ ಬದಿಯ ಗೋಡೆಯ ಮಧ್ಯದಲ್ಲಿ ಅಡ್ಡಕಲ್ಲು ಹಲಗೆಯಿದೆ. ನೆಲದ ಮೇಲೆ ಅನಂತರಕಾಲದ ಪೀಠಸ್ಥಲಿಂಗವಿದೆ.

ಈ ದೇವಾಲಯದ ಅಧಿಷ್ಠಾನ, ಗೋಡೆ, ಕಪೋತ, ಪ್ರಸ್ತರ ಮತ್ತು ಕಂಬಗಳು ಸಮಕಾಲೀನ ಸಾಮಾನ್ಯ ಲಕ್ಷಣಗಳಿಂದ ಕೂಡಿವೆ. ಇವರದೆ ವಿಶಿಷ್ಟವಾದ ಗಮನಾರ್ಹ ಲಕ್ಷಣಗಳಿಲ್ಲದಿದ್ದರೂ ಅಲ್ಲಲ್ಲಿ ಅಪರೂಪವಾಗಿ ಕಂಡುಬರುವ ಕೆಲವೇ ಕೆತ್ತನೆಗಳಿವೆ. ದ್ವಿಕೂಟಾಚಲದ ಸಭಾಮಂಡಪದ ನವರಂಗದ ಛತ್ತಿನಲ್ಲಿಯ ಅರಳಿದ ತಾವರೆಹೂವು ಅದರ ನಾಲ್ಕು ಮೂಲೆಗಳಲ್ಲಿ ಸಿಂಹಮುಖ, ಪಶ್ಚಿಮಭಾಗದ ಅಂತರಾಳದ ಬಾಗಿಲು ಚೌಕಟ್ಟಿನ ಮೇಲಿನ ಮಕರತೋರಣ ಪಟ್ಟಿಕೆಯಲ್ಲಿರುವ

ನಂದಿ ಹಾಗೂ ತಾಳ, ಡಮರುಗಳನ್ನು ಬಾರಿಸುತ್ತಿರುವ ಸೇವಕರ ಸಹಿತ ಚತುರ್ಭುಜ ಶಿವ, ಗರ್ಭಗೃಹದ ಬಾಗಿಲು ಚೌಕಟ್ಟಿನ ಬುಡದಲ್ಲಿ ದ್ವಾರಪಾಲಕರಾಗಿ ಕೋಲನ್ನು ಹಿಡಿದಿರುವ ಸೇವಕ, ಚಾಮರ ಸೇವಕಿ, ಹಾಗೂ ವೀರಭದ್ರ, ಪೂರ್ವ ಭಾಗವ ಅಂತರಾಳದ ಬಾಗಿಲು ಚೌಕಟ್ಟಿನ ಲಲಾಟಬಿಂಬದಲ್ಲಿರುವ ಗಣೇಶ, ಛತ್ತಿನಲ್ಲಿ ಅರಳಿದ ತಾವರೆ ಹೂವು, ಗರ್ಭಗುಡಿಯ ಬಾಗಿಲು ಚೌಕಟ್ಟಿನ ಶಾಖೆಗಳ ಮೇಲಿರುವ ಹಿಂಗಾಲುಗಳ ಮೇಲೆ ನಿಂತ ಸಿಂಹ--ಇವುಗಳ ಉಬ್ಬು ಶಿಲ್ಪಗಳಿವೆ.

ಅಂತರಾಳದ ಬಲಬದಿಯ ಗೋಡೆಯ ಮೇಲೆ ಸು. ೧೧ನೆಯ ಶತಮಾನದ ಕನ್ನಡ ಶಾಸನವಿದೆ.

ತ್ರಿಕೂಟಾಚಲ ದೇವಾಲಯದ ಮುಖಮಂಡಪವು ಸ್ವಲ್ಪ ಕಿರಿದಾಗಿದ್ದು ಇದರ ಮೂಲಕ ಸಭಾಮಂಡಪಕ್ಕೆ ಪ್ರವೇಶವಿದೆ. ಸಭಾಮಂಟಪದ ಉಳಿದ ಮೂರು ಬದಿಗಳಲ್ಲಿ ಒಂದೊಂದು ಅಂತರಾಳ ಸಹಿತ ಗರ್ಭಗೃಹವಿದೆ. ಸಭಾಮಂಟಪದ ಬಾಗಿಲು ಚೌಕಟ್ಟಿನಲ್ಲಿ ಪದ್ಮಗಳ ಶಾಖೆ, ವಜ್ರಾಕೃತಿಯ ತಾವರೆಹೂವಿನ ಶಾಖೆ, ಹೆಚ್ಚು ಕೆತ್ತನೆಯುಳ್ಳ ಉಬ್ಬುಗಂಬಗಳಿವೆ. ಲಲಾಟಬಿಂಬದಲ್ಲಿ ಗಣೇಶನ ಉಬ್ಬು ಶಿಲ್ಪವಿದೆ. ಸಭಾಮಂಡಪದ ನಾಲ್ಕು ಮೂಲೆಗಂಬಗಳು, ಗೋಡೆಗಳಲ್ಲಿಯ ಎಂಟು ಅರ್ಧಗಂಬಗಳು ಮತ್ತು ಮಧ್ಯದಲ್ಲಿ ನಾಲ್ಕು ಮಧ್ಯಗಂಬಗಳು ದ್ವಿಕೂಟಾಚಲ ದೇವಾಲಯದ ಮಾದರಿಯಲ್ಲಿವೆ. ಪೂರ್ವಬದಿಯ ಗೋಡೆಯಲ್ಲಿ ಎರಡು ದೇವಕೋಷ್ಠಗಳಿವೆ. ಪೂರ್ವ ಮತ್ತು ಪಶ್ಚಿಮಭಾಗಗಳಲ್ಲಿಯ ಅಂತರಾಳಗಳ ಮುಂಭಾಗದಲ್ಲಿ ಪ್ರವೇಶದ್ವಾರವಿದೆ. ಉತ್ತರದಿಕ್ಕಿಗೆದುರಾಗಿರುವ ಅಂತರಾಳಕ್ಕೆ ಮಾತ್ರ ಪ್ರವೇಶದ್ವಾರವಿಲ್ಲ. ಇದರಲ್ಲಿ ಎರಡು ದೇವಕೋಷ್ಠಗಳಿವೆ. ಅಂತರಾಳದಲ್ಲಿ ದೇವಕೋಷ್ಠಗಳಿರುವುದು ಅಪರೂಪ. ಪೂರ್ವಭಾಗದ ಗರ್ಭಗುಡಿಯ ಬಾಗಿಲುಚೌಕಟ್ಟಿನ ಶಾಖೆಗಳ ಬುಡದಲ್ಲಿ ಅರಳಿದ ಕಮಲಪುಷ್ಪದ ಉಬ್ಬು ಶಿಲ್ಪವಿರುವುದು ಮತ್ತು ಇದರ ಎದುರಿನ ಮತ್ತು ಉತ್ತರ ಭಾಗದ ಗರ್ಭಗೃಹಗಳಲ್ಲಿ ಮೂಲೆಗಂಬಗಳಿಲ್ಲದಿರುವುದು ಗಮನಾರ್ಹ.

ಸಭಾಮಂಡಪದ ನವರಂಗದ ಛತ್ತಿನಲ್ಲಿರುವ ತಾವರೆಹೂವು ಮತ್ತು ಪೂರ್ವ ಭಾಗದ ಅಂತರಾಳದಲ್ಲಿ ಸಪ್ತಮಾತೃಕೆ ಪಟ್ಟಿಕೆ ಇವೆ. ಎಲ್ಲ ಗರ್ಭಗೃಹಗಳಲ್ಲಿಯೂ ಅನಂತರ ಕಾಲದ ಪೀಠಸ್ಥಲಿಂಗವಿದೆ.

ಮುಖಮಂಡಪದ ಹಿಂಭಾಗದ ಎರಡು ಬದಿಗಳಲ್ಲಿ ಒಂದೊಂದು ೧೨ನೆಯ ಶತಮಾನದ ಕನ್ನಡ ಶಾಸನಗಳಿವೆ.

ಜೈನಬಸದಿ:

ಇದು ಹಳ್ಳಿಯೊಳಗೇ ಇದೆ. ಇದರ ಸುತ್ತಲೂ ಸುಮಾರು ೩ ಮಿ. ಎತ್ತರದ ಪ್ರಾಕಾರವಿದೆ. ಪೂರ್ವದ ಗೋಡೆಯಲ್ಲಿ ಮಹಾದ್ವಾರವಿದೆ. ಬಸದಿಯ ವಿಸ್ತಾರ

ಸುಮಾರು ೧೭.೫೦ × ೭.೫೦ ಮಿ. ಕಾಲಾಂತರದಲ್ಲಿ ಇದರ ಜೀರ್ಣೋದ್ಧಾರವಾಗಿದ್ದು ಮೂಲಬಸದಿಯು ಹೊರಭಾಗದಲ್ಲಿ ಅಧಿಷ್ಠಾನದ ಭಾಗ ಮತ್ತು ಒಳಭಾಗದಲ್ಲಿ ಮೊದಲಿನ ಸಭಾಮಂಡಪ (೫.೭೦ ಮಿ. ಚದುರ), ಅಂತರಾಳ ಮತ್ತು ಗರ್ಭಗೃಹಗಳು ಉಳಿದಿವೆ. ಸಭಾಮಂಡಪಕ್ಕೆ ಮುಂದೆ ಒಂದು ಕೋಣೆ (೬.೩೦×೭.೭೦ಮಿ) ಯನ್ನು ಸೇರಿಸಲಾಗಿದೆ. ಗೋಡೆಯ ಒಳಮೈಯಲ್ಲಿ ಕಮಾನುಗಳನ್ನು ಬಿಡಿಸಲಾಗಿದೆ.

ಸಭಾಮಂಡಪದ ಬಾಗಿಲುಚೌಕಟ್ಟನಲ್ಲಿ ತಾವರೆದಳಗಳ ಶಾಖೆ, ಚೌಕೋನದ ಉಬ್ಬುಗಂಬ, ಮತ್ತು ವಜ್ರಾಕೃತಿಯ ಕಮಲಪುಷ್ಪ ಶಾಖೆಗಳಿವೆ. ಲಲಾಟಬಿಂಬದಲ್ಲಿ ಎರಡು ಬದಿಗಳಲ್ಲಿ ವಿದ್ಯಾಧರರುಳ್ಳ ಜಿನಬಿಂಬವಿದೆ. ಚೌಕಟ್ಟಿನ ಮೇಲಿನ ಕಪೋತದಲ್ಲಿ ಹಾರುತ್ತಿರುವ ಹಂಸಗಳ ಸಾಲು ಇವೆ. ಇದರ ನವರಂಗದಲ್ಲಿ ಕೆಲವು ಶಿಲಾ ಮತ್ತು ಕಂಚಿನ ತೀರ್ಥಂಕರ ಮೂರ್ತಿಗಳನ್ನು ಈಗ ಇರಿಸಲಾಗಿದೆ. ಕಂಬಗಳೆಲ್ಲವೂ ರಾಮಲಿಂಗೇಶ್ವರ ದೇವಾಲಯದ ತರಹವೇ ಇವೆ. ಅಂತರಾಳ(೨.೫೦ × ೧.೯೦ ಮಿ.)ದ ಮುಂಭಾಗವು ತೆರವಾಗಿದೆ. ಇದರಲ್ಲಿ ಗರ್ಭಗುಡಿಯ ಬಾಗಿಲಿನ ಎರಡು ಬದಿಗಳಲ್ಲಿ ಅಪರೂಪದ ಹಾಗು ಚೆಲುವಾದ ದ್ವಾರಪಾಲಕರ ಶಿಲ್ಪಗಳಿವೆ. ಗರ್ಭಗೃಹ (೨.೧೦ ಮಿ. ಚದುರ)ದ ಬಾಗಿಲು ಚೌಕಟ್ಟು ಸಭಾಮಂಡಪದ ಬಾಗಿಲು ಚೌಕಟ್ಟಿನ ಹಾಗಿದೆ. ಒಳಗೆ ಒಂದರಮೇಲೊಂದು ಎರಡು ಪೀಠಗಳಿದ್ದು ಮೇಲಿನದರ ಮೇಲೆ ಪದ್ಮಾಸನದಲ್ಲಿ ಕುಳಿತ ತೀರ್ಥಂಕರನ ಒಂದು ಸುಂದರ ದುಂಡು ಶಿಲ್ಪವಿದೆ.


ಬಸದಿಯಲ್ಲಿಯ ಶಿಲ್ಪಗಳು:

೧) ಮೇಲೆ ಹೇಳಿದ ಹಾಗೆ ಗರ್ಭಗುಡಿಯಲ್ಲಿರುವ ತೀರ್ಥಂಕರನ ಶಿಲ್ಪವು (೧.೦೮ ಎ. × ೦.೯೮ ಅ. ಚಿತ್ರ 1,೨) ಪದ್ಮಾಸನದಲ್ಲಿದೆ. ಕೈಗಳು ಧ್ಯಾನಮುದ್ರೆಯಲ್ಲಿವೆ. ಸ್ವಲ್ಪಮಟ್ಟಿಗೆ ಉದ್ದನೆ ಮುಖ ಗುಂಗುರುಗೂದಲು ಉದ್ದನೆ ಕಿವಿ ದೃಢಕಾಯ ಹಿಂಬದಿಯಲ್ಲಿ ಒರಗುದಿಂಬು ಅದರ ಹಿಂದೆ ಮಕರತೋರಣದ ಬೆನ್ನುಪಟ್ಟಿಕೆ ಇವೆ.

೨) ಅಂತರಾಳದಲ್ಲಿರುವ ದ್ವಾರಪಾಲಕರ (೧.೧೩ ಮಿ. ಎ. × ೦.೪೮ ಮಿ.ಅ. ಚಿತ್ರ 1; ೧,೩) ಎರಡು ದುಂಡು ಶಿಲ್ಪಗಳು. ಎಲ್ಲ ರೀತಿಯಲ್ಲಿಯೂ ಒಂದೇ ತರಹವಾಗಿವೆ. ತ್ರಿಭಂಗದಲ್ಲಿದ್ದು ಒಂದು ಕೈಯಲ್ಲಿ ಚೌರಿ ಮತ್ತೊಂದು ಕೈಯಲ್ಲಿ ಬಹುಬೀಜ ಫಲವಿದೆ. ಕಿರೀಟ ಮಕುಟ ಚಕ್ರಕುಂಡಲ ರತ್ನಖಚಿತ ಕಂಠಾಭರಣಗಳು ಅಲಂಕರಿಸಿವೆ. ಗಂಭೀರಮುಖ, ಆಕರ್ಷಕ ಮೈಕಟ್ಟು, ಎರಡು ಶಿಲ್ಪಗಳ ಲಕ್ಷಣಗಳು ಸ್ವಲ್ಪಮಟ್ಟಿಗೆ ಸವೆದಿವೆ. ಎಡಬದಿಯ ದ್ವಾರಪಾಲಕನ ಶಿಲ್ಪದ ಎಡಗೈ ಮುರಿದಿದೆ.



ಚಿತ್ರ. ೧ ಯರಗಲ್ಲ : ೧,೩ ಜೈನ ಬಸದಿಯಲ್ಲಿಯ ದ್ವಾರಪಾಲಕರು.
೨. ಗರ್ಭಗುಡಿಯಲ್ಲಿಯ ತೀರ್ಥಂಕರ ಮೂರ್ತಿ



ಚಿತ್ರ. ೨ ಯರಗಲ್ಲ: ಜೈನ ಬಸದಿಯ ಸಭಾಮಂಟಪದಲ್ಲಿರುವ ಶಿಲಾಮೂರ್ತಿಗಳು

೨) i) ಸಭಾಮಂಡಪದಲ್ಲಿರುವ ಶಿಲಾಶಿಲ್ಪಗಳಲ್ಲಿ ಕೆಲವು ಗಮನಾರ್ಹವಾಗಿವೆ. ಅವುಗಳಲ್ಲಿ ಸುಪಾರ್ಶ್ವನಾಥನ ವಿಗ್ರಹ (ಚಿತ್ರ 2; ೧)ವು ಒಂದು. ತೀರ್ಥಂಕರನು ಖಡ್ಗಾಸನದಲ್ಲಿದ್ದಾನೆ. ತಲೆಯಲ್ಲಿ ಗುಂಗುರು ಕೂದಲು ಇರದೆ ಅದು ಸಪಾಟಾಗಿದೆ. ಹೀಗಿರುವುದು ೧೦ನೆಯ ಶತಮಾನದ ನಂತರ ಅಪರೂಪ. ನೀಳವಾದ ಮೈಕಟ್ಟು, ಎದೆಯ ಭಾಗಕ್ಕಿಂತ ತೊಡೆಯ ಭಾಗವು ಸ್ವಲ್ಪ ವಿಶಾಲವಾಗಿದ್ದರೂ ದೇಹವಿನ್ಯಾಸ ಆಕರ್ಷಕವಾಗಿದೆ. ಚೂಪಾದ ಮೂಗು, ತುಟಿಗಳು ದಪ್ಪವಾಗಿರದೆ ಪ್ರಮಾಣಬದ್ಧವಾಗಿದೆ. ಹಿಂಬದಿಯಲ್ಲಿ ಬಾಲ ಊರಿ ನಿಂತ ಸರ್ಪವು ತನ್ನ ಐದು ಹೆಡೆಗಳನ್ನು ತಲೆಯ ಮೇಲೆ ಸ್ವಲ್ಪ ಮುಂದೆ ಬಾಗಿ ಛತ್ರಿಯಂತೆ ಹಿಡಿಯದೆ ನೆಟ್ಟಗೆ ಬಿಚ್ಚಿದೆ. ಈ ರೀತಿಯ ಶೈಲಿಯು ಅಪರೂಪ. ಯಕ್ಷ ಯಕ್ಷಿಯರನ್ನು ತೋರಿಸಿಲ್ಲ. ಶಿಲ್ಪವು ಪ್ರಾಯಶಃ ೧೦ನೆಯ ಶತಮಾನದ್ದು.

ii) ಇನ್ನೊಂದು ಸುಪಾರ್ಶ್ವನಾಥ(ಚಿತ್ರ 2;೨)ನ ಮೂರ್ತಿ. ಎರಡು ಸಿಂಹ ಮುಖವುಳ್ಳ, ಸಿಂಹಪೀಠದ ಮೇಲೆ ತೀರ್ಥಂಕರನು ಪದ್ಮಾಸನದಲ್ಲಿ ಕುಳಿತಿದ್ದಾನೆ. ಎರಡು ಕೈಗಳು ಧ್ಯಾನ ಮುದ್ರೆಯಲ್ಲಿವೆ. ತಲೆಯ ಹಿಂಬದಿಯಲ್ಲಿ ಪ್ರಭಾಮಂಡಲವು ದುಂಡಾಗಿದ್ದು ಕಿರಣಗಳನ್ನು ತೋರಿಸಲಾಗಿದೆ. ಮೇಲೆ ಸರ್ಪದ ಐದು ಹೆಡೆಗಳು ಛತ್ರಾಕಾರದಲ್ಲಿ ಮುಂದೆ ಬಾಗಿವೆ. ಶೈಲಿಯಲ್ಲಿ ಸ್ವಲ್ಪ ಬಿಗಿತವಿದೆ. ಹೆಡೆಗಳಮೇಲೆ ಎರಡು ಕೊಡೆಗಳಿವೆ. ತೀರ್ಥಂಕರನ ಬೆನ್ನಿಗೆ ಒರಗುದಿಂಬು. ಇದಕ್ಕೆ ಮಕರ ಪಟ್ಟಿಕೆಯ ಆನಿಕೆಯಿದೆ. ಪೀಠದ ಎರಡು ಬದಿಗಳಲ್ಲಿ ಯಕ್ಷ ಯಕ್ಷಿಯರ ಮತ್ತು ಆನಿಕೆಯ ಮೇಲೆ ಎರಡು ಬದಿಗಳಲ್ಲಿ ಚಾಮರಧಾರಿಗಳಾದ ರಾಜರ ಚಿತ್ರಗಳಿವೆ. ಮೈಮಾಟದಲ್ಲಿ ಆಕರ್ಷಕ ಬಾಗು ಇಲ್ಲದೆ ಸ್ವಲ್ಪ ನೇರ ರೇಖೆಗಳ ವಿನ್ಯಾಸವೇ ಹೆಚ್ಚು. ಈ ಶಿಲ್ಪವು ಪ್ರಾಯಶಃ ೧೬ನೇ ಶತಮಾನದ್ದು.

೪) i) ಪಾರ್ಶ್ವನಾಥತೀರ್ಥಂಕರನ ಮೂರ್ತಿಗಳು ಎರಡು. ಇವೆರಡರಲ್ಲೂ ತೀರ್ಥಂಕರನು ಪದ್ಮಾಸನದಲ್ಲಿದ್ದು ಅವನ ಕೈಗಳೆರಡು ಧ್ಯಾನ ಮುದ್ರೆಯಲ್ಲಿವೆ. ಇವೆರಡು ಸ್ಥೂಲವಾಗಿ ನೋಡುವುದಕ್ಕೆ ಒಂದೇ ರೀತಿಯಂತಿದ್ದರೂ ಲಕ್ಷಣಗಳಲ್ಲಿ ಮತ್ತು ಶೈಲಿಯಲ್ಲಿ ಭಿನ್ನವಾಗಿವೆ. ಆದ್ದರಿಂದ ಇವೆರಡೂ ಬೇರೆ ಬೇರೆ ಕಾಲದವೆಂದು ತೋರುವುದು.

ಒಂದು (೦.೯೩ × ೦.೩೮ ಮಿ.) ದೇಹವಿನ್ಯಾಸದ ಶೈಲಿಯಲ್ಲಿ ಗರ್ಭಗೃಹದೊಳಗಿರುವ ತೀರ್ಥಂಕರನ ಮೂರ್ತಿಗೆ ಸಮೀಪವಾಗಿದೆ. ತೀರ್ಥಂಕರನು (ಚಿತ್ರ 3:೨) ಸರಳ ಪೀಠದಮೇಲೆ ಕುಳಿತಿದ್ದಾನೆ. ಹಿಂಬದಿಗೆ ಸಿಂಹಗಳುಳ್ಳ, ಮಕರ ಪಟ್ಟಿಕೆಯ ಆನಿಕೆ ಇದೆ. ಬೆನ್ನಿಗೆ ಒರಗುದಿಂಬು ಇದೆ. ತಲೆಯ ಹಿಂಬದಿಯಲ್ಲಿ ಯಾವ ಅಲಂಕರಣವಿಲ್ಲದ ಅಂಡಾಕೃತಿಯ ಪ್ರಭಾಮಂಡಲವಿದೆ. ಮೇಲೆ

ಮುಕ್ಕೊಡೆ, ಅದರ ಮೇಲೆ ಸರ್ಪವು ತನ್ನ ಏಳು ಹೆಡೆಗಳನ್ನು ಛತ್ರಾಕಾರದಲ್ಲಿ ಹಿಡಿದಿದೆ. ಹೆಡೆಗಳನ್ನು ಬಿಡಿಸಿದ್ದು ಸ್ವಲ್ಪ ಬಳುಕಿದ ಹಾಗಿದ್ದು ಪ್ರಾಚೀನ ಶೈಲಿಯನ್ನು ನೆನಪಿಗೆ ತರುತ್ತದೆ. ತೀರ್ಥಂಕರನ ಬದಿಗಳಲ್ಲಿ ಆನಿಕೆಯ ಮೇಲೆ ಕಿರೀಟ ಮತ್ತು ಆಭರಣಗವನ್ನು ಧರಿಸಿರುವ ರಾಜರುಗಳು ಚಾಮರಧಾರಿಗಳಾಗಿದ್ದಾರೆ. ಅವರ ಮತ್ತೊಂದು ಹಸ್ತವು ವರದ ಮುದ್ರೆಯಲ್ಲಿ ಇದೆ. ಇದರ ಕಾಲಮಾನ ಪ್ರಾಯಶಃ ೧೦ನೆಯ ಶತಮಾನದ ಆದಿಭಾಗ.

ii) ಮತ್ತೊಂದು (ಚಿತ್ರ 3;೧) ಮೂರು ಸಿಂಹಮುಖಗಳುಳ್ಳ ಸಿಂಹ ಪೀಠದ ಮೇಲಿದೆ. ಇದು ಶೈಲಿಯಲ್ಲಿ ಮತ್ತು ಲಕ್ಷಣಗಳಲ್ಲಿ ಮೇಲಿನದನ್ನು ಅಂದರೆ ೨ (ii)ನ್ನು ಹೋಲುತ್ತದೆ. ಆದ್ದರಿಂದ ಇದೂ ಅದೇ ಕಾಲದ್ದೆಂದು ನಿಸ್ಸಂಶಯ.

೫) ವರ್ಧಮಾನ ಮಹಾವೀರ ತೀರ್ಥಂಕರ(೦.೨೦ × ೦.೧೮ ಮಿ.)ನ ಮೂರ್ತಿಯು ಪದ್ಮಾಸನದಲ್ಲಿದೆ. ಕೈಗಳು ಧ್ಯಾನಮುದ್ರೆಯಲ್ಲಿವೆ. ಎರಡೂ ಬದಿಗಳಲ್ಲಿ ಖಡ್ಗಾಸನದಲ್ಲಿರುವ ಪಾರ್ಶ್ವನಾಥ ಮತ್ತು ಸುಪಾರ್ಶ್ವನಾಥನ ಮುಕ್ಕೊಡೆಗಳ ಮೇಲೆ ಒಂದೊಂದು ಕುಳಿತ ತೀರ್ಥಂಕರನ ಉಬ್ಬು ಶಿಲ್ಪಗಳಿವೆ. ಫಲಕದ ಮೇಲ್ಭಾಗದಲ್ಲಿ ನಾಲ್ಕು ಸಾಲುಗಳಲ್ಲಿ ಕೆಳಗಿನಿಂದ ಮೇಲಕ್ಕೆ ಕ್ರಮವಾಗಿ ೬,೬,೪ ಮತ್ತು ೨ ತೀರ್ಥಂಕರರ ಸಣ್ಣ ಸಣ್ಣ ಉಬ್ಬು ಶಿಲ್ಪಗಳಿವೆ. ಪೀಠದಮೇಲೆ ಸು. ೧೨ನೆಯ ಶತಮಾನದ ಕನ್ನಡ ಶಾಸನವಿದೆ.

೬) ಸಮಭಂಗದಲ್ಲಿರುವ ಮೂರು ತೀರ್ಥಂಕರರ ಒಂದು ಉಬ್ಬು ಶಿಲ್ಪದ ಚಿತ್ರಫಲಕವಿದೆ (ಚಿತ್ರ 3;೨). ಮೂವರ ತಲೆಯ ಮೇಲೂ ಒಂದೊಂದು ಮುಕ್ಕೊಡೆಯಿದೆ. ಆಚೆ ಈಚೆ ಬದಿಯಲ್ಲಿ ಚಾಮರಧಾರಿಗಳಾದ ರಾಜಪುರುಷರು. ಇವರ ಮೇಲೆ ಹಾವಿನಾಕಾರದ ಅಸ್ಪಷ್ಟಚಿತ್ರಗಳಿವೆ. ತೀರ್ಥಂಕರಶಿಲ್ಪದ ಬಹುಭಾಗ ಒಡೆದು ಹೋಗಿದೆ.

೭) ಇತ್ತೀಚಿನ ಕಾಲದಲ್ಲಿ ನಿರ್ಮಿತವಾದ ಬನಶಂಕರಿ ದೇವಾಲಯದಲ್ಲಿರುವ ಮೂರ್ತಿಯು ಶೈಲಿಯಲ್ಲಿ ಸುಮಾರು ೧೨ನೇ ಶತಮಾನದ್ದೆಂದು ಹೇಳಬಹುದು. ಬನಶಂಕರಿಯೆಂದು ಕರೆಯಲಾದ ಈ ಮೂರ್ತಿಯು ಚತುರ್ಭುಜ ದುರ್ಗಾದೇವಿ (೯೦ × ೪೫ ಸೆಂ. ಮಿ.) ಆಸನದ ಮೇಲೆ ಕುಳಿತಿದ್ದು ಎಡಗಾಲನ್ನು ಕೆಳಗೆ ಇಳಿಬಿಡಲಾಗಿದೆ. ಕೆಳಗಿನ ಮತ್ತು ಮೇಲಿನ ಬಲ ಎಡಗೈಗಳಲ್ಲಿ ಕ್ರಮವಾಗಿ ಖಡ್ಗ ಪಾನಪಾತ್ರೆ ಡಮರು ಮತ್ತು ತ್ರಿಶೂಲಗಳಿವೆ. ಕಿರೀಟ ಮಕುಟ ಚಕ್ರಕುಂಡಲ ಮತ್ತು ಹಾರ ಮುಂತಾದ ಆಭರಣಗಳನ್ನು ಚೆನ್ನಾಗಿ ಕೆತ್ತಲಾಗಿದೆ. ಶಿಲ್ಪವು ಪ್ರಮಾಣಬದ್ಧವೂ ಆಕರ್ಷಕವೂ ಆಗಿದೆ.



ಚಿತ್ರ. ೪. ಯರಗಲ್ಲ : ಜೈನ ಬಸದಿಯ ಸಭಾಮಂಟಪದಲ್ಲಿರುವ ಶಿಲಾಮೂರ್ತಿಗಳು

೮) ಕಾಳಿದೇವಾಲಯ (೧.೨ × ೦.೯೦ ಮಿ.)ದಲ್ಲಿ ಕುಳಿತ ಭಂಗಿಯಲ್ಲಿರುವ ದುರ್ಗಾಮೂರ್ತಿಯು ಮೇಲಿನದಕ್ಕೆ ಹೋಲುತ್ತದೆ. ಕೆಳ ಎಡಗೈಯಲ್ಲಿ ಪಾನ ಪಾತ್ರದ ಬದಲು ಗುರಾಣಿಯಿದೆ. ಇದು ಪ್ರಾಯಶಃ ೧೪-೧೫ನೆಯ ಶತಮಾನದ್ದು.

ಇತರ ಶಿಲ್ಪಗಳು:

ಕಾಳಿ ಮತ್ತು ಹನುಮಂತನ ಗುಡಿಗಳ ಹತ್ತಿರ ವಿಷ್ಣು ಶಿವ ಕಾಲಭೈರವ ಸಪ್ತಮಾತೃಕೆ ನಾಗರಾಜ ಶಿಲ್ಪಗಳು ಮತ್ತು ವೀರಗಲ್ಲುಗಳಿವೆ. ಇವುಗಳಲ್ಲಿ ಸಮ ಕಾಲೀನದ ಸಾಮಾನ್ಯ ಲಕ್ಷಣಗಳಿದ್ದರೂ ಒಂದೆರಡು ಗಮನ ಸೆಳೆಯುವಂಥಾದ್ದು. ಯಥಾಪ್ರಕಾರದ ಮೂರು ಚಿತ್ರ ಪಟ್ಟಿಕೆಗಳುಳ್ಳ ಒಂದು ವೀರಗಲ್ಲಿನಲ್ಲಿ ಕನ್ನಡ ಶಾಸನವಿದೆ. ಮೊದಲನೆ ಪಟ್ಟಿಕೆಯಲ್ಲಿ ಕುದುರೆಯ ಮೇಲೆ ಕತ್ತಿ ಢಾಲು ಹಿಡಿದು ಕುಳಿತ ವೀರನು ಆರುಜನ ಶತ್ರುಗಳನ್ನು ಎದುರಿಸುತ್ತಿರುವುದನ್ನು ಕೆತ್ತಲಾಗಿದೆ. ಮಧ್ಯದ ಪಟ್ಟಿಕೆ ಚಿತ್ರ ಸಾಮಾನ್ಯವಾದುದು. ಮೇಲಿನದರಲ್ಲಿ ಯುದ್ಧದಲ್ಲಿ ವೀರಮರಣ ಹೊಂದಿದವನು ಕುಳಿತಿದ್ದು ಅವನ ಬದಿಗಳಲ್ಲಿ ದೇವಕನ್ನಿಕೆಯರು ಸೇವೆಗೈಯು ತ್ತಿದ್ದಾರೆ. ಬಲಕ್ಕೆ ಶಿವಲಿಂಗವಿದ್ದು ಅದರ ಪೂಜೆಯನ್ನು ಋಷಿಯೊಬ್ಬನು ಮಾಡು ತ್ತಿದ್ದಾನೆ. ಎಡಕ್ಕೆ ಗಣೇಶನ ಚಿತ್ರವಿದೆ. ಈ ರೀತಿ ಇರುವುದು ಅಪರೂಪ.

ಮತ್ತೊಂದರ ಮೇಲಿನ ಪಟ್ಟಿಕೆಯಲ್ಲಿ ಮಡಿದ ವೀರನು ಸ್ವರ್ಗದಲ್ಲಿ ಶಿವಲಿಂಗ ವನ್ನು ಪೂಜಿಸುತ್ತಿದ್ದಾನೆ. ಅವನ ಎಡಕ್ಕೆ ಅಪರೂಪವಾಗಿ, ಕಾವಡಿ ಹೊತ್ತಿರುವ ಒಬ್ಬ ಮನುಷ್ಯನ ಚಿತ್ರವನ್ನು ತೋರಿಸಲಾಗಿದೆ.

ಇನ್ನೊಂದರಲ್ಲಿ ಎರಡೇ ಪಟ್ಟಿಕೆಗಳಿವೆ. ಚಿತ್ರಗಳು ಸ್ವಲ್ಪ ದೊಡ್ಡಪ್ರಮಾಣ ದಲ್ಲಿದ್ದು ಒಡೆದಿದ್ದು ಕಾಣುತ್ತವೆ. ಮೇಲಿನ ಪಟ್ಟಿಕೆಯಲ್ಲಿ ಸ್ವರ್ಗಸೇರಿದ ವೀರನು ಶಿವಲಿಂಗದ ಮುಂದೆ ಕೈಮುಗಿದು ಕುಳಿತಿದ್ದಾನೆ. ಅವನ ಹಿಂದೆ ಚಾಮರ ಸೇವಕಿ ಯೊಬ್ಬಳಿದ್ದಾಳೆ. ಶಿವಲಿಂಗವನ್ನು ನಂದಿಮುಖದ (ನಂದೀಶ್ವರ) ವ್ಯಕ್ತಿಯೊಬ್ಬನು ಪೂಜಿಸುತ್ತಿದ್ದಾನೆ.

ಶಾಸನಗಳು :

ರಾಮಲಿಂಗದೇವಾಲಯದಲ್ಲಿ ಮೂರು ಶಾಸನಗಳಿವೆ. ಜೈನಬಸದಿಯ ಸಭಾ ಮಂಡಪದಲ್ಲಿರುವ ಒಂದು ಶಿಲಾವಿಗ್ರಹದ ಮೇಲೂ ಮತ್ತು ಹನುಮಂತದೇವರ ಗುಡಿಯ ಆವರಣದಲ್ಲಿಯ ಒಂದು ವೀರಗಲ್ಲಿನ ಮೇಲೂ ಶಾಸನಗಳಿವೆ. ಇವಲ್ಲದೆ ಈ ಊರಿನ ಚಾವಡಿಯಲ್ಲೂ ಒಂದು ಶಾಸನವಿದೆ. ಇವೆಲ್ಲವೂ ಪ್ರಕಟವಾಗಿವೆ. ರಾಮಲಿಂಗ ದೇವಾಲಯದ ಒಂದು ಶಾಸನವು ಕಲ್ಯಾಣಚಾಲುಕ್ಯ ಚಕ್ರವರ್ತಿ ಆರನೆಯ

ವಿಕ್ರಮಾದಿತ್ಯನ ಕಾಲದ್ದು. ೧೧೯೮ರ ಈ ಶಾಸನದಲ್ಲಿ ಗ್ರಾಮದ ಕೆಲವು ವರ್ತಕ ಸಂಘಗಳು "ಸ್ವಯಂಭೂ ರಾಮೇಶ್ವರದೇವ"ರಿಗೆ ದಾನಮಾಡಿದ ವಿಷಯವಿದೆ. ಇನ್ನೊಂದು ಶಾಸನ (ಕ್ರಿ.ಶ. ೧೧೪೬)ದಲ್ಲಿ "ಸ್ವಯಂಭೂ ರಾಮೇಶ್ವರ" ದೇವಾಲಯವನ್ನು ಕೇಶಿರಾಜ, ದಾಸಿಮರಸ ಮತ್ತು ವಿಠ್ಠರಸರು ಕಟ್ಟಿಸಿದರೆಂದೂ ಮತ್ತು ಈ ದೇವಾಲಯಕ್ಕೆ ಮಹಾಮಂಡಳೇಶ್ವರ ಸೋವಿದೇವರಸ, ಪ್ರಭು ಅಪ್ಪರಸ, ನಂದಿಮರಸ ಮತ್ತು ಹೆಗ್ಗಡೆ ನಾಕರಸರು ಭೂಮಿದಾನಮಾಡಿದರೆಂದೂ ಹೇಳಿದೆ. ಇದೇ ಕಾಲದಲ್ಲಿ ದೇವಾಲಯದ ಪೂರ್ವ ಮತ್ತು ದಕ್ಷಿಣ ಬದಿಯಲ್ಲಿ ಶಾಂತಿಸೆಟ್ಟಿಯು ಕಟ್ಟಿಸಿದ ವಿಶಾಲವಾದ ಕೆರೆಯ ಜೀರ್ಣೋದ್ಧಾರಕ್ಕಾಗಿ ಇವರುಗಳು ಭೂಮಿ ದಾನ ಮಾಡಿದರೆಂದು ಮತ್ತೊಂದು ಶಾಸನದಲ್ಲಿ ಹೇಳಿದೆ.

ಈ ಶಾಸನಗಳಿಂದ ರಾಮಲಿಂಗ ದೇವಾಲಯವು ೧೧೯೮ರಲ್ಲಾಗಲೇ ಅಸ್ತಿತ್ವಕ್ಕೆ ಬಂದಿತ್ತೆಂಬುದು ಸ್ಪಷ್ಟ. ಇದನ್ನು ಕಟ್ಟಿಸಿದವರಲ್ಲಿ ಒಬ್ಬನಾದ ಕೇಶಿರಾಜನು ಮಹಾಸಾಮಂತಾಧಿಪತಿ ನಿಂಬಣ್ಣಯ್ಯನ ಮಗನೂ, ದಂಡನಾಯಕನೂ ಕೋಂಡಗುಳಿಯಲ್ಲಿ ಸೋಮನಾಥ ದೇವಾಲಯವನ್ನು ನಿರ್ಮಿಸಿ ೧೧೧೭ ರಲ್ಲಿ ಭೂದಾನ ಮಾಡಿದವನೂ ಆದ ಕೇಶಿರಾಜನಾಗಿರಬಹುದಾಗಿದ್ದು, ಇವನು ಯರಗಲ್ಲಿನಲ್ಲಿ "ಸ್ವಯಂಭೂ ರಾಮೇಶ್ವರ" ದೇವಾಲಯವನ್ನು ಕಟ್ಟಿಸಿದ ಸಮಯದಲ್ಲೇ ಅಲ್ಲಿಯ ವರ್ತಕ ಸಂಘಗಳು ದಾನ ಮಾಡಿದರೆಂದು ತಿಳಿದಲ್ಲಿ ತಪ್ಪೇನಾಗಲಾರದು. ಆದ್ದರಿಂದ ಈ ದೇವಾಲಯದ ಕಾಲಮಾನ ಸುಮಾರು ೧೧೯೮. ಇದೇ ಸಮಯದಲ್ಲೆ ಶಾಂತಿಶೆಟ್ಟಿಯು ಕೆರೆಯನ್ನು ಕಟ್ಟಿಸಿದ್ದಿರಬೇಕು.

ಮೇಲೆ ವರ್ಣಿಸಿದ ವರ್ಧಮಾನ ಮಹಾವೀರ ತೀರ್ಥಂಕರ (೫) ವಿಗ್ರಹದ ಪೀಠದ ಮೇಲಿನ ಶಾಸನವು ಅಕ್ಷರದ ಶೈಲಿಯ ಮೇಲೆ ೧೨ನೆಯ ಶತಮಾನದ್ದೆಂದು ಹೇಳಬಹುದು. ಇದು ನವಿಲುಗುಂದಾನ್ವಯದ ಚಂದವ್ವೆ ರೇಕವ್ವೆಯರ ಮತ್ತು ಅವರು ಆಚರಿಸಿದ ಸಕಳನೋಂಪಿ(ವ್ರತ)ಯ ಬಗ್ಗೆ ಹೇಳುತ್ತದೆ. ಇವರಿಂದ ಈ ವ್ರತದ ಸಂದರ್ಭದಲ್ಲಿ ಮಾಡಿಸಿದ ಮೂರ್ತಿ ಇದೆಂಬುದು ಸ್ಪಷ್ಟವಾಗುತ್ತದೆ.

ಹನುಮಂತನ ಗುಡಿಯ ಹತ್ತಿರವಿರುವ ವೀರಗಲ್ಲಿನ ಶಾಸನವು ಬಹಳ ಹಾಳಾಗಿದೆ. ಇದರ ಕಾಲಮಾನ ಕ್ರಿ. ಶ. ೭೭೭ (?) ಕನ್ನ, ಪೆರ್ಗಡೆ ಎಂಬ ಉಲ್ಲೇಖಗಳಿದ್ದು ಯುದ್ಧದ ವಿಷಯವಿದೆ.

ಚಾವಡಿಯಲ್ಲಿರುವ ಶಾಸನವು (ಕ್ರಿ. ಶ. ೧೨೦೮-೧೨೪೯) ದೇವಗಿರಿಯ ಸೇವುಣ ಸಿಂಘಣರಾಜನ ಕಾಲದ್ದು. ಇವನ ಮಹಾಮಂಡಳೇಶ್ವರ ಬೊಮ್ಮದೇವನು ಹೈಮೇಶ್ವರ ದೇವಾಲಯವನ್ನು ಕಟ್ಟಿಸಿ ಭೂಮಿದಾನ ಮಾಡಿದನೆಂದು ಹೇಳುತ್ತದೆ. ಆದರೆ ಈ ಗ್ರಾಮದಲ್ಲಿ ಈ ದೇವಾಲಯವನ್ನು ಇದುವರೆಗೆ ಗುರುತಿಸಲಾಗಲಿಲ್ಲ. ಮುಂದೆ ಶೋಧವಾದರೆ ಉಪಯುಕ್ತ.

ಜೈನಬಸದಿಯು ಗರ್ಭಗೃಹದಲ್ಲಿರುವ ತೀರ್ಥಂಕರ ಶಿಲ್ಪ ಮತ್ತು ದ್ವಾರ ಪಾಲಕರ ಶಿಲ್ಪಗಳ ಶೈಲಿಯ ಮೇಲೆ ಅವು ಸುಮಾರು ೧೦ನೇ ಶತಮಾನದ ಆದಿ ಭಾಗದವೆಂದು ಮೇಲೆ ಹೇಳಿದೆ. ಆದ್ದರಿಂದ ಬಸದಿಯು ಅದೇ ಕಾಲದ್ದೆಂದು ತಿಳಿಯ ಬಹುದು.

ಕೊನೆಯ ಮಾತು :

೧. ರಾಮಲಿಂಗ ದೇವಾಲಯವು ಚಿತ್ತಾಕರ್ಷಕ ಚಿತ್ರಗಳಿಂದ ಅಲಂಕೃತ ವಾಗಿರದಿದ್ದರೂ ಇದರ ವೈಶಾಲ್ಯತೆಯನ್ನು ಸರಿಗಟ್ಟುವ ಮತ್ತೊಂದು ದೇವಾಲಯವು ಇದೇ ತಾಲೂಕಿನ ಕಡ್ಲೇವಾಡದ ಸ್ವಾಮಿಲಿಂಗ (ಮೂಲಹೆಸರು ಸೋಮನಾಥ) ದೇವಾಲಯವನ್ನು ಬಿಟ್ಟು ಇಂಡಿ–ಸಿಂದಗಿ ಪ್ರದೇಶದಲ್ಲಿಯೇ ಇಲ್ಲ.

ದೇವಾಲಯಗಳಿಗೆ ಸೇರಿದಹಾಗೆ ಕಟ್ಟಿದ ಕೆರೆ ಇರುವುದು ಅಪರೂಪ. ಈ ತಾಲೂಕಿನ ಕುಣಿಕುಮಟಗಿ ಮತ್ತು ಕಕ್ಕಳಮೇಲಿಯಲ್ಲಿರುವ ದೇವಾಲಯಗಳಿಗೆ ಕಟ್ಟಿದ ಕೊಳಗಳಿವೆ. ಆದರೆ ಯರಗಲ್ಲಿನ ದೇವಾಲಯಕ್ಕೆ ತಕ್ಕುದಾದ ಕೊಳದಷ್ಟು ದೊಡ್ಡದು ಬೇರೆ ಯಾವುದೂ ಇಲ್ಲ. ಆದ್ದರಿಂದ ಈ ದೇವಾಲಯದ ವಾಸ್ತುಶಿಲ್ಪವು ಮಹತ್ವದ್ದು.

೨. ಜೈನ ಬಸದಿಯಲ್ಲಿರುವ ಪ್ರಾಚೀನ ಶಿಲ್ಪಗಳಲ್ಲಿ ೧೦–೧೨ನೇ ಶತಮಾನ ದಲ್ಲಿಯ ಶಿಲ್ಪಶೈಲಿಯ ಕನಿಷ್ಠ ಮೂರು ಪ್ರಭೇದಗಳನ್ನು ಗುರುತಿಸಬಹುದು. ಸು.೧೦ನೇ ಶತಮಾನದ ಒಂದೊಂದು ಸುಪಾರ್ಶ್ವನಾಥನ ಶಿಲ್ಪವೂ ಬೇರೆ ಬೇರೆ ಶೈಲಿಯದಾಗಿದ್ದು ಸು. ೧೨ನೇ ಶತಮಾನದ ಪಾರ್ಶ್ವನಾಥನ ಶಿಲ್ಪಗಳು ಮತ್ತೊಂದು ಶೈಲಿಯದಾಗಿವೆ. ಆದ್ದರಿಂದ ಮೂರ್ತಿ ಶಿಲ್ಪಶೈಲಿಯ ಅಭ್ಯಾಸಮಾಡುವವರಿಗೆ ಈ ಶಿಲ್ಪಗಳು ಒಳ್ಳೇ ಪ್ರಬೋಧಕವಾಗಿವೆ.

೩. ಇಲ್ಲಿ ಜೈನಧರ್ಮವು ಕನಿಷ್ಠ ೯–೧೨ನೆಯ ಶತಮಾನದಲ್ಲಿ ಒಳ್ಳೇ ಊರ್ಜಿತ ಸ್ಥಿತಿಯಲ್ಲಿತ್ತು. ಸುಮಾರು ೧೧ನೇ ಶತಮಾನದಿಂದ ಶೈವಧರ್ಮವು ಪ್ರಬಲ ವಾಗುತ್ತಾಬಂತೆಂಬುದು ರಾಮೇಶ್ವರ, ಹೈಮೇಶ್ವರದೇವಾಲಯಗಳು ಮತ್ತು ದುರ್ಗಾಮೂರ್ತಿಯು ಸ್ಪಷ್ಟಪಡಿಸುತ್ತವೆ.

ಈ ಗ್ರಾಮದ ಸಮೀಪದಲ್ಲಿರುವ ಸಿಂದಗಿಯು೨ ೧೧–೧೪ನೆಯ ಶತಮಾನ ದಲ್ಲಿ ಪ್ರಬಲವಾದ ಒಂದು ಕಾಳಾಮುಖಶೈವರ ಕೇಂದ್ರವಾಗಿತ್ತು. ಇದರ ಪರಿಸರ ದಲ್ಲೇ ಯರಗಲ್ಲು ಬರುತ್ತದೆ. ಆದ್ದರಿಂದ ಇಲ್ಲಿಯೂ ಶೈವಧರ್ಮ ಪ್ರಬಲವಾಗಲು ಅನುಕೂಲವಾಯಿತು. ಮತ್ತು ಸುಮಾರು ೧೦ ರಿಂದ ೧೩ನೆಯ ಶತಮಾನದ ವರೆಗೆ ಶಿಲಾದೇವಾಲಯಗಳ ನಿರ್ಮಾಣ ಚಟುವಟಿಕೆ ಇಲ್ಲಿ ಸತತವಾಗಿ ನಡೆಯುತ್ತಲಿತ್ತೆಂಬುದು ಜೈನಬಸದಿ, "ರಾಮೇಶ್ವರ" ಮತ್ತು "ಹೈಮೇಶ್ವರ" ದೇವಾಲಯಗಳಿಂದ ಕಾಣುತ್ತದೆ.

ಒಟ್ಟಿನಲ್ಲಿ ಯರಗಲ್ಲು ಆದಿ ಮಧ್ಯಕಾಲೀನ ಯುಗದ ವಾಸ್ತು ಮತ್ತು ಮೂರ್ತಿ ಶಿಲ್ಪತಜ್ಞರ ಅಭ್ಯಾಸಯೋಗ್ಯ ಮುಖ್ಯಸ್ಥಳಗಳಲ್ಲಿ ಒಂದು.*

ಅಡಿಟಿಪ್ಪಣಿಗಳು

೧ **ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಶನ್ಸ್**, ಸಂಪುಟ XX ಶಾಸನ ಸಂಖ್ಯೆ ೬೩, ೯೩, ೧೧೫, ೧೧೬, ೧೮೯ ಮತ್ತು ೨೭೭. ಮತ್ತು **ವಿಜಾಪುರ ಜಿಲ್ಲೆಯ ಶಾಸನ ಸೂಚಿ**, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೨ ಸುಂದರ ಅ; ೧೯೭೪ : "ಸಿಂದಗಿಯ ಪ್ರಾಚೀನ ಶಿಲಾಮೂರ್ತಿಗಳು" **ಕರ್ನಾಟಕ ಭಾರತಿ**, ಸಂಪುಟ ೬, ಸಂಚಿಕೆ ೨, ಪುಟಗಳು ೧೧೫–೧೮.

* ನಾನು ಕೇಂದ್ರ ಸರ್ಕಾರದ ಪುರಾತತ್ತ್ವ ಸರ್ವೇಕ್ಷಣ ವಿಭಾಗದಲ್ಲಿದ್ದು ೧೯೫೯ರಲ್ಲಿ ಸಿಂದಗಿ ತಾಲೂಕಿನಲ್ಲಿಯ ಪ್ರತಿಯೊಂದು ಹಳ್ಳಿಯಲ್ಲಿಯೂ ಪುರಾತತ್ತ್ವ ಅನ್ವೇಷಣೆ ಮಾಡುವಾಗ ಯರಗಲ್ಲನ್ನು ಪರೀಕ್ಷಿಸಿದೆ. ನನ್ನ ಅನ್ವೇಷಣೆ ಕಾರ್ಯದಲ್ಲಿ ಸಿಂದಗಿಯ ಹಾಗೂ ಸ್ಥಳಿಕ ಓಲೆಕಾರರು ತುಂಬ ಸಹಾಯ ಮಾಡಿದ್ದಾರೆ. ಜೈನಮೂರ್ತಿಗಳ ನೆಗಟಿವ್‌ಗಳನ್ನು ಡಾ. ಪಿ. ಗುರುರಾಜ ಭಟ್ಟರು ನನಗೆ ಚಿತ್ರಪ್ರತಿಗಳನ್ನು ಮಾಡಿಕೊಳ್ಳಲು ಕೊಟ್ಟು ಉಪಕರಿಸಿದ್ದಾರೆ. ನನ್ನ ಈ ಲೇಖನದ ಪ್ರತಿಯನ್ನು ಶ್ರೀಮತಿ ಭಾಗ್ಯಲಕ್ಷ್ಮಿ ಸುಂದರವರು ಸಿದ್ಧಪಡಿಸಿದ್ದಾರೆ. ಆದ್ದರಿಂದ ಈ ವಿಭಾಗಕ್ಕೂ ಮತ್ತು ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಶಾಸನ ಪದಸೂಚಿ

● ಚೆನ್ನಕ್ಕ ಎಲಿಗಾರ

ತ ವರ್ಗ

ಪ ವರ್ಗ

(ಮುಂದುವರಿಯುವುದು)

ಹದಿನೆಂಟುಸಂತತಿ :

ಶಾಸನಗಳಲ್ಲಿ ಸಾಮಾನ್ಯ ಶಬ್ದಗಳಲ್ಲದೆ ಪಾರಿಭಾಷಿಕ ಹಾಗೂ ವಿಶಿಷ್ಟಶಬ್ದಗಳೂ ಬಳಕೆಗೊಂಡಿರುತ್ತವೆ. ಇಂಥ ಶಬ್ದಗಳಿಗೆ ವಿದ್ವಾಂಸರನೇಕರು ಅರ್ಥವಿವರಣೆಗಳನ್ನು ಕಂಡಹಿಡಿದಿದ್ದರೂ ಇನ್ನೂ ಹಲವು ಶಬ್ದಗಳು ತಮ್ಮ ಅರ್ಥರಹಸ್ಯವನ್ನು ಬಿಟ್ಟುಕೊಟ್ಟಿಲ್ಲ. ಇಂಥ ಶಬ್ದಗಳಲ್ಲಿ "ಹದಿನೆಂಟುಸಂತತಿ"ಯೂ ಒಂದು. ಇತ್ತೀಚೆ ಶಾಸನದಲ್ಲಿ ಲಭಿಸಿದ ಆಧಾರವೊಂದರ ಬಲದಿಂದ "ಹದಿನೆಂಟುಸಂತತಿ"ಯ ಅರ್ಥ ಹಾಗೂ ವಿವರಣೆಗಳನ್ನು ನಿರೂಪಿಸುವುದು ಈ ಲೇಖನದ ಉದ್ದೇಶ.

ಸಂತಾನರು, ಸಂತಾತಿಗಳು, ಸಮಸ್ತಸಂತಾನರು, ಸಮಸ್ತಸಂತಾತಿಗಳು ಎಂಬಿವು 'ಹದಿನೆಂಟುಸಂತತಿ'ಗೆ ಪರ್ಯಾಯವಾಗಿ ಶಾಸನಗಳಲ್ಲಿ ಬಳಕೆಯಾದ ಪದಗಳು. ಈ ಪದಪ್ರಯೋಗ ಶಿಲಾಹಾರರ ಶಾಸನಗಳಲ್ಲಿ ಮಾತ್ರ ಕಂಡುಬರುವುದು ಒಂದು ವೈಶಿಷ್ಟ್ಯವೆಂದೇ ಹೇಳಬೇಕು.

ಕ್ರಿ. ಶ. ೧೧೭೧ ರ ಮುತ್ತಗೆ (ತಾಲೂಕ : ಬಾಗೇವಾಡಿ, ಜಿಲ್ಲೆ : ವಿಜಾಪುರ) ಶಾಸನ[೧] "ಹದಿನೆಂಟುಸಂತತಿ" ಪದದ ಅರ್ಥ ಹಾಗೂ ವಿವರಗಳನ್ನು ಹೀಗೆ ಸೂಚಿಸುತ್ತದೆ :

"ಮುತ್ತಮುವರಸ್ವಯಿದ ಸಮಸ್ತ ಪ್ರಶಸ್ತಿಸಹಿತಂ ಶ್ರೀಮನ್ಮಹಾಮಂಡಳೇಶ್ವರಂ ಇನ್ದರಸನುಂ। ಅಹುಮಲ್ಲರಸನುಂ। ವೀರ ಗೋಕರಸನುಂ। ಕಾಚರಸನುಂ। ಬೊಂತೆಯ ಗೋಣರಸನುಂ। ನಾಗಲದೇವಿಯ ಡಾಕರಸನುಂ। ಅಲಜವೆಡಂಗನ ಗೋಣರಸನುಂ। ಅಮ್ಮರಸನುಂ। ಹುಲಿಕೋಡ ಕೊಂತರಸನುಂ। ಹೊಟಗೆಯ ಚೌಡರಸನುಂ। ಅತ್ತಿನೂರಾಹುಮಲ್ಲರಸನುಂ। ಬುಟ್ಟಗೋಣರಸನುಂ। ಬಂದರಸನುಂ। ಬುಟ್ಟಂಮರಸನುಂ। ಧನಸಂಗ್ರ ಅರಸನುಂ। ನಾಗಾರ್ಜುನರಸನುಂ। ಗಂಡಮ ಹೆಂಮ್ಮಾಡಿಯರಸನುಂ। ಇನ್ತಿ **ಹದಿನೆಂಟುಸಂತಾತಿಯುಂ**"

ಈ ಹದಿನೆಂಟುಸಂತತಿಯುವರು ಮುತ್ತಗೆಯ ದಕ್ಷಿಣಾಮುಖ ಚೆನ್ನಕೇಶವ ದೇವರಿಗೆ ಮಣಿಯೂರ 'ಮನ್ನೆಯಪಣ'ವನ್ನು ಪುನರ್ಭರಣಮಾಡಿ ಕೊಟ್ಟುದು, ಈ ಶಾಸನದ ವಿಷಯ. ಇಲ್ಲಿ ಹದಿನೆಂಟುಸಂತತಿಯೆಂದಿದ್ದರೂ ಹದಿನೇಳು ಹೆಸರು

ಈ ಲೇಖನ ಬರೆಯುವಲ್ಲಿ ಮಾರ್ಗದರ್ಶನ ನೀಡಿದ ಡಾ. ಎಂ. ಎಂ. ಕಲಬುರ್ಗಿ ಅವರಿಗೆ ಕೃತಜ್ಞತೆಗಳು.

೧. SII. XV ೧೧೬.

ಗಳಿರುವುದನ್ನು (ಒಂದು ಮರೆತು ಬಿಟ್ಟಿರಬಹುದು) ಗಮನಿಸಬೇಕು. ಬಿಟ್ಟುಹೋದ ಇನ್ನೊಂದು ಹೆಸರನ್ನು ಹೇಳುವ ಶಾಸನವನ್ನು ಸಂಶೋಧಿಸಬೇಕು.

ಕ್ರಿ. ಶ. ೧೧೪೭ ರ ಮುತ್ತಗೆಯ ಇನ್ನೊಂದು ಶಾಸನ ಹದಿನೆಂಟುಸಂತತಿ ಯವರನ್ನು

"ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ವಂದಿಜನ ಕನಕಾಬ್ದಂ ಮಹಾಮಂಡಳೇಶ್ವರಂ ಕೊಪಣಪುರವರಾಧೀಶ್ವರಂ । ಸುವರ್ಣ್ನಗರುಡಧ್ವಜಂ । ವಿಜಯಲಕ್ಷ್ಮೀ ಸಂಶ್ರಿತ ದಕ್ಷಿಣಭುಜಂ। ಜೀಮೂತವಾಹನಾನ್ವಯಪ್ರಸೂತಂ । ಸೌಯ್ಯ್ರರಘುಜಾತಂ। ಸೆಳಜಿಕುಳ ಕಮಳಮಾರ್ತಂಡಂ। ಕದನಪ್ರಚಂಡಂ । ಕಾತ್ಯಾಯನೀಲಬ್ಧ ವರಪ್ರಸಾದಂ । ಸಹಜಾಮನೋಜಂ । ಮನ್ನೆಯವಲ್ಲಭಂ। ಭಯಲೋಭದುರ್ಲ್ಲಭಂ । ನಾಮಾದಿ ಸಮಸ್ತ ಪ್ರಶಸ್ತಿಸಹಿತಂ ಶ್ರೀಮತ್ ಡಾಕರಸನುಂ[।*] ಗೋಣರಸನುಂ[।*] ಅಮ್ಮರಸನುಂ । ಆಹುವಮಲ್ಲರಸನುವಿಸ್ತುವರು ಮುಖ್ಯವಾಗಿ **ಸಮಸ್ತ ಸಂತಾನರು**" ಎಂದು ವರ್ಣಿಸುತ್ತದೆ.[೨]

ಇಲ್ಲಿ "**ಹದಿನೆಂಟುಸಂತತಿ**"ಯವರನ್ನು '**ಸಮಸ್ತ ಸಂತಾನರು**' ಎಂದು ಕರೆದು ಡಾಕರಸ, ಗೋಣರಸ, ಅಮ್ಮರಸ, ಆಹವಮಲ್ಲರಸರನ್ನು ಮಾತ್ರ ಉಲ್ಲೇಖಿಸ ಲಾಗಿದೆ. ಉಳಿದವರನ್ನು 'ಇಸ್ತಿವರು ಮುಖ್ಯವಾಗಿ ಸಮಸ್ತಸಂತಾನರು' ಎಂಬುದ ರಲ್ಲಿ ಅಡಕಗೊಳಿಸಿದುದು ಕಂಡುಬರುತ್ತದೆ.[೩]

ಹದಿನೆಂಟುಸಂತತಿಯವರ ಹೆಸರುಗಳನ್ನು ಮುತ್ತಗೆಯ ಶಾಸನಕ್ಕಿಂತ ಭಿನ್ನ ವಾಗಿ ಹೇಳುವ ಕ್ರಿ. ಶ. ೧೧೬೯ರ ಯಡ್ರಾಮಿಯ ತ್ರುಟಿತ ಶಾಸನವೊಂದು ಹೀಗಿದೆ:[೫]

---

೨. SII. XV. ೩೫.

೩. ಈ ಸಮಸ್ತಸಂತಾನರು (= ಹದಿನೆಂಟುಸಂತತಿಯವರು) ಕಲ್ಯಾಣಚಾಲುಕ್ಯ ಇಮ್ಮಡಿ ಜಗದೇಕಮಲ್ಲನ ಸಮ್ಮುಖದಲ್ಲಿ (ಕ್ರಿ. ಶ. ೧೧೪೭ ರಲ್ಲಿ) ಮುತ್ತಗೆಯ ದಕ್ಷಿಣಾಮೂರ್ತಿ ಚೆನ್ನಕೇಶವ ದೇವಾಲಯಕ್ಕೆ ಮಣಿಯೂರ ಗ್ರಾಮದ 'ಮನ್ನೆಯವಣ'ನ್ನು ದಾನ ನೀಡಿದ ವಿಷಯ ತಿಳಿದುಬರುತ್ತದೆ (SII XV ೩೫).

೪. ಶಿಲಾಹಾರರು ಕೆಲವುಕಾಲ ಚಕ್ರವರ್ತಿಗಳಾಗಿದ್ದುದನ್ನೂ ನಂತರ ಕೆಲವರು ತರ್ದವಾಡಿ ನಾಡಿನ ಮನ್ನೆಯರಾಗಿದ್ದುದನ್ನೂ ಮುತ್ತಗೆ ಸಾಸನ (SII XV.35)

"ಸೆಳಜನೃಪಾನ್ವಯದರಸ
ಪ್ರ್ವಲಕಾಲಂ ಸಕಲ ಚಕ್ರವರ್ತಿಗಳಾದ
ಬ್ಬ್ರಳಿಕವೆ ಮನ್ನೆಯರಾದ
ಸ್ಸ್ರಲೆ ಕೆಲರೀ ತದ್ದವಾಡಿ ಸಾಯಿರಕೆಲ್ಲ"

ಎಂದು ತಿಳಿಸುತ್ತದೆ. ದಕ್ಷಿಣಕೊಂಕಣ, ಉತ್ತರಕೊಂಕಣ, ಕೊಲ್ಲಾಪುರ, ಅಕ್ಕಲಕೋಟೆ, ಅಥಣಿ, ಹಾವೇರಿ, ತೇರದಾಳಗಳಲ್ಲಿ ಶಿಲಾಹಾರರ ಬೇರೆ ಬೇರೆ ಶಾಖೆಗಳಿದ್ದವು.

೫. ಅಪ್ರಕಟಿತ : ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

"......ಹಯಾರೂಢ ಪ್ರೌಢರೇಖಾರೇ......ಲಕ್ಷ್ಮೀ.........ಕ ಭೃಗುಮತಾಚಾರ್ಯ ಮಂದರಧೈರ್ಯನೇಕಾಂಗವೀರ ಮದನಾವತಾರ......ಪಜಾತಿಗೋಷಣ ಚತುಸ್ಸಮುದ್ರ ಕೀರ್ತಿ ವಿಖ್ಯಾತಂ ಸೌಚನವಿಜಾತ.........ಭೈರವ ರಿಪುಮಂಡಳಿಕ ಸರಭಭೇರುಂಡ ಮೂವಾಣಿಗಂಡ ಆಶ್ರಿತಜನ ಭಿಂ......ಡಾಮಣಿಯಾಳಂ ಮುಸ್ನಿಜೀವ ಸೌಯ್ಯನಮಂ ಮೆಜ್ಯೆವ ವಯಿರಿ ಚತುರ ......ಭೂಪಾಳರ ಸಿತವಂ ಮೆಜವ ಸರಣಾಗತವಜ್ರಪಂಜರಂ ವೈರಿದಿಕ್ಕುಂಜರಜ......... ಸಮಸ್ತಪ್ರಸಸ್ತಿಸಹಿತಂ ಶ್ರೀಮನ್ಮಹಾಮಂಡಳೇಶ್ವರಂ ಅಲ್ಲಹುಲಿ......ನ ಮಗ ಕೊಮಾರ ಚಿದ್ದರಸ ರೇವರಸ ಕನ್ನರಸನ ಅಲ್ಲಿಯ್ಯನುಂ ವ.........ಹು ಮಲ್ಲರಸ ಸಿಂಬರಸ ಅಳಿಯ ಕಚ್ಚೆಯ ರಾಮದೇವ ಬಿಟ್ಟಿಯಲ್ಲಿ......ಸ ಸಹಿತವಾಗಿ **ಹದಿನೆಂಟುಸಂತಾತಿಗಳುಂ**"

ಹದಿನೆಂಟುಸಂತತಿಯುವರೆಂದು ಕರೆಯಿಸಿಕೊಳ್ಳಲ್ಪಡುತ್ತಿದ್ದ ಈ ಹದಿನೆಂಟು ಜನ (ಶಿಲಾಹಾರ) ಮಹಾಮಂಡಲೇಶ್ವರರು ಸಂಯುಕ್ತವಾಗಿ ರಾಜ್ಯಭಾರ ನಡೆಸುತ್ತಿದ್ದರೋ ? ಬೇರೆ ಬೇರೆಯಾಗಿ ಆಳುತ್ತಿದ್ದರೋ ? ಎಂಬುದು ವಿಚಾರಣೀಯ.

ಶಿಲಾಹಾರರ ಸಮಗ್ರಶಾಸನಗಳು ಪ್ರಕಟಗೊಂಡಲ್ಲಿ ಹದಿನೆಂಟುಸಂತತಿಯುವರೆಂದು ಪ್ರಖ್ಯಾತರಾದ ಈ ಹದಿನೆಂಟುಜನ ಮಹಾಮಂಡಲೇಶ್ವರರ ಬಗೆಗೆ ಹೆಚ್ಚಿನ ಸಂಗತಿಗಳು ತಿಳಿದುಬರುವುದರಲ್ಲಿ ಯಾವ ಸಂದೇಹವಿಲ್ಲ.

—**ಬಿ. ಆರ್. ಹಿರೇಮಠ**

ಶಾಸನಗಳಲ್ಲಿ ಪಿರಿಯಕ್ಕರ :

ವಿಸ್ತಾರವಾದ ಶಾಸನಸಾಹಿತ್ಯಪ್ರಪಂಚದಲ್ಲಿ ಅಂಶವೃತ್ತಗಳು ಬಳಕೆಗೊಂಡುದು ಅತಿ ವಿರಳ. ದೊರೆತ ಈ ಅಂಶಛಂದೋವೃತ್ತಗಳಲ್ಲಿ ಮೊದಲಸ್ಥಾನ ತ್ರಿಪದಿಗೆ ದೊರೆತರೆ (ಇದುವರೆಗೆ ಶಾಸನಗಳಲ್ಲಿ ೧೮ ತ್ರಿಪದಿಗಳನ್ನು ಗುರುತಿಸಲಾಗಿದೆ)[೧] ಎರಡನೆಯ ಸ್ಥಾನ ಪಿರಿಯಕ್ಕರಕ್ಕೆ ಸಲ್ಲುತ್ತದೆ. "ಈಗ ತಿಳಿದಮಟ್ಟಿಗೆ ಒಟ್ಟು ಹದಿಮೂರು ಶಾಸನಗಳಲ್ಲಿ ಹನ್ನೆರಡು ಪಿರಿಯಕ್ಕರಗಳಿದ್ದು, ಕೆಲವು ಪುನರುಕ್ತಗೊಂಡು ಇವುಗಳ ಒಟ್ಟು ಸಂಖ್ಯೆ ೨೦ ಕ್ಕೆ ಏರಿದೆ"[೨] ಎಂದು ತಿಳಿಸಿದ ಡಾ. ಕಲಬುರ್ಗಿಯವರು ಅವುಗಳ ಪಟ್ಟಿಯನ್ನು ಕೊಟ್ಟಿದ್ದಾರೆ.[೩]

---

೧. ಸಾಧನೆ : ಸಂಪುಟ ೭, ಸಂಚಿಕೆ ೧ ರಲ್ಲಿಯ ನನ್ನ ಲೇಖನದಲ್ಲಿ ೩೮ ತ್ರಿಪದಿಗಳ ಪಟ್ಟಿಯನ್ನು ಕೊಡಲಾಗಿದೆ. ಅವುಗಳ ಜೊತೆಯಲ್ಲಿ ಸಾಧನೆಯ ಸಂಪುಟ ೬. ಸಂಚಿಕೆ. ೨ ರಲ್ಲಿ ಬಿ. ಆರ್. ಹಿರೇಮಠ ಅವರು ಗುರುತಿಸಿದ ಪುನರುಕ್ತವಾದ ಒಂದು ತ್ರುಟಿತ ತ್ರಿಪದಿಯನ್ನೂ ಸೇರಿಸಿಕೊಳ್ಳಬೇಕು.

೨. ಶಾಸನ ವ್ಯಾಸಂಗ—೧. ಡಾ. ಎಂ. ಎಂ. ಕಲಬುರ್ಗಿ. ಪುಟ : ೮೬.

೩. ಅದೇ. ಪುಟ : ೮೬–೮೭.

ಶ್ರವಣಬೆಳ್ಗೊಳ (E. C. II, ೧೯೨೩ ಹಳೆಯ ಆವೃತ್ತಿ) ೧೬೩ ನೆಯ ಶಾಸನದಲ್ಲಿ ಕಲಬುರ್ಗಿಯವರು ಕೇವಲ ಒಂದು ಪಿರಿಯಕ್ಕರವನ್ನು ಗಮನಿಸಿದ್ದಾರೆ. ಆದರೆ ಅದೇ ಶಾಸನದಲ್ಲಿ ಇನ್ನೂ ೫ ಪಿರಿಯಕ್ಕರಗಳಿರುವುದನ್ನು ಹೊಸ ಆವೃತ್ತಿಯ ಸಂಪಾದಕರು ಗುರುತಿಸಿದ್ದಾರೆ. ಅಲ್ಲದೆ EC. II ರ ಹೊಸ ಆವೃತ್ತಿಯಲ್ಲಿ ಪ್ರಕಟವಾದ ಪರಮಗ್ರಾಮದ ಶಾಸನ[೪]ದಲ್ಲಿ 'ಆದಿಯಾಗಿಪುರ್ದಾರ್ಹತಸಮಯಕ್ಕೆ' 'ಗಂಗವಾಡಿಯ ಬಸದಿಗಳೆನಿತೊಳವನಿಂ' ಎಂಬೆರಡು ಪಿರಿಯಕ್ಕರಗಳನ್ನು ಅದೇ ಸಂಪಾದಕರು ಗಮನಿಸಿದ್ದಾರೆ (E.C. II ರ ೮೨, ೧೫೪, ೫೪೭, ೩೯೦, ೪೫೫ ನೆಯ ಶಾಸನಗಳಲ್ಲಿ ಇವೇ ಪದ್ಯಗಳಿವೆ). ಇವುಗಳ ಸಾಲಿಗೆ ಇನ್ನೂ ಮೂರು ಪಿರಿಯಕ್ಕರಗಳನ್ನು ಸೇರಿಸುವುದು ಈ ಲೇಖನದ ಉದ್ದೇಶ.

ಮೈಸೂರು ವಿಶ್ವವಿದ್ಯಾಲಯದವರು ಪ್ರಕಟಿಸಿದ EC. II ಹೊಸ ಆವೃತ್ತಿಯ ೧೬೩ ನೆಯ ನಂಬರಿನ ಶಾಸನದ ತಲೆಯ ಮೇಲೆ ಕೊಡಲಾದ ಇಂಗ್ಲೀಷ ಟಿಪ್ಪಣಿಯಲ್ಲಿ "Lines 117-157 engraved on the west face of the pillar is identical with Si. 27 of Ep. carn. vol. XII" ಎನ್ನುವ ವಾಕ್ಯ ನನ್ನ ಗಮನಕ್ಕೆ ಬಂದಿತು. ಆ ಸಾಲುಗಳಲ್ಲಿಯೇ ಇದ್ದುವು ಎರಡು ಪಿರಿಯಕ್ಕರಗಳು. EC. XII ರ ಸಿರಾ ತಾಲೂಕಿನ 27 ನೆಯ ನಂಬರಿನ ಕಾಮಗೊಂಡನಹಳ್ಳಿಯ ಶಾಸನ (982 A D.)ದಲ್ಲಿಯೂ ಇವೇ ಎರಡು ಪಿರಿಯಕ್ಕರಗಳು ಪುನರುಕ್ತಗೊಂಡಿದ್ದು ಅವುಗಳ ಪಾಠ ಹೀಗಿದೆ :

ಎಱಕಮಲ್ಲದೆ ಪೊಲ್ಲದಾಗೆಱಗಿ ದೊರೆಕಾಣ್ಮ ಕೊಳ್ಳ ತೆಱನಲ್ಲದೆ
ನೆಱೆಯೆ ಬರಲಿ ತಕ್ಕದಿಯಲ್ಲಿ ಬೀಸುವಲ್ಲಿಯೆ ಬಿಸಱಿಱಿದೆಯಲ್ಲ
ಪಱಿಯನಾದಿದ್ದೆ ಮುಂವಲ್ಲಿ ಕಡುಪಿನೊಳ್ ಮುರಿದಂ ಯಿಲ್ಲಿಲ್ಲಿಯ ಬಿನ್ನಣವ
ನ್ನೆಱೆಯೆ ಕಲ್ಪದೆ ಬೀರರ ಬೀರನಂ ಗಿಡಗಳಾಭರಣನಂ ನೆಡಿಕಲ್ಲ॥

ಎಱಗಲಱಿಯದೆ ಮೆಣ್ಪುಕಮ್ಮ ಗುಱ್ದು ಬಲಣಮಱಿಯವೆ ತಪ್ಪುಂಪನ್ದಂ
ತೆಱನನಱಿಯದೆ ಭಾಗಮನಿಕ್ಕಿಯುಂ ಮೂಱಡೆಗಲ್ಲಿದೆ ಕಟ್ಟಾಡಿಯುಂ
ಮುಱಿಯ ಪಾಯಿಸಿಪನರೆಯುಂ ಕೊನ್ದು ಧರೆಗೆಡೆ ತೆಗೆಗೆಡೆಯಿವನೆನಿಸಿಸದೆ
ನೆಱೆಯೆ ಕಡುಜಾಣನೆನಿಸಲ್ಕೆ ಬಕ್ಕರ್ಣಮೆ ಗೆಡೆಗಳಾಭರಣನಂ ಕಲ್ಲದನ್ನಂ ॥[೬]

---

೪. E.C. II (ಹೊಸ ಆವೃತ್ತಿ) ಸಂ. ೫೬೮, ಮಿತಿಯನ್ನು ಹೇಳಿಲ್ಲ.

೫. ಅದೇ. ಪುಟ: ೮೦೬.

೬. ಈ ಪದ್ಯಗಳಿಗೆ EC. II ೧೬೩ನೆಯ ಶಾಸನದಲ್ಲಿ ಕೆಲವು ಗಮನಾರ್ಹ ಪಾಠಾಂತರಗಳು ಕಂಡುಬರುತ್ತವೆ.

ಇವುಗಳಲ್ಲದೆ ಕಲ್ಯಾಣಚಾಲುಕ್ಯ ತ್ರೈಲೋಕ್ಯಮಲ್ಲದೇವನ ಮಾಂಡಳಿಕ ತ್ರೈಲೋಕ್ಯಮಲ್ಲ ವೀರಶಾನ್ತರದೇವನು ಸಾನ್ತಳಿಗೆಸಾಸಿರ್ವನ್ನಾಳುತ್ತಿರುವಾಗ ರಚಿತವಾದ ಹುಂಚಶಾಸನ¹ದಲ್ಲಿ (ಕ್ರಿ. ಶ. ೧೦೬೨) ಬರುವ ಇನ್ನೊಂದು ಪಿರಿಯಕ್ಕರ ಹೀಗಿದೆ:

ಈಎರೆಂದವಶ್ತಿ ಪಲ್ಲಿರಿದೆರವಪ ಬೂತಾಗಿ ಬಿಟ್ಟಿಪಲ್ಲೆಜ್ಜೆಗೆಟ್ಟು
ಕಾವರೆನ್ನೆರ ಸರಣೆಂದು ಬಂದವಪತ್ರಾರ್ಗವಂಜಿ ಕುಱಿವಕ್ಕುಂ ಬಾಳ್ವೆನೆಂದು
ಸಾವುಬಂಗದಾ ಮುಱಿವಕ್ಕುಂ ಬಟ್ಟಿ ಕಲಾಬಡಿಯುಂ ನಿಡ್ಡೆಪಟ್ಟಯದನ್ನು
ಜೀವಂ ಜೀವಕೆ ತೂಕಕ್ಕೆ ಬಾರದ ಕಿಳ್ಪಟ್ಟು ಬರಬೇಕೆ ಬೀರದೇವಾ ॥

ಬೀರದೇವನೆಂಬವನ ವೀರತ್ವದ ವರ್ಣನೆ ಈ ಪದ್ಯದಲ್ಲಿದೆ.

ಈ ಪಿರಿಯಕ್ಕರದಲ್ಲಿ ಛಂದಸ್ಸಿಗೆ ಚ್ಯುತಿ ಬಂದಿಲ್ಲ. ೩ನೆಯ ಪಾದದ ಕೊನೆಯ ಗಣಮಾತ್ರ ರುದ್ರವಾಗಿರದೆ ೫ ಅಂಶಗಳ ಗಣವಿರುವುದನ್ನು ಗಮನಿಸಬೇಕು.

ಒಟ್ಟಿನಲ್ಲಿ ಈಗಿನವುಟ್ಟಿಗೆ ಹದಿನಾರು ಶಾಸನಗಳಲ್ಲಿ ಹದಿನೆಂಟು ಪಿರಿಯಕ್ಕರಗಳಿದ್ದು, ಕೆಲವು ಪುನರುಕ್ತಗೊಂಡು ಇವುಗಳ ಸಂಖ್ಯೆ ೨೦ ಆಕ್ರಮಿಸಿದೆ.

—ಹನುಮಾಕ್ಷಿ ಚಂದಪ್ಪ ಗೋಗಿ

ಶರಣರು ಮತ್ತು ಶಾಸನಗಳು :

ಶರಣರ ಬಗೆಗೆ ಶಾಸನಗಳು ತೀರ ವಿರಳ. ಅದರಲ್ಲೂ ನೇರವಾಗಿ ಶರಣರನ್ನೇ ಕುರಿತ ಇಡೀ ಶಾಸನಗಳಂತೂ ಇನ್ನೂ ವಿರಳ. ಶರಣರ ಬಗೆಗೆ ಶಾಸನಗಳು ಏಕೆ ಇಲ್ಲ? ಎಂದು ಪ್ರಶ್ನಿಸಿಕೊಂಡು ಕೆಲವು ಸಬೂಬುಗಳನ್ನು ಕೊಟ್ಟುಕೊಳ್ಳುತ್ತೇವೆ. ಶರಣರು ಶಾಸನಗಳನ್ನು ಬರೆಸಲು ವಿರೋಧವಾಗಿದ್ದರೆಂದೋ ಇತಿಹಾಸದಲ್ಲಿ ತಮ್ಮ ಹೆಸರುಗಳನ್ನು ಬಿಟ್ಟುಹೋಗುವ ಇಚ್ಛೆ ಅವರಿಗಿರಲಿಲ್ಲವೆಂದೋ ಅಗ್ಗದ ಪ್ರಚಾರ ಅವರಿಗೆ ಬೇಕಿರಲಿಲ್ಲವೆಂದೋ ಕಾರಣಕೊಟ್ಟು ಸುಮ್ಮನಾಗುತ್ತೇವೆ. ವಾಸ್ತವಸಂಗತಿ ಬೇರೆಯೇ ಇದೆ. ನಾವು ಇನ್ನೂ ಬೇರೆ ದಿಸೆಯಲ್ಲಿ ಆಲೋಚಿಸುವುದು ಅಗತ್ಯ.

ಶಾಸನೋಕ್ತ ಶರಣರು ಕೇವಲ ಆರುಮಂದಿ. ಜೇಡರ ದಾಸಿಮಯ್ಯ, ಬಸವಣ್ಣ ಸಿದ್ಧರಾಮ, ಏಕಾಂತರಾಮಯ್ಯ, ಅಮುಗಿ ದೇವಯ್ಯ, ರೇವಣಸಿದ್ಧ. ಈ ಆರು

---

೧. EC.VIII ನಗರ ೫೮ ಹುಂಚ, ಕ್ರಿ. ಶ. ೧೦೬೨

ಮಂದಿಗಳ ಹೆಸರು ಶಾಸನಗಳಲ್ಲಿ ಪ್ರಾಸಂಗಿಕವಾಗಿ ಬಂದಿದೆ. ಸಿದ್ಧರಾಮನ ಹೆಸರನ್ನು ಸೂಚಿಸುವ ಇಪ್ಪತ್ತುಮೂರು ಶಾಸನಗಳೇನೋ ಸಿಗುತ್ತವೆ. ಆದರೆ ಅವು ವಾಸ್ತವವಾಗಿ ಸೊನ್ನಲಿಗೆಯ ಕಪಿಲಸಿದ್ಧ ಮಲ್ಲಿಕಾರ್ಜುನದೇವರಿಗೆ ದತ್ತಿ ಬಿಟ್ಟ ಸಂಗತಿಯನ್ನು ಹೇಳುತ್ತವೆ. ಸಿದ್ಧರಾಮ ಮೂಲತಃ ದೇವಾಲಯಗಳನ್ನು ಕಟ್ಟಿಸುವ ಕೆರೆಗಳನ್ನು ನಿರ್ಮಿಸುವ ಈ ದಿಶೆಯಲ್ಲಿ ನಿರತನಾಗಿದ್ದ ಕಾಯಕಯೋಗಿ. ಸಾಲದ್ದಕ್ಕೆ ಕಪಿಲಸಿದ್ಧ ಮಲ್ಲಿಕಾರ್ಜುನನ ಪರಮಭಕ್ತ.

ದತ್ತಿ ಕೊಡುವವರು ಸಾಮಾನ್ಯವಾಗಿ ಉಳ್ಳವರು. ತಮಗೆ ಒಳ್ಳೆಯದಾಗಲೆಂದೋ, ಹರಕೆಯ ಕಾರಣವಾಗಿಯೋ, ಕೀರ್ತಿಯ ಲಾಲಸೆಯಿಂದಲೋ, ಅಗ್ಗಳಿಕೆ ಮೂಲಕವಾಗಿಯೋ ದತ್ತಿಗಳನ್ನು ಬಿಡುತ್ತಾರೆ. ರಾಜನಂತೂ ತನ್ನ ಪ್ರಭಾವ, ಪ್ರತಿಷ್ಠೆ, ಉದಾರತೆ, ಪರಂಪರೆಯ ಮೌಲ್ಯಗಳಿಗೆ ತಲೆಬಾಗುವಿಕೆ ಇತ್ಯಾದಿ ಕಾರಣವಾಗಿ ದತ್ತಿ ಬಿಡುತ್ತಾನೆ. ಇವು ಶಾಸನಗಳಲ್ಲಿ ಲಿಖಿತವಾಗುತ್ತವೆ. ಅಲ್ಲದೆ ಯೋಧರು ಅನೇಕ ಕಾರಣಗಳಿಗಾಗಿ ಆತ್ಮಾರ್ಪಣೆ ಮಾಡಿಕೊಳ್ಳುವುದೂ ಉಂಟು. ಇಂತಹ ಸಂಗತಿಗಳು ಶಾಸನವಲ್ಲಿ ಲಿಖಿತವಾಗುತ್ತವೆ.

ಸಿದ್ಧರಾಮ ಸ್ಥಾವರಲಿಂಗಪೂಜೆಯನ್ನು ನಿರಾಕರಿಸುವುದರ ಮೂಲಕ ಇಷ್ಟಲಿಂಗ ಪೂಜೆಯನ್ನೂ ಒಪ್ಪಿಕೊಂಡವನು. ಈ ಮೂಲಕ ಆತ ದೇವಾಲಯಗಳ ನಿರಾಕರಣೆಯನ್ನೂ ಮಾಡಿದ. ದೇವಾಲಯ ಸಾಮಾಜಿಕ ಅಸಮತೆಗೆ ಕಾರಣ ಆಗುತ್ತದೆ. ಅಲ್ಲದೆ ಅದು ಜಡಗೊಂಡ ಮೌಲ್ಯಗಳನ್ನು ಪ್ರತಿನಿಧಿಸುತ್ತದೆ. ಸ್ಥಾವರವಾದದ್ದನ್ನು ವಿರೋಧಿಸುವ ಪ್ರವೃತ್ತಿ ಶರಣರದು. ಶರಣರನ್ನು ಒಪ್ಪಿಕೊಂಡ ಅನುಯಾಯಿಗಳೂ ಕೂಡ ಶರಣರ ಈ ಧೋರಣೆಯನ್ನು ಮನ್ನಿಸಲಿಲ್ಲ. ಹರಿಹರನ ಬಸವಣ್ಣ ಸ್ಥಾವರಲಿಂಗಪೂಜೆ ಇತ್ಯಾದಿಗಳನ್ನೇ ಕಂಡವನಾಗಿ ಅಥವಾ ತಾನೇ ಅಂತಹವನಾಗಿ ಬಸವಣ್ಣನನ್ನು ಆ ರೀತಿ ಚಿತ್ರಿಸಿರುವನೋ ಏನೋ ತಿಳಿಯದು. ಹರಿಹರನ ಈ ನಿರೂಪಣೆಯಾಗಲಿ ರಾಘವಾಂಕನ ಆದಯ್ಯನ ಚಿತ್ರಣವಾಗಲಿ (ಜೈನ ಬಸದಿಯಲ್ಲಿ ಲಿಂಗ ಪ್ರತಿಷ್ಠಾಪಿಸುವುದು) ಸ್ಥಾವರಲಿಂಗಪೂಜೆಗೆ, ಮೌಲ್ಯಗಳಿಗೆ ಕೊಟ್ಟ ಪ್ರಾತಿನಿಧ್ಯವನ್ನು ಹೇಳುತ್ತದೆ. ಶರಣರನ್ನು ಅರಿತ ಹರಿಹರ, ರಾಘವಾಂಕ ಕವಿಗಳಲ್ಲಿಯೇ ಈ ರೀತಿಯ ಪುರಸ್ಕಾರವಿದೆ.

ಸಿದ್ಧರಾಮನ ಬಗೆಗೆ ತಿಳಿಸುವ ೨೩ ಶಾಸನಗಳು ಸಿದ್ಧರಾಮನ ಮೇಲೆ ಯಾವ ಬೆಳಕನ್ನೂ ಚೆಲ್ಲುವುದಿಲ್ಲ. ವಾಸ್ತವವಾಗಿ ಸಿದ್ಧರಾಮನ ದೈವವಾಗಿದ್ದ ಆ ಕಪಿಲಸಿದ್ಧ ಮಲ್ಲಿಕಾರ್ಜುನದೇವರಿಗೆ ದತ್ತಿಬಿಟ್ಟ ವಿಷಯದಲ್ಲಿ ಸಿದ್ಧರಾಮನ ಹೆಸರೂ ಲಿಖಿತವಾಗಿದೆ. ಅಲ್ಲದೆ ಆತನ ವಚನಗಳು ಈ ತರದ ಶಾಸನಗಳಲ್ಲಿ ಕಾಣಬರುತ್ತವೆ. ಕಪಿಲಸಿದ್ಧ ಮಲ್ಲಿಕಾರ್ಜುನ ಸಿದ್ಧರಾಮನ ದೈವವಾಗಿದ್ದು ನಂತರ ಸಿದ್ಧರಾಮನಿಂದ ತಿರಸ್ಕೃತವಾದವನು. ಇದಕ್ಕೆ ಸಾಕ್ಷಿ ಆತ ಇಷ್ಟಲಿಂಗ ಪೂಜಕನಾದದ್ದೇ. ಅಲ್ಲದೆ ಆತನ

ವಚನಗಳೂ ಇವಕ್ಕೆ ಪುರಾವೆಯಾಗಿವೆ. ಸಿದ್ಧರಾಮನೇನೋ ಚೆನ್ನಮಲ್ಲಿಕಾರ್ಜುನ ದೇವಾಲಯವನ್ನೂ, ಕಪಿಲಸಿದ್ಧಮಲ್ಲಿಕಾರ್ಜುನನ್ನೂ (ಸ್ಥಾವರಲಿಂಗ) ನಿರಾಕರಿಸಿದ. ಆದರೆ ಆತನನ್ನು ಮನ್ನಿಸುವ ಅನುಯಾಯಿಗಳು ಸಿದ್ಧರಾಮನ ಈ ಆಚರಣೆ, ಧೋರಣೆಯನ್ನು ಮಾನ್ಯಮಾಡಲಿಲ್ಲ. ಅದರಿಂದಲೇ ಕಪಿಲಸಿದ್ಧ ಮಲ್ಲಿಕಾರ್ಜುನ ದೇವರಿಗೆ ದತ್ತಿಬಿಟ್ಟ ಸಂಗತಿ ಮೇಲಿಂದ ಮೇಲೆ ಶಾಸನಗಳಲ್ಲಿ ಉಲ್ಲೇಖ ಆಗುತ್ತದೆ. ಇವರಿಗೆ ಚೆನ್ನಮಲ್ಲಿಕಾರ್ಜುನ ದೇವಾಲಯಕ್ಕೆ ದತ್ತಿಬಿಟ್ಟ ಸಂಗತಿಯನ್ನು ಹೇಳಿ ಕೊಳ್ಳುವುದರಲ್ಲಿ ಅಗ್ಗಳಿಕೆಯಿದೆ ಎಂಬ ಭಾವನೆ ಇವರಿಗಿದೆ. ಆದರೆ ಶರಣರ ಧೋರಣೆ ಗಳನ್ನು ನಾವು ಮಾನ್ಯ ಮಾಡಲಿಲ್ಲವಲ್ಲ ಎಂಬ ಆಲೋಚನೆಯೂ ಇಲ್ಲ, ಪ್ರಜ್ಞೆಯೂ ಇಲ್ಲ.

ಸ್ಥಾವರಲಿಂಗಪೂಜೆಯ ನಿರಾಕರಣೆಯೇ ಆಗಿರಲಿ ಅಥವಾ ದೇವಾಲಯ ಸಾಮಾಜಿಕ ಅಸಮತೆಗೆ ಎಡೆಕೊಡುತ್ತದೆ ಎಂಬ ಆಲೋಚನೆಯೇ ಇರಲಿ, ಇದು ನಮ್ಮ ಸಮಾಜದ ಜನಗಳಿಗೆ ಮುಖ್ಯ ಎಂದು ಅನ್ನಿಸಲಿಲ್ಲ. ಇವರಿಗೆ ಉತ್ಸವಗಳು ಬೇಕು, ಪ್ರತಿಷ್ಠೆ ಬೇಕು, ಉಳ್ಳವನು ಎನ್ನಿಸಿಕೊಳ್ಳುವ ಹೆಸರು ಬೇಕು, ಶೋಷಣೆ ಬೇಕು. ಅದರಿಂದಲೇ ಈ ಜನ ವಚನ ಚಳುವಳಿಯಲ್ಲಿ ಹೆಚ್ಚು ಹೆಚ್ಚಾಗಿ ಪಾಲು ಗೊಳ್ಳಲಿಲ್ಲ. ಶಿವಭಕ್ತರಾದವರು, ಅದರಲ್ಲೂ ಇಷ್ಟಲಿಂಗಪೂಜೆಯವರು ಒಂದು ಸಮಾಜ ಆಗುವುದರ ಮೂಲಕ ಮಿತಿಯೊಳಗೆ ಸಿಲುಕಿಕೊಂಡಿತು. ಇದಕ್ಕೆ ಹೊರ ತಾಗಿ ಸ್ಥಾವರಲಿಂಗ ಪೂಜಾರಾಧಕರು, ವ್ಯವಸ್ಥೆಯ ಹಿಡಿತವನ್ನು ಒಪ್ಪಿಕೊಂಡವರು, ವರ್ಣಕಲ್ಪನೆಯನ್ನು ಬಿಡದವರು ಬೇರೆಯಾಗಿಯೇ ಉಳಿದರು. ಅದರಿಂದಲೇ ಶರಣರು ಆಗಿಹೋದ ಕೆಲವೇವರ್ಷಗಳ ನಂತರ ದೇವಾಲಯಕ್ಕೆ ದತ್ತಿಬಿಟ್ಟ ಸಂಗತಿ ಗಳೂ, ದೇವಾಲಯದ ಲಿಂಗಗಳನ್ನು ಪೂಜಿಸುವ, ದೇವಾಲಯವನ್ನು ಮಾನ್ಯ ಮಾಡುವ ಆ ಮೂಲಕ ಪುರೋಹಿತವರ್ಗವನ್ನು, ವರ್ಣವ್ಯವಸ್ಥೆಯನ್ನೂ ಒಪ್ಪಿ ಕೊಳ್ಳುವ ಸಂಗತಿಗಳು ಕಾವ್ಯದಲ್ಲಿ, ಶಾಸನಗಳಲ್ಲಿ ಬರುತ್ತವೆ.

ಶಾಸನಗಳೇ ಮೂಲತಃ ಶರಣರ ಧೋರಣೆಗೆ ವಿರುದ್ಧವಾದವುಗಳು ಯಾಕಂದರೆ ಕೀರ್ತಿವಾರ್ತೆಗೆ ನಿಲುಕದ ಮನಸ್ಸು ಶರಣರದು. ಅಲ್ಲದೆ ಶರಣರು ತಮ್ಮ ಜೀವಿತ ಕಾಲದಲ್ಲಿ ಯಾವೊಂದು ಶಾಸನಗಳಲ್ಲಿ ಬರೆಸಲಿಲ್ಲ. ಬಿಜ್ಜಳನಲ್ಲಿದ್ದ ಬಸವಣ್ಣನಿಗೆ ಶಾಸನಗಳನ್ನು ಬರೆಯಿಸುವುದು ಅಂತಹ ಕಷ್ಟವಾದದ್ದೇನೂ ಆಗಿರಲಿಲ್ಲ.

ಈ ಶಾಸನಗಳು ಮತ್ತು ಅನುಯಾಯಿಗಳ ಸ್ಥಾವರಲಿಂಗಾರಾಧನೆ ಇವೇ ಶರಣರ ಚಳುವಳಿಯನ್ನೂ ಮಿತಿಗೊಳಿಸಿದವು. ಬಿಜ್ಜಳ, ಇತ್ಯಾದಿ ಬೇರೆವರ್ಗ, ವರ್ಣಗಳಿಂದ ಶರಣರಿಗೆ ಸಹಕಾರ ದೊರೆಯಲಿಲ್ಲ ಎನ್ನುವದಕ್ಕಿಂತ ಶಿವಭಕ್ತರಾದವ ರಿಂದಲೇ ಈ ದಿಕ್ಕಿನಲ್ಲಿ ಪೂರ್ಣ ಸಹಕಾರ ದೊರೆಯಲಿಲ್ಲ. ಹೀಗಾಗಿ ಅವರ ಚಳುವಳಿ ದುರಂತದಲ್ಲಿ ಪರ್ಯವಸಾನ ಆಗಲು ಕಾರಣ ಆಯಿತು.

ಈ ಅನುಯಾಯಿಗಳಿಗೆ ಚೆನ್ನಮಲ್ಲಿಕಾರ್ಜುನ, ಇತ್ಯಾದಿ ದೇವಾಲಯಗಳಿಗೆ ದತ್ತಿಬಿಡುವ ಉದಾರ ಭಾವನೆಯುಂಟು. ಆದರೆ ಅದೇ ಶರಣರ ಹೆಸರಲ್ಲಿ ಏನನ್ನಾದರೂ ಸ್ಥಾಪಿಸುವ, ಮಠಕಟ್ಟುವ ಆ ಮೂಲಕ ಸಮಾಜವನ್ನು ಜೀವಂತವಾಗಿಡುವ ಆಲೋಚನೆ, ಇಂಥದನ್ನು ಶಾಸನದಲ್ಲಿ ಬರೆಸುವ ಪ್ರಜ್ಞೆ ಈ ಜನಗಳಿಗೆ ಬರಲೇ ಇಲ್ಲ. ಇದರಿಂದಾಗಿ ಇವರು ತಿಳಿದೂ ಅಥವಾ ತಿಳಿಯದೆಯೋ ಶರಣರ ಧೋರಣೆಗಳನ್ನು ವಿರೋಧಿಸಿದ್ದಾರೆ ಎಂದು ಹೇಳಬಹುದಾಗಿದೆ.

—ಹ. ನಂ. ವಿಜಯಕುಮಾರ

ಕಲಬುರ್ಗಿಯಲ್ಲಿ ಜರುಗಿದ ಅಖಿಲಕರ್ನಾಟಕ ಐದನೆಯ ಜಾನಪದ ಸಮ್ಮೇಲನ

● ಎಸ್. ಎಸ್. ಪೂಜಾರ

ಜಾನಪದ ಸಾಹಿತ್ಯ, ಜನಾಂಗದ ಸಂಸ್ಕೃತಿಯ ಸಂವಾಹಕ. ಶ್ರೀ ಸಾಮಾನ್ಯನ ಸಮಷ್ಟಿಬದುಕಿನ ಬನಿ–ಬಗೆಗಳನ್ನು ಅರಿಯುವ, ವಿಚಾರಗಳನ್ನು ಪ್ರಾಚುರಪಡಿಸುವ ಮಹತ್ವದ ಕಾರ್ಯ ಇಂದು ನಡೆಯಬೇಕಾಗಿದೆ. ಜಾನಪದ ಸಾಹಿತ್ಯದ ಕ್ರಮಬದ್ಧ ಅಧ್ಯಯನದಿಂದ ಮಾತ್ರ ಅದು ಸಾಧ್ಯ. ಇದು ಜಾನಪದ ಸಾಹಿತ್ಯ ಸಮ್ಮೇಲನಗಳ ಮಾಧ್ಯಮದ ಮೂಲಕ ಇಂದು ಪರಿಣಾಮಕಾರಿಯಾಗಿ ನಡೆಯುತ್ತಲಿದೆ.

ಭರದಿಂದ ಬೆಳೆದು ಬಂದ ಹಿಂದಿನ ಜಾನಪದ ಸಾಹಿತ್ಯ ಬೆಳೆ ಹಾಗೂ ಬಳಿಕ ಚಿಗಿತು ಬರುತ್ತಿರುವ ಕುಳಿಬೆಳೆಯೊಕ್ಕುವಿಕೆಯಲ್ಲಿ ನಿರತವಾಗಿರುವ ಸಂಸ್ಥೆಗಳಲ್ಲೊಂದು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ. ಅದು ಕಳೆದ ನಾಲ್ಕು ವರ್ಷಗಳಿಂದ "ಅಖಿಲ ಕರ್ನಾಟಕ ಜಾನಪದ ಸಮ್ಮೇಲನ"ಗಳನ್ನು ಸುವ್ಯವಸ್ಥಿತವಾಗಿ ನಡೆಸಿ ಕೃತಾರ್ಥವಾಗಿರುವ ಹೆಮ್ಮೆಯ ಸಂಗತಿ ಅನುಕರಣೀಯವಾದುದಾಗಿದೆ. ಈ ಸತ್ಸಂಪ್ರದಾಯವನ್ನು ಅದು ಅನೂಚಾನವಾಗಿ ಮುಂದುವರಿಸಿಕೊಂಡು ಬರುತ್ತಿರುವುದಕ್ಕೆ ಮೊನ್ನೆ ಮೊನ್ನೆ ಕಲಬುರಗಿ ನಗರದಲ್ಲಿ ಜರುಗಿಸಿದ ಬೃಹತ್ಪ್ರಮಾಣದ ಅಖಿಲಕರ್ನಾಟಕ ಐದನೆಯ ಜಾನಪದ ಸಮ್ಮೇಲನವೇ ಸಾಕ್ಷಿ.

ಕಲಬುರ್ಗಿಯ ಇತಿಹಾಸದಲ್ಲಿ ಪ್ರಪ್ರಥಮಬಾರಿಗೆ ವೈಭವಪೂರ್ಣವಾಗಿ ಜನೇವರಿ ೬,೧೯೭೮ ರಂದು ಜರುಗಿದ ಜಾನಪದ ಸಾಹಿತ್ಯ ಸಮ್ಮೇಲನ ಬರೀ ಸಂಭ್ರಮಸ್ವರೂಪಿಯಾಗಿರದೆ ಅರ್ಥಪೂರ್ಣವಾದ ಸಮಾರಾಧನೆಯಾಗಿತ್ತು. ದೊರೆ ನೃಪತುಂಗನ ನೆಚ್ಚಿನ "ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ" ಸಿಟ್ಟಿನಲ್ಲಿ ಇಂಥ ಅಭೂತಪೂರ್ವ ಸಮ್ಮೇಲನ ಸಮಾವೇಶಗೊಂಡದ್ದು ಅತ್ಯಂತ ಮಹತ್ವದ ಘಟನೆ.

೬-೧ ೧೯೭೮ ರ ಮುಂಜಾನೆ ೯ ಗಂಟೆಗೆ ಶ್ರೀ ಶರಣಬಸವೇಶ್ವರ ದೇವಾಲಯದ ವಿಶಾಲ ಆವರಣದ ಪವಿತ್ರ ಪರಿಸರದಲ್ಲಿ ಹಾಕಿದ "ಕಡಕೋಳ ಮಡಿವಾಳಪ್ಪ ಮಂಟಪ"ದ ತುಂಬ ಕಿಕ್ಕಿರಿದ ಮಹಾಜನಸಮೂಹ ಉಬ್ಬಿ ಉಲಿಯುತ್ತಿತ್ತು,

ಉತ್ಸಾಹಪೂರ್ಣವಾಗಿ. ವಿದ್ಯಾರ್ಥಿನಿಯರಿಂದ ಪ್ರಾರ್ಥನೆಯಾದ ಬಳಿಕ ಸಮ್ಮೇಲನದ ಸ್ವಾಗತಾಧ್ಯಕ್ಷರಾದ ಪೂಜ್ಯ ಶ್ರೀಶರಣಬಸಪ್ಪ ಅಪ್ಪಾ ಅವರು ಸರ್ವರಿಗೂ ಸ್ವಾಗತಕೋರಿ "ಯಾವುದನ್ನು ಜನಪದವೆಂದು ಕರೆಯುತ್ತೇವೆಯೋ ಅದು ಬರೀ ಹಾಡಲ್ಲ, ಭಕ್ತಿಭಾವವಲ್ಲ, ದೇವರಧ್ಯಾನ- ಚಿಂತನೆಯಲ್ಲ, ಧಾರ್ಮಿಕ ನಡೆ-ನುಡಿ, ಸಂಸ್ಕೃತಿ, ಸಂಗೀತ ನೃತ್ಯ ಅಷ್ಟೇ ಅಲ್ಲ, ಅದು ಒಂದು ಇಡೀ ಜನಾಂಗದ ಸಮಗ್ರ ಜೀವನದ ಜೀವಂತ ನಾಡಿಯಾಗಿದೆ. ಪ್ರತ್ಯಕ್ಷ ಮನದಲ್ಲಿ ಮೂಡಿನಿಲ್ಲಬಲ್ಲ ರಸಚಿತ್ರವಾಗಿದೆ ಜನಪದ ಸಾಹಿತ್ಯವು ಸಾಹಿತ್ಯ ಪ್ರಪಂಚಕ್ಕೆ ಮಾತ್ರ ಸೀಮಿತವಾಗಿರದೆ ಶಿಕ್ಷಣ ಪ್ರಪಂಚದಲ್ಲಿಯೂ ಅದರ ಸಕ್ರಿಯ ಸೇವೆಯ ಕೈವಾಡವನ್ನು ಕಾಣಬಹುದು. ಯಾವ ರೀತಿಯಾಗಿ ಜನಪದ ಸಾಹಿತ್ಯದಲ್ಲಿ ಮಾನವಶಾಸ್ತ್ರ, ಸಮಾಜಶಾಸ್ತ್ರ ಕುರಿತು ಅಧ್ಯಯನ ನಡೆದಿರುವುದೋ ಅದೇ ರೀತಿ ಜನಪದ ಸಾಹಿತ್ಯ ಭಂಡಾರದಲ್ಲಿ ಶಿಕ್ಷಣ ಶಾಸ್ತ್ರದ ಬಗೆಗೆ ಸುಳಹು ಇರುವ ಬಗೆಗೆ ಆಳವಾಗಿ ಅಭ್ಯಾಸಮಾಡುವುದು ಅವಶ್ಯವಿದೆ. ಈ ಸಹಜವಾದ ಜನಪದ ಶಿಕ್ಷಣಪದ್ಧತಿಯನ್ನು ಆಧುನಿಕ ಶಿಕ್ಷಣ ತಜ್ಞರು ಮಾನ್ಯ ಮಾಡಬೇಕು. ವಯಸ್ಕರ ಶಿಕ್ಷಣವು ಜನಪದ ಶಿಕ್ಷಣಶಾಸ್ತ್ರದ ಸಹಜ ಪದ್ಧತಿಯನ್ನು ಸ್ವೀಕರಿಸಿದ್ದಾದರೆ ಇನ್ನೂ ಹೆಚ್ಚಿನ ಪರಿಣಾಮವಾಗಬಹುದಾಗಿದೆ" ಎಂದು ಅಭಿಪ್ರಾಯ ಪಟ್ಟರು.

ಅನಂತರ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಮುಖ್ಯಸ್ಥರಾದ ಡಾ. ಎಂ. ಎಸ್. ಸುಂಕಾಪುರ ಅವರು ಪೀಠದ ಪರವಾಗಿ ಸರ್ವರನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸಿ, ಸಮ್ಮೇಲನದ ಸರ್ವಾಧ್ಯಕ್ಷರ ಪರಿಚಯ ಮಾಡಿಕೊಟ್ಟರು. ಪ್ರಾಸಂಗಿಕವಾಗಿ ಜನಪದ ಸಾಹಿತ್ಯದ ಸತ್ವ ಕುರಿತು "ಜನಪದ ಸಾಹಿತ್ಯ ಜನತೆಯ ಉಸಿರು, ಅನುಭವದ ಉಸಿರು. ಶ್ರೀಸಾಮಾನ್ಯನು ತನ್ನ ನಿತ್ಯ ಜೀವನದಲ್ಲಿ ಪಡೆದುಕೊಂಡ ಅನುಭವವನ್ನು ಪ್ರತಿಭಾಬಲದಿಂದ ಹಾಡಿಕೊಂಡಾಗ, ತೋಡಿಕೊಂಡಾಗ ಸಾಹಿತ್ಯ ಹುಟ್ಟಿದೆ, ಹುಟ್ಟುತ್ತಲಿದೆ. ಜನ ಬದುಕಬೇಕು, ಜನತೆಯ ಬದುಕು ಹಸನಾಗಬೇಕು. ಕಲಾಮಯ ಜೀವನ ಅವರದಾಗಬೇಕು. ಅಂದಾಗಲೇ ಜೀವಂತಜನ ಸಿಗುತ್ತದೆ. ಜೀವನಕ್ಕೊಂದು ಅರ್ಥ ಬರುತ್ತದೆ. ಅಂತಹ ಕಾಲ ಬರಲೆಂದೇ ಇಂತಹ ಸಾಹಿತ್ಯ ಸಮ್ಮೇಲನಗಳು ನಡೆಯಬೇಕು. ನಡೆದಷ್ಟು ಕಡಿಮೆ" ಎಂದು ಹೇಳಿ: ಕ. ಅ. ಪೀಠ ಕೈಕೊಂಡಿರುವ ಕಾರ್ಯಪ್ರಗತಿಯ ಪರಿವೀಕ್ಷಣೆ ಮಾಡಿದರು.

ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಆರ್. ಸಿ. ಹಿರೇಮಠ ಅವರು ಜ್ಯೋತಿಯನ್ನು ಹೊತ್ತಿಸಿ ಜಾನಪದ ಸಮ್ಮೇಲನವನ್ನು ಉದ್ಘಾಟಿಸಿದರು. ಡಾ. ಎಂ. ಎಸ್. ಸುಂಕಾಪುರ ಅವರು ಸಂಪಾದಿಸಿದ "ಜಾನಪದ ಸಾಹಿತ್ಯದರ್ಶನ ಭಾಗ-೩" ಹಾಗೂ ಡಾ. ಎಂ. ಎಸ್. ಲಠ್ಠೆ ಅವರು ಸಂಪಾದಿಸಿದ "ಜಾನಪದ

ಸಾಹಿತ್ಯದಲ್ಲಿ ಶ್ರೀ ಶರಣಬಸವೇಶ್ವರ'' ಕೃತಿಗಳನ್ನು ಬಿಡುಗಡೆಮಾಡಿ ಗ್ರಂಥ ಹಾಗೂ ಸಂಪಾದಕದ್ವಯರ ಮಹತ್ವ ಪರಿಶ್ರಮಗಳ ಬಗೆಗೆ ಮೆಚ್ಚುಗೆಯ ಮಾತುಗಳನ್ನಾಡಿದರು. ಇದು ವರೆಗೂ ಕನ್ನಡದಲ್ಲಿ ಪ್ರಕಟವಾಗಿರುವ ಜಾನಪದ ಸಾಹಿತ್ಯರಾಶಿಯ ಅಂದವಾದ "ಜಾನಪದ ಗ್ರಂಥಪ್ರದರ್ಶನ"ದ ಉದ್ಘಾಟನೆಯನ್ನೂ ನೆರವೇರಿಸಿ ಜಾನಪದ ಸಮ್ಮೇಲನಗಳನ್ನು ನಡೆಸುವುದರ ಉದ್ದೇಶ, ಔಚಿತ್ಯಗಳನ್ನು ಮನನೀಯವಾಗಿ ವಿವರಿಸಿದರು. ಈ ದಿಸೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ವಹಿಸುತ್ತಿರುವ ವಿಶೇಷ ಆಸಕ್ತಿಗಾಗಿ ಅಭಿನಂದನೆಗಳನ್ನು ಸಲ್ಲಿಸಿ, ಕನ್ನಡ ಅಧ್ಯಯನಪೀಠದ ಸಾಧನೆಯ ಬಗ್ಗೆ ಹೆಮ್ಮೆಯನ್ನು ವ್ಯಕ್ತಪಡಿಸಿದರು. ಮುಂದುವರಿದು "ಚಕ್ರವರ್ತಿಗಳ ಯುಗ ಚಮರಿಹೋಗಿ ಶ್ರೀಸಾಮಾನ್ಯಯುಗ ಪ್ರಾರಂಭವಾಗಿರುವ ಇಂದಿನ ಕಾಲದಲ್ಲಿ ಜಗವಗಲ ಮುಗಿಲಗಲವಾದ ಈ ಜಾನಪದವನ್ನು ಸಮಷ್ಟಿದೃಷ್ಟಿಯಿಂದ ಅಧ್ಯಯನ ಮಾಡುವುದಕ್ಕೆ ಇಂಥ ಸಮ್ಮೇಲನಗಳು ನೆರವಾಗಲೆಂದು" ಹಾರೈಸಿದರು. ಜಾನಪದ ಅಧ್ಯಯನದ ಪ್ರಗತಿಯ ಕುರಿತು "ಈಗ ನಡೆದಿರುವ ಕಾರ್ಯ ದಟ್ಟಡಿಯಿಡುತ್ತಿರುವ ಮಗುವಿನ ಹೆಜ್ಜೆ ಮಾತ್ರ, ಅದರ ಆಳ–ಅಗಲ ವೈವಿಧ್ಯಗಳನ್ನು ವಿವೇಚಿಸುವ ಕಾರ್ಯ ಇನ್ನು ಮುಂದೆ ನಡೆಯಬೇಕಾಗಿದೆ" ಎಂಬ ಮಾತನ್ನು ಹೇಳಿದರು. ಜಾನಪದ ತವನಿಧಿಯಾದ, ಸದ್ಯೋ ವಿಶ್ವವಿದ್ಯಾಲಯವನ್ನು ಹೊಂದಿ ಇಷ್ಟರಲ್ಲೇ ಸ್ವತಂತ್ರ ವಿಶ್ವವಿದ್ಯಾಲಯವಾಗಲು ರೂಹು ತಳೆಯುತ್ತಿರುವ ಕಲಬುರ್ಗಿಯಲ್ಲಿ. ಇಲ್ಲಿಯ ಮಹಾಜನರ ಔದಾರ್ಯದಿಂದ ಅ. ಕ. ಐದನೆಯ ಜಾನಪದ ಸಮ್ಮೇಲನ ವೈಶಿಷ್ಟ್ಯಪೂರ್ಣವಾಗಿ ನಡೆಯುವಂತಾಗಿರುವುದಕ್ಕೆ ಅಭಿಮಾನಪಟ್ಟರು. ಇದರ ಶ್ರೇಯೋಭಿಲಾಷಿಗಳ ಸಹಾಯ ಸಹಕಾರಗಳನ್ನು ಬಹುವಾಗಿ ಶ್ಲಾಘಿಸಿದರು.

ಸಮ್ಮೇಲನದ ಸರ್ವಾಧ್ಯಕ್ಷರಾದ ಜೋಳದರಾಶಿಯ, ಗಮಕ ಕಲಾನಿಧಿ ಶ್ರೀ ಕೆ. ದೊಡ್ಡನಗೌಡರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಜಾನಪದ ಸಾಹಿತ್ಯದ ಹಿರಿಮೆ–ಗರಿಮೆಗಳ ಕುರಿತು ಒಳ್ಳೇ ಸ್ಫೂರ್ತಿದಾಯಕವಾಗಿ, ಉದ್ಬೋಧಕವಾಗಿ ಮಾತನಾಡಿದರು. ಅಪಾರ ಶ್ರೋತೃಗಳ ಹರ್ಷೋದ್ಗಾರಗಳಿಗೆ, ವಿಚಾರಪ್ರಚೋದನೆಗೆ ಕಾರಣವಾಗಿದ್ದುದು ಅವರ ಕಂಚಿನ ಕಂಠಶ್ರೀಯಿಂದ ಅನುರಣಿಸಿದ ಗಂಭೀರ ಅಕ್ಲಿಷ್ಟಪ್ರಸನ್ನಶೈಲಿಯ ಸ್ವಾರಸ್ಯಕರ ಭಾಷಣ. ಜಾನಪದ ಸಾಹಿತ್ಯದ ಸಂರಕ್ಷಣೆ ಸಂಸ್ಕರಣ–ಸಂಶೋಧನೆಗಳ ಬಗೆಗೆ ಪ್ರಾಮಾಣಿಕ ಮನೋಧರ್ಮದಿಂದ ಬಂದ ಕಳಕಳಿಯ, ಆಗ್ರಹಪೂರ್ವಕವಾದ ಸಲಹೆ–ಸೂಚನೆಗಳು, ಜಾಗರೂಕತೆಯ ಉಚಿತ ನುಡಿಗಳು ಮಾರ್ಮಿಕವೂ–ಮಾರ್ಗದರ್ಶಕವೂ ಆಗಿದ್ದವು.


ಮರಳಿ ಬಾಲ್ಯದ ಬಗಲನ್ನೇರಿ ಶ್ರೀ ಕೆ. ದೊಡ್ಡನಗೌಡರು ತಮ್ಮ ಬೆನ್ನು ಬಾಗುವವರೆಗಿನ ಸಹ–ಸುಖಜೀವನದ ಮಧುರಸ್ಮೃತಿಗಳನ್ನು ಅನನ್ಯ ರೀತಿಯಲ್ಲಿ ಸ್ಮರಿಸಿಕೊಂಡರು. ಚಿಕ್ಕಂದಿನಲ್ಲಿ ಹೊರಸಿನ ಹಚ್ಚಡದ ಹೊದಿಕೆಯಲ್ಲಿ ನೋಡಿದ ಮೊದಲ

ಬೈಲಾಟ,ಗಯನ ಕಥೆ. ಲವಕುಶರ ಕಾಳಗದಲ್ಲಿ ಲವನಾಗಿ ವಹಿಸಿದ ಪಾತ್ರ, ಕೋಲಾಟ ವಾಡಿ, ಚೌಪದನ ಹಾಡಿ, ಕೋಳೂರು ಕೊಡಗೂಸು, ಧ್ರುವೋಪಾಖ್ಯಾನಗಳನ್ನು ಪ್ರದರ್ಶನಮಾಡಿ ನಲಿದಾಡಿದ ನೆನಪುಗಳನ್ನು ಎಳೆಎಳೆಯಾಗಿ ಬಿಚ್ಚಿ ಹೇಳಿದರು. ಹಳ್ಳಿಯ ಸುಗ್ಗಿಯ ಸಡಗರ ಉಬ್ಬಿನ ಹಬ್ಬಗಳ ಹುಮ್ಮಸು—ಈ ಸಂದರ್ಭಗಳಲ್ಲಿ ನಡೆಯುತ್ತಿದ್ದ ಹೃದಯಂಗಮ ಹಾಡು-ಮೋಹಕ ಕುಣಿತಗಳ ಸೊಗಸನ್ನು ಭಾವಪೂರ್ಣವಾಗಿ, ಚಿತ್ರವತ್ತಾಗಿ ವರ್ಣಿಸಿದರು.

ಗರುಡ ಚೇಡು ಹನುಮಂತಪ್ಪನವರು ಬರೆದ ದುಶ್ಯಾಸನನ ಕಥೆಯನ್ನಾಡುವಾಗ ಭೀಮ--ಧುರ್ಯೋಧನ ಪಾತ್ರಧಾರಿಗಳು ಗುದ್ದಾಡಿ ಕಿರೀಟ—ಹಲಗೆ ಮುರಿ—ಹರಿದುಕೊಂಡ ಸನ್ನಿವೇಶ ಹಾಗೂ ಅಂದಿನ ಬೈಲಾಟಗಳಲ್ಲಿ ಸ್ತ್ರೀಪಾತ್ರ ಹಾಕುವುವರಲ್ಲಿ ಹೆಸರಾದ ಕಮ್ಮಾರ ಚೇಡು ಶಂಕ್ರಪ್ಪ, ದ್ರೌಪದಿಯ ವೇಷದಲ್ಲಿ ಪಾಂಡವರನ್ನು ಜೂಜಿನಲ್ಲಿ ಸೋತ ಹೇಡಿತನಕ್ಕಾಗಿ ಹೀಯಾಳಿಸುವ ಸಂದರ್ಭದಲ್ಲೊಮ್ಮೆ ಭೀಮನ ಪಾತ್ರಧಾರಿಯ ಮುಖಕ್ಕೆ ತಿವಿದಾಗ ಜಗಳ ನಡೆದು ಆಟ ಅಗಡವಾದ ಮೋಜಿನ ಪ್ರಸಂಗವನ್ನು ರಸವತ್ತಾಗಿ ಹೇಳಿದರು. ಚಮತ್ಕಾರದ ಶ್ಲೇಷಾರ್ಥದ ಸಂಭಾಷಣೆ. ಪರಿಹಾಸ್ಯದ ಚಟಾಕಿಗಳನ್ನು ಉದಾಹರಿಸಿ ಅವುಗಳಲ್ಲಿ ಹುದುಗಿರುವ ಬುದ್ಧಿಗಮ್ಯವಾದ ವಿಚಾರಗಳನ್ನು ವಿವರಿಸಿದರು. ಹಳ್ಳಿಗಳಲ್ಲಿಂದಿಗೂ ಉಳಿದಿರುವ ಇಂಥ ಚತುರೋಕ್ತಿಗಳನ್ನು ಜಾನಪದ ಸಂಗ್ರಹಕಾರರು ಸಂಗ್ರಹಿಸಬೇಕಾದುದು ಪ್ರಮುಖ ಕಾರ್ಯಗಳಲ್ಲೊಂದೆಂದು ಸೂಚಿಸಿದರು.

ಸಂಚಾರಿ ಜಾನಪದ ಕಲೆಗಾರರಾದ ಹೆಳವರು. ಚೌಡಿಕೆಯವರು, ತಂಬೂರಿ ದಾಸಯ್ಯಗಳು, ಕಿನ್ನರಿ ಜೋಗಿಗಳು, ತಂದಾನತಾನದವರು. ಗಂಟೆಯ ಬಾಲಸಂತರು, ಕಿಳ್ಳೇಕೇತರು, ಚೆಂಚುಸಾಟಕದವರು, ಮೋಡಿಕಾರರು, ಬುಡಬುಡಿಕೆಯವರು, ಡೊಂಬರು, ಹಗಲುವೇಷದವರು, ಬುರುಬುರು ಸುಂಕಲಮ್ಮನವರು-ಮುಂತಾದವರಿಂದ ಅವರ ಭಿಕ್ಷುಕ ವೃತ್ತಿಯೊಂದಿಗೆ ಉಳಿದುಕೊಂಡು ಬಂದ ಕಲೆಯ ಬಗೆಯನ್ನು ವಿವರಿಸಿದರು. ಇಂದಿನ ಸ್ಥಿತ್ಯಂತರಹೊಂದುತ್ತಿರುವ ಸಾಮಾಜಿಕ ಪರಿಸರದಲ್ಲಿ ಇಂಥ ಕಲೆಗಳು ಮುಗ್ಗಿಹೋಗುತ್ತಿರುವ ಶೋಚನೀಯ ಸ್ಥಿತಿ ಹಾಗೂ ತಾವು ಬಾಲ್ಯದಲ್ಲಿ ಕಂಡುದು ಬಹಳಷ್ಟು ಇಂದು ತಮ್ಮ ಕಣ್ಣ ಮುಂದೆಯೇ ಇಲ್ಲದಂತಾಗಿರುವುದಕ್ಕೆ ತೀವ್ರವಾಗಿ ವ್ಯಸನಪಟ್ಟರು.

ಸಮ್ಮೇಳನಾಧ್ಯಕ್ಷರು—"ಹಿಂದಿನ ಕಾಲದಲ್ಲಿ ಕಾಗದ ಮಸಿ ಅಚ್ಚುಗಳಿಲ್ಲದಾಗ ಹುಲುಸಾಗಿ ಜಾನಪದಸಾಹಿತ್ಯ ಬೆಳೆದುಬಂದುದು ಸೋಜಿಗ. ಅವರ ನೆನಪು ದೊಡ್ಡದು. ಪದಕಟ್ಟಿ ಹಾಡಿದ ಜಾಣ್ಮೆಗಿಂತ ಅವರ ಅನುಭವ ದೊಡ್ಡದು. ಆನುವಂಶಿಕವಾಗಿ ಪರಂಪರೆಯ ಜಾಡಿನಲ್ಲಿ ಜಾನಪದ ಕಲೆಗಳು ನಾನಾ ಮುಖವಾಗಿ ಬೆಳೆದುಬಂದುವರ



ಜಾನಪದ ಸಮ್ಮೇಳನದ “ರಂಗದರ್ಶನ”ದ ಒಂದು ದೃಶ್ಯ



ಸಮ್ಮೇಳನದ ಪ್ರೇಕ್ಷಕರ ಒಂದು ದೃಶ್ಯ

ಹಿನ್ನೆಲೆ ಅವರ ಜೀವನದ ಸಾರ್ಥಕತೆ ಎಂತಹದಾಗಿತ್ತು ಎನ್ನುವುದನ್ನು ಅವರ ಸಾಹಿತ್ಯ ಹೇಳುತ್ತದೆ. ನಾವಿಂದು ಆ ಸಾಹಿತ್ಯ ಸಂಗ್ರಹದ ಜೊತೆಗೆ ಹಿನ್ನೆಲೆಯಾದ ಆ ಅನಾಯಕತೆ, ಸರಳತೆ, ಸಹಜತೆ, ಪ್ರಾಮಾಣಿಕತೆ, ಸೌಜನ್ಯ ಮುಂತಾದ ಸದ್ಗುಣಗಳ ಸಂಗ್ರಹಮಾಡಿಕೊಂಡು ಜೀವನದಲ್ಲಿ ತಂದುಕೊಳ್ಳದಿದ್ದರೆ ಈ ಸಾಹಿತ್ಯ ಇಂತಹ ಸಭೆಗಳಲ್ಲಿ ಮನೋರಂಜನೆಯ ವಸ್ತುವಾಗಬಹುದಲ್ಲದೆ ನಮ್ಮ ಸಮಾಜಕ್ಕೆ ಯಾವ ಫಲಿತಾರ್ಥವಾಗದು.' ಇತ್ಯಾದಿ ಗಂಭೀರ ವಿಚಾರಗಳನ್ನು ಅರುಹಿದರು.

ಶ್ರೀ ದೊಡ್ಡನಗೌಡರು ನಾಡಿನಲ್ಲಿ ಜಾನಪದ ಸಾಹಿತ್ಯದ ಬಗ್ಗೆ ಈಗಾಗಲೇ ನಡೆದ ಕಾರ್ಯ ತಮ್ಮಂಥ ಹಳಬರಿಗೆ ಅಷ್ಟೊಂದು ತೃಪ್ತಿಕರವಾಗಿಲ್ಲವೆಂಬ ವಿಷಾದನೀಯ ಮಾತನ್ನು ವ್ಯಕ್ತಪಡಿಸಿದರು. ಆಗಿರುವ ಸಾಧನೆಗಳ ಕುರಿತು ಅವುಗಳಿಗೆ ಕಾರಣೀಭೂತವಾದ ಸಂಘ-ಸಂಸ್ಥೆ ಮಹನೀಯರನ್ನು ಮುಕ್ತಕಂಠದಿಂದ ಹೊಗಳಿದರು.

ಕಲಬುರಗಿ ಸ್ನಾತಕೋತ್ತರ ಕೇಂದ್ರದ ಸ್ಥಳೀಯ ಮುಖ್ಯರೂ ಕನ್ನಡ ವಿಭಾಗದ ಮುಖ್ಯಸ್ಥರೂ ಆದ ಡಾ. ಬಿ. ಬಿ. ಹೆಂಡಿ ಅವರು ವಂದನಾರ್ಪಣೆಗೈದರು. ಡಾ. ಎಂ. ಜಿ. ಬಿರಾದಾರ ಅವರು ಕಾರ್ಯಕ್ರಮದ ನಿರ್ದೇಶಕರಾಗಿದ್ದರು.

ಮಧ್ಯಾಹ್ನ ೨ಗಂಟೆಗೆ, ಗೊಬ್ಬೂರಿನ ಶ್ರೀ ಭೋಜರಾಜ ಪಾಟೀಲ ಮತ್ತು ಸಂಗಡಿಗರ ಹೃದಯಂಗಮವಾದ ಕಡಕೋಳ ಮಡಿವಾಳಪ್ಪ ವಿರಚಿತ ಭಜನೆಯ ಪದದಿಂದ ಪ್ರಾರಂಭವಾದ "ಭಜನೆಯ ಹಾಡುಗಳ" ಮೊದಲ ಗೋಷ್ಠಿ ಡಾ. ಎಂ. ಎಸ್. ಸುಂಕಾಪುರ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಉಪನ್ಯಾಸಕ ವಿದ್ವಾಂಸರಾದ ೧ ಪ್ರೊ. ಎಸ್.ಎಸ್. ಬಾಣದ-"ಕಡಕೋಳ ಮಡಿವಾಳಪ್ಪ," ೨ ಪ್ರೊ. ಪಿ.ಪ್ಹಿ. ಮಲ್ಲಾಪುರ,-"ರಾಮಪುರ ಬಕ್ಕಪ್ಪ", ೩. ಡಾ. ಕೆ.ಎ. ಕಿತ್ತೂರ-"ಶಿಶುನಾಳ ಶರೀಫ", ೪ ಪ್ರೊ. ಶಾಂತರಸ-"ಕೂಡಲೂರ ಬಸವಲಿಂಗ ಶರಣ" ಮತ್ತು ೫. ಡಾ. ಎಂ. ಜಿ. ಬಿರಾದಾರ "ಸಾರವಾಡ ಚಿಕ್ಕಪ್ಪಯ್ಯ"-ಇವರು ಸಾದರಪಡಿಸಿದ ಅಭ್ಯಸನೀಯವಾದ ಪ್ರಬಂಧಗಳು ಮನೋಜ್ಞವಾಗಿದ್ದವು. ವಿವೇಚನಾತ್ಮಕವಾದ ಅಧ್ಯಕ್ಷೀಯ ಭಾಷಣದಲ್ಲಿ ಡಾ. ಎಂ. ಎಸ್. ಸುಂಕಾಪುರ ಅವರು ಅಪಾರವಾದ ಜಾನಪದ ಸಾಹಿತ್ಯದ ವ್ಯಾಪ್ತಿಯಲ್ಲಿ ಕೇವಲ ಕತೆ, ಒಡಪು, ಒಗಟು, ನಾಣ್ಣುಡಿ, ಗೀತಗಳಷ್ಟೇ ಅಲ್ಲದೆ ಭಜನಾಪದಗಳೂ ಜಾನಪದ ಸಾಹಿತ್ಯದ ಕಕ್ಷೆಗೆ ಒಳಪಡುತ್ತವೆ ಎಂಬುದು ಗಟ್ಟಿಮಾತು ಎಂದರು ಈ ಗೋಷ್ಠಿಯ ಸಂಚಾಲನೆಯನ್ನು ಪ್ರೊ. ಆರ್. ಎಲ್. ಬಡಿಗೇರ ನಿರ್ವಹಿಸಿದರು.

೯-೧.೧೯೭೮ರಂದು ಮುಂಜಾನೆ ೯ ಗಂಟೆಯಿಂದ "ಲಾವಣಿ ಗೀಗೀ ಹಾಡುಗಳ" ಎರಡನೆಯ ಗೋಷ್ಠಿ ಶ್ರೀ ರಾಘವೇಂದ್ರ ಇಟಗಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಉಪನ್ಯಾಸಕ ವಿದ್ವಾಂಸರಾದ ೧ ಡಾ. ಬಿ. ಬಿ. ಹೆಂಡಿ-ಜೀ.ಬೀ.ಇಂಗಳಗಿ

ಲಾವಣಿಕಾರರು ೨. ಶ್ರೀ ವೀರೇಂದ್ರ ಸಿಂಪಿ--"ಹಲಸಂಗಿ ಭಾಗದ ಲಾವಣಿಕಾರರು ೩ ಪ್ರೊ. ಶಿವಶರಣ ಜಾವಳಿ-"ಸಾವಳಗಿ ದೇಗಾಂವಿ ಭಾಗದ ಲಾವಣಿಕಾರರು. ೪. ಪ್ರೊ. ಸೋಮಶೇಖರ ಇಮ್ರಾಪುರ-"ತೇರದಾಳ ಭಾಗದ ಲಾವಣಿಕಾರರು. ಮತ್ತು ೫. ಡಾ. ಎಂ. ಎಸ್. ಲಠ್ಠೆ.-"ಹುಲಕುಂದ ಭಾಗದ ಲಾವಣಿಕಾರರು" -ಇವರು ವಿಪುಲ ವಿಷಯ ಸಂಗ್ರಹಮಾಡಿ ಸಾದರಪಡಿಸಿದ ಪ್ರಬಂಧಗಳಲ್ಲಿ ಆಯಾ ಪ್ರದೇಶಗಳ ಲಾವಣಿ ಗೀಗಿ ಪದಗಳ ಪರಿಶೀಲನೆ ಉತ್ತಮ ರೀತಿಯಲ್ಲಿ ನಡೆಯಿತು. ಉಪಯುಕ್ತವಾದ ಅನೇಕ ಅಂಶಗಳನ್ನು ಅಧ್ಯಕ್ಷರ ಸಾರವತ್ತಾದ ಸಮಾರೋಪ ಭಾಷಣ ಒಳಗೊಂಡಿತ್ತು. ಈ ಗೋಷ್ಠಿಯ ನಿಯೋಜಕರಾಗಿದ್ದವರು ಪ್ರೊ. ಎಸ್. ಡಿ. ಸವದತ್ತಿಮಠ ಅವರು

ಮಧ್ಯಾಹ್ನ ೩ ಗಂಟೆಗೆ "ಸಂಪ್ರದಾಯ ಸಾಹಿತ್ಯ" ಗೋಷ್ಠಿಯ ಅಧ್ಯಕ್ಷತೆಯನ್ನು ಡಾ. ಬಿ. ಬಿ. ಹೆಂಡಿಯವರು ವಹಿಸಿದ್ದರು. ಉಪನ್ಯಾಸಕ ವಿದ್ವಾಂಸರಾದ ೧ ಡಾ. ಕೆ. ಜಿ. ಶಾಸ್ತ್ರಿ-"ಗಂಗೀ-ಗೌರಿ ಹಾಡು", ೨. ಪ್ರೊ. (ಶ್ರೀಮತಿ) ಶಶಿಕಲಾ ಮೋಳದಿ- "ಬೀಗರಹಾಡು", ೩. ಶ್ರೀ ಜಿ. ಎಂ. ಶಿರಹಟ್ಟಿ-"ಮೋಹರಂ ಹಾಡು" ೪. ಪ್ರೊ. ಯಮುನಪ್ಪ ಹುಜರತ್ತಿ - "ಮೈಲಾರಲಿಂಗ ಸಾಹಿತ್ಯ" ಮತ್ತು ೫. ಡಾ. ವಿ. ಶಿವಾನಂದ-"ಕಾಲಜ್ಞಾನ"- ಇವರು ಸಾದರಪಡಿಸಿದ ಅನುಭವಪೂರ್ಣವಾದ, ತೂಕಬದ್ಧವಾದ ಪ್ರಬಂಧಗಳ ಸಮೀಕ್ಷೆ ಡಾ. ಬಿ. ಬಿ. ಹೆಂಡಿಯವರ ಸಮಾರೊಪ ಭಾಷಣದಲ್ಲಿ ನಿಷ್ಪಕ್ಷ ರೀತಿಯಲ್ಲಿ ನಡೆಯಿತು. ಪ್ರೊ. (ಶ್ರೀಮತಿ) ಶಶಿಕಲಾ ದುರ್ಗಿ ಅವರು ಗೋಷ್ಠಿಯ ಆಯುಕ್ತರಾಗಿದ್ದರು.

ಸಮ್ಮೇಳನದ ಕೊನೆಯ ದಿನ ನಡೆದ ಬಹಿರಂಗ ಅಧಿವೇಶನದಲ್ಲಿ ಅಂಗೀಕೃತವಾದ ಗೊತ್ತುವಳಿಗಳು ಜನಪದ ಸಾಹಿತ್ಯ-ಕಲೆಗಳಿಗೆ ಮನ್ನಣೆ, ಪೋಷಣೆ, ಕಲಾಕಾರರಿಗೆ ಉಚಿತವಾಗಿ ದೊರೆಯಬೇಕಾಗಿರುವ ಪ್ರೋತ್ಸಾಹಗಳ ಬಗೆಗಿನ ವಿಚಾರಗಳನ್ನೇ ವ್ಯಕ್ತಪಡಿಸಿವೆ.

ಗೊತ್ತುವಳಿಗಳು :

೧. ಉತ್ತರಕರ್ನಾಟಕದ ಜಾನಪದ ಸಾಹಿತ್ಯ ಮತ್ತು ಕಲೆಗಳ ಸಂಗ್ರಹ, ಸಂಪಾದನೆ, ಪ್ರಕಟನೆಗಳಿಗಾಗಿ ಸರಕಾರವು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾಕಷ್ಟು ಧನಸಹಾಯ ನೀಡಬೇಕು.

೨. ಜಾನಪದ ಕವಿಗಳನ್ನು, ಕಲಾಕಾರರನ್ನು ಗುರುತಿಸಿ ಅಂಥವರಿಗೆ ಸರಕಾರ ಮಾಸಾಶನ ನೀಡಿ ಗೌರವಿಸಬೇಕು.

೩. ಜಾನಪದ ಹಾಡಿನ ಧಾಟಿ ಮತ್ತು ಗತ್ತುಗಳನ್ನು ಉಳಿಸಿಕೊಳ್ಳಲು ಪ್ರಸಿದ್ಧ ಜಾನಪದ ಹಾಡುಗಾರರನ್ನು ಶಿಕ್ಷಣ ಸಂಸ್ಥೆಗಳಲ್ಲಿ ಪತ್ರಾತರಬೇತಿಗೆಂದು ನಿಯಮಿಸಿಕೊಳ್ಳಲು ಸರಕಾರ ಸೂಕ್ತಕ್ರಮ ಕೈಕೊಳ್ಳಬೇಕು.

೪. ಇಂತಹ ಜಾನಪದ ಸಮ್ಮೇಲನಗಳು ಪ್ರತಿತಾಲೂಕ ಮಟ್ಟದಲ್ಲಿಯೂ ನಡೆಯುವುದು ಅವಶ್ಯಕವಾದುದು. ಅದನ್ನು ನಡೆಸಬಲ್ಲ ಆ ಭಾಗದ ಸಂಘ-ಸಂಸ್ಥೆಗಳಿಗೆ ಸರಕಾರವು ಮುಕ್ತಮನಸ್ಸಿನಿಂದ ಧನಸಹಾಯ ಮಾಡಬೇಕು.

೫. ಈಗ ಸ್ನಾತಕೋತ್ತರ ಮಟ್ಟದಲ್ಲಿ ಮಾತ್ರ ನೀಡಲಾಗುತ್ತಿರುವ ಜಾನಪದ ಶಿಕ್ಷಣವನ್ನು ಪ್ರಾಥಮಿಕ, ಮಾಧ್ಯಮಿಕ ಮತ್ತು ಕಾಲೇಜು ಹಂತಗಳಲ್ಲಿಯೂ ನೀಡುವ ಯೋಜನೆಯನ್ನು ಶಿಕ್ಷಣ ಇಲಾಖೆ ಹಾಗೂ ವಿಶ್ವವಿದ್ಯಾಲಯಗಳು ಕೈಕೊಳ್ಳಬೇಕು.

೬. ಕರ್ನಾಟಕದ ವಿವಿಧ ಪ್ರಾದೇಶಿಕ ಜಾನಪದ ಕಲೆಗಳ-ಸಾಂಸ್ಕೃತಿಕ ಸಂಬಂಧ ಪರಸ್ಪರರಲ್ಲಿ ಒಡಮೂಡುವಂತೆ ಕರ್ನಾಟಕದ ಮೂರೂ ವಿಶ್ವವಿದ್ಯಾಲಯಗಳು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅನುಕೂಲವಾಗುವಂತೆ ವಿಶ್ವವಿದ್ಯಾಲಯಗಳು ಸುಸಂಬದ್ಧ ಯೋಜನೆಯೊಂದನ್ನು ಹಮ್ಮಿಕೊಳ್ಳಬೇಕು. ಮತ್ತು ಜಾನಪದ ಅಕಾಡೆಮಿ(Folk Academy)ವೊಂದನ್ನು ಸಂಘಟಿಸಿಕೊಳ್ಳಬೇಕು.

ವೈವಿಧ್ಯಮಯ ಮನರಂಜನೆ :

ಎರಡೂ ದಿನ ಸಭಾಂಗಣದಲ್ಲಿ ಕಿಕ್ಕಿರಿದ ಕಲಾರಸಿಕರು ಜಾನಪದ ಕಲೆಗಳ ಪ್ರದರ್ಶನವನ್ನೀಕ್ಷಿಸಿ ಸಂತೋಷಗೊಂಡರು.

೮-೧-೧೯೭೮ ರಂದು ಗೊಬ್ಬೂರಿನ ಶ್ರೀ ಭೋಜರಾಜ ಪಾಟೀಲ ಮತ್ತು ಮೇಳ, ಅಂಕಲಗಿಯ ಶ್ರೀ ಆನಂದರಾವ ಪೋಲಿಸಪಾಟೀಲ ಮತ್ತು ಮೇಳಗಳಿಂದ ಭಜನೆಯ ಹಾಡು, ಸಾವಳಗಿಯ ಶ್ರೀ ಮಹಮ್ಮದಸಾಬ ಮತ್ತು ಮೇಳದ ಗೀಗೀ (ಹರದೇಶಿ) ಪದ, ಕಲಬುರ್ಗಿಯ ಶ್ರೀ ಭವಾನಿರಾವ ಚವ್ಹಾಣ ಮತ್ತು ಮೇಳದ ಗೀಗೀ (ನಾಗೇಶಿ) ಪದ, ಗೊಂದಲಿಗರ ಹಾಡು, ಶ್ರೀ ಶರಣಪ್ಪ ಬಾಜಿ ಮತ್ತು ಮೇಳದ ಕಣಿಹಲಗಿ ವಾದನ, ಶ್ರೀಮತಿ ನಾಗಮ್ಮ, ಗುರುಬಾಯಿ ಇಂಗಳಗಿ ಮತ್ತು ಕು. ಮಹಾನಂದಾ ದಿಗ್ಗಾಂವಕರ ಇವರಿಂದ ಹೆಣ್ಣುಮಕ್ಕಳ ಹಾಡುಗಳಲ್ಲದೆ ಕಿನ್ನೂರಿನ ಶ್ರೀ ಷಡಕ್ಷರಯ್ಯಸ್ವಾಮಿ ಹಾಗೂ ಮೇಳದವರಿಂದ "ಶ್ರೀಕೃಷ್ಣ ಪಾರಿಜಾತ" ಬಯಲಾಟ ನಡೆದವು.

೯-೧-೧೯೬೭ರಂದು ಚಿಂಚಣಸೂರಿನ ಶ್ರೀ ಜಟ್ಟೆಪ್ಪ ಪೂಜಾರಿ ಮತ್ತು ಸಂಗಡಿಗರಿಂದ ನೂಪುರತಾಯಿ ಹಾಡು, ಕಲಬುರ್ಗಿಯ ಶ್ರೀಮತಿ ಪಾರ್ವತಿದೇವಿ ಹೊಂಬಳ ಇವರ ಬೀಸುಕಲ್ಲ ಹಾಡು, ಶ್ರೀಮತಿ ಲಕ್ಷ್ಮೀಬಾಯಿ ಮತ್ತು ಸಂಗಡಿಗರು, ಶ್ರೀ ಬಸಯ್ಯ ಪುರಾಣಿಕ ಇವರಿಂದ ಜಾನಪದ ಹಾಡು, ಶ್ರೀ ತಿಪ್ಪಣ್ಣ ಬೂತ್ಯಾ ಮತ್ತು ಮೇಳದ ಜೋಗತಿ ಕುಣಿತ, ಶ್ರೀ ಶಾಂತಪ್ಪ ದುದಣಿ ಇವರ ಲಾವಣಿಹಾಡು, ಗುಡಿಸಾಗರ ಸ್ವಾಮಿಗಳಿಂದ ಕಾಲಜ್ಞಾನ, ನಿಂಬಾಳದ ಶ್ರೀ ಎಸ್. ಎ. ಪಾಟೀಲ ಮತ್ತು ಮೇಳದವರಿಂದ "ದ್ರೌಪದಿ ವಿಲಾಸ" ದೊಡ್ಡಾಟ ಕಾರ್ಯಕ್ರಮಗಳು ಮನೋರಂಜಕವಾಗಿ ಏರ್ಪಟ್ಟವು.

ಸಮಾರೋಪ :

ಕಲಬುರ್ಗಿಯಲ್ಲಿ ಜರುಗಿದ ಜಾನಪದ ಸಮ್ಮೇಲನ ಇಲ್ಲಿಯ ಮಹಾಜನರ ಅಪೂರ್ವಾಸಕ್ತಿಯ ದ್ಯೋತಕವಾಗಿತ್ತು. ನಾನಾ ಕಡೆಗಳಿಂದ ಬಂದು ಒಂದುಗೂಡಿದ ವಿದ್ವಾಂಸರು ನಡೆಸಿಕೊಟ್ಟ ವಿಚಾರಗೋಷ್ಠಿಗಳು ತುಂಬ ಪ್ರಯೋಜನಕಾರಿಯಾಗಿದ್ದವು. ವಿವಿಧ ಭಾಗಗಳಿಂದ ಬಂದು ಸಂಗಮಿಸಿದ ಕಲಾಮೇಳಗಳ ರಂಗದರ್ಶನ ಬಹಳ ಆಕರ್ಷಣೀಯವಾಗಿದ್ದು, ಪ್ರೇಕ್ಷಕರ ಹೃನ್ಮನಗಳನ್ನು ತಣಿಸಿ ಬಹುಕಾಲ ಮಾಜದೇ ಉಳಿಯುವಂತಹವುಗಳಾಗಿದ್ದವೆಂದು ಹೇಳಬಹುದು. ಸಮಗ್ರ ಜಾನಪದ ಸಾಹಿತ್ಯ ದರ್ಶನ ನೀಡಿದ "ಜಾನಪದ ಗ್ರಂಥಪ್ರದರ್ಶನ" ಯೋಗ್ಯವಾಗಿತ್ತು.

ಜಾನಪದ ವಾದ್ಯ-ಹಾಡುಗಳ ಮಧುರ ಧ್ವನಿಮುದ್ರಿಕೆಗಳ ಸುಶ್ರಾವ್ಯ ಸಮ್ಮೇಲನದ ಪ್ರಾರಂಭದಿಂದ ಸಮಾಪ್ತಿಯ ವರೆಗೆ ಹಿತವಾಗಿ ತೆರೆಂಬೊಳೆದುದು ಔಚಿತ್ಯಪೂರ್ಣ.

ವಿದ್ವಾಂಸರಲ್ಲನೇಕರು ತಮ್ಮ ಪ್ರಬಂಧಗಳ ನಡುನಡುವೆ ಉದಾಹರಿಸಿದ ಜಾನಪದ ಪದ್ಯಗಳನ್ನು, ಮೂಲದ ಧಾಟಿಯಲ್ಲಿಯೇ ಹಾಡಿದ್ದರಿಂದ ಶ್ರೋತೃಗಳಿಗೆ ರಸಗ್ರಹಣಕ್ಕೆ ಬಹಳ ಸಹಾಯಕವಾಯಿತೆನ್ನಬಹುದು. ಅವರಲ್ಲೂ ಡಾ. ಬಿ. ಬಿ. ಹೆಂಡಿಯವರು ತಮ್ಮ ವಿದ್ವತ್ಪರಿಪ್ಲುತ ಉಪನ್ಯಾಸದುದ್ದಕ್ಕೂ ಮಾಡಿದ ಲಾವಣಿ-ಗೀಗಿ ಪದಗಳ ಲಯ ನಿರೂಪಣೆ ಸೊಗಸಾಗಿದ್ದಿತು. ಶ್ರೋತೃಗಳನ್ನು ಮಂತ್ರಮುಗ್ಧರನ್ನಾಗಿಸಿದ ಶ್ರೀ ದೊಡ್ಡನಗೌಡರ ಜಾನಪದ ಹಾಡುಗಾರಿಕೆ ಸ್ಮರಣೀಯ.

ಅಖಿಲ ಕರ್ನಾಟಕ ಐದನೆಯ ಜಾನಪದ ಸಮ್ಮೇಲನವನ್ನು ಕಲಬುರಗಿ ನಗರದಲ್ಲಿ ಸಂಘಟಿಸಿ, ಅದರ ಅಪೂರ್ವ ಯಶಸ್ಸಿಗೆ ಕಾರಣವಾದ ಸ್ವಾಗತ ಸಮಿತಿಯ ವಿಶೇಷ ಶ್ರಮ ಹಾಗೂ ಅನೇಕ ಮಹನೀಯರು ಪ್ರತ್ಯಕ್ಷ ಇಲ್ಲವೆ ಪರೋಕ್ಷವಾಗಿ ಇತ್ತ ನೆರವು-ಎರವುಗಳ ಪರಿ ನಿಜಕ್ಕೂ ಅಭಿನಂದನಾರ್ಹವಾದವುಗಳಾಗಿವೆ.

ವಾರ್ತಾಪತ್ರಿಕೆಗಳ, ಹೈದರಾಬಾದ ದೂರದರ್ಶನ ಇಲಾಖೆ ಹಾಗೂ ಕಲಬುರ್ಗಿ ಆಕಾಶವಾಣಿ ಕೇಂದ್ರಗಳ ಸಹಕಾರ-ಸೌಜನ್ಯಗಳಿಂದಾಗಿ ಸಮ್ಮೇಲನದ ಸರ್ವ ಚಟುವಟಿಕೆಗಳ ಪ್ರಚಾರ-ಪ್ರಸಾರಗಳ ವಿಷಯಕವಾದ ಕಾರ್ಯ ಹೇಳಿಕೊಳ್ಳುವಂತಹದು.

ಜಾನಪದ ಜ್ಞಾನದಾರೋಗಣೆಯಿಂದ ಸಮಸ್ತ ಜನತೆಯನ್ನು ಸಂತೃಪ್ತಗೊಳಿಸಿದ ಸುಯೋಗವನ್ನು ಸಮ್ಮೇಲನ ಒದಗಿಸಿಕೊಟ್ಟು ಸಾರ್ಥಕ್ಯವನ್ನು ಹೊಂದಿದರೆ, ಸಮ್ಮೇಲನಕ್ಕೆ ಬಂದ ಕಲಾಕಾರರಿಗೂ ಇತರ ಅತಿಥಿ-ಅಭ್ಯಾಗತರಿಗೂ ಔದಾರ್ಯಕೆ ಉದಾಹರಣೆ ಎನಿಸುವಂತೆ ಶ್ರೀ ಶರಣಬಸವೇಶ್ವರ ಸಂಸ್ಥಾನ ಅನ್ನದಾಸೋಹದ ಸತ್ಕಾರಭಾಗ್ಯದಿಂದ ಧನ್ಯತೆಯನ್ನು ಪಡೆಯಿತು.

ಈ ಅರ್ಥಪೂರ್ಣ ಕಾರ್ಯವನ್ನು ಅನೇಕರ ಮಹೋಪಕಾರದಿಂದ ಸಮರ್ಪಕವಾಗಿ ನೆರವೇರಿಸಿದ ತೃಪ್ತಿ, ಹೆಮ್ಮೆ, ಕೀರ್ತಿ ಕನ್ನಡ ಅಧ್ಯಯನಪೀಠದ್ದಾಗಿದೆ.

ಪ್ರತಿ ವರ್ಷವೂ ಇಂಥ ಯಥೋಚಿತ ಸಮ್ಮೇಲನಗಳನ್ನು ನಡೆಸುವ ಸತ್ಸಂಪ್ರದಾಯ ಉಳಿದುಕೊಂಡು ಬರಬೇಕು. ಸಮ್ಮೇಲನಗಳ ಅಂಗವಾಗಿ ನಡೆಸುವ ಗೋಷ್ಠಿಗಳಲ್ಲಿ ಜಾನಪದ ಸಾಹಿತ್ಯದ ಪ್ರಮುಖ ಪ್ರಕಾರಗಳ ಶಾಸ್ತ್ರೀಯವಾದ ಸಮೀಕ್ಷೆ ನಡೆಯುವಂತಾದರೆ ಅವುಗಳ ಮೌಲ್ಯಮಾಪನಕ್ಕೆ ಪೂರಕವಾಗುವುದು. ನಾಡಿನ ಬೇರೆ ಬೇರೆ ಕಡೆಗಳಲ್ಲಿ ಸಮ್ಮೇಲನಗಳು ವ್ಯವಸ್ಥಿತವಾಗಿ ನಡೆಯುವಂತಾದರೆ ಅವುಗಳ ಅಂಗವಾಗಿ ಹಮ್ಮಿಕೊಂಡ ಜಾನಪದ ವಿಚಾರಗೋಷ್ಠಿ ಹಾಗೂ ಕಲಾಪ್ರದರ್ಶನಗಳಲ್ಲಿ ಆಯಾ ಪ್ರದೇಶಗಳ ವಿಶಿಷ್ಟ ಜಾನಪದ ಸಾಹಿತ್ಯ ಪ್ರಕಾರ ಹಾಗೂ ಕಲೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಒದಗುವಂತಾಗಿ, ಸಮ್ಮೇಲನಗಳ ನಿರ್ದಿಷ್ಟ ಉದ್ದೇಶ ಫಲಪ್ರದವಾಗುವುದರಲ್ಲಿ ಯಾವ ಸಂದೇಹವಿಲ್ಲ.

● ●

ಗ್ರಂಥಾವಲೋಕನ

“ಅಭಿಮನ್ಯು” (ಕವನ ಸಂಕಲನ) : ಅನ್ನದಾನಿ ಹಿರೇಮಠ; ಪ್ರ. ವಿಜಯಶ್ರೀ ಪ್ರಕಾಶನ, ‘ಶ್ರೀ ಮೃತ್ಯುಂಜಯ ಕೃಪಾ’ ಜಯನಗರ, ಧಾರವಾಡ-೧; ೧೯೭೬; ಪು. ೪೦; ಬೆಲೆ; ರೂ. ೫-೦೦

ಸಂಕಲನದ ಅಂದ ಚಂದ, ಮುದ್ರಣದ ಅಚ್ಚುಕಟ್ಟುತನ ನೋಡಿದರೆ ಹೊಸ ಕವಿ ಶ್ರೀ ಅನ್ನದಾನಿ ಹಿರೇಮಠರವರಿಗೆ ಒಳ್ಳೆಯ ಅಭಿರುಚಿ ಮತ್ತು ಸಾಕಷ್ಟು ಮಹತ್ವಾಕಾಂಕ್ಷೆ ಇರಬೇಕೆಂದು ಅನಿಸುತ್ತದೆ. ಯುವಪೀಳಿಗೆಯಲ್ಲಿಂದು ಸಾರ್ವತ್ರಿಕ ವಾಗಿರುವ ಒಂದು ನಮೂನೆಯ ನಿರಾಸೆ, ನಿರ್ಲಿಪ್ತತೆಗಳನ್ನು ಲೆಕ್ಕಕ್ಕೆ ತೆಗೆದು ಕೊಂಡರೆ ಅನ್ನದಾನಿಯವರಲ್ಲಿ ಸ್ಫುಟವಾಗಿರುವ ಈ ಹುರುಪು, ಹುಮ್ಮಸ್ಸು ಅಭಿ-ಮಾನವನ್ನಂತೂ ಅವರ ಬಗ್ಗೆ ಮೂಡಿಸುತ್ತವೆ ಕನ್ನಡ ಪತ್ರಿಕೆ, ನಿಯತಕಾಲಿಕ ಗಳಲ್ಲಿ ತಮ್ಮ ಚುಟುಕುಗಳಿಂದ, ಪದ್ಯಗಳಿಂದ ಬಹುಶ್ರುತರಾಗುತ್ತಿರುವ ಅನ್ನದಾನಿ ಹಿರೇಮಠರ ಪಾಲಿಗೆ ಕಾವ್ಯ ಕಟ್ಟುವ ಕೆಲಸ, ಅವರ ಮನೆತನದ ‘ಸಾಹಿತ್ಯ ಪರಂಪರೆ ಹಾಗೂ ವಾತಾವರಣ’ದ ಫಲವಾಗಿದೆ-ಎಂಬರ್ಥದ ಡಾ. ಕಾಪಸೆಯವರ(ಹಿಂಪುಟದ) ನುಡಿಗಳನ್ನು ಗಮನಿಸಿದಾಗ ಈ ಕವಿಯಲ್ಲಿ ಇಂಬುಗೊಂಡಿರುವ ಸದಭಿರುಚಿ ಹಾಗೂ ಮಹತ್ವಾಕಾಂಕ್ಷೆಗಳು ಆಕಸ್ಮಿಕವೇನಲ್ಲ ಎಂಬುದೂ ಮನವರಿಕೆಯಾಗುತ್ತದೆ.

ಕ್ರೀಡಾಶಾಸ್ತ್ರ, ಸಸ್ಯಶಾಸ್ತ್ರಗಳಲ್ಲಿ ಸ್ನಾತಕೋತ್ತರಪದವಿ ಪಡೆದಿರುವ ಅನ್ನದಾನಿಯವರು ‘ಅಭಿಮನ್ಯು’ವಿನಂತೆ ಕ್ರೀಡಾಮನೋಭಾವದ ವ್ಯಕ್ತಿಯಾಗಿ ದ್ದಾರೆ. ಅವರ ಮನೋಭಾವನೆಯ ಪ್ರತೀಕವಾಗಿ ‘ಅಭಿಮನ್ಯು’ ಕವನವೇ ಮೂಡಿ ಬಂದದ್ದು ಸಂಕಲನದ ಒಟ್ಟು ಧ್ಯೇಯವನ್ನು ಪ್ರತಿನಿಧಿಸುತ್ತದೆ. ಆ ಅಭಿಮನ್ಯು, ವಯಸ್ಸಿನಿಂದ ಹದಿ ಹರೆಯದ ಬಾಲಕ. ಆದರೆ’

> “ಬಾಲತನವೇನೂಣಯುವೆ ? ಕ
> ಟ್ಟಾಳುತನವಾಭರಣವು ಅವನೀ
> ಪಾಲ ಸುತರಿಗೆ.........”
>
> (ಗದುಗಿನ ಭಾರತದ ದ್ರೋಣಪರ್ವ: ಸಂ. ೫; ೨೦)

ಎಂಬ ಆತ್ಮವಿಶ್ವಾಸವಿಟ್ಟುಕೊಂಡು ವೈರಿಗಳ ಚಕ್ರವ್ಯೂಹವನ್ನು ಪರಾಕ್ರಮದಿಂದ ಸೀಳಿದವನು. ಅಂತಿಮವಾಗಿ ಅದರಲ್ಲೇ ಸಿಕ್ಕು ಸತ್ತರೂ ಸೋತು ಗೆದ್ದ ಛಲಗಾರ ನವನು. ಪುರಾಣದ ಈ ಪರಾಕ್ರಮಿ ಪುರುಷನೊಂದಿಗೆ ತನ್ನನ್ನು ಗುರುತಿಸುವ

ಮೂಲಕ ಅನ್ನದಾನಿಯವರು ಅಂದಿನ ಅಭಿಮನ್ಯು ಎದುರಿಸಿದ ಪ್ರಾಮಾಣಿಕ ಇಕ್ಕಟ್ಟಿನ ಸ್ಥಿತಿಯನ್ನೂ, ಇಂದಿನ ವಿಷಮ ಸಮಾಜ(ವ್ಯೂಹ)ದಲ್ಲಿ ತಾನು ಎದುರಿಸುತ್ತಿರುವ ಅಪ್ರಾಮಾಣಿಕ ಸ್ಥಿತಿಯನ್ನೂ ಸಮೀಕರಿಸುತ್ತ–

"ಕೈಲಾಗದಾ
ರಣಹೇಡಿಗಳು
ಎದುರಿಗೆ ನಿಂತು
ಹೋರಾಡಲಾಗದೇ
ಹಿಂಬದಿಯಿಂದ
ಬಂದು
ಬರ್ಚಿ ಚುಚ್ಚಿದುದು
ವೀರತನವೆ ?"

ಎಂದು ಬೆರಗುಪಡುವಲ್ಲಿ ಪ್ರಾಮಾಣಿಕ ವ್ಯಕ್ತಿತ್ವದ ಹತಾಶೆ, ನೋವು, ವಿಷಾದದ ಛಾಯೆ ಪ್ರಕಟವಾಗುತ್ತದೆ. ಗುರಿಯಿಲ್ಲದ, ಧ್ಯೇಯ ನಿಷ್ಠೆಗಳಿಲ್ಲದ ಈ ಅಸಂಬದ್ಧ ಸಮಾಜ ವ್ಯೂಹದ ನಡುವೆ ಧೀರತ್ವವಿದ್ದೂ ಮೋಸಕ್ಕೆ ತಲೆ ತೆರಬೇಕಾದ ವ್ಯಕ್ತಿಯ ಹಂಬಲ, ಆಸೆ, ಆಕಾಂಕ್ಷೆಗಳ ದುರಂತವನ್ನು ವ್ಯಾಖ್ಯಾನಿಸುವ ಹವಣಿಕೆ ಇಲ್ಲಿದೆ. ಕಾವ್ಯದಂತಹ ಸೂಕ್ಷ್ಮ ಕಲಾಭಿವ್ಯಕ್ತಿಯ ಮೂಲಕ ಇಂಥ ವಸ್ತುವನ್ನು ಪ್ರಕಟಗೊಳಿಸಲಿಚ್ಛಿಸುವ ಅನ್ನದಾನಿಯವರ ಕಾವ್ಯ ದೃಷ್ಟಿಕೋನ ಮೆಚ್ಚುವಂತಹುದು.

ಕಾವ್ಯದೃಷ್ಟಿಯೊಂದನ್ನು ಆರಿಸಿಕೊಳ್ಳುವಲ್ಲಿ ಈ ಕವಿ ಸಫಲತೆ ಪಡೆದಿರುವಷ್ಟೇ ಹಾಗೆ ಆರಿಸಿಕೊಂಡ ವಸ್ತುವಿಗೆ ಕಾವ್ಯದ ಆಕೃತಿಯನ್ನೂ, ಕಾವ್ಯದಲ್ಲಿ ತನ್ನ ಅನುಭವಕ್ಕೆ ತಕ್ಕುದಾದ ವಸ್ತುಪ್ರತಿರೂಪವನ್ನು ನೀಡುವಲ್ಲಿ ವಿಫಲತೆಯನ್ನು ಪಡೆದಿರುವುದು ಬೇಸರದ ಸಂಗತಿ. ಪ್ರಾಥಮಿಕಮಟ್ಟದ ತೃಪ್ತಿಯನ್ನಾದರೂ ನೀಡುವಲ್ಲಿ ಇವರ ಗಂಭೀರ ಚಿಂತನೆಯ ಪದ್ಯಗಳು ಸೋತಿವೆ. "ಹೆಣಗಳು ಮತ್ತು ಕಾಗೆಗಳು", "ದಾರಿ", "ಕರೆಂಟಿನ ಬಟನ್ನುಗಳು", "ವಿಚಿತ್ರ ಜನಗಳು" ಈ ಎಲ್ಲ ಕವಿತೆಗಳೂ ಪೂರ್ಣವಾಗಿ ತಮ್ಮನ್ನು ಭಾಷೆಯಲ್ಲಿ ತೆರೆದುಕೊಂಡಿಲ್ಲ. ಕವನದ ಶಿಲ್ಪ ಬೆಳೆ ಬೆಳೆವ ಮುನ್ನವೇ ಕೆತ್ತುವ ಚಾಣ ಕೆಳಗುರುಳಿ ಮೂರ್ತಿ ಮಸುಕಾಗುತ್ತದೆ. ಆದರೆ ಸಣ್ಣ ಪದ್ಯಗಳಲ್ಲಿ ಮಾತ್ರ ಈ ದೋಷ ಲಕ್ಷ್ಯಕ್ಕೆ ಬರದಿರುವುದು ಸಮಾಧಾನದ ಸಂಗತಿ. ಅಲ್ಲಿಯೂ ಕೂಡ ಹಿರಿದನ್ನು ಕಿರಿದರಲ್ಲಿ ಕೌಶಲ್ಯಪೂರ್ಣವಾಗಿ, ವಕ್ರೋಕ್ತಿಯ ವಿಲಾಸ ಸೂಸುತ್ತ ಹೇಳುವ ಪ್ರಯತ್ನವಿಲ್ಲ. ಒಂದು ಗಳಿಗೆಯಲ್ಲಿ ಕಾವುಕೊಟ್ಟು, ಮಸಮಸುಕಾದ ಒಂದು ಚಿತ್ರ ಮೂಡಿಸಿ, ಸಾಮಾನ್ಯಾನುಭವದ ಅರ್ಥಸ್ಫುರಿಸಿ– ಈ ಸಣ್ಣ ಪದ್ಯಗಳು ನೆನಪಿನಿಂದ ಮರೆಯಾಗಿ ಬಿಡುತ್ತವೆ.

ಶ್ರೀ ಅನ್ನದಾನಿಯವರಿಗೆ ಸ್ವಾನುಭವವನ್ನು ಕಾವ್ಯ ಮಾಡುವ ಮುಂಚೆ ಸಾಕಷ್ಟು ಕಾಯ್ದು, ತಕ್ಕಷ್ಟು ಪರಿಶ್ರಮಿಸುವ ರೂಢಿಯಿದ್ದಂತಿಲ್ಲ. 'ಚಕ್ರ' ಎಂಬ ಪದ್ಯ ಮಾತ್ರ ಕವಿಯ ವಿಶಿಷ್ಟ ಮನೋಧರ್ಮವನ್ನು ವಿಭಿನ್ನವಾಗಿ ಹೇಳಲು ಹೊರಟಂತಿದೆ.

"ದಿನಗಳನ್ನು ನಾನು
ಕಳೆಯುತ್ತೇನೆಯೊ
ನನ್ನನ್ನು ದಿನಗಳು
ಕಳೆಯುತ್ತವೆಯೊ
ಪ್ರಶ್ನೆ ಕಾಡಿಸುತ್ತದೆ.
. . . .
. . . .
. . . .
. . . .
ಅದೇ ಚಕ್ರ
ಅದನೆ ತಿರುಗಿಸಿದರೂ
ಹಳತು ಹೊಸತುಗಳು ?
ಮತ್ತೆ ಮನಸು ಪ್ರಶ್ನಿಸಿದಾಗ
ಉತ್ತರ ಸಿಗದೆ
ನಿರಾಶನಾಗಿ ನಿಶ್ಶೆಯಾಗುತ್ತದೆ.

ತಾನು ಪಡೆದ, ಅನುಭವಿಸಿದ ಅನಿಸಿಕೆಗಳ ಮೇಲೆ, ಕಾವು ಕೂತು, ಕಲ್ಪಕ ಶಕ್ತಿಯುಳ್ಳ ಪದಗಳನ್ನು ಸಂಯೋಜಿಸಿಕೊಂಡು, ವಿಭಿನ್ನ ಧಾಟಿ, ಲಯಗಳ ಮೂಲಕ ಕವನ ರಚಿಸಬಲ್ಲ ಕೆಲಸ ಅನ್ನದಾನಿಯವರಿಂದ ಇನ್ನೂ ಸಾಧ್ಯವಾಗಬೇಕಾಗಿದೆ. ಟೀಕೆಯ ಕಟುಮಾತಿನಿಂದ ವಿಚಲಿತರಾಗದೆ, ಆತ್ಮಶೋಧನೆಯನ್ನಿವರು ಕೈಕೊಂಡಷ್ಟೇ ಆದರೆ ಉತ್ತಮ ಕಾವ್ಯ ಮುಂದಾದರೂ ನೀಡಬಹುದಾಗಿದೆ.

—ಎಸ್. ಜಿ. ಬಿದರಕುಂದಿ

"ಕಲ್ಲರಳಿ ಹೂವಾಗಿ" (ಕವನ ಸಂಕಲನ) : ಲೇ : ಜಗದೀಶ ಮಂಗಳೂರಮಠ, ಪ್ರ: ಅನ್ವೇಷಣ ವಿಚಾರವೇದಿಕೆ ಮತ್ತು ಪ್ರಕಾಶನ, ಕೇಶವಾಪುರ, ಹುಬ್ಬಳ್ಳಿ; ೧೯೭೬ ಜೂನ; ಬೆಲೆ: ೫–೦೦.

ತಮ್ಮ ಮೊದಲ ಕವನ ಸಂಕಲನದಲ್ಲೇ ಅತ್ಯಂತ ಭರವಸೆಯನ್ನು ಹುಟ್ಟಿಸುವ ಕವಿಯಾಗಿ ನಿಂತಿದ್ದಾರೆ. ಶ್ರೀ ಜಗದೀಶ ಮಂಗಳೂರಮಠರು. ಗಟ್ಟಿ ವಿಚಾರಗಳನ್ನು

ಸಮಸ್ತ ಧ್ವನಿಯೊಂದಿಗೆ ಮೈಗೂಡಿಸಿಕೊಂಡುಬರುವಲ್ಲಿ ಕವಿಯ ಹೊಸಕಾಳಜಿ ತಟ್ಟನೆ ಗೊತ್ತಾಗುತ್ತದೆ. ಸಾಮಾಜಿಕ, ರಾಜಕೀಯ ಪ್ರಜ್ಞೆಯಿಂದೊಡಗೂಡಿದ ಅನೇಕ ಬೆಳೆದ ಕವನಗಳಲ್ಲಿ ಸಮೃದ್ಧಭಾವ ಸೂಸಿದೆ. ಕಲ್ಲನ್ನು ಅರಳಿಸಿ ಹೂವಾಗಿಸುವಲ್ಲಿ ಕವಿ ಸಂಪೂರ್ಣ ಯಶಸ್ವಿಯಾಗಿದ್ದಾನೆ.

ಸುತ್ತಲಿನ ನಾಡಿನಲಿ ಮನವಾರೆ ಮಳೆಯಾಗಿ
ತಗ್ಗುದಿನ್ನೆಯ ತುಂಬೆಲ್ಲ ಹಸಿರುಡಿಸಿ ಹೋದರೂ
ನನ್ನೆದೆಯ ನಾಡಿನಲಿ ಬರಗಾಲ ತಪ್ಪಲಿಲ್ಲ. —'ಬೆಂಕಿ'

ಎನ್ನುವಲ್ಲಿ ಕವಿಯ ಒಳಧ್ವನಿ ಆಂತರಿಕ ಮಿಡಿತವನ್ನುಂಟುಮಾಡುತ್ತದೆ. ಸುತ್ತಲಿನ ವೈಭವದೊಂದಿಗೆ ತನ್ನ ಅಸಹಾಯಕತೆಯ ಅನಾಥಪ್ರಜ್ಞೆ ಬಹಳ ಮಾರ್ಮಿಕವಾಗಿದೆ. ಕಳವಳದೊಂದಿಗಿನ ಸಂಶಯವೂ ಕವಿಗೆ ಕಾಡಹತ್ತಿದೆ; ಆದ್ದರಿಂದ

ನನ್ನ ಗೋರಿಯ ಮೇಲಾದರೂ ಕೊಂಚ
ಹಸಿರು ಬೆಳದೀತೆ ? ಬೆಂಕಿ ಆರೀತೆ ?

—'ಬೆಂಕಿ'

ಎನ್ನುವಲ್ಲಿ ನಿಸ್ಸಹಾಯಕತೆಯ ಇಡಿಯಾದ ಧ್ವನಿ ಹರಿದು ಬಂದಿದೆ. ಹಲವಾರು ಸಮಸ್ಯೆಗಳ ಸುಳಿಯ ತಿರುಗುಣಿಮಡದಲ್ಲಿ ಬಿದ್ದ ಕವಿ

ಮತ್ತೇಕೆ ಕರುಣೆಯ ಮಲಾಮು ಮೆತ್ತುವೆ
ಪ್ರೀತಿ ತೈಲವ ಸವರಿ ಮೈತಿಕ್ಕುವೆ ?

—'ಕುಲುಮೆ'

ಎನ್ನುವಲ್ಲಿ ನಿಷ್ಠುರತೆಯ ಖಾರಧ್ವನಿ ಹೃದಯಕ್ಕೆ ಮುಟ್ಟುವಂತಿದೆ. ನೊಂದ ಧ್ವನಿಯೊಂದಿಗೆ ಬರುವ ನಿಟ್ಟುಸಿರು ಕವಿಯ ಮೂಲಧೋರಣೆಗೆ ಪೋಷಕವಾಗಿ ಬಂದಿದೆ.

ಒಡೆದ ಚೂರುಗಳ ಕೂಡಿಸಿ ಮತ್ತೆ ಕಟ್ಟಲೇನು
ಮುಗಿದ ನಾಟಕಕಿನ್ನೊಮ್ಮೆ ನಾಂದಿಗೀತೆಯ ಹಾಡಲೇನು

—'ನಿರಾಶೆ'

'ನಿರಾಶೆ'ಯ ಪದ್ಯದಲ್ಲಿಯೂ ಕವಿ ಆಶೆಯ ಚಿಗುರನ್ನು ತಾಳಿದ್ದರಿಂದ, ಎಡೆಬಿಡದೆ ನಡೆಸುವ ಪ್ರಯತ್ನದೊಂದಿಗೆ ಹೋರಾಡುವದರಿಂದ ಶ್ರೀ ಮಂಗಳೂರಮಠರ ರಚನೆ ನಿಜವಾಗಿಯೂ ಸಾರ್ಥಕವೆನಿಸುತ್ತದೆ.

ಓಡಬೇಕೋಡಬೇಕೆಂದು ಹಾತೊರೆಯುವ ಒಳಮನಸ್ಸು ಕತ್ತಲನ್ನೇ ಗಟಗಟ ಕುಡಿಯುವ ನಿರ್ಧಾರಕ್ಕೆ ಬರುವದು 'ಉತ್ಕಟ' ಕವನದಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಸಮೃದ್ಧಧ್ವನಿಯನ್ನು ತುಂಬಿಕೊಂಡು ಬರುವ ಬೆಂಕಿ, ಗೋರಿ, ಚೂಪಗಲ್ಲು, ಕಠಾರಿ, ಮಿಂಡ, ಕುಡಗೋಲು, ಗೂಳಿ, ರಕ್ತ, ಈಟಿ, ಇಕ್ಕಳ, ತಪ್ತಸೂರ್ಯ, ಕಾಡಕಬ್ಬಿಣ ಇನ್ನೂ ಮುಂತಾದವುಗಳು ಕವಿಯ ಒಟ್ಟುಧೋರಣೆಯನ್ನು ಸ್ಪಷ್ಟ

ಪಡಿಸಿ, ಹಸಿಗೋಡೆಗೆ ಹಳ್ಳು ಒಗೆದಹಾಗೆ ಬರುವ ಪದಜೋಡಣೆ, ಸಾರ್ಥಕ ಪೂರ್ಣ ಪ್ರತಿಮೆ–ಸಂಕೇತಗಳ ಬಳಕೆ ಸಮರ್ಥವಾಗಿ ಬರುತ್ತಿರುವದು ನಿಜಕ್ಕೂ ಪ್ರಶಂಸನೀಯ.

ವಾಸ್ತವ ಸತ್ಯಗಳಾಗುತ್ತವೆ; ಸತ್ಯಗಳು ಚುಚ್ಚುತ್ತವೆ
ಚುಚ್ಚುವ ಸತ್ಯಗಳ ಮಧ್ಯ ಕನಸುಗಳು ಕುಸಿಯುತ್ತವೆ —'ದುರಂತ'

ಇಲ್ಲಿಯ ಒಟ್ಟು ಧೋರಣೆ ಕವಿಯ ಒಳಮನಸ್ಸಿನ ಪದರುಗಳಲ್ಲಿ ಪೂರ್ತಿಯಾಗಿ ಪಸರಿಸಿ ಚುಚ್ಚುವ ಸತ್ಯಗಳ ಗಟ್ಟಿತನವನ್ನು ವಾಸ್ತವ ಬದುಕಿಗೆ ಅದು ತೀರ ಹತ್ತಿರವಾಗುವ ರೀತಿಯನ್ನು 'ದುರಂತ'ದಲ್ಲಿ ಅಡಗಿಸಿಟ್ಟಿರುವದು ಅವರ ಕವನ ಕಟ್ಟುವ ಕುಶಲತೆ ಯನ್ನು ಎತ್ತಿ ತೋರಿಸುತ್ತದೆ.

ಮತ್ಸರವಿಷವನ್ನು ಎದೆಯಲ್ಲಿ ತುಂಬಿಕೊಂಡು ಗಟಾರದ ವಾಸನೆಯಂತೆ ಹೊಲಸು ನಾರುವ ಪರಿಸರವನ್ನು ಕಂಡು 'ಈ ಸತ್ತ ದೇಶದ ವ್ಯರ್ಥ ಜನಗಳ ಮಧ್ಯ' ಕವಿ ತನ್ನನ್ನೇ ತಾನು ಬತ್ತಲೆಗೊಳಿಸಿಕೊಂಡರೂ,

ಸುತ್ತಲೂ ಚಿಮ್ಮುರುವ ಕುತ್ಸಿತ ನಗೆ ಕಾರಂಜಿಯ
ನಡುವೆ ಗಚ್ಚಿನ ಗೋರಿಯಾಗಲಾರೆ —'ಅಸ್ತಿತ್ವ'

ಎಂದು ತನ್ನ ಇರುವಿಕೆಯನ್ನು ಸ್ಪಷ್ಟಪಡಿಸಿ ಇಲ್ಲಿಯ ಬದುಕು ಕಷ್ಟದಲ್ಲಿದ್ದಾಗ್ಯೂ ಬಾಳಿಯೇ ತೀರುವ ಹಟ, ಬದುಕಲೇಬೇಕೆಂಬ ಛಲ, ಕಲ್ಲನ್ನೂ ಕರಗಿಸಿ ಹೂವಾಗಿಸುವ ತಾಕತ್ತು ಇವರಲ್ಲಿ ಎದ್ದು ಕಾಣುವುದರಿಂದ ಶ್ರೀ ಮಂಗಳೂರಮಠರು ನನಗೆ ಅರ್ಥ ಪೂರ್ಣರಾಗಿ ಕಾಣುತ್ತಾರೆ.

ಶಿವರಾಮ ಕಾರಂತರ 'ಅಳಿದಮೇಲೆ' ಕಾದಂಬರಿಯನ್ನು ಓದಿ ಬರೆದ ಕವನ ಅದರ ಒಟ್ಟು ಧೋರಣೆಯ ವಿಮರ್ಶೆಯಾಗಿ ಸ್ಪಷ್ಟತನದಿಂದ ಎದ್ದು ಕಾಣುತ್ತದೆ.

ಇವರ ಕವನಗಳ ಮೇಲೆ ಕಣ್ಣಾಡಿಸುತ್ತಾ ಹೋದಾಗಲೆಲ್ಲಾ ಅಲ್ಲಲ್ಲಿ ಕೆಲ ಪ್ರಮುಖ ಕವಿಗಳ ಪ್ರಭಾವವಿದ್ದರೂ, ಕವಿ ತನ್ನತನವನ್ನು ಗಟ್ಟಿಯಾಗಿಸಿಕೊಂಡು ಬದುಕಿನ ವಿವಿಧ ಮುಖಗಳ ಸಮಸ್ಯೆಗಳನ್ನು ಬಿಚ್ಚುತ್ತಾ ಹೋಗಿರುವದು ಗಮನಾರ್ಹ ವಾದುದು. ಶ್ರೀ ಮಂಗಳೂರಮಠರ ಈ ಚೊಚ್ಚಲಕೃತಿ ನಿಜಕ್ಕೂ ಆಶೆ ಹುಟ್ಟಿಸು ವಂತಹದು.

—ಬಸವರಾಜ ಸಬರದ

ಸಂಪಾದಕೀಯ

ಕುಲಪತಿಗಳಿಗೆ ಸ್ವಾಗತ

ಶ್ರೀ. ಸದಾಶಿವ ಒಡೆಯರ್ ಅವರು ನಮ್ಮ ರಾಜ್ಯವುಟ್ಟದ ಸುಪ್ರತಿಷ್ಠ ವ್ಯಕ್ತಿಗಳಲ್ಲಿ ಒಬ್ಬರು. ಕರ್ನಾಟಕ ವಿಶ್ವವಿದ್ಯಾಲಯದ ಅವಿಭಾಜ್ಯ ಅಂಗವಾಗಿ ಬೆಳೆದ ಅವರು; ಇಂದು ಕುಲಪತಿಗಳಾಗಿ ಬಂದುದು ಸೂಕ್ತ ಆಗಮನ. ಉತ್ತಮೋತ್ತಮ ಕುಲಪತಿಗಳನ್ನು ಪಡೆದ ಈ ವಿದ್ಯಾಸಂಸ್ಥೆಯ ಕೀರ್ತಿಪರಂಪರೆಗೆ ಉತ್ತರಾಧಿಕಾರಿಗಳಾಗಿ ಆಗಮಿಸಿರುವ ಅವರು ಈ ಸ್ಥಾನಕ್ಕೆ ತುಂಬ ಅರ್ಹರು; ಸಮರ್ಥರು. ಸಾಹಿತ್ಯಕೃಷಿ, ಆಡಳಿತಕೌಶಲ, ಉದಾರವ್ಯಕ್ತಿತ್ವಗಳ ತ್ರಿಕೂಟವಾದ ಅವರಿಗೆ ಸ್ವಾಗತವನ್ನು ಕೋರುತ್ತ, ಅವರಿಂದ ವಿಶ್ವವಿದ್ಯಾಲಯ, ವಿಶ್ವವಿದ್ಯಾಲಯದಿಂದ ಅವರು ಘನತೆಯ ಮೇಲೆ ಘನತೆಗಳನ್ನು ಪಡೆಯಲೆಂದು "ಕರ್ನಾಟಕ ಭಾರತಿ" ಹಾರೈಸುತ್ತದೆ.

ಅಖಿಲ ಕರ್ನಾಟಕ ಜಾನಪದ ಸಮ್ಮೇಲನ

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಅಪೂರ್ವ ಪರಂಪರೆಗಳಲ್ಲಿ "ಅಖಿಲ ಕರ್ನಾಟಕ ಜಾನಪದ ಸಮ್ಮೇಲನ" ಅಗ್ರ ಸ್ಮರಣೀಯವಾದುದು. ಈ ವರೆಗೆ ಮೂರು ಸಮ್ಮೇಲನಗಳನ್ನು ವಿಶ್ವವಿದ್ಯಾಲಯ ಆವರಣದಲ್ಲಿ ನೆರವೇರಿಸಿದ ಅಧ್ಯಯನಪೀಠ, ನಾಲ್ಕನೆಯ ಸಮ್ಮೇಲನವನ್ನು ಕಲಬುರ್ಗಿಯಲ್ಲಿ ವಿಜೃಂಭಣೆಯಿಂದ ಆಚರಿಸುವಲ್ಲಿ ಈ ಪರಂಪರೆಗೆ ಒಂದು ಹೊಸಮುಖ ಪ್ರಾಪ್ತವಾಯಿತು. ಕುಲಪತಿ ಡಾ. ಆರ್. ಸಿ. ಹಿರೇಮಠ ಅವರ ಸಂಕಲ್ಪದ ಸಾಕಾರ ರೂಪವಾದ ಈ ಸಮ್ಮೇಲನ ಅವರ ಅಮೃತಹಸ್ತದಿಂದ ಉದ್ಘಾಟಿಸಲ್ಪಟ್ಟಿತು. ಸಾಹಿತ್ಯ, ನಾಟಕ ಮತ್ತು ಗಮಕಕ್ಷೇತ್ರಗಳಲ್ಲಿ ಗಮನಾರ್ಹ ಸೇವೆಸಲ್ಲಿಸುತ್ತಲಿರುವ ಶ್ರೀ. ಜೋಳದರಾಶಿ ದೊಡ್ಡನಗೌಡರ ಅಧ್ಯಕ್ಷತೆಯಿಂದ ಅಧಿವೇಶನಕ್ಕೆ ಇನ್ನೂ ಗೌರವ ಪ್ರಾಪ್ತವಾಗಿದ್ದಿತು. ಸಮ್ಮೇಲನಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗುತ್ತಲಿರುವ ಕನ್ನಡ ಅಧ್ಯಯನಪೀಠಕ್ಕೆ, ಈ ಸಮ್ಮೇಲನವನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಕಲಬುರ್ಗಿಯ ಸ್ವಾಗತಸಮಿತಿಯ ವರ್ಗಕ್ಕೆ 'ಭಾರತಿ'ಯ ಅಭಿನಂದನೆಗಳು.

ಡಾ. ರಾಜರತ್ನಂ ಅವರಿಗೆ ಅಭಿವಂದನೆ

ಕನ್ನಡ ಸಾಹಿತ್ಯಪರಿಷತ್ತು ಅಖಿಲಭಾರತ ಕನ್ನಡ ಸಾಹಿತ್ಯಸಮ್ಮೇಲನದ ಸುವರ್ಣಾಧಿವೇಶನವನ್ನು ರಾಷ್ಟ್ರದ ರಾಜಧಾನಿಯಾದ ದಿಲ್ಲಿಯಲ್ಲಿ ನೆರವೇರಿಸಿದುದು ಅಪೂರ್ವ ಘಟನೆ. ರಾಷ್ಟ್ರವ್ಯಾಪ್ತಿಯ ಈ ಸಮ್ಮೇಲನದ ಅಧ್ಯಕ್ಷತೆಯನ್ನು ವಹಿಸಿದವರು ಡಾ. ಜಿ. ಪಿ. ರಾಜರತ್ನಂ ಅವರು. ರತ್ನನ ಪದ್ಯಶೈಲಿ, ಮಕ್ಕಳ ಸಾಹಿತ್ಯ, ಜೈನ ಬೌದ್ಧ ವಾಙ್ಮಯಗಳ ಮೂಲಕ ಕನ್ನಡ ಸಾಹಿತ್ಯದ ನವೋದಯಸಂದರ್ಭದಲ್ಲಿ ತ್ರಿಕರಣಪೂರ್ವಕ ಸೇವೆಸಲ್ಲಿಸಿದ ಶ್ರೀಯುತರಿಗೆ ಸಂದ ಅಧ್ಯಕ್ಷಗೌರವ ಯಥಾ ಯೋಗ್ಯವಾಗಿದೆ. ಈ ಸಾಧನೆಗಾಗಿ ಡಾ ರಾಜರತ್ನಂ ಅವರಿಗೆ 'ಭಾರತಿ' ಅಭಿವಂದನೆಗಳನ್ನು ಅರ್ಪಿಸುತ್ತದೆ.

ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕಾರ

ಸಾಹಿತ್ಯ, ಗಮಕಕ್ಷೇತ್ರಗಳಲ್ಲಿ ಅಪೂರ್ವ ಸೇವೆ ಸಲ್ಲಿಸಿದ ಮಹನೀಯರನ್ನು ನಮ್ಮ ರಾಜ್ಯ ಸಾಹಿತ್ಯಅಕಡೆಮಿ ಪ್ರತಿವರ್ಷ ಗೌರವಿಸುತ್ತಲಿರುವ ಸಂಪ್ರದಾಯ ತುಂಬಾ ಸೂಕ್ತವಾದುದು. ಈ ವರ್ಷ ಈ ಗೌರವಗಳಿಸಿದವರು ಸರ್ವಶ್ರೀ ವಿ. ಕೆ. ಗೋಕಾಕ, ವಿ. ಎಂ ಇನಾಮದಾರ, ನಿರಂಜನ, ಎಲ್. ಬಸವರಾಜು, ಶ್ರೀಮತಿ ಶಾಂತಾದೇವಿ ಮಾಳವಾಡ ಮತ್ತು ಗಮಕಿ ಎಂ. ಎಸ್. ಅನಂತ ಪದ್ಮನಾಭರಾವ. ನಮ್ಮ ನಾಡಿನ ಸೃಜನ, ವಿಮರ್ಶನ, ಸಂಶೋಧನ, ಗಮಕ ಸಾಹಿತ್ಯಕ್ಷೇತ್ರಗಳಿಗೆ ಶ್ರೀಮಂತ ಸೇವೆಯನ್ನು ಸಲ್ಲಿಸಿದ ಇವರಿಗೆ 'ಕರ್ನಾಟಕ ಭಾರತಿ'ಯ ಧನ್ಯವಾದಗಳು.

ಸಾದರ ಸ್ವೀಕಾರ

೧. **ನೀರಾಗ ಕುಂತೇನ ನೆನಕೊಂತ** (ಕವನ ಸಂಕಲನ) :

ಧರಣೇಂದ್ರ ಕುರಕುರಿ. ಪ್ರ : ಆಲೋಚನ ಪ್ರಕಾಶನ, ಗದಗ ೧೯೭೭. ಪುಟ : ೫೮, ಬೆಲೆ : ರೂ. ೩—೦೦

೨. **ಕನಿಮಿಟೆಡ್ ಕವಿತೆಗಳು :**

ಬಿ. ಎಂ. ರಮೇಶ್. ಪ್ರ : ಪರಿಸರ ಸಾಹಿತ್ಯ, ೧೨೬ ಬಿ. ಹೌಸಿಂಗ ಬೋರ್ಡ ಕಾಲನಿ, ಮಿಲ್‌ರೋಡ ಗುಲ್ಬರ್ಗಾ-೩, ೧೯೭೭, ಪುಟ : ೩೨, ಬೆಲೆ : ರೂ ೪—೦೦

೩. **ಇಳಿಹಾಳ ಬೊಮ್ಮಯ್ಯ** (ಜೀವನ ಚರಿತ್ರೆ):

ಚೆನ್ನಕ್ಕ ಎಲಿಗಾರ. ಪ್ರ : ಮಲ್ಲಿಕಾರ್ಜುನ ಜೋಳದ, ಇಲಾಳ ತಾಲೂಕ : ಬಾಗಲಕೋಟೆ ೧೯೭೮, ಪುಟ : ೧೨+೬೬. ಬೆಲೆ : ರೂ. ೨—೦೦

೪. **ನಿನಗಿನ್ನೂ ಹೇಳುವುದಿದೆ** (ಕವನ ಸಂಕಲನ):

ಗವೀಶ ಹಿರೇಮಠ, ಪ್ರ : ಸತೀಶ ಪ್ರಕಾಶನ, ಗುಲ್ಬರ್ಗಾ ೧೯೭೭. ಪುಟ : ೪೬, ಬೆಲೆ : ರೂ. ೩—೩೦

೫. **ಉದ್ಘಾಟನೆ** (ಕವನ ಸಂಕಲನ) :

ಸುಮತೀಂದ್ರ ನಾಡಿಗ, ಪ್ರ : ಸುಮತಿ ಪ್ರಕಾಶನ ೧೪, ಗಾಂಧಿ ಬಜಾರ್, ಬೆಂಗಳೂರು-೪, ೧೯೭೮ ಪುಟ : XV + ೬೦ ಬೆಲೆ : ರೂ. ೬—೦೦

೬. **ವಿಶ್ವಕರ್ಮಾನ್ವಯ ಪ್ರದೀಪಿಕಾ** (ಸಂಪಾದನೆ) :

ಜಿ. ಜ್ಞಾನಾನಂದ, ಪ್ರ : ಜ್ಞಾನಭಂಡಾರ, ೨-೧೬೩ ಬಿ. ಇ. ಎಂ. ಎಲ್. ನಗರ, ಕೋಲಾರ ಚಿನ್ನದಗಣಿ ಪ್ರದೇಶ - ೬, ೧೯೭೮ ಪುಟ : XXIV + ೪೩೮. ಬೆಲೆ : ರೂ. ೨೦—೦೦.

ಪತ್ರಿಕೆಗಳು

ಕನ್ನಡ ನುಡಿ
ಸಾಹಿತ್ಯ ಪರಿಷತ್ಪತ್ರಿಕೆ
ಜೀವನ ವಿಕಾಸ
ಪಂಚಾಚಾರ ಪ್ರಕಾಶ
ಪರಂಜ್ಯೋತಿ
ಕೃಷಿವಿಜ್ಞಾನ

ರಾಷ್ಟ್ರೋತ್ಥಾನವಾರ್ತಾ
ಮತ್ಸ್ಯಲೋಕ
ಹೇಮಕೂಟ
ವಿಶ್ವಕಲ್ಯಾಣ
ಕಾಲ
ಕನ್ನಡಿಗ

ಈ ಸಂಚಿಕೆಯ ಲೇಖಕರು

೧. ಶ್ರೀಮತಿ ಸುಕನ್ಯಾ ಮಾರುತಿ :
ಬಾಣದ ಓಣಿ, ಹೊಸಪೇಟೆ

೨. ಶ್ರೀ. ಪಿ. ರಾಮಭಟ್ :
ಕನ್ನಡ ಅಧ್ಯಾಪಕರು, ಎಂ. ಜಿ. ಎಂ. ಕಾಲೇಜು ಉಡುಪಿ (ದ. ಕ.)

೩. ಡಾ. ಎಂ. ಎಂ. ಕಲಬುರ್ಗಿ :
ಪ್ರವಾಚಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ

೪. ಡಾ. ಬಿ. ಕೆ. ಖಡಬಡಿ :
ಅಧ್ಯಾಪಕರು, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ

೫. ಶ್ರೀ. ದೇವೇಂದ್ರಕುಮಾರ ಹಕಾರಿ:
ಅಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ

೬. ಶ್ರೀ. ಎಸ್. ಎಸ್. ಭೂಸರಡ್ಡಿ :
ಸಂಶೋಧನ ಸಹಾಯಕರು, ಪಠ್ಯಪುಸ್ತಕ ನಿರ್ದೇಶನಾಲಯ, ಕ. ವಿ. ವಿ. ಧಾರವಾಡ.

೭. ಡಾ. ವೀರಣ್ಣ ರಾಜೂರ
ಅಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ

೮. ಡಾ. ಎಂ. ಎಸ್. ಲಠ್ಠೆ
ಅಧ್ಯಾಪಕರು, ಕನ್ನಡ ವಿಭಾಗ ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ

೯. ಶ್ರೀ. ಶ್ರೀರಾಮ ಇಟ್ಟಣ್ಣವರ :
ಕನ್ನಡ ಅಧ್ಯಾಪಕರು, ಶ್ರೀ. ಸಿದ್ಧೇಶ್ವರ ಕಿರಿಯ ಮಹಾವಿದ್ಯಾಲಯ, ಬೀಳಗಿ, ಜಿಲ್ಲೆ : ವಿಜಾಪುರ

೧೦. ಡಾ. ಎಂ. ಬಿ. ಭೋಯಿ :
ಕನ್ನಡ ಅಧ್ಯಾಪಕರು, ಕಾಡಸಿದ್ಧೇಶ್ವರ ಕಲಾ ಮಹಾವಿದ್ಯಾಲಯ, ಹುಬ್ಬಳ್ಳಿ.

೧೧. **ಕಾಶಿಪುಟ್ಟಸೋಮಾರಾಧ್ಯ :**
ಅಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ

೧೨. **ಶ್ರೀ. ಹಂಪ ನಾಗರಾಜಯ್ಯ :**
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರ-೧೮

೧೩. **ಶ್ರೀಮತಿ ಲತಾ ಎಂ. ಗುತ್ತಿಪಾಟೀಲ :**
C/o ಎಂ. ಬಿ. ಗುತ್ತಿ
ಬಿ-೧೨, ವರ್ಷಾಮಿಲನ್ ಪರ್ಶಿವಾಡಾ ಶಹರ ರೋಡ್,
ಅಂಧೇರಿ (ಪೂರ್ವ), ಮುಂಬೈ-೯೩

೧೪. **ಡಾ. ಕೆ. ಶ್ರೀಕಂಠಯ್ಯ :**
೩೯೩, ಜಯನಗರ ೧ನೆಯ ಬ್ಲಾಕ್, ಬೆಂಗಳೂರು-೧೧

೧೫. **ಶ್ರೀ. ವ್ಯ. ಸಿ. ಪಾಟೀಲ :**
ಸಹಾಯಕ ಸಂಪಾದಕ, 'ಬಸವ ಜರ್ನಲ್' ಬಸವ ಭವನ ಬೆಂಗಳೂರು, ೫೬೦ ೦೦೧

೧೬. **ಡಾ. ವಿ. ಶಿವಾನಂದ :**
ಅಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ

೧೭. **ಡಾ. ಅ. ಸುಂದರ :**
ಪ್ರವಾಚಕರು, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗ ಕ. ವಿ. ವಿ. ಧಾರವಾಡ

೧೮. **ಕು. ಚೆನ್ನಕ್ಕ ಎಲಿಗಾರ :**
ಕನ್ನಡ ಅಧ್ಯಾಪಕಿ, ಮೃತ್ಯುಂಜಯ ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ

೧೯. **ಶ್ರೀ. ಬಿ. ಆರ್. ಹಿರೇಮಠ :**
ಅಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ

೨೦ **ಶ್ರೀಮತಿ ಹನುಮಾಕ್ಷಿ ಗೋಗಿ :**
ಸಂಶೋಧನ ವಿಧ್ಯಾರ್ಥಿನಿ, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ

೨೧. **ಶ್ರೀ. ಹ. ನಂ. ವಿಜಯಕುಮಾರ**
ಬಸವೇಶ್ವರ ಗ್ರಂಥಮಾಲೆ, ಹಳೇವೂರು, ಕುಣಿಗಲ್ (ತಾ). ತುಮಕೂರು (ಜಿಲೆ)

೨೨. **ಶ್ರೀ. ಎಸ್. ಎಸ್. ಪೂಜಾರ :**

ದೂರವಾಣಿ ವಿನಿಮಯ ಕೇಂದ್ರ, ಕಲಬುರ್ಗಿ –೫೮೫೧೦೧

೨೩. **ಶ್ರೀ. ಎಸ್. ಜಿ. ಬಿದರಕುಂದಿ :**

ಕನ್ನಡ ಅಧ್ಯಾಪಕರು, ಆದರ್ಶಶಿಕ್ಷಣ ಸಮಿತಿಯ ವಾಣಿಜ್ಯ ಮಹಾವಿದ್ಯಾಲಯ ಗದಗ—೫೮೨೧೦೧

೨೪. **ಶ್ರೀ. ಬಸವರಾಜ ಸಬರದ :**

ಕನ್ನಡ ಅಧ್ಯಾಪಕರು, ಶ್ರೀ ಖಾಸ್ಗತೇಶ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ತಾಳಿಕೋಟೆ, ಜಿಲ್ಲೆ : ವಿಜಾಪುರ

ವಿಜ್ಞಾನ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೪ (ಅಂಚೆವೆಚ್ಚ ಸೇರಿ)
ಬಿಡಿ ಪ್ರತಿ : ರೂ. ೨-೫೦ (ಅಂಚೆವೆಚ್ಚ ಸಹಿತ)
(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೨-೦೦ ಮಾತ್ರ)

ಕರ್ನಾಟಕ ಭಾರತಿ

(ಆಜೀವ ಸದಸ್ಯತ್ವ)

ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ೧೦೦ರೂ. ಕಳಿಸಿ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ 'ಕರ್ನಾಟಕ ಭಾರತಿ' ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳಿಸುವ ವ್ಯವಸ್ಥೆ ಮಾಡಲಾಗುವುದು.

ಮಾನವಿಕ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೬

ಬಿಡಿ ಪ್ರತಿ : ರೂ. ೩-೫೦ (ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)
ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೪-೦೦
(ಹಣವನ್ನು ಡಿಮಾಂಡ ಡ್ರಾಫ್ಟ್ ಅಥವಾ ಪೋಸ್ಟಲ್ ಆರ್ಡರ ಮೂಲಕ ಫಾಯನಾನ್ಸ ಆಫೀಸರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ವಿಳಾಸಕ್ಕೆ ಕಳುಹಿಸಬೇಕು.)

ವಿವರಗಳಿಗೆ ಬರೆಯಿರಿ :

ನಿರ್ದೇಶಕರು,

ಪ್ರಸಾರಾಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩